

ಶ್ರೀ ಸುಜಯೀಂದ್ರ ವೈಭವಮ್

SRI SUJAYEENDRA VAIBHAVA

(An Anthology of Research articles on Dwaita Vedanta)

★

Dr. K. T. PANDURANGI
Hon. Chairman, Editorial Committee

★

D. MADHAVA MURTHY
Vice-chairman, Editorial Committee

★

H. G. RAMACHANDRA RAO
B.A·B.L. RBV, DSW (Cal)
Chief Editor

Publishers :
Gnana Jyothi Kala Mandira
No. 31, B, 4th Block, Rajajinagar
B A N G A L O R E-10

SREE SUJAYEENDRA VAIBHAVA
An Anthology of Research Articles
on Dwita Vedanta)

1200 Copies

Publisher : GNANA JYOTHI KALAMANDIRA
31/B, 4th Block, Rajajinagar
BANGALORE-560 010

Price : Rs. 40/-

The Publishers greatfully acknowledge the Financial assitance given by TTD for Publication of this Book

Printed at :
CHITRA PRINTERY
26, Sowrastrapet Cross,
Bangalore560-053

Phone : 72413

ಶ್ರೀಸುಜಯೀಂದ್ರ ವೈಭವ

(ದ್ವೈತ ವೇದಾಂತ ಲೇಖನ ಸಂಗ್ರಹ)

★

ಡಾ|| ಕೆ. ಟಿ. ಪಾಂಡುರಂಗಿ
ಗೌ|| ಅಧ್ಯಕ್ಷರು–ಸಂಪಾದಕ ಮಂಡಳಿ

★

ಡಿ. ಮಾಧವಮೂರ್ತಿ
ಉಪಾಧ್ಯಕ್ಷರು-ಸಂಪಾದಕ ಮಂಡಳಿ

★

ಹೆಚ್. ಜಿ. ರಾಮಚಂದ್ರರಾವ್
ಬಿ.ಎ.ಬಿ.ಎಲ್. ರಾಭಾವಿ ಡಿ. ಎಸ್. ಡಬ್ಲ್ಯು (ಕಲ್ಕತ್ತ)
ಪ್ರಧಾನ ಸಂಪಾದಕರು

ಪ್ರಕಾಶಕರು
ಜ್ಞಾನಜ್ಯೋತಿ ಕಲಾಮಂದಿರ
ನಂ. 31, ಬಿ. ನಾಲ್ಕನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-560 010

ಶ್ರೀಸುಜಯೀಂದ್ರ ವೈಭವ
(ದ್ವೈತ ವೇದಾಂತ ಲೇಖನ ಸಂಗ್ರಹ)

SREE SUJAYEENDRA VAIBHAVA
(An Anthology of Research Articles
on Dwaita Vedanta)

ಪ್ರಕಾಶಕರು : ಜ್ಞಾನಜ್ಯೋತಿ ಕಲಾಮಂದಿರ
31, ಬಿ. 4ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-560 010

Publisher : GNANA JOYTHI KALAMANDIRA
31/B, 4th Block, Rajajinagar
BANGALORE-560 010

ಬೆಲೆ : ರೂ. 40/-

Price : Rs 40/-

ಮುದ್ರಕರು :
ಚಿತ್ರಾ ಪ್ರಿಂಟರಿ
26, ಸೌರಾಷ್ಟ್ರಪೇಟೆ ಕ್ರಾಸ್
ಬೆಂಗಳೂರು-560 053

ಫೋನ್ : 72413

Printed at :
CHITRA PRINTERY
26, Sowrastrapet Cross,
Bangalore-560 053

Phone : 72413

ಸಂಪಾದಕೀಯ

ಶ್ರೀಮತ್ಪರಮಹಂಸ ಪರಿವ್ರಾಜಕೇತ್ಯಾದಿ ಬಿರುದಾಂಕಿತರಾದ ಶ್ರೀಮಂತ್ರಾಲಯದ ಶ್ರೀರಾಘವೇಂದ್ರಸ್ವಾಮಿ ಮಠಾಧೀಶರಾದ ಶ್ರೀ ಶ್ರೀ ಸುಜಯೀಂದ್ರತೀರ್ಥ ಶ್ರೀಪಾದಂಗಳವರು ಪ್ರಾತಃಸ್ಮರಣೀಯರು.

ಆರ್ತತ್ರಾಣಪರಾಯಣರಾದ ಗುರುಸಾರ್ವಭೌಮ ಶ್ರೀರಾಘವೇಂದ್ರ ತೀರ್ಥ ಶ್ರೀಪಾದಂಗಳವರ ಶ್ರೀಗುರುರಾಯರ ಮಹಿಮಾತಿಶಯಗಳನ್ನು ಪ್ರಪಂಚಕ್ಕೆ ತಿಳಿಸಿ ಗುರುಕಾರುಣ್ಯಕ್ಕೆ ಗುರುದರ್ಶನಕ್ಕೆ ಧಾವಿಸಿ ಬರುವ ಕೋಟಿ, ಕೋಟಿ ಗುರುಭಕ್ತರಿಗೆ ಮಂತ್ರಾಲಯವನ್ನು ಮಹಾಕ್ಷೇತ್ರವನ್ನಾಗಿ ಪರಿವರ್ತಿಸಿದ ಮಹನೀಯರು. ತಮ್ಮ ಜ್ಞಾನಭಕ್ತಿ ವೈರಾಗ್ಯ ತಪಸ್ಸನ್ನು ಮಂತ್ರಾಲಯ ಕ್ಷೇತ್ರದ ಸರ್ವತೋಭಿವೃದ್ಧಿಗೆ ಮೀಸಲಾಗಿರಿಸಿ ಶ್ರೀಕ್ಷೇತ್ರದ ಬೆಳವಣಿಗೆಗೆ ಜೀವನವಿಡೀ ಅನವರತ ಹಗಲಿರುಳು ಶ್ರಮಿಸಿದ ಕಾರಣ ಪುರುಷರು. ಶ್ರೀ ಶ್ರೀಪಾದಂಗಳವರ ಜನತಾಜನಾರ್ದನ ಸೇವೆ ಅಗಣಿತ, ಅವರ್ಣನೀಯ ಮಧ್ವ ಸಿದ್ಧಾಂತ ಪ್ರಚಾರ ಗುರುಸಾರ್ವಭೌಮರಸೇವೆ ಎಂಬ ಕಲ್ಪವೃಕ್ಷ, ಕಾಮಧೇನುಗಳನ್ನು ಜನಸಾಮಾನ್ಯರಿಗೂ ಲಭ್ಯವಾಗುವಂತೆ ಮಾಡಿದ ಕಾರುಣ್ಯ ಮೂರ್ತಿಗಳು. ಶ್ರೀಮಠದ ಆದಾಯವನ್ನು ನೂರ್ಮಡಿ ಹೆಚ್ಚಿಸಿ ಆಡಳಿತ ವ್ಯವಸ್ಥೆಯನ್ನು ಸಕ್ರಮವಾಗಿ ರೂಪಿಸಿ ತಮ್ಮ ತಪಶ್ಶಕ್ತಿಯನ್ನು ಸಹಸ್ರ ಪಟ್ಟು ಗುರುಭಕ್ತರ ಸೇವೆಗೆ ವಿನಿಯೋಗಿಸಿದ ತ್ಯಾಗಮೂರ್ತಿಗಳು. ಶ್ರೀ ಶ್ರೀಪಾದಂಗಳವರ ವಿಕ್ರಮಗಳನ್ನು ಎಣಿಸುವುದಕ್ಕಿಂತ ಶ್ರೀಗಳವರ ಕೃಪಾಛತ್ರ ಛಾಯೆ ಎಲ್ಲಿಯವರೆಗೆ ಪ್ರಸರಿಸಿದೆ ಎಂದು ಕಾಣುವುದು ಸೂಕ್ತ. ಶ್ರೀ ಶ್ರೀಗಳವರ ಅಪಾರ ಕಾರುಣ್ಯ ಸುಧಾಂಬುಧಿಯಲ್ಲಿ ಮಿಂದು ಪುನೀತರಾದವರಲ್ಲಿ ನಮ್ಮ ಸಂಸ್ಥೆಯೂ ಒಂದು. ನಮ್ಮ ಸಂಸ್ಥೆಯ ಪೋಷಕರಾಗಿ, ಮಾರ್ಗದರ್ಶಿಗಳಾಗಿ ಅಪಾರ ಕೃಪಾಶೀರ್ವಾದವನ್ನು ನೀಡಿ ಪ್ರೋತ್ಸಾಹಿಸಿದ ಮಹನೀಯರು. ಶ್ರೀ ಶ್ರೀಗಳವರ ಸ್ಮರಣೆಗೆ ನಾವು "ಶ್ರೀಸುಜಯೀಂದ್ರ ವೈಭವ" ಎಂಬ ಗ್ರಂಥವನ್ನು ಸಹಸ್ರ ಸಾಷ್ಟಾಂಗ ಪ್ರಣಾಮಗಳೊಡನೆ ಸಮರ್ಪಿಸುತ್ತಿದ್ದೇವೆ. ಈ ಗುರುವಂದನಾ ಕಾರ್ಯದಲ್ಲಿ ನಮಗೆ ನೆರವಾದ ಶ್ರೀಪಾದ ಪುತ್ರರಾದ ಶ್ರೀರಾಜಾ ಶ್ರೀಕೃಷ್ಣಾಚಾರ್ಯರಿಗೂ ಮತ್ತು ರಾಜಾ ಶ್ರೀ ಗಿರಿಯಾಚಾರ್ಯರಿಗೂ ನಮ್ಮ ಅಭಿವಂದನೆಗಳನ್ನು ಸಲ್ಲಿಸುತ್ತೇವೆ. ಈ ಮಹನೀಯರ ಸಹಕಾರ, ಸಹಾಯಗಳಿಲ್ಲದಿದ್ದರೆ ಈ ಗುರುಸೇವಾ ಸೌಭಾಗ್ಯ ನಮಗೆ ಲಭ್ಯವಾಗುತ್ತಿರಲಿಲ್ಲ. ಈ ಗ್ರಂಥಕ್ಕೆ ಲೇಖನಗಳನ್ನು ಒದಗಿಸಿದ ಎಲ್ಲಾ ವಿದ್ವಾಂಸರುಗಳಿಗೂ ಸಂಪಾದಕ ಮಂಡಲಿಯ ಅಧ್ಯಕ್ಷರಾಗಿ ಸಲಹೆ ನೀಡಿದ ಪ್ರೊ. ಕೆ. ಟಿ. ಪಾಂಡುರಂಗಿ ಅವರಿಗೂ, ಗ್ರಂಥ ಪ್ರಕಟಣೆಗೆ ಪ್ರೋತ್ಸಾಹಿಸಿದ ಎಲ್ಲಾ ಗುರುಭಕ್ತರಿಗೂ ಗುರುರಾಜರ ಪೂರ್ಣಾನುಗ್ರಹ ದೊರೆಯಲೆಂದು ಪ್ರಾರ್ಥಿಸುತ್ತಾ ನಮ್ಮ ಕೃತಜ್ಞತೆಗಳನ್ನು ತಿಳಿಸುತ್ತೇವೆ.

ಹೆಚ್. ಜಿ. ರಾಮಚಂದ್ರರಾವ್
ಪ್ರಧಾನ ಸಂಪಾದಕರು

ವಿಷಯಾನುಕ್ರಮಣಿಕೆ

18) ಶ್ರೀರಾಘವೇಂದ್ರತೀರ್ಥ ಸ್ತುತಿ ಪರಂಪರೆ,
ಲೇ : ಡಾ|| ಜಿ. ವರದರಾಜಾರಾವ್

19) ಶ್ರೀ ರಾಘವೇಂದ್ರಪ್ರಭುಗಳು
ಲೇ : ವಿದ್ವಾನ್ ಚಿಂಚೋಳಿ ಪ್ರಹ್ಲಾದಾಚಾರ್ಯ

20) ಸತ್ಕಾರ್ಯ ಧುರಂಧರ ಪರಮಪೂಜ್ಯ ಶ್ರೀ ಶ್ರೀ ಸುಜಯೀಂದ್ರತೀರ್ಥರು
ಲೇ : ಕಟ್ಟೆವಾದಿರಾಜ ಆಚಾರ್ಯ, ಉಡುಪಿ

21) ದ್ವೈತ ಸಾಮ್ರಾಜ್ಯಾಧಿಪತಿಗಳಾದ ಶ್ರೀಮತ್ಸುಜಯೀಂದ್ರತೀರ್ಥ ಶ್ರೀಪಾದಂಗಳವರು
ಲೇ : ಶ್ರೀಪಾದಕಿಂಕರ ರಾಜಾ ಎಸ್. ಗುರುರಾಜಾಚಾರ್ಯ, ನಂಜನಗೂಡು

22) ಶ್ರೀಸುಜಯೀಂದ್ರತೀರ್ಥ ಗುರುವರ್ಯರು (ಒಂದು ಮಧುರ ಸ್ಮೃತಿ)
ಲೇ : ವಿದ್ಯಾರತ್ನಂ ದಿ|| ಆಚಾರ್ಯ ವೆಂಕೋಬಾಚಾರ್ಯರು, ಮಂತ್ರಾಲಯ

23) ಶ್ರೀ ಸುಜಯಿಾಂದ್ರ ಶ್ರೀಪಾದಂಗಳವರು ಲೇ : ಶ್ರೀ ವಿಜ್ಞಾನನಿಧಿತೀರ್ಥ ಶ್ರೀಪಾದಂಗಳವರು ಶ್ರೀಪಾದರಾಜಮಠ

24) ಶ್ರೀಗುರುಸ್ಮರಣೆ—ಲೇ : ಧನ್ವಂತರಿ ಮಾಧವಮೂರ್ತಿ

25) Sri Sujayindra Tirtha as I Knew him
By Dr. B. N. K. Sharma

26) Madhva as a Socio-Religious Teacher and Reformen
Dr. D. N. Shanbhag, Dharwad

27) Meditation with Dynamic Devotion and not with hatred.
By Prof. R. G. Kulakarni

28) Dvaita Vedanta's Contribution to Indian Thought By Prof. K. T. Pandurangi

29) Sri Raghavendra Tirtha A Great Exponent of Dvaitavendanta
By Prof. K. T. Pandurangi

30) Contribution of Sri Raghavendra Teertha
To the Interpretation of the Rig-Veda
By Kasi Sripadacharya M.A.

31) Dvaita Philosophy and its Contemporary Relevance
By Prof. K. Sundareshan, Madras

32) Sri Raghavendra, The Renovator of Dvaitaphilosophy
By Dr. Subhashni R. Gandhi Annamalai Nagar

33) The Relavance of Dvaita Vendanta and its impact on Modern Society
Dr. Subhashini R. Gandhi, Annamalai University

34) The Integral Plenitude in Sri Madvacharya's Dvaita Vendanta
Dr. Gopalan R. Shastri

35) Raghavendra Tirtha and Dvaita Vada
By M K. Raghunatha Rao

★

॥ ಶ್ರೀಮನ್ಮೂಲರಾಮೋ ವಿಜಯತೇ ॥ ॥ ಶ್ರೀಗುರುರಾಜೋವಿಜಯತೇ ॥

ಶ್ರೀ ರಾಘವೇಂದ್ರಸ್ವಾಮಿ ಮಠ

ಮಂತ್ರಾಲಯ-518345

24-5-1987

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಪದವಾಕ್ಯ ಪ್ರಮಾಣ ಪಾರಾವಾರ ಪಾರಂಗತ ಸರ್ವತಂತ್ರ ಸ್ವತಂತ್ರ ಶ್ರೀಮದ್ವೈಷ್ಣವ ಸಿದ್ಧಾಂತ ಪ್ರತಿಷ್ಠಾಪನಾಚಾರ್ಯ ಶ್ರೀಮನ್ಮೂಲರಘುಪತಿ ವೇದವ್ಯಾಸದೇವರ ದಿವ್ಯ ಶ್ರೀಪಾದ ಪದ್ಮಾರಾಧಕ ಜಗದ್ಗುರು ಶ್ರೀಮನ್ಮಧ್ವಾಚಾರ್ಯರವರ ಮುಖ್ಯ ಸಂಸ್ಥಾನಾಧೀಶ್ವರರಾದ ಮಂತ್ರಾಲಯ ಶ್ರೀಮದ್ರಾಘವೇಂದ್ರ ಸ್ವಾಮಿಗಳವರ ಮಠದ ವೇದಾಂತ ಸಾಮ್ರಾಜ್ಯ ದಿಗ್ವಿಜಯ ವಿದ್ಯಾಸಿಂಹಾಸನಾಧೀಶ್ವರರಾದ ಶ್ರೀಮತ್ಸುಯಮೀಂದ್ರತೀರ್ಥ ಶ್ರೀಪಾದಂಗಳವರ ಕರಕಮಲ ಸಂಜಾತರಾದ ಶ್ರೀ ಶ್ರೀಮತ್ಸುಜಯೀಂದ್ರತೀರ್ಥ ಶ್ರೀಪಾದಂಗಳವರ ವರಕುಮಾರಕರಾದ

೧೦೦೮ ಶ್ರೀ ಶ್ರೀಮತ್ಸುಶಮೀಂದ್ರತೀರ್ಥ ಶ್ರೀಪಾದಂಗಳವರ


ಸಂದೇಶ

ಸುಯಮೀಂದ್ರಕರಾಬ್ಜೋತ್ಥಂ ಸುವಿದ್ಯಾಬೋಧಕಂ ಸದಾ ।
ಸುಮೂಲರಾಮಪೂಜಾಢ್ಯಂ ಸುಜಯೀಂದ್ರಗುರುಂ ಭಜೇ ॥

"ಸುಖಮೇವ ಮೇ ಸ್ಯಾದ್ದುಃಖಂ ಮನಾಗಪಿ ಮಾ ಭೂತ್" ಎಂದು ಹೇಳಿದಂತೆ ಪ್ರತಿಯೊಬ್ಬ ಮಾನವನು ಸುಖವನ್ನೇ ಅಪೇಕ್ಷಿಸುತ್ತಾನೆ. ಆದರೆ ಶಾಶ್ವತವಾದ ಸುಖವು ನಮಗೆ ದೊರೆಯಬೇಕಾದರೆ ಭಗವಂತನ ಪ್ರಸಾದವು ಅತ್ಯಾವಶ್ಯಕವಾದುದು. ಭಗವಂತನ ಪ್ರಸಾದವಾಗಬೇಕಾದರೆ ಜ್ಞಾನ ಮತ್ತು ಭಕ್ತಿ ಅತ್ಯವಶ್ಯಕವಾಗಿ ಬೇಕು. 'ಜ್ಞಾನೇನೈವ ಪರಂ ಪದಂ" "ಬಹೂನಾಂ ಜನ್ಮನಾಮಂತೇ ಜ್ಞಾನವಾನ್ಮಾಂ ಪ್ರಪದ್ಯತೇ" ಇತ್ಯಾದಿ ಪ್ರಮಾಣಗಳು ಹೇಳಿದಂತೆ ಜ್ಞಾನದಿಂದಲೇ ಮುಕ್ತಿ ಎಂಬುದು ಶಾಸ್ತ್ರಸಮ್ಮತವಾಗಿದೆ. ಇಂತಹ ಜ್ಞಾನವು ದೊರೆಯಬೇಕಾದರೆ ಶ್ರೀಹರಿವಾಯುಗಳ ಅನುಗ್ರಹವು ಅತ್ಯವಶ್ಯಕವಾಗಿದೆ.

ಇಂತಹ ಜ್ಞಾನಕಾರ್ಯಕ್ಕಾಗಿ ಮೀಸಲಾಗಿರುವ ಜ್ಞಾನಜ್ಯೋತಿಕಲಾಮಂದಿರವು ನಿಜವಾಗಿಯೂ ಆದರಣೀಯವೂ ಮತ್ತು ಪ್ರಶಂಸಾರ್ಹವೂ ಆಗಿದೆ. ಇಲ್ಲಿಯವರೆಗೂ ಈ ಜ್ಞಾನಜ್ಯೋತಿ ಕಲಾಮಂದಿರದ ವತಿಯಿಂದ ಅನೇಕ ವಿಧವಾದ ಜ್ಞಾನಕಾರ್ಯವು ನಡೆದು ಸಮಾಜಕ್ಕೆ ಬಹು ಉಪಕಾರವಾಗಿರುವುದು ಸರ್ವರಿಗೂ ವಿದಿತವೇ ಆಗಿದೆ. ಇನ್ನು ಮುಂದೆಯೂ ಈ ಮಂದಿರದವತಿಯಿಂದ ವಿಶೇಷವಾಗಿ ಜ್ಞಾನಕಾರ್ಯವು ನಡೆಯಲೆಂದು ನಾವು ಹಾರೈಸುತ್ತೇವೆ. ಪ್ರಕೃತವಲ್ಲಿ ಈ ಜ್ಞಾನಜ್ಯೋತಿಕಲಾಮಂದಿರದ ವತಿಯಿಂದ ನಮ್ಮ ಗುರುಗಳ ಜೀವನದ್ಯೋತಕವಾದ ಪುಸ್ತಕದ ಪ್ರಕಾಶನಗೊಳ್ಳುತ್ತಿರುವುದು ಸರ್ವಸಜ್ಜನ ವೃಂದಕ್ಕೆ ಸಂತೋಷಕರವಾದ ವಿಷಯವಾಗಿದೆ. ಈ ಮಂದಿರದ ವತಿಯಿಂದ ಮುಂದೆ ನಡೆಯಲಿರುವ ಸಕಲಕಾರ್ಯವೂ ಯಶಸ್ವಿಯಾಗಲೆಂದು ಅಸ್ಮದುಪಾಸ್ಯ ಶ್ರೀಮೂಲರಾಮಚಂದ್ರ ದೇವರಲ್ಲಿ ಪ್ರಾರ್ಥಿಸುತ್ತೇವೆ. ಶ್ರೀಮತ್ಸದ್ಗುರುರಾಘವೇಂದ್ರಯತಿರಾಟ್ ಕುರ್ಯಾದ್ಧ್ರುವಂ ಮಂಗಲಂ ॥

ಧರ್ಮೋರಕ್ಷತಿ ರಕ್ಷಿತಃ । ಇತಿ ನಾರಾಯಣ ಸ್ಮರಣೆಗಳು




ಶ್ರೀ ಶ್ರೀ ಸುಜಯೀಂದ್ರತೀರ್ಥ ಶ್ರೀಪಾದಂಗಳವರು
ಒಂದು ವಿಶೇಷ ಭಂಗಿಯಲ್ಲಿ




ಶ್ರೀ ಶ್ರೀ ಸುಜಯೀಂದ್ರತೀರ್ಥ ಶ್ರೀಪಾದಂಗಳವರು



ಶ್ರೀ ಶ್ರೀಗಳವರು ಮಠದ ಪ್ರವೇಶ ದ್ವಾರದಲ್ಲಿ



ಮಂತ್ರಾಲಯ ಮೂಲ ಬೃಂದಾವನದ
ವಿಹಂಗಮ ನೋಟ



ಶ್ರೀ ಶ್ರೀ ಸುಜಯೀಂದ್ರತೀರ್ಥ
ಶ್ರೀಪಾದಂಗಳವರು - ಪೂಜಾ ನಿರತರಾಗಿದ್ದಾಗ



ಶ್ರೀ ಭೀಮನಕಟ್ಟೆ ಕೃಷ್ಣಾಪುರ ಮತ್ತು ಸಿರೂರು ಮಠದ ಶ್ರೀಪಾದಂಗಳವರೊಂದಿಗೆ
ಶ್ರೀ ಸುಜಯೀಂದ್ರತೀರ್ಥ ಶ್ರೀಪಾದಂಗಳವರು ವಿದ್ವತ್ ಸಭೆಯಲ್ಲಿ




ಶ್ರೀ ಸುಜಯೀಂದ್ರತೀರ್ಥ ಶ್ರೀಪಾದಂಗಳವರೊಂದಿಗೆ
ವಿದ್ವಜ್ಜನರು



ಉಡುಪಿಯ ಶ್ರೀ ರಾಘವೇಂದ್ರಸ್ವಾಮಿಗಳವರ ಮಠದಲ್ಲಿ ಶ್ರೀ ಸುಜಯೀಂದ್ರತೀರ್ಥರು
ಶ್ರೀ ಕೆ ಕೆ ಪೈ ಮತ್ತು ಮಠಾಧಿಕಾರಿಗಳಾದ ಶ್ರೀ ರಾಘವೇಂದ್ರಾಚಾರ್.



ಶ್ರೀ ಶ್ರೀಗಳವರಿಂದ ಫಲಮಂತ್ರಾಕ್ಷತೆಯನ್ನು ಪಡೆಯುತ್ತಿರುವ ಶ್ರೀ ಕೆ.ಕೆ. ಪೈರವರು.



ಜಯನಗರ ಬ್ರಾಹ್ಮಣ ಸಭಾವತಿಯಿಂದ ನಡೆದ ಸಾಮೂಹಿಕ ಉಪನಯನ ಸಂದರ್ಭದಲ್ಲಿ
ಶ್ರೀ ಎಸ್.ಪಿ. ಜಯಶೀಲರಾವ್, ಎಂ.ಎಸ್. ನಾರಾಯಣರಾವ್ ವಿಧಾನಸಭಾ ಸದಸ್ಯರು
ಶ್ರೀ ಎಂ ಕೆ. ಭಾರತೀರಮಣಾಚಾರ್ ಭಾಷಣ ಮಾಡುತ್ತಿರುವವರು ಶ್ರೀ ರತ್ತಿ ವಿಜಯೇಂದ್ರಾಚಾರ್



ಶ್ರೀ ರಾಘವೇಂದ್ರ ತ್ರಿಶತಮಾನೋತ್ಸವ ಸಂದರ್ಭದಲ್ಲಿ ಹೊರತಂದ
ಜ್ಞಾನಸುಧಾ ವಿಶೇಷ ಸಂಚಿಕೆಯನ್ನು ಶ್ರೀ ಸುಜಯೀಂದ್ರತೀರ್ಥರು
ಮಂತ್ರಾಲಯದಲ್ಲಿ ಬಿಡುಗಡೆ ಮಾಡಿದಾಗ ತೆಗೆದ ಚಿತ್ರ ಸಮೂಹ.



ಶ್ರೀ ರಾಘವೇಂದ್ರ ತ್ರಿಶತಮಾನೋತ್ಸವ ಸಂದರ್ಭದಲ್ಲಿ ಹೊರತಂದ
ಜ್ಞಾನಸುಧಾ ವಿಶೇಷ ಸಂಚಿಕೆಯನ್ನು ಶ್ರೀ ಸುಜಯೀಂದ್ರತೀರ್ಥರು
ಮಂತ್ರಾಲಯದಲ್ಲಿ ಬಿಡುಗಡೆ ಮಾಡಿದಾಗ ತೆಗೆದ ಚಿತ್ರ ಸಮೂಹ.



ಶ್ರೀ ರಾಘವೇಂದ್ರ ತ್ರಿಶತಮಾನೋತ್ಸವ ಸಂದರ್ಭದಲ್ಲಿ ಹೊರತಂದ ಜ್ಞಾನಸುಧಾ ವಿಶೇಷ ಸಂಚಿಕೆಯನ್ನು ಶ್ರೀ ಸುಜಯೀಂದ್ರತೀರ್ಥರು ಮಂತ್ರಾಲಯದಲ್ಲಿ ಬಿಡುಗಡೆ ಮಾಡಿದಾಗ ತೆಗೆದ ಚಿತ್ರ ಸಮೂಹ.



ಶ್ರೀ ರಾಘವೇಂದ್ರ ತ್ರಿಶತಮಾನೋತ್ಸವ ಸಂದರ್ಭದಲ್ಲಿ ಹೊರತಂದ ಜ್ಞಾನಸುಧಾ ವಿಶೇಷ ಸಂಚಿಕೆಯನ್ನು ಶ್ರೀ ಸುಜಯೀಂದ್ರತೀರ್ಥರು ಮಂತ್ರಾಲಯದಲ್ಲಿ ಬಿಡುಗಡೆ ಮಾಡಿದಾಗ ತೆಗೆದ ಚಿತ್ರ ಸಮೂಹ.



ಶ್ರೀ ರಾಘವೇಂದ್ರ ತ್ರಿಶತಮಾನೋತ್ಸವ ಸಂದರ್ಭದಲ್ಲಿ ಹೊರತಂದ
ಜ್ಞಾನಸುಧಾ ವಿಶೇಷ ಸಂಚಿಕೆಯನ್ನು ಶ್ರೀ ಸುಜಯೀಂದ್ರತೀರ್ಥರು
ಮಂತ್ರಾಲಯದಲ್ಲಿ ಬಿಡುಗಡೆ ಮಾಡಿದಾಗ ತೆಗೆದ ಚಿತ್ರ ಸಮೂಹ.



ಶ್ರೀ ರಾಘವೇಂದ್ರ ತ್ರಿಶತಮಾನೋತ್ಸವ ಸಂದರ್ಭದಲ್ಲಿ ಹೊರತಂದ
ಜ್ಞಾನಸುಧಾ ವಿಶೇಷ ಸಂಚಿಕೆಯನ್ನು ಶ್ರೀ ಸುಜಯೀಂದ್ರತೀರ್ಥರು
ಮಂತ್ರಾಲಯದಲ್ಲಿ ಬಿಡುಗಡೆ ಮಾಡಿದಾಗ ತೆಗೆದ ಚಿತ್ರ ಸಮೂಹ.



ಜ್ಞಾನಜ್ಯೋತಿ ಕಲಾಮಂದಿರದ ಆಶ್ರಯದಲ್ಲಿ ಶ್ರೀ ರಾಘವೇಂದ್ರ ತ್ರಿಶತಮಾನೋತ್ಸವವನ್ನು
ಆಚರಿಸಿದಾಗ ಶ್ರೀ ಶ್ರೀ ಸುಜಯೀಂದ್ರತೀರ್ಥ ಶ್ರೀಪಾದಂಗಳವರನ್ನು ಮಲ್ಲೇಶ್ವರದ
ಶ್ರೀರಾಮಭಜನಾ ಸಭಾಂಗಣದಲ್ಲಿ ಸ್ವಾಗತಿಸಿ ಗುರುಪೂಜೆ ಸಲ್ಲಿಸಿದಾಗ ತೆಗೆದ ಚಿತ್ರ.



ಉಡುಪಿಯ ಶ್ರೀ ರಾಘವೇಂದ್ರಸ್ವಾಮಿಗಳ ಮಠದಲ್ಲಿ ಶ್ರೀ ಶ್ರೀಗಳವರು
ಶ್ರೀ ಕೆ. ಅನಿಲ್‌ಪೈರವರನ್ನು ಅನುಗ್ರಹಿಸುತ್ತಿರುವುದು.

ಶ್ರೀಸುಜಯೀಂದ್ರ ತೀರ್ಥರು

ಆಧುನಿಕ ಮಂತ್ರಾಲಯ ಕ್ಷೇತ್ರ ನಿರ್ಮಾಣಕರು

ಲೇ|| ದಾಸಸಾಹಿತ್ಯ ರತ್ನ **ಚಿಂಚೋಳಿ ಪ್ರಹ್ಲಾದಾಚಾರ್ಯರು**

ಸುಯಮೀಂದ್ರ ಕರಾಬ್ಜೋತ್ಥಂ ಸುವಿದ್ಯಾಬೋಧಕಂ ಸದಾ ।
ಸುಮೂಲರಾಮ ಪೂಜಾದ್ಯಂ ಸುಜಯೀಂದ್ರ ಗುರುಂಭಜೇ ॥

"ನಹಿಜ್ಞಾನೇನ ಸದೃಶಂ" ಎಂಬುದು ಗೀತಾಚಾರ್ಯನ ಉಪದೇಶವಾಣಿ. ಇದನ್ನು ಸ್ಥೂಲವಾಗಿ ಗಮನಿಸಿದಾಗ ಜ್ಞಾನಕ್ಕೆ ಸದೃಶವಾದುದು ಮತ್ತೊಂದಿಲ್ಲ ಎಂದು ಸ್ಪಷ್ಟಪಡುತ್ತಲಿದೆ. ಆದರೆ ವಿವೇಕದಿಂದ ಶಾಸ್ತ್ರದೃಷ್ಟಿಯಿಂದ ವಿಚಾರಮಾಡಿದರೆ ನೈಜವಾದ ಅರ್ಥ ಗೋಚರಿಸುತ್ತಲಿದೆ. ಈ ಮೇಲಿನ ವಾಕ್ಯವನ್ನು ಸಾಕ್ಷಾತ್ ಪರಮಾತ್ಮನಾದ ಶ್ರೀಕೃಷ್ಣನೇ ಹೇಳಿದ್ದು. ಯಾರಿಗೆ ಎಂದರೆ ಉತ್ತಮಾಧಿಕಾರಿಯಾಗಿ ಮುಂದೆ ಶೇಷಾವೇಶದಿಂದ ಕೂಡಿ ಶ್ರೀವಾಯುದೇವರಿಂದ ಉಪದೇಶ ಪಡೆಯಲು ಅರ್ಹತೆ ಹೊಂದುವ ಸಾಕ್ಷಾತ್ ಇಂದ್ರಾಂಶನಾದ ಮಧ್ಯಮ ಪಾಂಡವನಾಗಿ ದಶನಾಮಗಳಿಂದ ವಿರಾಜಿಸುವ ಅರ್ಜುನನಿಗೆ ಅಂದವೇಳೆ ಪರಮಾತ್ಮನಾದ, ಸರ್ವೋತ್ತಮನಾದ ಶ್ರೀಕೃಷ್ಣನೇ ಮೇಲಿನ ವಾಕ್ಯವನ್ನು ಜೀವನಾದ ಅರ್ಜುನನಿಗೆ ಹೇಳಿದನೆಂದರೆ ಶ್ರೀಕೃಷ್ಣ ಹೇಳಿದ "ಜ್ಞಾನ"ವು ಜೀವ ಪರಮಾತ್ಮನಲ್ಲದ ಮೂರನೇ ವಸ್ತುವಾದ 'ಜಡ' ಪದಾರ್ಥ ಎಂದಾಯಿತು. ಈ ಮೇಲಿನ ವಾಕ್ಯದಲ್ಲಿ ವಿದ್ಯಾವಂತರಿಗೆ ಒಂದು ಸಂಶಯ ಬರದಿರದು. ಸಕಲ ಶಾಸ್ತ್ರಗಳೂ ಪರಮಾತ್ಮನಾದ ಶ್ರೀಹರಿಯು ಸರ್ವೋತ್ತಮತ್ವವನ್ನು ಹೇಳುತ್ತಲಿರುವಾಗ ಶ್ರೀಕೃಷ್ಣನೇ ಜ್ಞಾನಕ್ಕೆ ಸರಿ ಇಲ್ಲ ಎಂದು ಏಕೆ ಹೇಳಿದ? ಜ್ಞಾನವು ಪರಮಾತ್ಮನಿಗಿಂತ ದೊಡ್ಡದೇ? ಎಂದು ಮುಂತಾದ ಸಂದೇಹ ಬರುವುದು ಸಹಜ. ಇದಕ್ಕಾಗಿ ಜಗತ್ಪ್ರಸಿದ್ಧರಾದ, ಕಾಮಧೇನು, ಕಲ್ಪವೃಕ್ಷ ಸದೃಶರಾದ, **ಶ್ರೀರಾಘವೇಂದ್ರಗುರುಸಾರ್ವಭೌಮರು** ತಮ್ಮ ಪವಿತ್ರಗ್ರಂಥ ಸರಣಿಯಲ್ಲಿ ಶ್ರೀಕೃಷ್ಣನ ಮೇಲಿನ ವಾಕ್ಯಕ್ಕೆ ಹೀಗೆ ವ್ಯಾಖ್ಯಾನ ಬರೆದಿದ್ದಾರೆ. ಪರಮಾತ್ಮನಾದ, ಸರ್ವೋತ್ತಮನಾದ, ಶ್ರೀಹರಿಯ ಅನುಗ್ರಹ ಸಂಪಾದನೆಗೆ ಸುಜೀವಿಯಾದ ತಾನು ಮಾಡುವ ನಾನಾ ತೆರನಾದ ಸಾಧನಾವಳಿಗಳಲ್ಲಿ ಜ್ಞಾನಸಾಧನಕ್ಕೇ ಹೆಚ್ಚು ಪ್ರಯೋಜನ ಎಂಬ ಗೂಢಾರ್ಥವನ್ನು ತಿಳಿಸುತ್ತಾ ಜ್ಞಾನದ ಮಹಿಮೆಯನ್ನು ವ್ಯಕ್ತಪಡಿಸಿರುತ್ತಾರೆ. ಇಂತಹ ನೈಜಕತ್ವ ಜ್ಞಾನಕ್ಕೆ ಉಗಮವಾದುದು ಅಪೌರುಷೇಯವೆನಿಸಿದ ವೇದ, ಉಪನಿಷತ್ ಇತ್ಯಾದಿಗಳು ಹಾಗೂ ಪೌರುಷೇಯವೆಂದು ಪರಿಗಣಿಸಲ್ಪಟ್ಟ ಸಾಕ್ಷಾತ್ ಸರ್ವೋತ್ತಮನಾದ ಶ್ರೀವೇದವ್ಯಾಸದೇವರಿಂದ ರಚಿತವಾದ ಬ್ರಹ್ಮಸೂತ್ರಾದಿಗಳು ಹಾಗೂ ಅಷ್ಟಾದಶ ಪುರಾಣಾದಿಗಳಲ್ಲಿ ಸಾತ್ವಿಕ ಪುರಾಣಾದಿಗಳು, ಇದರ ನೈಜಾರ್ಥ ಬೋಧಕವಾದುದು ಶ್ರೀ ಶ್ರೀಮದಾಚಾರ್ಯರ **"ಸರ್ವಮೂಲ"**ವೆನಿಸಿದ. 37 ಗ್ರಂಥಗಳು ಹಾಗೂ ಸಾಕ್ಷಾತ್ ಟೀಕಾಚಾರ್ಯ ವಿರಾಜಮಾನರಾಗಿ ಪವಿತ್ರ ಶ್ರೀಮನ್ ನ್ಯಾಯಸುಧಾ ಗ್ರಂಥಕರ್ತರಾದ ಶ್ರೀಜಯತೀರ್ಥರು ಅವರ 18 ಟೀಕಾ ಗ್ರಂಥಗಳು 3 ಸ್ವತಂತ್ರ ಗ್ರಂಥಗಳು ಹಾಗೂ ಇವುಗಳಿಗೆ ವ್ಯಾಖ್ಯಾನರೂಪದಿಂದ ಎಲ್ಲಾ ಮಾಧ್ವಮಠಗಳಲ್ಲಿಯೂ ಜ್ಞಾನಜ್ಯೋತಿಗಳಾಗಿ ಸೂರ್ಯಚಂದ್ರರಂತೆ ವಿರಾಜಿಸಿದ ಹಾಗೂ ವಿರಾಜಿಸುತ್ತಿರುವ ಶ್ರೀರಾಘವೇಂದ್ರರು ಶ್ರೀರಘೂತ್ತಮರು, ಶ್ರೀವ್ಯಾಸರಾಜರು ಶ್ರೀ ಶ್ರೀಪಾದರಾಜರು ಶ್ರೀವಾದಿರಾಜರೇ ಆದಿಯಾದವರು ಮತ್ತು ಯಾದವರ್ಯರು ಶ್ರೀ ಶ್ರೀನಿವಾಸತೀರ್ಥರೇ ಮುಂತಾದ ಗೃಹಸ್ಥಾಶ್ರಮಿಗಳು, ಅದರಲ್ಲೂ ಆಧುನಿಕ ಜಗತ್ತಿನ ದೇವನಾಗರಿ ಲಿಪಿ ಪರಿಶ್ರಮ ಅಷ್ಟಾಗಿ ಹೊಂದದ ಉತ್ತಮಾಧಿಕಾರಿಗಳ ಉದ್ಧಾರಾರ್ಥವಾಗಿ ಪ್ರಾಕೃತ ಭಾಷೆಯಲ್ಲಿ ಪದ, ಪದ್ಯ, ಸುಳಾದಿ, ಉಗಾಭೋಗಾದಿಗಳನ್ನು ರಚಿಸಿದ, ಐಹಿಕಾಪೇಕ್ಷರಹಿತರಾದ, ಜ್ಞಾನಿಶ್ರೇಷ್ಠರಾದ ದೇವಾಂಶಸಂಭೂತರಾದ, ದಾಸಚತುಷ್ಟಯವೆಂದು ಜಗದ್ವಿಖ್ಯಾತರಾದ ಶ್ರೀಪುರಂದರದಾಸರು, ಶ್ರೀವಿಜಯ

ದಾಸರು ಶ್ರೀಗೋಪಾಲದಾಸರು, ಶ್ರೀಜಗನ್ನಾಥದಾಸರು ಶ್ರೀ ಪ್ರಾಣೇಶದಾಸರೂ ಶ್ರೀ ಶ್ರೀ ವಿಠಲದಾಸರು ಶ್ರೀಮೋಹನದಾಸರು ಇವರ ಪರಂಪರೆ ಶ್ರೀಮೊದಲಕಲ್ ಶೇಷದಾಸರ ಪರ್ಯಂತ ಹಾಗೂ ಮುಂದೂ ಪಸರಿಸುತ್ತಿರುವುದು ಗಮನಾರ್ಹ ವಿಚಾರ.

ಹೀಗೆ ಘೋರತರವಾದ, ದುಸ್ತರವಾದ, ಭಯಂಕರವಾದ ಸಂಸಾರ ಸಾಗರವನ್ನು ದಾಟಿ ಶಾಶ್ವತ ಸುಖ ಹೊಂದುವ ಮೋಕ್ಷವನ್ನು ಪಡೆಯಲು ಇರುವ ಏಕೈಕ ಮಾರ್ಗವಾದ ನೈಜತತ್ವ ಜ್ಞಾನ ಹೊಂದಲು ಗುರುಗಳ ಅವಶ್ಯಕತೆ ಅತಿಮುಖ್ಯವಾದುದು ಹಾಗೂ ಕಡ್ಡಾಯವಾದದ್ದು. ಇಂತಹ ಗುರುಗಳು ಯಾರೆಂದರೆ ಸಾಕ್ಷಾತ್ ವೇದೋಕ್ತ ಗುರುಗಳೆನಿಸಿದ, ಪರಶುಕ್ಲ ಕ್ರಿಯೆದಲ್ಲಿ ಬರುವ 32 ಸುಲಕ್ಷಣದಿಂದ ಕೂಡಿದ, ಪರಮಾತ್ಮನ ನೈಜಭಕ್ತರಾದ, ಜೀವೋತ್ತಮರೆನಿಸಿದ ಸಾಕ್ಷಾತ್ ವಾಯುದೇವರ ಅವತಾರರಾದ ಶ್ರೀಮದಾಚಾರ್ಯರ ಪವಿತ್ರ ಪೀಠಿಗೆಯಲ್ಲಿ ಬರುವ ಹಾಗೂ ಎಲ್ಲಾ ಮಾಧ್ವ ಮಠಗಳಲ್ಲೂ ರಾರಾಜಿಸುತ್ತಿರುವ ಯತಿಪೀಠಿಗೆ. ಅವುಗಳು ಶ್ರೀಮದುತ್ತರಾಧಿಮಠ, ಶ್ರೀಮದ್ ವ್ಯಾಸರಾಜ ಮಠ, ಶ್ರೀಮದ್ ರಾಘವೇಂದ್ರಸ್ವಾಮಿಗಳ ಮಠ, ಉಡುಪಿಯ ಶ್ರೀಅಷ್ಟಮಠಗಳು, ಶ್ರೀಮುಳಬಾಗಿಲು ಮಠ, ಶ್ರೀಅಕ್ಷೋಭ್ಯತೀರ್ಥರ ಮಠ, ಶ್ರೀಮಾಧವ ತೀರ್ಥರ ಮಠ, ಶ್ರೀಭಂಡಾರಕೆರೆ ಮಠ, ಶ್ರೀಸುಬ್ರಹ್ಮಣ್ಯಮಠ, ಶ್ರೀಚಿತ್ರಾಪುರ ಮಠ, ಶ್ರೀಬಾಳೆಗಾರು ಹಾಗೂ ಶ್ರೀಭೀಮನಕಟ್ಟೆ ಇತ್ಯಾದಿ ಮಠಗಳು ಪ್ರಕೃತ ಅಂತಹ ಮಠಗಳಲ್ಲೊಂದಾದ, ಮಹಾಮಹಿಮರಾದ ಶ್ರೀರಾಘವೇಂದ್ರ ಗುರುಸಾರ್ವಭೌಮರು ವೇದಾಂತ ಸಾಮ್ರಾಜ್ಯವನ್ನು ಬಹುಕಾಲ ಆಳಿ ಸಕಲರಿಗೂ ಅನುಗ್ರಹಿಸಿದ ಶ್ರೀರಾಘವೇಂದ್ರ ಸ್ವಾಮಿಗಳವರ ಪವಿತ್ರಪೀಠದಲ್ಲಿ ವಿರಾಜಿಸಿದ ಶ್ರೀಹಂಸನಾಮಕ ಪರಮಾತ್ಮನಿಂದ 52ನೆಯವರಾದವರು ನಮ್ಮ ಇಂದಿನ ಕಥಾನಾಯಕರಾದ ಶ್ರೀ ಶ್ರೀಸುಜಯೀಂದ್ರತೀರ್ಥರು.

ಮಠದ ಪೀಠಿಗೆಯ ವಿವರ.

ಶ್ರೀಹಂಸನಾಮಕ ಪರಮಾತ್ಮನಿಂದ ಐವತ್ತೆರಡನೆಯವರಾದ ಶ್ರೀಸುಜಯೀಂದ್ರರವರೆಗಿನ ಗುರುಪೀಠಿಗೆಯ ಸಾಕ್ಷಾತ್ ಪರಂಪರೆ ಹೀಗಿದೆ—

1) ಶ್ರೀಹಂಸನಾಮಕ ಪರಮಾತ್ಮ
2) ಶ್ರೀ ಚತುರ್ಮುಖ ಬ್ರಹ್ಮದೇವರು
3) ಶ್ರೀಸನಕತೀರ್ಥರು
4) ಶ್ರೀಸನಂದನತೀರ್ಥರು
5) ಶ್ರೀಸನತ್ಕುಮಾರತೀರ್ಥರು
6) ಶ್ರೀಸನಾತನತೀರ್ಥರು
7) ಶ್ರೀದೂರ್ವಾಸತೀರ್ಥರು
8) ಶ್ರೀಜ್ಞಾನನಿಧಿ ತೀರ್ಥರು
9) ಶ್ರೀಗರುಡವಾಹನ ತೀರ್ಥರು
10) ಶ್ರೀಕೈವಲ್ಯತೀರ್ಥರು
11) ಶ್ರೀಜ್ಞಾನೇಶತೀರ್ಥರು
12) ಶ್ರೀಪರತೀರ್ಥರು
13) ಶ್ರೀಸತ್ಯಪ್ರಜ್ಞತೀರ್ಥರು
14) ಶ್ರೀಪ್ರಾಜ್ಞತೀರ್ಥರು
15) ಶ್ರೀಅಚ್ಯುತ ಪ್ರೇಕ್ಷಾಚಾರ್ಯರು
16) **ಶ್ರೀಮನ್ ಮಧ್ವಾಚಾರ್ಯರು**
17) ಶ್ರೀಪದ್ಮನಾಭತೀರ್ಥರು
18) ಶ್ರೀನರಹರಿತೀರ್ಥರು
19) ಶ್ರೀಮಾಧವತೀರ್ಥರು
20) ಶ್ರೀ ಅಕ್ಷೋಭ್ಯತೀರ್ಥರು
21) **ಶ್ರೀಜಯತೀರ್ಥರು ಟೀಕಾಚಾರ್ಯರು**
22) ಶ್ರೀವಿದ್ಯಾಧಿರಾಜ ತೀರ್ಥರು
23) ಶ್ರೀಕವೀಂದ್ರತೀರ್ಥರು
24) ಶ್ರೀವಾಗೀಶತೀರ್ಥರು
25) ಶ್ರೀರಾಮಚಂದ್ರತೀರ್ಥರು
26) ಶ್ರೀವಿಭುದೇಂದ್ರತೀರ್ಥರು
27) ಶ್ರೀಜಿತಾಮಿತ್ರತೀರ್ಥರು
28) ಶ್ರೀರಘುನಂದನತೀರ್ಥರು
29) ಶ್ರೀಸುರೇಂದ್ರತೀರ್ಥರು
30) **ಶ್ರೀವಿಜಯೀಂದ್ರತೀರ್ಥರು**
31) ಶ್ರೀಸುಧೀಂದ್ರತೀರ್ಥರು
32) **ಶ್ರೀರಾಘವೇಂದ್ರತೀರ್ಥರು**
(ಶ್ರೀಗುರುಸಾರ್ವಭೌಮರು)
33) ಶ್ರೀಯೋಗೀಂದ್ರತೀರ್ಥರು
34) ಶ್ರೀಸೂರೀಂದ್ರತೀರ್ಥರು
35) ಶ್ರೀಸುಮತೀಂದ್ರ ತೀರ್ಥರು

36) ಶ್ರೀಮದುಪೇಂದ್ರತೀರ್ಥರು
37) ಶ್ರೀಮದ್ವಾದೀಂದ್ರತೀರ್ಥರು
38) ಶ್ರೀವಸುಧೇಂದ್ರತೀರ್ಥರು
39) ಶ್ರೀವರದೇಂದ್ರತೀರ್ಥರು
40) ಶ್ರೀಧೀರೇಂದ್ರತೀರ್ಥರು
41) ಶ್ರೀಭುವನೇಂದ್ರತೀರ್ಥರು
42) ಶ್ರೀಸುಭೋದೇಂದ್ರತೀರ್ಥರು
43) ಶ್ರೀಸುಜನೇಂದ್ರತೀರ್ಥರು
44) ಶ್ರೀಸುಜ್ಞಾನೇಂದ್ರತೀರ್ಥರು
45) ಶ್ರೀಸುಧರ್ಮೇಂದ್ರತೀರ್ಥರು
46) ಶ್ರೀಸುಗುಣೇಂದ್ರತೀರ್ಥರು
47) ಶ್ರೀಸುಪ್ರಜ್ಞೇಂದ್ರತೀರ್ಥರು
48) ಶ್ರೀಸುಕೃತೀಂದ್ರತೀರ್ಥರು
49) ಶ್ರೀಸುಶೀಲೇಂದ್ರತೀರ್ಥರು
50) ಶ್ರೀಸುವ್ರತೀಂದ್ರತೀರ್ಥರು
51) ಶ್ರೀಸುಯಮೀಂದ್ರತೀರ್ಥರು
52) ಶ್ರೀಸುಜಯೀಂದ್ರತೀರ್ಥರು
53) ಈಗ ಇರುವ ಪ್ರಸ್ತುತ ಪೀಠಾಧಿಪತಿಗಳು ಶ್ರೀ ಸುಶಮೀಂದ್ರತೀರ್ಥರು

ಶ್ರೀಮದಾಚಾರ್ಯರಿಂದ ಶ್ರೀಸುಜಯೀಂದ್ರರು 37ನೆಯವರು ಇದು ಆಚಾರ್ಯರ **"ಸರ್ವಮೂಲ ಗ್ರಂಥ"**ದ ಶುಭಸಂಖ್ಯೆ.

ಈ ಮೇಲಿನ ಗುರುಪೀಳಿಗೆಯ ಒಬ್ಬೊಬ್ಬರ ಚರಿತ್ರೆಯೂ ಅವರ್ಣನೀಯವಾದುದು. ಅದರಲ್ಲಿ ಶ್ರೀಮದಾಚಾರ್ಯರು, ಶ್ರೀಜಯತೀರ್ಥರು. ಶ್ರೀವಿಜಯೀಂದ್ರರು ಶ್ರೀರಾಘವೇಂದ್ರರು, ಶ್ರೀವಾದೀಂದ್ರರು, ಶ್ರೀವರದೇಂದ್ರರು ಶ್ರೀಧೀರೇಂದ್ರರು ಶ್ರೀಸುಗುಣೇಂದ್ರರು ಶ್ರೀಸುಶೀಲೇಂದ್ರರು ಹಾಗೂ ಶ್ರೀಸುಯಮೀಂದ್ರತೀರ್ಥರಮಹಿಮೆ ಹೆಚ್ಚು ಪ್ರಾಚುರ್ಯದಲ್ಲಿರುವಂತಿದೆ.

ಶ್ರೀಸುಯಮೀಂದ್ರರು

ಶ್ರೀಸುಜಯೀಂದ್ರತೀರ್ಥರ ಸಾಕ್ಷಾತ್ ಗುರುಗಳಾದ ಶ್ರೀಸುಯಮೀಂದ್ರತೀರ್ಥರು ಆಧುನಿಕ ಜಗತ್ತಿಗೆ ಚಿರಪರಿಚಿತರು. ಪ್ರಸಿದ್ಧರು, ಸಕಲರಿಗೂ ಪ್ರಿಯತಮರು ಅಜಾತಶತ್ರುಗಳು, ಕರುಣೆಗಳು, ವಿಶಾಲಹೃದಯರು, ಶಾಂತರು, ಕಲಾಭಿಮಾನಿಗಳು, ಇವರ ಕಾಲದಲ್ಲಿ ಹರಿದಾಸ ಪಂಥದವರಿಗೆ ವಸಂತಕಾಲ. ಶ್ರೀಪಾದಂಗಳವರು ಲೇಖಕನಿಗೆ ಬಹು ಉತ್ತೇಜನ ಕೊಟ್ಟು ಅಪರೋಕ್ಷ ಜ್ಞಾನಿಗಳ ಹತ್ತು ಕೃತಿಗಳನ್ನು ಅಭ್ಯಾಸಮಾಡಿದ ಕೂಡಲೇ ಮಂತ್ರಾಲಯಕ್ಕೆ ಹೋಗಿ ಅದನ್ನು ಶ್ರೀರಾಯರ ಹಾಗೂ ಶ್ರೀಹನುಮಂತದೇವರ ದಿವ್ಯಸನ್ನಿಧಿಯಲ್ಲಿ ಶ್ರೀ ಶ್ರೀಪಾದಂಗಳವರ ಪವಿತ್ರ ಸನ್ನಿಧಿಯಲ್ಲಿ ರಾತ್ರಿ ಪೂಜಾನಂತರ ಹಾಡಬೇಕೆಂಬ ಕಟ್ಟಪ್ಪಣೆ ಮಾಡಿ ನಾನು ಹೋಗಿಬರುವ ವೆಚ್ಚ ಹಾಗೂ ಪ್ರತಿಸಲಕ್ಕೂ ಸಂಭಾವನೆ ವಸ್ತ್ರಾದಿಗಳನ್ನಿತ್ತು "ನೀವು ಹೇಳುವ ಜ್ಞಾನಿಗಳ ಕೃತಿ ಮನಸ್ಸಿಗೆ ನಾಟುವಂತಿರುತ್ತದೆ. ಸಂತೋಷ" ಎಂದು ಅನುಗ್ರಹಿಸಿ ಆಶೀರ್ವದಿಸಿ ಕಳುಹಿಸುತ್ತಲಿದ್ದರು. ಶ್ರೀ ಶ್ರೀಗಳ ಈ ಒಂದು ಉದಾತ್ತ ಮನೋವೃತ್ತಿಯ ಕಾರಣವಾಗಿ ಅಲ್ಪನಾದ ನನಗೆ 185 ಮಂತ್ರಾಲಯ ಯಾತ್ರೆಯಾದುದೂ ಅಲ್ಲದೇ ಅನೇಕಾನೇಕ ಅಪರೋಕ್ಷ ಜ್ಞಾನಿಗಳ ಕೃತಿಗಳನ್ನು ಅವಲೋಕನ ಅಭ್ಯಾಸಮಾಡುವ ಒಂದು ಸದವಕಾಶ ಉಂಟಾಗಿ ಸಾಧನೆಗೆ ಸಹಾಯವಾಯಿತು. ಇಷ್ಟಕ್ಕೆಲ್ಲಾ ಕಾರಣನೆಂದರೆ ಮಹಾನುಭಾವರಾದ ಶ್ರೀಮದ್ ವ್ಯಾಸರಾಜ ಮಠಾಧೀಶರಾಗಿ ನಾನಾ ಶಾಖೋಪಶಾಖೆಗಳಲ್ಲಿ ತಮ್ಮ ವಿದ್ವತ್ ಕಿರಣಗಳನ್ನು ಹಾರಿಸಿ, ಅಪಾರಕೃತಿಗಳನ್ನು ರಚಿಸಿದ ಶ್ರೀವಿದ್ಯಾಪ್ರಸನ್ನತೀರ್ಥರು ನನಗೆ ಬಹುವಾಗಿ ಉತ್ತೇಜನ ಕೊಟ್ಟು ಶ್ರೀಗಳಿಗೆ ನನ್ನ ಬಗ್ಗೆ ತಿಳಿಸಿದ್ದರಿಂದಲೂ ಹಾಗೂ ನಾನು ಉತ್ತಮವಾದ, ಶ್ರೀರಾಯರ ಅನುಗ್ರಹ ಪಾತ್ರರಾಗಿ ಪ್ರತಿದಿನಾ 16 ಸರ್ಗ ಸುಮಧ್ವವಿಜಯ ಗ್ರಂಥವನ್ನು ಪಾರಾಯಣಮಾಡಿ, ಮಂತ್ರಾಲಯ ಕ್ಷೇತ್ರದಲ್ಲಿ ಬಹುದೀರ್ಘಕಾಲ ಅನ್ನಸತ್ರ ನಡೆಸಿದ ನನ್ನ ತಾತಂದಿರಾದ (ಪಿತಾಮಹರು) ಶ್ರೀಚಿಂಚೋಳಿ ಮಹಿದಾಸಾಚಾರ್ಯರ ಮೊಮ್ಮಗನಾಗಿ ಜನಿಸಿದ್ದೆ ಮೂಲಕಾರಣವಾಗಿದೆ. ಶ್ರೀರಾಘವೇಂದ್ರಸ್ವಾಮಿಗಳು ನನ್ನ ತಾತಂದಿರಿಗೆ ದರ್ಶನಕೊಟ್ಟು, ಅವರಿಂದ ಅಪಾರವಾದ ಅವರ್ಣನೀಯ ಕಾರ್ಯ ಮಾಡಿಸಿದ್ದು ಶ್ರೀ ಶ್ರೀಗಳಿಗೆ ತಿಳಿದಿದ್ದರಿಂದ ನನಗೆ ಅವರನುಗ್ರಹವಾಗಲಾಸ್ಪದವಾಯಿತು. ಅವರನುಗ್ರಹದಿಂದ ನನ್ನ ತಾತನ ಬಗ್ಗೆ ಒಂದು ಗ್ರಂಥವನ್ನೇ ನಾನು ರಚಿಸಿ ಪ್ರಕಟಿಸಲನುಕೂಲವಾಯಿತು. ಶ್ರೀಸುಯಮೀಂದ್ರರ ಮಹಿಮೆಬರೆಯಲು ನನಗೆ ಪುಟಗಳೆಷ್ಟಿದ್ದರೂ ಸಾಲವು. ಇಂತಹ ಸರ್ವಜನಪ್ರಿಯರಾಗಿದ್ದ ಅಪಾರ ಮಹಿಮರ ಪ್ರಿಯಶಿಷ್ಯರೇ ನಮ್ಮ ಇಂದಿನ ಕಥಾನಾಯಕರಾದ ಶ್ರೀಸುಜಯೀಂದ್ರರು.

ಇವರಿಗೆ ಸುಜಯೀಂದ್ರನಾಮವೇಕೆ ?

ಸಾಮಾನ್ಯವಾಗಿ ಜ್ಞಾನಿಗಳು ಕೊಡುವ ಹೆಸರಿಗೂ, ವ್ಯಕ್ತಿಗೂ ನಿಕಟಸಂಬಂಧವಿರುತ್ತಿರುವ ಅಂಶ ಸರ್ವ ವೇದ್ಯವಾಯುವಾಗಿದೆ. ಶ್ರೀಮದಾಚಾರ್ಯರು ಹಾಗೂ ಶ್ರೀಜಯತೀರ್ಥರಿಗೂ ಇರುವ ನಾಮಗಳ ಹೆಸರಿನ ಪ್ರಭಾವದ ಮೇಲೆ ಅಪರೋಕ್ಷ ಜ್ಞಾನಿಗಳು ಹತ್ತಾರು ಕೃತಿಗಳನ್ನೇ ರಚಿಸಿರುತ್ತಾರೆ. ಶ್ರೀಸುಧೀಂದ್ರರು ಶ್ರೀರಾಯರಿಗೆ ಶ್ರೀರಾಘವೇಂದ್ರ ಎಂದು ಕರೆದರಷ್ಟೆ ? ಈ ನಾಮದ ಮಹಿಮೆಯನ್ನು ಸಾಕ್ಷಾತ್ ಗಣೇಶಾಂಶ ಸಂಭೂತರಾದ ಶ್ರೀಗೋಪಾಲದಾಸರು ತಮ್ಮದೊಂದು ಕೃತಿಯಲ್ಲಿ

"ಶ್ರೀರಾಘವೇಂದ್ರರ ಚರಣಕಮಲವನ್ನು
ಸ್ಮರಿಸುವ ಮನುಜರಿಗೆ ॥ಪ॥
ಖರೆಖರೆಗೊಳಿಸುವ ಖಠಿಣ ಭವವೆಲ್ಲಾ
ಕರಿಯುಸಿಂಹ ಕಂಡ ತೆರನಾಗುವುದಯಾ ॥ಅ॥

ರಾ ಎನೆ ರಾಶಿದೋಷಗಳನ್ನು ದಹಿಸುವ
ಘ ಎನೆ ಘನ, ಜ್ಞಾನ, ಭಕ್ತಿಯೀವ
ವೇಂ ಎನೆ ವೇಗದಿ ಜನನ ಮರಣದೂರ
ದ್ರ ಎನೆ ಪ್ರವಿಣಾರ್ಥ ಕೃತಿಪಾದ್ಯನಕಾಂಬ

ಎಂದು ಶ್ರೀರಾಘವೇಂದ್ರರ ಸ್ಮರಣೆ ಮಾತ್ರದಿಂದ ಸಕಲ ದೋಷಾಪಹಾರ, ಜ್ಞಾನಭಕ್ತಿ ವೈರಾಗ್ಯಪ್ರಾಪ್ತಿ, ಜನನ ಮರಣ ದೂರ ಹಾಗೂ ಪರಮಾತ್ಮನ ಪ್ರಾಪ್ತಿಯಾಗುವುದೆಂದು ಸಕಲ ಅನಿಷ್ಟ ನಾಶ ಇಷ್ಟಸಿದ್ಧಿ ಎಂದು ತಿಳಿಸಿದರು.

ಇವನ್ನೇ ಸಂಸ್ಕೃತದಲ್ಲಿ ಪಂಡಿತರುಗಳು ವಿವರಿಸುತ್ತಾ ಶ್ರೀ. ರ. ಅಘ. ವೇಂ. ದ. ರ ಎಂದು 8 ವರ್ಣಗಳಾಗಿ ವಿಭಾಗಿಸಿ.

ಅದಕ್ಕೆ ಅಘಂಚ, ವೇಂಚ = ಅಘವೇಂ
ರಮತೇ ಇತಿರಃ – ರಮಯತೀತಿ-ರಃ
ಅಘವೇಂ. ದ್ಯತಿ. ರಾತೀರೆ = ಅಘವೇಂದ್ರಃ
ರಶ್ಚಾಸೌ, ಅಘವೇಂದ್ರಶ್ಚ = ರಾಘವೇಂದ್ರಃ

ಶ್ರೀಯುಕ್ತ ಶ್ಚಾ ಸೌ ರಾಘವೇಂದ್ರಶ್ಚ = ಶ್ರೀರಾಘವೇಂದ್ರ ಅಂದರೆ ತಂದೆಯ ಅಘಪರಿಹರಿಸಿ ಅವನಿಗೆ ಸುಗತಿದಾಯಕರು = ಅಘವೇಂದ್ರರು ಸುಖ ಪ್ರದರು, ತಂದೆಯ ಅಘ ಪರಿಹರಿಸಿ ಸುಗತಿ ಇತ್ತವರು ಪ್ರಹ್ಲಾದರು. ಅವರೇ ರಾಯರು. ಹೀಗೆ ನಾನಾ ರೀತಿಯಲ್ಲಿ ವಿದ್ವಾಂಸರು ತರಂಗ, ತರಂಗವಾಗಿ ವಿವರಿಸಿದ್ದಾರೆ.

ಪ್ರಕೃತ, ಶ್ರೀಸುಯಮೀಂದ್ರರಿಗೆ ಶ್ರೀಮದಾಚಾರ್ಯರ ಶಾಸ್ತ್ರಾಧ್ಯಯನದಲ್ಲಿ ಎಷ್ಟು ಆಸಕ್ತಿ ಇತ್ತೆಂಬುದನ್ನು ಅವರು ತಮ್ಮ ಪ್ರಿಯ ಶಿಷ್ಯರಿಗಿತ್ತ ನಾಮಕರಣದಿಂದಲೇ ತಿಳಿಯಬಹುದಾಗಿದೆ. "ಮಧ್ವಮತವೇ ಮತವು ಸಕಲ ಶೃತಿ ಸಮ್ಮತವು" ಎಂಬ ಶ್ರೀವಿಜಯದಾಸರ ವಾಕ್ಯವನ್ನು ಚೆನ್ನಾಗಿ ಮನಗಂಡ ಶ್ರೀಸುಯಮೀಂದ್ರರು ತಮ್ಮ ಶಿಷ್ಯರತ್ನ ಶ್ರೀಜಯತೀರ್ಥರಂತೆ ಶ್ರೀಮದಾಚಾರ್ಯರ ಸಿದ್ಧಾಂತವೇ ಶ್ರೇಷ್ಠ ಎಂದು ಸಾರಲಿ ಎಂದು ಅವರಿಗೆ ಶ್ರೀಸುಜಯೀಂದ್ರರೆಂದು ಕರೆದರು.

ಹೆಸರಿಗೆ ತಕ್ಕ ಕಾರ್ಯ

ಶ್ರೀಸುಯಮೀಂದ್ರರು 1885ನೆ ಶುಭಕೃತ್ ನಾಮ ಸಂವತ್ಸರದ ಆಶ್ವಯುಜ ಕೃಷ್ಣ ಪಂಚಮಿ ದಿನ ಅಂದರೆ ದಿನಾಂಕ 11-5-1963ರಂದು ಶ್ರೀಮಂತ್ರಾಲಯದ ವೃಕ್ಷರಾಜರ ಸನ್ನಿಧಿಯಲ್ಲಿ ತಾವು ವೃಂದಾವನವಾಗುವ ಮುನ್ನ ಶ್ರೀಸುಜಯೀಂದ್ರರಿಗೆ ಆಶ್ರಮವಿತ್ತರು. ಶ್ರೀಸುಜಯೀಂದ್ರರಾದರೂ ಬಾಲ್ಯಾವಸ್ಥೆಯಿಂದಲೂ ಅತ್ಯಂತ ಬುದ್ಧಿವಂತರಾಗಿ ಒಳ್ಳೆಯ ಗ್ರಹಣಶಕ್ತಿ ಹೊಂದಿದವರಾಗಿ ಮಹಾಪಂಡಿತರಾಗಿದ್ದರು. ಇವರ ಸಹವರ್ತಿಗಳೆಲ್ಲಾ ಉದ್ದಾಮ ಪಂಡಿತರುಗಳು, ಪೂರ್ವಾಶ್ರಮದಲ್ಲೇ ವಿಷ್ಣು ಪಂಚಕಾದಿ ದೊಡ್ಡ ದೊಡ್ಡ ವ್ರತಾದಿಗಳನ್ನು ಆಚರಿಸಿ ಉತ್ತಮ ಆಚಾರಶೀಲರಾಗಿ ಕರ್ಮಠರಾಗಿದ್ದರು, ಶ್ರೀಸುಜಯೀಂದ್ರರು. ಜ್ಞಾನಮಟ್ಟವನ್ನು ಹೆಚ್ಚಿಸಬೇಕು. ಕಪಟವನ್ನು ದೂರೀಕರಿಸಬೇಕು ಸಕಲರೂ ಪ್ರಾಚೀನ ಕ್ರಮ ಕೈಗೊಳ್ಳಬೇಕು ಎಂಬುದು ಇವರ ಧ್ಯೇಯ ಮುಖ್ಯವಾಗಿ ಸಂಸ್ಕೃತ ಭಾಷೆಗೆ ಉತ್ತೇಜನ ಕೊಡಲು ಧೃಡಸಂಕಲ್ಪಿಸಿದರು ಶ್ರೀಗಳು.

ಶ್ರೀಗಳು ಕೈಗೊಂಡ ಕಾರ್ಯ

ಶ್ರೀಗಳಿಗೆ ಪ್ರಾಚೀನ ವಿದ್ಯೆ ಎನಿಸಿದ ವೇದಾಧ್ಯಯನ, ತರ್ಕ, ಪಾಠ ಪ್ರವಚನ, ಗ್ರಂಥಾಧ್ಯಯನ, ಮುಖ್ಯವಾಗಿ ಜೋತಿಷ್ಯ, ವೇದಾಂತ ಮೀಮಾಂಸ, ಇತ್ಯಾದಿಗಳ ಅಭಿ

ವೃದ್ಧಿಗೆ ಎಲ್ಲಾ ರೀತಿಯ ಸಹಕಾರ ಕೊಡಲು ಬಹಳ ಇಷ್ಟವಿತ್ತು. ಅವರು ಪ್ರತಿಸಭಾಕಾಲದಲ್ಲೂ ಇದೇ ವಿಚಾರ ಹೇಳುತ್ತಲೂ ಇದ್ದರು. ಪೂರ್ವದಲ್ಲಿ ರಾಜಾನು ರಾಜರ ಆಶ್ರಯ ಪ್ರಾಚೀನ ವಿದ್ಯೆಗಿತ್ತು. ಈಗ ಅದು ತಪ್ಪಿದೆ. ಆದ್ದರಿಂದ ಪೀಠಾಧಿಪತಿಗಳು ಆ ಕಾರ್ಯವೆಸಗ ಬೇಕೆಂದು ಸ್ಪಷ್ಟವಾಗಿ ಹೇಳುತ್ತಲಿದ್ದರು. ಸಂಸ್ಕೃತ ವಿದ್ಯಾಭ್ಯಾಸ ಮಾಡಿದವರು ತಮ್ಮ ಜೀವನೋಪಾಯಕ್ಕೆ ವ್ಯಾಕುಲತೆ ಪಡಬಾರದು ಎಂದು ಅನೇಕ ಕಡೆ ತಾವೇ ಪಾಠಶಾಲೆಗಳನ್ನು ತೆರೆದು ವಿದ್ಯಾರ್ಥಿಗಳಿಗೆ ಊಟ, ವಸತಿ, ಬಟ್ಟೆ ಎಲ್ಲವನ್ನೂ ಕೊಟ್ಟು ವಿದ್ಯಾ ಹೇಳಿಕೊಟ್ಟು ಅವರು ಪೂರ್ಣ ಅಧ್ಯಯನ ಮಾಡಿದಮೇಲೆ ಒಂದು ಲಕ್ಷ ರೂಪಾಯಿಗಳಿಗೆ ಕಮ್ಮಿ ಇಲ್ಲದೇ ನಿಧಿ ಒಂದನ್ನು ಕೊಟ್ಟು ಸೂಕ್ತ ನೌಕರಿಯನ್ನೂ ಕೊಡಿಸಿ ಉಪಕರಿಸುವುದಾಗಿ ವಿದ್ಯಾರ್ಥಿಗಳಿಗೆ ಘಂಟಾಘೋಷವಾಗಿ ವಾಗ್ದಾನ ಮಾಡಿ ತನ್ಮೂಲಕ ಅವರ ಗಮನ ಪ್ರಾಚೀನ ವಿದ್ಯಾ ವ್ಯಾಸಂಗಕ್ಕೆ ತಿರುಗಿಸಲು ಬಹು ಶ್ರಮಿಸಿದರು.

ಗುರುಕುಲಗಳು

ಹೀಗೆಂದು ಪಣ ತೊಟ್ಟ ಶ್ರೀ ಸುಜಯೀಂದ್ರರು ಮಂತ್ರಾಲಯ ಇತ್ಯಾದಿ ನಾನಾ ಭಾಗಗಳಲ್ಲಿ ಭಾರಿ ಗುರುಕುಲಗಳನ್ನೆ ಸ್ಥಾಪಿಸಿದರು. ದೊಡ್ಡ ದೊಡ್ಡ ವಿದ್ವಾಂಸರುಗಳನ್ನು ದೇಶದ ನಾನಾ ಭಾಗಗಳಿಂದ ಅಪಾರ ಹಣವನ್ನು ವ್ಯಯ ಮಾಡಿ ಕರೆಸಿ ಅವರಿಗೆ ಆಕರ್ಷಣೀಯ ಮಾಸ ಸಂಬಳಾದಿಗಳನ್ನಿತ್ತು ಮನೆಗಳನ್ನು ಕೊಟ್ಟು ಪ್ರೋತ್ಸಾಹಿಸಿದರು. ಗುರುಕುಲಗಳಿಗೆ ಬರುವ ವಿದ್ಯಾರ್ಥಿ ಗಳಿಗೆ ಇಳಿದುಕೊಳ್ಳಲು ಸೂಕ್ತ ಕೊಠಡಿಗಳು. ಸ್ನಾನಾ ಹ್ನಿಕಾದಿಗಳ ವ್ಯವಸ್ಥೆ, ಸಕಾಲಕ್ಕೆ ಭೋಜನ ವ್ಯವಸ್ಥೆ, ಅವರುಗಳಿಗೆ ಆಟಪಾಠ, ಚಿಂತನಾದಿಗಳಿಗೆ ವ್ಯವಸ್ಥೆಯನ್ನು ಮಾಡಿದ್ದಲ್ಲದೇ ಅವರಿಗೆ ಆರೋಗ್ಯ ರಕ್ಷಣೆಗೆ ವೈದ್ಯಕೀಯ ನೆರವನ್ನೂ ಇಟ್ಟರು. ಶ್ರೀಗಳಿಂದ ಸ್ಥಾಪಿತವಾದ ಆ ಗುರುಕುಲದ ಉಪಾಧ್ಯಾಯ ಹಾಗೂ ವಿದ್ಯಾರ್ಥಿ ವೃಂದದ ಜೀವನ ವೈಖರಿ ಅವರ್ಣನೀಯವಾದುದು.

ಕಾಲಕ್ಕನುಗುಣ

ಹಳೆಯ ಮನೋವೃತ್ತಿ ತಾಳಿದ್ದು ತಾವು ವೃದ್ಧ ರಾಗಿದ್ದರೂ ನವೀನ ಕಾಲದ ಹಾವಳಿಯಿಂದ ಶ್ರೀಗಳು ಪಾರಾಗಲಾಗಲಿಲ್ಲ. ಏಕೆಂದರೆ ಸಿನಿಮಾ ಜಗತ್ ಇತ್ಯಾದಿ ಗಳಿಂದ ಶ್ರೀ ಮಂತ್ರಾಲಯ ಕ್ಷೇತ್ರ ಒಂದು "ಟೂರಿಸ್ಟ್ ಸೆಂಟರ್" ಆಗಿಬಿಟ್ಟಿತು. ಪ್ರತಿನಿತ್ಯ ಆ ಕ್ಷೇತ್ರಕ್ಕೆ ಬಂದು ಹೋಗುವವರ ಸಂಖ್ಯೆ ಅಗಣಿತವಾಗುತ್ತಾ ಬಂದು. ರಾಜಕೀಯ ಪಕ್ಷ ಭೇದ ಜಾತಿ ಪದ್ಧತಿ, ಉಚ್ಛ ನೀಚ ಎಂಬ ತಾರತಮ್ಯಾದಿಗಳಿಗೆ ಮನ ಸೋಲದ ಜನರೂ ಕೂಡ ಈ ಕ್ಷೇತ್ರಕ್ಕೆ ಬಂದು ಶ್ರೀಗಳನ್ನು ಭೇಟಿ ಮಾಡಲು ಪ್ರಾರಂಭಿಸಿದರು. ಹಿಂದೆ ಕೆರೆ, ಮುಂದೆ ಭಾವಿ ಎಂಬಂತಾಗಿ ಶ್ರೀ ಶ್ರೀಗಳು ಬಹು ಕಠಿಣ ಪರಿಸ್ಥಿತಿಗೆ ಸಿಲುಕಿದರು. ಆದರೂ ಧೈರ್ಯವಾಂತು ಹಿಂದಿನ ಸಂಪ್ರದಾಯಾ ಚರಣೆಗೆ ಚ್ಯುತಿ ಬರದಂತೆ ನವೀನರೂ ತಲೆದೂಗುವಂತಹ ಕ್ರಮದಲ್ಲಿ ಪೂಜಾ ವ್ಯವಸ್ಥೆ, ಗುರುಗಳ ದರ್ಶನ ಕ್ರಮ, ಊಟದ ಏರ್ಪಾಡು ಇತ್ಯಾದಿಗಳನ್ನು ಬಹು ಚಮತ್ಕಾರ ವಾಗಿ ಏರ್ಪಡಿಸಿ ತಾವು ಮಾತ್ರಾ ಏನೂ ತಿಳಿಯದಂತೆ ಎಲೆಮರೆ ಕಾಯಿಯಾಗಿಯೇ ಉಳಿದು ಸಾಧನ ಮಾಡ ತೊಡಗಿದರು.

ಹಣಸಂಗ್ರಹ

ಶ್ರೀಗಳು ಎಲ್ಲರಿಗೂ ದರ್ಶನ ಕೊಟ್ಟು ಆಶೀರ್ವದಿಸು ತ್ತಲಿದ್ದರು. ಆದರೆ ಯಾರೊಡನೆಯೂ ವಿಶೇಷ ಬೆರೆಯು ತ್ತಿರಲಿಲ್ಲ. ಅವರು ಯಾರನ್ನೂ ಬಾಯಿಬಿಟ್ಟು ಹಣ ಕೇಳಿದವರಲ್ಲ. ಇವರ ಸದ್ಗುಣಗಳನ್ನು ಕಂಡ ಆಸ್ತಿಕರು ಯಾರೂ ಕಾಣಿಕೆ ಅರ್ಪಿಸದೇ ಹೋಗುತ್ತಿರಲಿಲ್ಲ. ಶ್ರೀ ಮಠದ ಆಫೀಸನ್ನು ಸೂಕ್ತ ರೀತಿಯಲ್ಲಿ ಶ್ರೀ ಶ್ರೀಗಳು ವಿಸ್ತರಿಸಿ ಗುರುಗಳಿಗೆ ನಾನಾ ರೀತಿ ಸೇವೆ ಮಾಡಿಸುವ ಮನೋವೃತ್ತಿ ಉಳ್ಳ ಗುರುಭಕ್ತರು ನಿರಾಯಾಸವಾಗಿ ಸೂಕ್ತ ಟಿಕೆಟ್‌ಗಳನ್ನು ಪಡೆದು ಕಾರ್ಯೋನ್ಮುಖರಾಗಲು ವ್ಯವಸ್ಥೆ ಮಾಡಿದರು. ಶ್ರೀಮಠದ ನಾನಾ ಕಡೆಗಳಲ್ಲಿ ಹುಂಡಿಗಳನ್ನು ಸ್ಥಾಪಿಸಿ ಭಕ್ತಾದಿಗಳು ಅದರಲ್ಲೇ ಕಾಣಿಕೆ ಹಾಕುವ ವ್ಯವಸ್ಥೆ ಮಾಡಿದರು. ಇಂದಿನ ಮಂತ್ರಾಲಯದ ಉತ್ಪತ್ತಿ ಇನ್ನಾವ ಗುರು ಮಠದಲ್ಲೂ ಇರಲಾರದೆಂದು ನನ್ನ ಭಾವನೆ. ಇಷ್ಟೊಂದು ಸುವ್ಯವ ಸ್ಥಿತ ಏರ್ಪಾಡನ್ನು ಮಾಡಿದವರು ಶ್ರೀ ಸುಜಯೀಂದ್ರರು.

ಎರಡನೆ ತಿರುಪತಿ

ಈ ಕಲಿಯುಗಕ್ಕೆ ಇರುವ ದೇವರೆಂದರೆ ತಿರುಪತಿ ತಿಮ್ಮಪ್ಪ. ಹಾಗೂ ಗುರುಗಳಲ್ಲಿ ಮಂಚಾಲೆರಾಘಪ್ಪ ಎಂಬುದು ಜನರ ನಂಬಿಕೆ. ಈ ಎರಡು ಕ್ಷೇತ್ರಗಳೂ

ಆಂಧ್ರಪ್ರದೇಶದಲ್ಲಿಯೇ ನೆಲಸಿದೆ. ಅದೂ ಅಲ್ಲ.. ಶ್ರೀ ರಾಯರ ತಂದೆ ತಾಯಿಗಳಾದ ಶ್ರೀ ತಿಮ್ಮಣ್ಣಭಟ್ಟರು ಹಾಗೂ ಶ್ರೀಮತಿ ಗೋಪಮ್ಮನವರು ತಮ್ಮ ಕುಲದೇವರಾದ ತಿರುಪತಿ ತಿಮ್ಮಪ್ಪನನ್ನು ಸೇವಿಸಿ ಪಡೆದ ಮಕ್ಕಳೇ ಶ್ರೀ ರಾಯರಾದ್ದರಿಂದ ಶ್ರೀ ಸುಜಯೀಂದ್ರರು ಮಂತ್ರಾಲಯದಲ್ಲಿ ಬಹುಮಟ್ಟಿಗೆ ಅಲ್ಲಿಯ ವ್ಯವಸ್ಥೆಯನ್ನೇ ಅನುಮೋದಿಸಿದರು. ಗುರುಗಳ ದರ್ಶನಕ್ಕೆ ನೂಕುನುಗ್ಗಲು ತಪ್ಪಿಸಲು ಕಬ್ಬಿಣದ ಕಟ್ಟೆಗಳನ್ನು ಹಾಕಿಸಿ 'ಕ್ಯೂ' ಪದ್ಧತಿ ಜಾರಿಗೆ ತಂದರು. ಎಲ್ಲರಿಗೂ ಸುವ್ಯವಸ್ಥಿತ ದರ್ಶನಕ್ಕೆ ಅನುಕೂಲಪಡಿಸಿದರು. ಬಂದು ಹೋಗುವ ಭಕ್ತರು ಇಳಿದುಕೊಳ್ಳಲು ಅನೇಕಾನೇಕ ಸುವ್ಯವಸ್ಥಿತ ಮನೆಗಳನ್ನು ಕಟ್ಟಿಸಿದರು. ಭಕ್ತಾದಿಗಳು ತಮ್ಮ ಯೋಗ್ಯತಾನುಸಾರವಾದ ಮನೆಗಳಲ್ಲಿ ಇಳಿದುಕೊಳ್ಳಲು ಏರ್ಪಡಿಸಿ ಉಪಕರಿಸಿದರು.

ಅಂದು-ಇಂದು

ತಮ್ಮ ಗುರುಗಳ ಕಾಲಕ್ಕೆ ಚಿಕ್ಕದಾಗಿ [illegible] ಮಂತ್ರಾಲಯ ಕ್ಷೇತ್ರದಲ್ಲಿ ಎಲ್ಲಿ ನೋಡಿದರೂ ಅಂಗಡಿಗಳ ಸಾಲುಗಳು, ಮನೆಗಳ ಸಾಲುಗಳು, [illegible] ವ್ಯವಸ್ಥೆಗಳು, ಪಾರ್ಕುಗಳು, ನಲ್ಲಿಗಳು, ಉದ್ಯಾನ ಗೃಹಗಳು ಇತ್ಯಾದಿಗಳಿಂದ [illegible] ನೃತ್ಯ ಮಾಡುವಂತೆ ಶ್ರೀಗಳು ಏರ್ಪಡಿಸಿದರು. ಭಕ್ತರು ಇಳಿದುಕೊಳ್ಳುವ ಮನೆಗಳು [illegible], [illegible], [illegible]. ಕೇವಲ [illegible] ಒಂದು ಅಲ್ಪ [illegible] ತಂಗುವವರುಗಳಿಗೆ ಸೂಕ್ತ [illegible] ವ್ಯವಸ್ಥೆಯನ್ನು ಮಾಡಿ ಅವರ ಯಾತ್ರೆಗಳ [illegible] ಸೂಕ್ತ ಏರ್ಪಡಿಸಿದರು. [illegible] ಮಾಡುವವರಲ್ಲಿ ಶ್ರೀಗಳಿಗೆ [illegible]. ಅವರು [illegible] ಉಪಕರಿಸಿದರು [illegible] ಶ್ರೀಗಳು ಅಕ್ಷ[illegible] ಗುರುಗಳಿಗೆ [illegible] ಸಾಲದಕ್ಕೆ ಪ್ರತಿ [illegible] ನಿರ್ಮಾಣವಾಗುತ್ತಿರುವ ಕಟ್ಟಡಗಳನ್ನು ಪರಿಶೀಲಿಸಿ ಸೂಕ್ತ ಸಲಹೆ ಕೊಡುತ್ತಿದ್ದರು. ಹೀಗೆ ಸರ್ವತೋಮುಖ ವ್ಯಾಪ್ತತೆಯಿಂದ ಕಾರ್ಯ ಮಾಡುವ ಶ್ರೀಗಳು ಅತಿ ವಿರಳ.

ಶ್ರೀಗಳ ಸಭಾವೈಖರಿ

ಶ್ರೀಗಳು ತಾವು ಸ್ವತಃ ಮಹಾ ವಿದ್ವಾಂಸರಾದಾಗ್ಯೂ ದೇಶದ ನಾನಾ ಭಾಗಗಳಿಂದ ಅನೇಕಾನೇಕ ಮಹಾ ಮಹಾ ವಿದ್ವಾಂಸರುಗಳನ್ನು ಆಹ್ವಾನಿಸಿ ಅವರುಗಳಲ್ಲಿ ವಾಕ್ಯಾರ್ಥ ವಿಚಾರಾದಿಗಳನ್ನು ಮಾಡಿ ತತ್ವ ನಿಶ್ಚಯ ಮಾಡಿ ತನ್ಮೂಲಾಂತರ ಎಲ್ಲಾ ವಿದ್ವಾಂಸರುಗಳಿಗೂ ಬಹುಮಾನವಾಗಿ ಸಂಭಾವನೆಗಳನ್ನೂ ಅನೇಕರಿಗೆ ಪ್ರತಿ ವರ್ಷವೂ ಶಾಲುಗಳು, ಬಿರುದುಗಳನ್ನಿತ್ತು ಸನ್ಮಾನಿಸುವ ಅನೂಚಾನವಾದ ಸಾಂಪ್ರದಾಯಿಕ ಕ್ರಮವನ್ನು ಇಟ್ಟುಕೊಂಡಿದ್ದರು. ಶ್ರೀಗಳು ಪ್ರತಿ ವರ್ಷವೂ ಎರಡು ಸಲಕ್ಕೆ ಕಮ್ಮಿ ಇಲ್ಲದಂತೆ ಹಿಂದಿನಿಂದಲೂ ನಡೆದುಕೊಂಡು ಬಂದ "ಶ್ರೀ ಸಮೀರ ಸಮಯ ಸಂವರ್ಧಿನೀ ಸಭಾ"ವನ್ನು ಬಹು ವೈಭವದಿಂದ ಆಚರಿಸುತ್ತಾ ಅದಕ್ಕೆ ದೇಶದ ಪ್ರಮುಖ ಪಂಡಿತರುಗಳನ್ನು ಅಸಂಖ್ಯಾತ ಸಂಖ್ಯೆಯಲ್ಲಿ ಆಹ್ವಾನಿಸಿ ಅವರುಗಳ ವಿದ್ವತ್ತಿಗನುಗುಣವಾದರೀತ್ಯಾ ಗೌರವಿಸಿ ಹೋಗಿ ಬರುವ ವೆಚ್ಚ, ಅವರುಗಳು ಇಳಿದುಕೊಳ್ಳಲು ಸೂಕ್ತ ಸ್ಥಳ, ಸ್ನಾನಾದಿಗಳಿಗೂ, ಉಪಹಾರಾದಿಗಳಿಗೂ ಶ್ರೀ ಗುರುಗಳ ದರ್ಶನಕ್ಕೂ ಹಾಗೂ ವಿಶೇಷ ರೀತಿ ಭೋಜನ ವ್ಯವಸ್ಥಾದಿಗಳನ್ನು ಸರಿಯಾಗಿ ಮಾಡಿ ಕೀರ್ತಿಗಳಿಸಿದರು. ಅದರ ಯಾರ ಮನಸ್ಸಿಗೂ ಬೇಜಾರಾಗದ, ವಿಶೇಷವಾಗಿ ಸಿದ್ಧಾಂತಭಾಗಾದಿಗಳಿಗೆ ನೇರವಾಗಿ ಸಂಬಂಧಿಸದ, ದ್ವೈತ, ಅದ್ವೈತ ಹಾಗೂ ವಿಶಿಷ್ಟಾದ್ವೈತ ಮತಗಳ ನೇರ ಸಿದ್ಧಾಂತ ಜಿಜ್ಞಾಸಾದಿಗಳಿಗೆ ಸಂಬಂಧಿಸದ, ಕೇವಲ [illegible] ಜಿಜ್ಞಾಸೆ ಮಾಡಬಹುದಾದ "ಶ್ರೀ ಬ್ರಹ್ಮಸೂತ್ರಾದಿಗಳಿಗೆ [illegible]"– [illegible] ಪ್ರಯೋಗ [illegible] ಧಕ್ಕೆಯು– ವ್ಯಾಕರಣದ ವಿಚಾರಗಳು ತರ್ಕಭಾಗ ಇತ್ಯಾದಿ ಇತ್ಯಾದಿ ಹಾಗೂ ಕೆಲಕೆಲವು ಗ್ರಂಥ[illegible] ವಿಚಾರಗಳ ಬಗ್ಗೆ ಸಭೆಯಲ್ಲಿ ವಾಕ್ಯಾರ್ಥಗಳು ವಿದ್ವತ್ಪೂರ್ಣವಾಗಿ ನಡೆಯುತ್ತಿದ್ದುವು. ಶ್ರೀಗಳ ಈ ಸಭೆಯ ಒಂದು ವೈಲಕ್ಷಣ್ಯ ಎಂದರೆ ಸಕಲ [illegible]ಗಳೂ ಕೇವಲ ಸಂಸ್ಕೃತ ಭಾಷೆಯಲ್ಲಿ [illegible]. ಇವರ ಸಭೆಗೆ ವಿದ್ಯಾವ್ಯಾಸಂಗಕ್ಕಾಗಿಯೇ ಒಂದು ಕೆಲವು ವರ್ಷಗಳಿಂದ ಮಂತ್ರಾಲಯ ಕ್ಷೇತ್ರದಲ್ಲೇ ತಂಗಿರುವ ಶ್ರೀ ಶ್ರೀ ಭೀಮನಕಟ್ಟೆ ಮಠದ ಅತ್ಯಂತ ವರ್ಚಸ್ವಿಗಳಾದ, ಕಿರಿಯ ವಯಸ್ಸಿನ ಮಹಾ ಪ್ರತಿಭಾವಂತರಾದ, ಹಾಗೂ ಪರಮ

ಸಾತ್ವೀಕ ಸೌಜನ್ಯರಾದ ಶ್ರೀಗಳು ಬರುವುದು ಒಂದು ಗಮನಾರ್ಹ ವಿಚಾರ. ಶ್ರೀಗಳು ಪ್ರತಿಸಭಾ ಕಾಲದಲ್ಲಿ ಆ ಕ್ಷೇತ್ರಕ್ಕೆ ಆಗಂತುಕರಾಗಿ ಆಗಮಿಸಿದ ದೊಡ್ಡ ದೊಡ್ಡ ಹುದ್ದೆಯ ಭಾರಿ ಅಧಿಕಾರಿಗಳನ್ನು ಸಭೆಗೆ ಬರಮಾಡಿಕೊಂಡು ಅವರನ್ನು ಗೌರವಿಸಿ ಅವರ ಮೂಲಕ ಸಭಾ ಪಂಡಿತರಿಗೆ ಸಂಭಾವನೆಯನ್ನು ಕೊಡಿಸುತ್ತಾ ತಾವು ಮಂತ್ರಾಕ್ಷತೆಯನ್ನು ಅನುಗ್ರಹಿಸುತ್ತಾ ರಾರಾಜಿಸಿದರು. ಶ್ರೀಗಳು ಸಭೆಗೆ ಹೋಗುವ್ವಾಗ ಒಂದು ವೈಖರಿ. ಮುಂದೆ ಶ್ರೀ ಮಠದ ಅಲಂಕೃತ ಆನೆ ಅದರ ಹಿಂದೆ ಮಂಗಳ ವಾದ್ಯ ಅದರ ಹಿಂದೆ ಬಂಗಾರದ ಪಲ್ಲಕ್ಕಿಯಲ್ಲಿ ಶ್ರೀ ಶ್ರೀಪಾದ್ಯ ಸ್ವರ್ಣ ಗಿಂಡಿಗಳು, ಹಾಗೂ ಶ್ರೀರಾಮರು. ಅದರ ಹಿನ್ನೆಲೆ ದೊಡ್ಡ ದೊಡ್ಡ ಜರಿ ಸರಿ ಶಾಲುಗಳನ್ನು ಹೊದ್ದ ಶ್ರೀಮಂತ್ರ, ವಿಭೂತಿ ಹಾಗೂ ಮೂರು ನಾಮಗಳಿಂದ ಎಸೆವ ಪಂಡಿತರ ವೇದಘೋಷ ಹಾಗೂ ಹರಿದಾಸರ ಗಾನ ವಿಲಾಸಾದಿಗಳು ಹೀಗೆ ಕ್ರಮ. ಪ್ರತಿ ವರ್ಷದ ಸಭಾ ಕೊನೆಯಲ್ಲಿ ಶ್ರೀಗಳು ತಮ್ಮ ಮಠಕ್ಕೆ ಹಣದ ಕೊರತೆ ಎಂದಿಲ್ಲ ರಾಯರ ದಯೆಯಿಂದ, ಆದರೆ ವಿದ್ಯಾರ್ಥಿಗಳ ಕೊರತೆ ಇರುವುದರಿಂದ ಇಂದು ನಾನಾ ಕಡೆಗಳಿಂದ ಶ್ರೀಮಠಕ್ಕೆ ವಿದ್ಯಾರ್ಥಿಗಳು ಬನ್ನಿ ಬನ್ನಿ ಎಂದು ಬಹಳ ಪ್ರೀತಿಯಿಂದ ಆಹ್ವಾನಿಸುತ್ತಿದ್ದರು. ಹರಿದಾಸರುಗಳಿಗೆ ಅವರ ಗುರುಗಳ ಕಾಲದಲ್ಲಿ ಹೀಗೇ ಆಗಿತ್ತು. ಪಂಡಿತರುಗಳಿಗೆ ನಾವು ಪ್ರೋತ್ಸಾಹ ಕೊಡದಿದ್ದಲ್ಲಿ ಅವರುಗಳು ಪಟ್ಟ ಶ್ರಮಕ್ಕೆ ಬೆಲೆ ಇಲ್ಲದೇ ಕಾಲಕ್ರಮದಲ್ಲಿ ಪಾಂಡಿತ್ಯವೇ ಹಂಚಿ ಹರಿದು ಹೋಗಿ ಪುರಾತನ ಭಾರತೀಯ ಸಂಸ್ಕೃತಿಯು ಅಳಿಸಿ ಹೋಗುವುದೆಂಬ ಭೀತಿ ಶ್ರೀ ಶ್ರೀಗಳನ್ನು ಬಾಧಿಸುತ್ತಿತ್ತು.

ಸ್ವಾರ್ಥ ರಹಿತ ಕಾರ್ಯ ಅವಿರತ

ಶ್ರೀ ಶ್ರೀ ಸುಜಯೀಂದ್ರತೀರ್ಥರು ಅಂತಹ ವಾಚಾಳಿಗಳು ಅಲ್ಲ. ತಮ್ಮನ್ನು ಕಾಣಲು ಬಂದವರೊಡನೆ ಬಹು ಮಾತಾಡುತ್ತಿರಲಿಲ್ಲ. ಅವರು ಸನ್ಯಾಸ ಧರ್ಮದಲ್ಲಿ ಜನರಿಗೆ ಏನಾಗಬೇಕೋ ಅಷ್ಟು ಕಾರ್ಯಗಳನ್ನು ಸಕಾಲಕ್ಕೆ ಮಾಡಿ ಮಾಡಿ ಮುಗಿಸುತ್ತಿದ್ದರು. ಅವರಿಗೆ ಹಣದಾಸೆ ಇರಲಿಲ್ಲ. ವೈರಾಗ್ಯ ನಿಧಿಗಳು ಅವರು ಮೇಲಾಗಿ ಸ್ಥೂಲಕಾಯರಾಗಿ ಸ್ವಲ್ಪ ಮೈ ಸರಿಯಾಗಿರದ ಹಾಗೂ ಕಣ್ಣುಗಳ ಸೂಕ್ಷ್ಮತೆ ಕಮ್ಮಿಯಾದ ಕಾರಣ ತಮ್ಮ ಶಿಷ್ಯರ ಸಹಕಾರದಿಂದ ಬಲಾತ್ಕಾರವಾಗಿಯೇ ಚಲಿಸುತ್ತಾ ತಾವು ಮಾಡಬೇಕಾದ ಯಾವುದೊಂದು ಕಾರ್ಯವನ್ನೂ ನಿರ್ಲಕ್ಷಿಸದೇ ಏನೇ ಆದರೂ ಮಾಡುವಂಥ ಸ್ಥಿತಪ್ರಜ್ಞರು ಅವರು. ಇಂತಹ ಮಹಾನುಭಾವರು ಬೆಳಗಿನ ಝಾವವೇ ಎದ್ದು ಸ್ನಾನಾಹ್ನೀಕ ಜಪತಪಾದಿಗಳನ್ನು ಮಾಡಿ ನಂತರ ಶಾಸ್ತ್ರಶ್ರವಣ ಪಾಠ ಪ್ರವಚನಾದಿಗಳ ನಂತರ, ಹಿಂತಿರುಗಿ ಪಾದಪೂಜೆ ಮುದ್ರಾಧಾರಣಾದಿ ಕಾರ್ಯಗಳು. ನಂತರ ನಡೆಯುವ ಕಟ್ಟಡಾದಿಗಳ ಮುಕ್ತ ವೀಕ್ಷಣೆ ಸಲಹೆ ಕೊಟ್ಟು, ಮಠದ ವಿಚಾರದಲ್ಲಿ ಸಲಹೆ ಕೊಟ್ಟು, ಮುಕ್ತಸ್ನಾನ ದೇವತಾರ್ಚನೆ ಗುರುಪೂಜ ಭೋಜನಾದಿಗಳು ನಂತರ ಅಲ್ಪ ವಿರಾಮ ಪುನಹ ಸಂಜೆಯ ಪೂಜಾ, ಉತ್ಸವಾದಿ ಕಾರ್ಯದಲ್ಲಿ ಭಾಗವಹಿಸುವುದು ಇಷ್ಟೆಲ್ಲಾ ಕಾರ್ಯವನ್ನು ಶ್ರೀಗಳು ತಾನೇ ಮಾಡುತ್ತಲಿದ್ದರು. ಪೌಜೆ ಒಡೆಯುವವನ ಮುಂದೆ ಶ್ರೀಗಳು. ಅಡಿಗೆ ಶಾಲೆಯಲ್ಲಿ ಶ್ರೀಗಳು ಮಠದ ಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳ ಮುಂದೆ ಶ್ರೀಗಳು, ಕ್ಷೇತ್ರಕ್ಕೆ ಬಂದ ಭಕ್ತರ ಮುಂದೆ ಶ್ರೀಗಳು, ಪಂಡಿತರೊಡನೆ ಶ್ರೀಗಳು, ಉತ್ಸವದಲ್ಲಿ ಶ್ರೀಗಳು, ಅಕ್ಕಸಾಲಿಯ ಮುಂದೆ ಶ್ರೀಗಳು, ಕಟ್ಟಡದ ಮುಂದೆ ಶ್ರೀಗಳು, ಮೇಲಾಗಿ ಶ್ರೀರಾಮ ಪೂಜಾದಲ್ಲಿ ಶ್ರೀಗಳು, ಶ್ರೀ ರಾಯರ ಮುಂದೆ ಶ್ರೀಗಳು, ಶ್ರೀ ವಾದೀಂದ್ರರ ಮುಂದೆ ಶ್ರೀಗಳು ಅಲಂಕಾರ ಪಂಗ್ತಿ ಮುಂದೆ ಶ್ರೀಗಳು ಹೀಗೆ ಶ್ರೀ ಮಂತ್ರಾಲಯ ಕ್ಷೇತ್ರವೆಲ್ಲಾ ಶ್ರೀ ಶ್ರೀ ಸುಜಯೀಂದ್ರತೀರ್ಥ ಶ್ರೀಪಾದಂಗಳವರಿಂದಲೇ ಆವೃತವಾಗಿ ಈಗ ಹಠಾತ್ತಾಗಿ ದೀಪ ತಕ್ಷಣ ನಂದಿ ಕತ್ತಲಾದಂತೆ ಶ್ರೀಗಳು ನಮ್ಮನ್ನಗಲಿ ಶ್ರೀ ಗುರುರಾಜರ ಶಾಶ್ವತ ಸೇವೆಗಾಗಿ ಸತ್ಯಲೋಕ ಮುಖಾಂತರ ಹರಿಪುರ ಸೈದ ಸಂಗತಿ ಎಂತಹವರನ್ನಾದರೂ ಬಾಧಿಸದಿರದು. ವಿಚಾರ ತಿಳಿದ ನಾನಂತೂ ಧಾರಾಕಾರವಾಗಿ ಕಣ್ಣುಗಳಿಂದ ನೀರನ್ನು ಸುರಿಸುತ್ತಾ ಇಡೀ ದಿನ ಭೋಜನವನ್ನೂ ಮಾಡದೇ ದುಃಖಿಸಿದೆ. ಇದಕ್ಕೆ ಕಾರಣ ಇಷ್ಟೇ. ನನ್ನ ತಾತಂದಿರಾದ ಶ್ರೀ ಚಿಂಚೋಳಿಮಹಿದಾಸಾಚಾರ್ಯರ ಮಹಿಮೆಯನ್ನು ಶ್ರೀ ಸುಜಯೀಂದ್ರರು ಅರಿತಿದ್ದರು. ನಾನು ಪದೇ ಪದೇ ಮಂತ್ರಾಲಯಕ್ಕೆ ಹೋಗಿ ಶ್ರೀಗಳಿಗೆ ಸಾಷ್ಟಾಂಗ ನಮಸ್ಕರಿಸಿದಾಗಲೆಲ್ಲಾ "ಏನಪ್ಪ ಮೈದಾಸಾಚಾರ್ಯರ ಮೊಮ್ಮಗನೇ" ಎನ್ನುತ್ತಿದ್ದರು. ಅವರು ಒಮ್ಮೆಯೂ ನನ್ನ ಹೆಸರು ಹೇಳುತ್ತಿರಲಿಲ್ಲ ನನ್ನ ಪೂಜ್ಯ

ಹಾಡುತ್ತಿದ್ದನ್ನು ಜ್ಞಾಪಿಸಿಕೊಳ್ಳುತ್ತಲಿದ್ದರಿಂದ ನನಗೆ ಅವರಲ್ಲಿ ಅಮಿತ ಭಕ್ತಿ ಇತ್ತು.

ನನ್ನ ಕೊನೆ ದರ್ಶನ

ನಾನು ಹೋದ ಶ್ರೀ ರಾಯರ ಆರಾಧನೆಗೆ ಪ್ರತಿ ವರ್ಷದಂತೆ ಶ್ರೀ ಮಂತ್ರಾಲಯಕ್ಕೆ ಹೋಗಿದ್ದಾಗ ಉತ್ತರಾರಾಧನೆ ಸಂಜೆ ಶ್ರೀಗಳಿಗೆ ನಮಸ್ಕರಿಸಿದೆ. ಅಂದು ಅವರು ಎಂದೂ ಇಲ್ಲದ ಒಂದು ಹೊಸ ಕ್ರಮದಲ್ಲಿ ಮಾತಾಡಿ" ಏನಪ್ಪ ನಿನ್ನ ತಾತನ ಹೆಸರು ಉಳಿಸಲು ನೀನು ಹುಟ್ಟಿದ್ದಿ ನೀನು ಬರೆದ ಶ್ರೀ ವ್ಯಾಸ ವಿಜಯ, ನೋಡಿದೆ ಚೆನ್ನಾಗಿದೆ. ನೀನು ಈ ಬೆಳಗ್ಗೆ ಸಭೆಯಲ್ಲಿ ಸಂಭಾವನೆ ತೆಗೆದುಕೊಂಡೆಯಾ ? ಎಂದು ಅಭಿಮಾನದಿಂದ ಕೇಳಿ ತಮ್ಮ ಪೂರ್ವಾಶ್ರಮ ಮೊಮ್ಮಕ್ಕಳಿಗೆ [ಪೂಜ್ಯ ಶ್ರೀ ಗಿರಿಯಾಚಾರ್ಯರ ಮಕ್ಕಳಿಗೆ] " ಏ ! ಗಿರಿಗೆ ಹೇಳೊ ಇವರನ್ನು ಕರೆದುಕೊಂಡು ಹೋಗು ಅವರಲ್ಲಿಗೆ " ಎಂದು ಉಬ್ಬಿದ ಹೃದಯದಿಂದ ಹೇಳಿದರು. ಈ ತೆರನಾದ ಬಿಚ್ಚು ಹೃದಯ ಮಾತನ್ನ ಅವರು ಹಿಂದೆಂದೂ ಆಡಿರಲಿಲ್ಲ. ಅದು ನನ್ನ ವಿಶೇಷ ಭಾಗ್ಯ. ಆ ಮಹಾನುಭಾವರ ಅನುಗ್ರಹ ನನ್ನ ಮೇಲಿದ್ದರೆ ಸಾಕು. ಇನ್ನು ಮುಂದೆ ನಾನು ಶ್ರೀ ಮಂತ್ರಾಲಯ ಕ್ಷೇತ್ರಕ್ಕೆ ಹೋದಾಗ ಅಭಿಮಾನದಿಂದ ನನ್ನನ್ನು ಕರೆಯುವವರು ಯಾರು ? ನನ್ನ ತಾತಂದಿರ ಪರಿಚಯ ಬಲವೂ ನನಗೆ ತಪ್ಪಿಹೋಗಿ ಈಗ ಅನಾಥನಂತಾದೆನಲ್ಲಾ ಅಂತಹ ಪಂಡಿತನು ನಾನಲ್ಲ ಕೇವಲ ಒಬ್ಬ ಸ್ವಜ ಹರಿವಾಯು ಗುರು ದಾಸಾನುದಾಸ ಮಾತ್ರದವನು ಎಂದು ವ್ಯಾಕುಲಚಿತ್ತನಾದೆ. ಆದರೆ ಮನಸ್ಸಿಗೊಂದು ಆನಂದದ ಸಂಗತಿ ಎಂದರೆ ನನ್ನ ತಾತನ ಕಾಲದ ಅಮ್ಮ ತುಂಗಭದ್ರೆ ಹಾಗೇ ಹರಿತಾ ಇದ್ದಾಳೆ. ಕರುಣಾಜನಕರಾದ ಗುರುರಾಜ ಸಾರ್ವಭೌಮರ ಮೂಲ ವೃಂದಾವನ, ಶ್ರೀ ವಾಯು ದೇವರು ಹಾಗೂ ಶ್ರೀ ವಾದೀಂದ್ರರು ವೃಕ್ಷರಾಜರ ಸಮೇತ ಹಿಂದಿನಂತೆಯೇ ಅನುಗ್ರಹಿಸಲು ಅಚಲರಾಗಿ ಬನಲಾಯಿ ನವೇ ಹಾಗೇ ಇದ್ದಾರೆ ಎಂಬುದೇ ಸಂತೋಷ ಸಂಗತಿ. ಶ್ರೀ ರಾಯರು ಪ್ರತಿ ವರ್ಷವೂ ತಿರುಪತಿ ಶ್ರೀ ಶ್ರೀನಿವಾಸನಂತೆ ಹೊಸ ಹೊಸ ರೀತಿಯಲ್ಲೇ ಕಾಣುತ್ತಾ ಅಗಮ್ಯ ಮಹಿಮರಾಗಿಯೇ ಇಂದಿಗೂ ಅಲ್ಲಿ ವಿರಾಜಿಸುತ್ತಿದ್ದಾರು.

ಪರಿಮಳ ಪ್ರಸಾದ

ತಿರುಪತಿ ಶ್ರೀನಿವಾಸನ ಕ್ರಮವನ್ನೇ ಆತನ ಅನುಗ್ರಹದಿಂದ ಅವತರಿಸಿ ಮೆರೆದ ಶ್ರೀ ರಾಯರ ಕ್ಷೇತ್ರಕ್ಕೂ ತರುವ ಉದ್ದೇಶದಿಂದ ಶ್ರೀ ಸುಜಯೀಂದ್ರರು ತಿರುಪತಿ ತಿಮ್ಮಪ್ಪ ಲಡ್ಡುಗೆ ಹೇಗೆ ಪ್ರಸಿದ್ಧನೋ ಹಾಗೆ ಶ್ರೀ ರಾಯರಿಗಾಗಿ ಶ್ರೀರಾಮ ದೇವರಿಗೆ ನಿವೇದಿತವಾದ ಪರಿಮಳ ಪ್ರಸಾದ ವಿನಿಯೋಗ ಕ್ರಮವನ್ನು ತಮ್ಮ ಕಾಲದಿಂದ ಹೊಸದಾಗಿ ಜಾರಿಗೆ ತಂದರು. ಅಬ್ಬಾ ! ಏನು ಭಾರಿ ಕ್ಯೂ. ಆ ಪ್ರಸಾದ ಕೊಳ್ಳಲು ಇಂತಹ ಕ್ರಮಾದಿಗಳಿಂದ ಶ್ರೀಗಳು ಶ್ರೀಮಠದ ಆಸ್ತಿಯನ್ನು ವೃದ್ಧಿಗೊಳಿಸಿದರು. ಈ ಪ್ರಸಾದ ಕೊಳ್ಳುವಾಗಲಾದರೂ ಭಕ್ತರಿಗೆ ಶ್ರೀ ರಾಯರ ' ಪರಿಮಳ ' ಗ್ರಂಥ ಸ್ಮರಣೆ ಬರಲಿ ಎಂಬುದೇ ಶ್ರೀಗಳ ಉದ್ದೇಶ. ಅದು ಖಂಡಿತ ಸರ್ವತ್ರವೂ ಪರಿಮಳವೇ ಸರಿ.

ಅಡಿಗೆ ವೈಖರಿ

ಶ್ರೀ ಸುಜಯೀಂದ್ರರ ಕಾಲದ ಅಡಿಗೆ ವೈಖರಿ ಅವರ್ಣನೀಯ. ಪ್ರತಿನಿತ್ಯ ನಾಲ್ಕು ಸಾವಿರ ಭಕ್ತರಿಗೆ ಭೋಜನ ವ್ಯವಸ್ಥೆ. ಮರದಡಿ ರಾಶಿರಾಶಿ ಸೌದೆ ಒಡೆದು ಹಾಕಿದ್ದಾರೆ. ಅಡಿಗೆ ಮನೆಯಲ್ಲಿ ಆರದ ಅಗ್ನಿ ಹಗಲಿರುಳೂ ಪ್ರಜ್ವಲಿಸುತ್ತಿರುತ್ತಾನೆ. ಪಾತ್ರೆಗಳ ಸಾಮಾನ್ಯ ಅಳತೆ ಅಂದರೆ ಪಲ್ಲಿ ಗಟ್ಟಲೆಯಲ್ಲೇ ತಿಳಿಸಬೇಕು. ಉಗ್ರಾಣದಲ್ಲಿ ಧಾನ್ಯಲಕ್ಷ್ಮೀ ತಾಂಡವ ನೃತ್ಯ ಮಾಡುತ್ತಿರುತ್ತಾಳೆ. ಒಂದೇಕೆ, ನೂರಾರು ಮೂಟೆ ಅಕ್ಕಿ, ಮತ್ತೊಂದು ಕಡೆ ಅಷ್ಟೇ ಬೇಳೆ, ಇನ್ನೊಂದು ಕಡೆ ನೂರಾರು ಡಬ್ಬ ತುಪ್ಪ, ಇನ್ನೊಂದು ಕಡೆ ಅವಲಕ್ಕಿ ರಾಶಿ, ಪುರಿರಾಶಿ, ಅನೇಕಾನೇಕ ದ್ವಿದಳಧಾನ್ಯಗಳ ರಾಶಿ, ನೂರಾರು ಎಲೆಸಿಂಡಗಳು, ಅಡಿಗೆ ಮಾಡುವವನು ಮಡಿ ಪಂಚೆ ಬಿಚ್ಚುವಂತಿಲ್ಲ. ಅಂತೆಯೆ ಪ್ರತಿ ವರ್ಷವೂ ಆ ಕ್ಷೇತ್ರದಲ್ಲಿ ಇದನ್ನು ನೋಡಿದರೆ ಶ್ರೀ ವಿಜಯದಾಸರು ಅಂದು ಹೇಳಿದ "ದಿನದಿನಕೆಯಲ್ಲಿ ನೂತನ ನೂತನವಾಗುವುದು. ಕ್ಷಿತಿಯೊಳಗೆ ಮಂಚಾಲಿ ಗ್ರಾಮಕೆ ಪ್ರತಿಯು ಇಲ್ಲಾ ಎನಿಸಿಕೊಳ್ಳುತ್ತಾ ಪತಿತಪಾವನ ವಿಜಯ ವಿಠಲನ ಒಲಿಸಿಕೊಳ್ಳುತ ಮೆರೆವ ಗುರುಗಳ ನೋಡಿದ ಗುರುಗಳ ನೋಡಿದೆ" ಎಂಬ ಮಾತು ಖಂಡಿತ ಅಕ್ಷರ ಸಹ ಸತ್ಯ ಎಂಬುದು ತಿಳಿಯುತ್ತಿದೆ. ಇಂತಹ ಬೃಹತ್ ಕಾರ್ಯಾದಿಗಳನ್ನು ಶಾಖೋಪಶಾಖೆಯಲ್ಲಿ ಒಬ್ಬ ವ್ಯಕ್ತಿ ನಡೆಸುವುದೆಂದರೆ ಅವರು ಸಾಮಾನ್ಯರಲ್ಲ. ಅವರು ದೇವತೆಗಳೇ ಇರಬೇಕಲ್ಲವೇ ? ಹೀಗೆ ಎಲ್ಲೆಡೆ ವಿರಾಜಿಸಿ. ಅಪಾರ

ಕಾರ್ಯಗಳನ್ನು ಮಾಡಿದಾಗ್ಯೂ ಕೇವಲ ಎಳೆಸುರಿ ಕಾಯಿಯಂತಿದ್ದು ಆರಿದ ನಂದಾದೀಪವಾದ ಶ್ರೀ ಸುಜಯೀಂದ್ರರೇ ಧನ್ಯರು.

ಗ್ರಂಥಗಳ ಬಗ್ಗೆ ಶ್ರೀ ಸುಜಯೀಂದ್ರರು

ಇಷ್ಟಕ್ಕೆ ತೃಪ್ತರಾಗದೇ ಶ್ರೀ ಸುಜಯೀಂದ್ರರು ಶ್ರೀ ರಾಘವೇಂದ್ರವಿಜಯ ಭಾಷ್ಯ ಸಂಗ್ರಹ, ಶ್ರೀ ವಿಜಯೀಂದ್ರರ "ಆಮೋದ ಟಿಪ್ಪಣಿ ಸಹಿತ ನ್ಯಾಯಾಮೃತ, ಅವರದೇ ಆದ ಸಾರಾಸಾರ ವಿವೇಚನೀ" ಮುಂತಾದ ಅನೇಕಾನೇಕ ಗ್ರಂಥಗಳನ್ನು ಶ್ರೀಮಠದವರಿಂದ ಪ್ರಕಾಶಪಡಿಸಿ ಓದುಗರಿಗೆ ಹಾಗೇ ದಾನವಾಗಿ ವಿನಿಯೋಗಿಸಿದರು. ಅವರಿಗೆ ಬೇಕಾದದ್ದು ದೊಡ್ಡವರ ಗ್ರಂಥಪರಿಚಯ ಎಲ್ಲರಿಗೂ ಆಗಲೆಂದು ಪ್ರತಿಸತ್ಾ ಶ್ರೀಮಠದಲ್ಲಿ ಶ್ರೀಮನ್ ನ್ಯಾಯಸುಧಾದಿ ಪಾಠ ಪ್ರವಚನಕ್ಕೆ ಏರ್ಪಡಿಸಿ ಆ ಪಾಠದಲ್ಲಿ ಭಾಗವಹಿಸುವವರಿಗೂ ಊಟ, ವಸತಿ ಒದಗಿಸಿದ ಧರ್ಮಾತ್ಮರು ನಮ್ಮ ಶ್ರೀ ಸುಜಯೀಂದ್ರರು. ಇವರು ಶ್ರೀಮಠದಿಂದ 'ಶ್ರೀ ಗುರುಸಾರ್ವಭೌಮ' ಮಾಸಪತ್ರಿಕೆಯನ್ನು ಹೊರಡಿಸಿ ಅದರ ಮೂಲಕ ತತ್ವಪ್ರಚಾರ ಮಾಡುತ್ತಾ ಕೇವಲ ಅಲ್ಪ ಹಣಕ್ಕಾಗಿ ಅದನ್ನು ಕಳಿಸುವ ಪದ್ಧತಿ ಹಾಕಿದ ಉದಾರ ಹೃದಯರು. ಅಂತೆಯೇ ಸಕಲರಿಗೂ ಶ್ರೀ ಮಠದ ಪಂಚಾಂಗ ವಿತರಣೆ ಮಾಡುತ್ತಿದ್ದರು.

ಶ್ರೀಗಳಿಗಿದ್ದ ದಾಸಸಾಹಿತ್ಯರತಿ

ಅವರು ಪ್ರತಿವರ್ಷ ಶ್ರೀ ರಾಯರ ಉತ್ತರಾರಾಧನೆ ದಿನ ಗುರುರಾಜರು ರಥಾರೂಢರಾದಾಗ ತಾವೂ ರಥಾರೂಢರಾಗಿ ಬಂದಂಥಾ ಭಕ್ತರಿಗೆ ಅನುಗ್ರಹ ವಚನವನ್ನು ಹೇಳುವ ವಾಡಿಕೆ ಇಟ್ಟುಕೊಂಡಿದ್ದರು, ಆಗ ಶ್ರೀಗಳು ಹರಿದಾಸರ ಒಂದೆರಡು ವಾಕ್ಯಗಳನ್ನು ಹೇಳದೇ ಭಾಷಣ ಮಾಡುತ್ತಿರಲಿಲ್ಲ. ಇದರಿಂದ ಶ್ರೀ ಸುಜಯೀಂದ್ರರಿಗೆ ಅಪರೋಕ್ಷ ಜ್ಞಾನಿಗಳ ಕೃತಿಗಳಲ್ಲಿ ರತಿ ಇತ್ತೆಂಬುದು ವ್ಯಕ್ತವಾಗುತ್ತದೆ. ಇನ್ನು ಮುಂದಾದರೂ ಶ್ರೀಮಠದಿಂದ ಈ ದಾಸಸಾಹಿತ್ಯ ಶಾಖಾಪೋಷಣೆ ವೈದೀಕ ಗ್ರಂಥಗಳಂತೆಯೇ ನಡೆದು ಬರಲೆಂದು ಆಶಿಸುತ್ತೇನೆ. ಏಕೆಂದರೆ ಈ ನನ್ನ ಆಶಯ ಹೊಸದೇನಲ್ಲ. ಶ್ರೀ ರಾಯರ ಕಾಲದಿಂದಲೂ ನಡೆದು ಬಂದ ಪದ್ಧತಿಯೇ ಆಗಿದೆ ಶ್ರೀಮಠದಲ್ಲಿ. ಶ್ರೀ ರಾಯರು ಶ್ರೀ ವಿಜಯದಾಸರು, ಶ್ರೀ ಗೋಪಾಲದಾಸರು ಹಾಗೂ ಅವರ ತಮ್ಮಂದಿರು, ಶ್ರೀ ಜಗನ್ನಾಥದಾಸರು, ಶ್ರೀ ಮೋಹನ ದಾಸರು, ಶ್ರೀ ಗುರು ಜಗನ್ನಾಥವಿಠಲ ದಾಸರು, ಶ್ರೀ ಶ್ರೀದ ವಿಠಲ ದಾಸರು, ಶ್ರೀ ಪ್ರಾಣೇಶದಾಸರೇ ಆದಿಯಾದ ನೂರಾರು ದಾಸರುಗಳಿಗೆ ಶ್ರೀ ರಾಯರೇ ಅನುಗ್ರಹಿಸಿದ್ದಾರೆ. ಶ್ರೀ ಧೀರೇಂದ್ರರ ಕಾಲದಲ್ಲೇ ಶ್ರೀ ಜಗನ್ನಾಥ ದಾಸರು ಶ್ರೀಮಠದ ಅನುಗ್ರಹದಿಂದ "ಶ್ರೀ ಹರಿಕಥಾಮೃತಸಾರ" ಗ್ರಂಥ ರಚಿಸಿರುತ್ತಾರೆ. ಈ ಕನ್ನಡ ಗ್ರಂಥಕ್ಕೆ ಸಂಸ್ಕೃತ ವ್ಯಾಖ್ಯಾನವಿರುವ ಅಂಶ ಇಲ್ಲಿ ಗಮನಾರ್ಹ ಸಂಗತಿ. ಶ್ರೀ ಸುಗುಣೇಂದ್ರರು ಹರಪನಹಳ್ಳಿ ದಾಸರಿಂದ ಕೃತಿ ರಚಿಸಿಸಿ ಅದಕ್ಕೆ ಆಗಿನ ಕಾಲಕ್ಕೆ ನೂರಾರು ರೂಪಾಯಿ ಇತ್ತಿದ್ದಾರೆ. ಇನ್ನು ಶ್ರೀ ಸುಯಮೀಂದ್ರರ ಕಾಲದಲ್ಲಿ ದಾಸಸಾಹಿತ್ಯತಾಂಡವ ನೃತ್ಯ ಮಾಡಿದೆ. ಈ ತೆರನಾದ ಕನ್ನಡ ಕೃತಿಗಳಿಗೆ ಶ್ರೀಮಠ ಉತ್ತೇಜನ ಕೊಡಬಹುದೇ ಎಂದರೆ ಮಹಾ ಜ್ಞಾನಿಗಳಾದ ಶ್ರೀ ಶ್ರೀಪಾದರಾಜರು, ವ್ಯಾಸತ್ರಯಕರ್ತರಾದ ಶ್ರೀ ಚಂದ್ರಿಕಾಚಾರ್ಯರು, ಭಾವೀ ಸಮೀರರೆನಿಸಿದ ಶ್ರೀ ವಾದಿರಾಜರು ಇನ್ನೂ ಅನೇಕಾನೇಕ ಯತಿಶ್ರೇಷ್ಠರು ಹಾಗೂ ದಾಸ ಚತುಷ್ಟಯಾದಿಗಳು ಲಕ್ಷೋಪಲಕ್ಷ ಕೃತಿಗಳನ್ನು ಪದ, ಪದ್ಯ, ಸುಳಾದಿಗಳನ್ನು, ಶಾಸ್ತ್ರೋಕ್ತವಾಗಿ ರಚಿಸಿ ವಿರಾಜಿಸಿರುವ ವಿಚಾರ ಸಕಲರಿಗೂ ವೇದ್ಯವೇ ಆಗಿದೆ. ಶ್ರೀ ವ್ಯಾಸರಾಜರೇ ಶ್ರೀ ಪುರಂದರ ದಾಸರ ಕೃತಿಗಳಿಗೆ "ಶ್ರೀ ಪುರಂದರೋಪನಿಷತ್" ಎಂದಿದ್ದಾರೆ. ಇದಕ್ಕೆ ಜಗತ್‌ಕರ್ತನಾದ ಶ್ರೀಕೃಷ್ಣನೇ ಏಕಾದಶ ಸ್ಕಂದ ಭಾಗವತದ 27ನೆ ಅಧ್ಯಾಯದಲ್ಲಿ ಉದ್ಧವನಿಗೆ ಉಪದೇಶ ಮಾಡುವಾಗ ಪ್ರಾಕೃತ ಭಾಷೆಯಲ್ಲೂ ಭಗವಂತನನ್ನು ಕೊಂಡಾಡಲು ಅವಕಾಶವಿತ್ತಿರುತ್ತಾನೆ. ಪರಮಾತ್ಮನ ಸ್ವರೂಪತತ್ವ ಹೇಳದ ಸಂಸ್ಕೃತ ಭಾಷೆ ಸ್ವರೂಪತತ್ವೋಪದೇಶ ಮಾಡುವ ಕನ್ನಡಕಿಂತ ಕೀಳು ಅಲ್ಲವೆ? ಏಕವಿಂಶತಿಮತ ಸಿದ್ಧಾಂತ ಸಂಸ್ಕೃತದಲ್ಲಿದ್ದರೂ ಪ್ರಯೋಜನವೇನು? ಶ್ರೀ ರಾಘವೇಂದ್ರರ ತಮ್ಮಂದಿರೆನಿಸಿದ ಶ್ರೀ ಜಗನ್ನಾಥ ದಾಸರು ತಾವು ಮೊದಲು ಶ್ರೀನಿವಾಸಾಚಾರ್ಯರಾಗಿದ್ದಾಗ ಶ್ರೀಮನ್ ನ್ಯಾಯಸುಧಾದಿ ಗ್ರಂಥಗಳ ಮಂಗಳಗಳನ್ನು ಅನೇಕಾವರ್ತಿ ಮಾಡಿದ್ದರು ಅಂತಹವರು ದಾಸ ದೀಕ್ಷಾ ಪಡೆದ ನಂತರ ಶ್ರೀ ಪುರಂದರ ದಾಸರನ್ನು ಕೊಂಡಾಡುತ್ತಾ "ಪ್ರಾಕೃತ ಭಾಷೆಲಿ ಸತ್ಕೃತಿ ಪೇಳ

ಅಪ್ರಾಕೃತಶರೀರ ಇಂದ ಸ್ವೀಕೃತ ನೀನಾದೆ ದಾಸರಾಯ ಪುರಂದರ ದಾಸರಾಯ " ಎಂದಿರುತ್ತಾರೆ. ತತ್ತ್ವೋದ್ಧಾರಕ್ಕಾಗಲಿ ಅಥವ ನಮ್ಮ ಕಾರ್ಯಸಾಧನೆಗಾಗಲಿ ಸೂಕ್ತ ಭಾಷಾ ಉಪಯೋಗಿಸಿಕೊಳ್ಳಲು ಜ್ಞಾನಿಗಳೇ ಆದರ್ಶಪ್ರಾಯರಾಗಿರುತ್ತಾರೆ. ಶ್ರೀಮದಾಚಾರ್ಯರು ಡಿಲ್ಲಿ ತುರುಷ್ಕರಾಜನೊಡನೆ ಅವನ ಭಾಷೆಯಲ್ಲೇ ವ್ಯವಹರಿಸಿರುವುದಕ್ಕೆ ಶ್ರೀ ಸುಮಧ್ವವಿಜಯದಲ್ಲಿ ಉಲ್ಲೇಖವಿದೆ. ಶ್ರೀ ರಾಘವೇಂದ್ರರೇ ಮಂಚಾಲೆ ಗ್ರಾಮವನ್ನು ಉಳಿಸಿಕೊಳ್ಳಲು ಸರ್ ಥಾಮಸ್ ಮನ್ರೋ ಎಂಬ ಆಂಗ್ಲ ಅಧಿಕಾರಿಯೊಡನೆ ಅವನ ಭಾಷೆಯಲ್ಲೇ ವ್ಯವಹರಿಸಿರುತ್ತಾರೆ. ಆದ್ದರಿಂದ ತತ್ತ್ವೋದ್ಧಾರಕ್ಕೆ ಬೇಕಾದದ್ದು ನೈಜ ತತ್ತ್ವಜ್ಞಾನ. ಹೀಗೆಂದಮಾತ್ರಕ್ಕೆ ದಾಸಸಾಹಿತ್ಯದಿಂದಲೇ ಮೋಕ್ಷ ಎಂಬ ಆಗ್ರಹ ಹರಿದಾಸರದಲ್ಲ. ಹರಿದಾಸ ಪಂಥದಲ್ಲಿ ಶ್ರೀಮದಾಚಾರ್ಯರ ಮೂಲಗ್ರಂಥಗಳಿಗೂ, ಟೀಕಾ, ಟಿಪ್ಪಣಿ ಗ್ರಂಥಗಳಿಗೂ ಬಹಳ ಮರ್ಯಾದೆ ತೋರಿಸಿ ಅವುಗಳ ಆವಶ್ಯಕತೆಯನ್ನು ಎತ್ತಿ ಸಾರಿದೆ. ಉದಾಹರಣೆಗೆ ಶ್ರೀ ವಿಜಯದಾಸರು " **ಮಧ್ವಶಾಸ್ತ್ರ ಪ್ರವಚನ ಮುದ್ದು ಕೃಷ್ಣನ ಸಂದರ್ಶನ ಶುದ್ಧ ವಿಜಯ ವಿಠಲನ್ನ ಪೊಂದಿಕೊಂಡಿದ್ದವನಿಗೆ ಆನಂದ** " ಎಂದಿದ್ದಾರೆ. ದಾಸಸಾಹಿತ್ಯಾವಲೋಕನದಿಂದ ಮೂಲ ಗ್ರಂಥಗಳ ಕಡೆ ಗಮನ ಹರಿದು ತನ್ಮುಖಾಂತರ ತತ್ತ್ವೋದ್ಧಾರ ಮಾರ್ಗ ಕಾಣಬಹುದು. ದಾಸಸಾಹಿತ್ಯ ವ್ಯಾಸ ಸಾಹಿತ್ಯ ಎರಡೂ ನಾಣ್ಯದ ಒಂದೊಂದು ಭಾಗದಂತೆ ಪರಸ್ಪರ ಅವಿರೋಧಿಯಾದುವು. ಆದ್ದರಿಂದ ಅದಕ್ಕೆ ಹಿಂದಿನಿಂದಲೂ ಪುರಸ್ಕಾರ ದೊರೆತ ಕಾರಣ ಆದರೆ ಮುಂದುವರಿಕೆ ಹಂಬಲ ಹರಿದಾಸರುಗಳಿಗೆ ಅಷ್ಟು ಇರಲಿ ಆ ಕಾಲ ದೂರವೇನಿಲ್ಲ. ಅಷ್ಟೇಕೆ ಶ್ರೀಮದಾಚಾರ್ಯರ ವಿನಹ ಉಳಿದವರ ಅಂಶಾದಿ ವಿಚಾರಕ್ಕೆ ಹರಿದಾಸರ ವಾಕ್ಯವೇ ಮುಖ್ಯ ಆಧಾರವಲ್ಲವೆ? ಶ್ರೀ ರಾಯರು ಸಾಕ್ಷಾತ್ ಪ್ರಹ್ಲಾದರೆಂದು ತಿಳಿಸಿದವರ್ಯಾರು? ಹರಿದಾಸರೆ. ಆ ಮಾತನ್ನ ಪಂಡಿತರೂ ಬಳಸುತ್ತಿಲ್ಲವೆ?

ಅರ್ಪಣೆ

ಹೀಗೆ ಮಹಾನುಭಾವರಾಗಿ, ತಮ್ಮ ಇಡೀ ಜೀವನವನ್ನೇ ಸಜ್ಜನರ ಹಾಗೂ ಪಂಡಿತರ ಉತ್ತೇಜನಕ್ಕಾಗಿಯೂ ಹಾಗೂ ಶ್ರೀ ಮಂತ್ರಾಲಯ ಕ್ಷೇತ್ರದ ನವೀಕರಿಸುವುದರಲ್ಲಿಯೂ ಕಾಲಯಾಪನ ಮಾಡಿ, ನಿತ್ಯ ಶ್ರೀ ಮೂಲ ರಾಮದೇವರನ್ನು ಅರ್ಚಿಸುತ್ತಾ ಶ್ರೀ ರಾಘವೇಂದ್ರರ ಮೂಲ ವೃಂದಾವನವನ್ನೇ ಧ್ಯಾನಿಸಿ, ಆರಾಧಿಸಿ ಅಪಾರ ಪುಣ್ಯ ಸಂಪಾದಿಸಿದ ಶ್ರೀ ಸುಜಯೀಂದ್ರತೀರ್ಥ ಶ್ರೀಪಾದಂಗಳವರು ಅದೃಶ್ಯರಾದರೂ ಎಲ್ಲರ ಹೃದಯವನ್ನೇ ಪ್ರವೇಶಿಸಿ ಅನುಗ್ರಹಿಸುತ್ತಲಿದ್ದಾರೆ. ಈ ಮಹಾನುಭಾವರು ನಮಗೆ ಶ್ರೀ ರಾಯರ ಅಂತರ್ಯಾಮಿ ಪ್ರಾಣನ ಗುಣಗಣಮಂಡಿತನಾದ ಶ್ರೀ ಹರಿಯನುಗ್ರವಾಗುವಂತೆ ಹರಿಸಲಿ. ಅವರ ಆಶೀರ್ವಾದ ಎಲ್ಲ ಭಕ್ತರ ಮೇಲಿರಲಿ, ಮುಂದೆ ಪೀಠಿಗೆಯಲ್ಲಿ ವಿರಾಜಿಸುವವರೂ ಕೂಡ ಅವರ ಹಾದಿಯಲ್ಲಿ ಜೀವನ ನಡೆಸಲೆಂದು ಹಾರೈಸುತ್ತೇನೆ.

ಮಂತ್ರಾಲಯದ ಮಾಂತ್ರಿಕ

ಪ್ರೊ|| ಎಂ. ರಾಜಗೋಪಾಲಾಚಾರ್ಯ
ಸಂಪಾದಕ : ಸುಗುಣಮಾಲಾ, ಉಡುಪಿ.

ಕಲ್ಲು ಮೊರಡಿಗಳೆಡೆಯೊಳಡಿಗಡಿಗೆ ಬಳುಕುತ್ತ ಕುಣಿಯುತ್ತ ಮೆಲ್ಲ ಮೆಲ್ಲನೆ ಹರಿಯುತಿರುವಳಾ ತುಂಗೆ, ದಕ್ಷಿಣದ ಗಂಗೆ, ಅದರ ದಡದಲಿ ನಿಂದ ಯತಿ ಸಾರ್ವಭೌಮಂಗೆ, ಎರಗಾದವನಿಗಿನ್ನು ಯಾರ್ಯಾರ ಹಂಗೆ ? ಆಚಾರ್ಯ ಮಧ್ವರೊರೆದಿಹ ತತ್ತ್ವವಾದ ಸಾರವನೆಲ್ಲ ಹೀರಿ, ಸಂದು ಸೂಳಿಯ ಬೇಗೆ ಲಘು ಟಿಪ್ಪಣಿಯ ಬರೆದು ತೋರಿ, ಅದರ 'ಪರಿಮಳ'ವನ್ನು ಸುತ್ತೆಲ್ಲ ಬೀರಿ, ಸತತ ಶ್ರೀಕೃಷ್ಣ ಪದದಾವರೆಯ ಮಧುರಸದಿ ಮೈಮರೆತ ಭೃಂಗ, ಮುನಿ ಕುಲೋತ್ತುಂಗ, ಕರುಣಾಂತರಂಗ.

ಬೀಣೆಯಾ ಹಿಡಿದು ಬೆರಳುಗಳಿಂದ ಮಿಡಿದು ಯತಿ ಇನಿದಾಗಿ ನುಡಿಸಿದರೆ ಅಡಿಗಡಿಗೆ ಕುಣಿಯುತ್ತ, ತನನ ತಡೆದು ನಿಲ್ಲುತ್ತ, ಕೊಳಲನ್ನು ನುಡಿಸುತ್ತ ನಡುಗರದಿ ಬಳಿ ಸಂದು, ಪ್ರತಿಸುಳಿಕೆ ಸಂದು, ಆಲೈಸಿ ಕೇಳುವನು ಯದುಕುಲೇಂದು. ಪರಮಭಾಗವತನೆಂದೆನಿಸಿದ್ದ ಪ್ರಹ್ಲಾದ ಗುರುರಾಜರಾಗಿ ಅವತರಿಸಿ ಬೃಂದಾವನದ ಒಳಗೆ ಅಡಗಿರುವನಂತೆ. ಭಕ್ತರಿಷ್ಟಾರ್ಥವನು ಕರುಣಿಸುವ ಕಾಮಧೇನುವಿನಂತೆ, ಕರುಣೆಯ ಕಡಲಂತೆ, ಇವರ ಮಹಿಮೆಯನೆಲ್ಲ ಬಲ್ಲವರು ಬಹು ಮಂದಿ ಒಬ್ಬ ಗುರು ಬಗ್ಗೆ ಒಂದೆ ವೃಂದಾವನ, ಇವರಿಗೋ ಊರೂರಿನಲಿ ತುಂಬ ಇವರದೇ ಸದನ, ಭಕ್ತರಿರುವಲ್ಲೆಲ್ಲ ಇವರ ವೃಂದಾವನ.

ನಂಬಿದವರಿಗೆ ಸದಾ ಇಂಬುಗೊಡುವಂಥ ಗುರುಯೆಂಬ ಬಿರುದಿನ ರಾಘವೇಂದ್ರಸ್ವಾಮಿ, ನಂಬಿ ಬರುವವರೆಷ್ಟು ! ನಂಬಿದವರಿನ್ನೆಷ್ಟು ! ನಂಬಿಯೂ ನಂಬದಿಬ್ಬಂದಿಗಳು ಅಷ್ಟು. ಸಂತಾನ ಬಯಸಿದರೆ ತಂತಾನೆ ಚಿಮ್ಮುವುದು ಸಂತಾನ ತರುವಿನೊಳ್ ಪುತ್ರಸಂತಾನ. ಬದುಕಿನೊಳು ಎಡವಟ್ಟೆ ? ಕಾಯಿಲೆಯೆ ? ನಿಡುಗಾಲದಾಪಯವೇ ? ಬಡತನದ ಕಡುಬವಣೆಯೆ ? ಎಲ್ಲವನು ಪರಿಹರಿಪ ನಮ್ಮ ವೆಂಕಣ್ಣ, ಅವನೆ ಧನ್ವಂತರಿ, ಇದನಂಬು ಖಾತರಿ.

ಜಕಣಕಾಟ, ಪಿಶಾಚಿ, ಗ್ರಹಪೀಡೆ ರೋಗಂಗಳ್ ಮತ್ತಪಸ್ಮಾರಗಳ್ ಮಂತ್ರಾಕ್ಷತೆಯ ಮಹಿಮೆಯಿಂದಲೇ ಪರಿಹರಿಪ ಈ ಯತಿಯು ಎಂಥ ಮಾಂತ್ರಿಕರೊ ಇನ್ನೆಂಥ ತಾಂತ್ರಿಕರೋ ? ನಿಡುಗಾಲನೊಂದಿರುವ ಉದರ ರೋಗಿಯು ಒಮ್ಮೆ ಮಂತ್ರಾಲಯದ ಗುರುವಿನ ಸೇವೆ ಭಜನೆ ಕೈಕೊಂಡ. ಕೆಲ ದಿವಸ ಅದು ಬರೀ ದಂಡ, ಎಂದು ಕಂಡಿರಬೇಕು ಆತನಿಗೆ. ಆವನೊಮ್ಮೆ ನಿದ್ರಿಸುತ ಕನಸು ಕಂಡ. ದಿವ್ಯತೈಜಸ ತೆರದಿ ಕಾಣಿಸುತ ಸಂನ್ಯಾಸಿ ಬಂದ, ಏನೆಂಥ ಚಂದ ! ಬೇನೆ ಹೇಗಿದೆ ಕಂದ ಎಂದು ಕೇಳುತ ನಿಂದ, ಅದುವೆ ಆನಂದ ! ಆನಂತರದಿ ಅವನ ಆ ಸಂನ್ಯಾಸಿ ಕಾವಿ ಬಟ್ಟೆಯನುಟ್ಟುಕೊಂಡಿರುವ ತಪಸಿ. ವಸ್ತ್ರವನ್ನೆಗೋಚಿ ಬನಸುದರನಂ ಸಿಗಿದು ಕತ್ತರಿಸಿ ಏನನ್ನೋ ಹೊರತೆಗೆದು ಮತ್ತೆ ಹೊಲಿದಂತೆ, ಶಸ್ತ್ರಕ್ರಿಯೆಯನು ಮಾಡಿದಂಥ ಅನುಭವವಾಯಿತ್ತು. ಈ ಚಿಕಿತ್ಸೆಯ ಮಧ್ಯೆ ಎಂತಹುದೋ ಪಿಕಿಚಿತ್ಸೆ ! ಕಣ್ದೆರೆದು ಎಚ್ಚೆತ್ತು ನೋಡಿದನು ಯಾರಿಲ್ಲ, ಆದರೊಡನೆ ಉದರ ರೋಗವು ಇಲ್ಲ ಏನು ಇಲ್ಲ ! ಬಿಗಿದ ಮುಷ್ಟಿಯ ಒಳಗೆ ಮಂತ್ರಾಕ್ಷತೆಯ ಹೊರತು ! ವಿಸ್ಮಯದಿ ರೋಗಿ ಈ ವಾದಕೆ ಮಣಿದು, ಧಿಗ್ಗನೇಳುತ ಆತ ಗುರುಪಾದ ಕಮಲಕ್ಕೆ ಉದ್ದಂಡಬಿದ್ದ, ಸದ್ದುಗದ್ದಲವಿಲ್ಲ, ಮದ್ದು ಮೊದಲೇ ಇಲ್ಲ, ಬಿದ್ದಾಗ ಕಿವಿಯಲ್ಲಿ ಯಾರೊ ಉಸುರಿದರು. 'ನಿನಗೆ ಕಾಯಿಲೆ ವಾಸಿಯಾಯ್ತಿನ್ನು ಹೋಗು' ಎಂಥ ಕರುಣಾಳು ಗುರು ವ್ಯಾಧಿಪೀಡಿತರಿಗೆ, ಘನರೋಗಬಾಧಿತರಿಗೆ !

ಕಲ್ಪವೃಕ್ಷವೊ ಮತ್ತೆ ಕಾಮಧೇನುವೊ ಈಗ ಕಲಿಕಾಲದಲಿ ಇಲ್ಲವೆಂದು ಹೇಳುವರು. ಅವು ಮೊದಲು ಇದ್ದವೊ ಇಲ್ಲವೊ ! ಎಲ್ಲ ಕಟ್ಟುಕತೆಗಳೊ ನಮಗೆ ನಿಜವೆ ತಿಳಿದಿಲ್ಲ. ಒಂದೆ ಆ ಮರವೊ ಅಥವಾ ಆ ಆಂಥದನವೊ ಯಾರಿಗಾದರು ಅವುಗಳಿದ್ದ ಕಾಲದಲಿ ಬಯಸಿದ್ದು ಕೊಟ್ಟವೆಂಬುದ ನೋಡಿದವರಿಲ್ಲ. ಮಂತ್ರಾಲಯದ ಗುರುವೆ ನಮಗೀಗ ಕಾಮಧೇನುವಿನಂತೆ, ಅದು ಸತ್ಯ, ಆದರಲ್ಲಿ ಸಾಕ್ಷಿಯುಂಟು. ಹರಿ ಮುನಿಯೆ ಗುರುವಿಹನು, ಗುರುಮುನಿಯೆ ಯಾರಿಲ್ಲ. ಇದ ನಂಬಿದೆನು ರಾಘವೇಂದ್ರ ಗುರುವೆ, ಶರಣಾದೆ ಕರಮುಗಿವೆ ಸಲಹೆನ್ನ ಸ್ವಾಮಿ ! —

ಪರಮಪೂಜ್ಯ
ಶ್ರೀ ಶ್ರೀಮತ್ಸುಜಯೀಂದ್ರತೀರ್ಥ
ಶ್ರೀಪಾದಂಗಳವರು

ವೇದಾಂತಿ ಶೇಷಾಚಾರ್ಯ

ಸಮಸ್ತಗುಣಸಂಪೂರ್ಣಂ ಸರ್ವದೋಷ ವಿವರ್ಜಿತಂ ।
ಜ್ಞಾನಿಪ್ರಿಯತಮಂ ವಂದೇ ಮುಕ್ತಿದಂ ಕಮಲಾಪತಿಮ್ ॥
ಶ್ರೀಮಧ್ವಃ ಕಲ್ಪವೃಕ್ಷಶ್ಚ ಜಯಾಚಾರ್ಯಾಸ್ತು ಧೇನವಃ ।
ಚಿಂತಾಮಣಿಸ್ತು ವ್ಯಾಸಾರ್ಯಾಃ ಮುನಿತ್ರಯಮುದಾಹೃತಮ್ ॥
ಮೂಕೋಪಿಯತ್ಪ್ರಸಾದೇನ ಮುಕುಂದಶಯನಾಯತೇ ।
ರಾಜರಾಜಾಯತೇರಿಕ್ತೋ ರಾಘವೇಂದ್ರಂ ತಮಾಶ್ರಯೇ ॥

ಕರ್ನಾಟಕ ರಾಜ್ಯದ ಮೈಸೂರು ಜಿಲ್ಲೆಯಲ್ಲಿ ಕಪಿಲಾ ನದಿ ದಂಡೆಯ ಮೇಲೆ ಶ್ರೀಕಂಠೇಶ್ವರ ದೇವಸ್ಥಾನ, ಶ್ರೀ ರಾಘವೇಂದ್ರಸ್ವಾಮಿಗಳವರ ಮಠದ ಶಾಖೆಯಲ್ಲಿ ಸಂಸ್ಥಾನವನ್ನು ಆಳಿದ ಯತಿಪುಂಗವರ ಬೃಂದಾವನಗಳಿಂದಲೂ ಶ್ರೀಮತಸ್ಥದ್ವಿಜಶ್ರೇಷ್ಠರಿಂದಲೂ ಕಂಗೊಳಿಸುತ್ತಿರುವ ನಂಜನಗೂಡು ಎಂಬ ಪುಣ್ಯಕ್ಷೇತ್ರವಿದೆ. ಶ್ರೀ ರಾಯರ ಸಾಕ್ಷಾತ್ ಪರಂಪರೆಯಲ್ಲಿ ಬಂದಿರತಕ್ಕ ಶ್ರೇಷ್ಠತಮ ವಿದ್ವಾಂಸರು ಪಾಠಪ್ರವಚನ ನಡೆಸಿಕೊಂಡು ಯಶಸ್ಸನ್ನು ಗಳಿಸಿದ್ದಾರೆ. ಶ್ರೀಮದ್ವಿದ್ವತ್ಕುಲತಿಲಕರ ವಂಶದಲ್ಲಿ ರಾಜಾವೇಂಕಟರಾಘವೇಂದ್ರಾಚಾರ್ಯರು ಇಪ್ಪತ್ತನೇ ಶತಮಾನದ ಆದಿಭಾಗದಲ್ಲಿ ಜನ್ಮ ತಾಳಿದರು. ಅವರ ಹಿರಿಯರಲ್ಲಿ ಬಾಲ್ಯದ ವಿದ್ಯಾಭ್ಯಾಸ ನಡೆಯಿತು. ನಂತರ ಪ್ರಸಿದ್ಧ ವಿದ್ವಾಂಸರಲ್ಲಿ ನ್ಯಾಯ ವೇದಾಂತಾದಿ ಶಾಸ್ತ್ರಗಳಲ್ಲಿ ಅಪಾರ ಪಾಂಡಿತ್ಯ ಪಡೆದರು. ವಾಕ್ಯಾರ್ಥ ಚತುರರು. ಗೃಹಸ್ಥಾಶ್ರಮ ಸ್ವೀಕರಿಸಿ ಮಕ್ಕಳನ್ನು ಪಡೆದರು. ಗೃಹಸ್ಥಾಶ್ರಮದಲ್ಲಿದ್ದಾಗ ಸದಾ ಶಾಂತಚಿತ್ತರಾಗಿ ಪಂಚಯಜ್ಞಪರಾಯಣರಾಗಿ ಷಟ್ಕರ್ಮನಿರತರಾಗಿ ಅರಿಷಡ್ವರ್ಗವನ್ನು ಜಯಿಸಿದವರಾಗಿ ಸಾತ್ವಿಕ ವಂಶದ ಗೌತಮ ಗೋತ್ರದ ಬೀಗ ಮುದ್ರೆ ಮನೆತನದ ಶ್ರೇಷ್ಠಪತಾಕೆಯನ್ನು ಹಾರಿಸಿ ಜನಾನುರಾಗಿಗಳಾಗಿ ಮೆರೆದರು. ಇವರ ಲೌಕಿಕ ವೈದಿಕ ಆಡಳಿತ ಸಾಮರ್ಥ್ಯಕ್ಕೆ ಮೆಚ್ಚಿ ಪ್ರಾತಃಸ್ಮರಣೀಯರಾದ ಶ್ರೀ ಶ್ರೀ ಸುಯಮೀಂದ್ರತೀರ್ಥರ ಆಜ್ಞೆಯಂತೆ ಮಂತ್ರಾಲಯದಲ್ಲಿ ಮಠದ ದಿವಾನರಾಗಿ ಕಾರ್ಯಕ್ರಮಗಳನ್ನು ನಿರ್ವಹಿಸಿದರು.

ಜ್ಞಾನ ವೈರಾಗ್ಯ ಭಕ್ತ್ಯಾದಿ ಕಲ್ಯಾಣ ಗುಣಗಳಿಂದ ಶೋಭಿಸುತ್ತಿದ್ದ ರಾಜಶ್ರೀ ವೆಂಕಟರಾಘವೇಂದ್ರಾಚಾರ್ಯರಿಗೆ ಸನ್ಯಾಸ ದೀಕ್ಷೆಯನ್ನು ಕೊಟ್ಟು ಮೂಲ ರಾಮರ ಪೂಜಾ ಶಾಸ್ತ್ರ ಪಾಠ ಪ್ರವಚನಾದಿಗಳನ್ನು ನಡೆಸಿ ಶ್ರೀ ಮಠದ ಕೀರ್ತಿಯನ್ನು ದಿಕ್ಕುವಿದಿಕ್ಕುಗಳಲ್ಲಿ ಮೆರೆಸಲು ಸಂಸ್ಥಾನದಲ್ಲಿ ಪಟ್ಟಾಭಿಷೇಕ ಮಾಡಿದರು. ಗುರುಗಳ ಶಿಶ್ರೂಷೆ ಮಾಡಿಕೊಂಡು ಕೆಲವು ಕಾಲ ಉಪಯುಕ್ತವಾಗಿ ನಂಜನಗೂಡಿನಲ್ಲಿ ಕಳೆದರು. ಗುರುಗಳ ಅಪ್ಪಣೆ ಪಡೆದು ಮಂತ್ರಾಲಯ ಕ್ಷೇತ್ರಕ್ಕೆ ದಯಮಾಡಿಸಿದರು.

ಶ್ರೀ ಮನ್ಮಂತ್ರಾಲಯವು ಮಂತ್ರಸಿದ್ಧಿಯ ಕ್ಷೇತ್ರವು. ವರಾಹದೇವರ ದಂಷ್ಟ್ರದಿಂದ ಉದ್ಭವಿಸಿದ ಸ್ವಾದೂದಕ

ದಿಂದ ತುಂಬಿ ಹರಿಯುವ ತುಂಗಭದ್ರಾ ನದಿಯ ದಡದಲ್ಲಿದೆ. ಇಲ್ಲಿ ಪ್ರಹ್ಲಾದ ರಾಜರು ಕೃತಯುಗದಲ್ಲಿ ಯಾಗ ಮಾಡಿ ದೇವ ವೃಂದವನ್ನು ತೃಪ್ತಿಗೊಳಿಸಿದ ಸಿದ್ಧಕ್ಷೇತ್ರ. ಆದ್ದರಿಂದಲೇ ಇಲ್ಲಿ ಶ್ರೀ ರಾಘವೇಂದ್ರ ಗುರುಸಾರ್ವಭೌಮರು ಸಶರೀರರಾಗಿ ಬೃಂದಾವನ ಪ್ರವೇಶ ಮಾಡಿರುವುದು. ರಾಮ ನರಹರಿ ಕೃಷ್ಣ ಕೃಷ್ಣರು, ಅಲದಭೋಧ ಮಿಕ್ಕಾದ ಮಹಾಮುನಿಗಳು ಸಾಂಶರು ನೆಲಸಿದರು. ಸತ್ಪಥ ಮಾರ್ಗದಲಿ ಸತತ ಸೇವಿಪರಿಗೆ ಹಿತದಿಂದಲಿ ಮನೋರಥವ ಕೊಡುವೆನೆಂದು ಗುರುರಾಜರು ರಾರಾಜಿಸುತ್ತಿದ್ದಾರೆ. ಅಗಮ್ಯಮಹಿಮರು. ವರ್ಣಿಸಲು ಅಸದಳ. ಭಕ್ತರನ್ನು ಅನುಗ್ರಹಿಸಲು ಸ್ವಪ್ನಗಳ ಮೂಲಕ ದರ್ಶನ ಕೊಡುವುದು, ಆದೇಶ, ಸಂದೇಶ, ಗ್ರಹಾದಿಬಾಧೆ ಪರಿಹಾರ, ಅಪಮೃತ್ಯು ಗಂಡಾಂತರ ನಿವಾರಣೆ, ಕುರುಡರಿಗೆ ಕಣ್ಣು, ಹೆಳವರಿಗೆ ಕಾಲು, ಮೂಕರಿಗೆ ಮಾತು ನೌಕರಿ, ಸಂತಾನ ಮುಂತಾದ ಆರ್ತ ಜನರ ಬೇಡಿಕೆಗಳನ್ನು ಈಡೇರಿಸುತ್ತಿರುವುದು ಲೋಕ ಪ್ರಸಿದ್ಧವಾಗಿದೆ. ಇಂಥ ಪುಣ್ಯ ಕ್ಷೇತ್ರದಲ್ಲಿ ಸೇವೆ ಮಾಡಲು ಜನ್ಮಾಂತರಗಳ ಪುಣ್ಯ ವಿಶೇಷದಿಂದಲೇ ಸಾಧ್ಯ. ಇಂಥ ದಿವ್ಯಕ್ಷೇತ್ರಕ್ಕೆ ದಿಗ್ವಿಜಯ ಮಾಡಿಸಿದ ಶ್ರೀ ಶ್ರೀ ಸುಜಯೀಂದ್ರತೀರ್ಥರು ಪ್ರತಿನಿತ್ಯವೂ ತುಂಗಭದ್ರಾ ಸ್ನಾನ, ನಿತ್ಯ ಆಹ್ನೀಕ, ಗುರುರಾಜರ ಸೇವೆ, ಗ್ರಂಥಾವಲೋಕನದಲ್ಲಿ ನಿರತರಾದರು. ಮೊದಮೊದಲು ಎಡರು ತೊಡರುಗಳು ಬಂದೊದಗಿದರೂ ಧೃತಿಗೆಡದೆ ಪೂರ್ವಾಶ್ರಮದಲ್ಲಿದ್ದಾಗ ಶ್ರೀ ಮಠದ ಆಡಳಿತವನ್ನು ನಡೆಸುವುದರಲ್ಲಿ ಅನುಭವ ಹೊಂದಿದ್ದ ಕಾರಣ ಮಂತ್ರಾಲಯ ಪ್ರಭುಗಳ ಮೇಲೆ ಭಾರ ಹಾಕಿ ಮಠದ ಸರ್ವತೋಮುಖವಾದ ಏಳಿಗೆಗೆ ಶ್ರಮಿಸಿದರು.

ಶ್ರೀ ಶ್ರೀ ಸುಯಮೀಂದ್ರತೀರ್ಥರ ನಿರ್ಯಾಣನಂತರ ಶ್ರೀ ಮಠದ ಸಂಪತ್ತನ್ನು ಅಭಿವೃದ್ಧಿ ಪಡಿಸಲು ಅನೇಕ ಯೋಜನೆಗಳನ್ನು ತಯಾರಿಸಿ ಕಾರ್ಯಾಚರಣೆ ಮಾಡಲು ಶ್ರಮಿಸಿದರು.

ಭಕ್ತಾದಿಗಳು ಇಳಿದು ಕೊಂಡು ಶ್ರೀ ರಾಯರ ಸೇವೆ ಮಾಡಲು ಅನುಕೂಲಕ್ಕಾಗಿ ವಸತಿ ಗೃಹಗಳನ್ನು ಆಧುನಿಕ ಸೌಕರ್ಯಗಳಿಂದ ನಲ್ಲಿ ನೀರು, ಒಳ ಚರಂಡಿ, ದೀಪ ಇತ್ಯಾದಿ ಕೂಡಿರುವಂತೆ ನಿರ್ಮಿಸಿದರು. ಈ ಕೆಲಸ ಇನ್ನೂ ನಡೆಯುತ್ತಲೇ ಇದೆ. ಸಾವಿರಾರು ಜನ ಭಕ್ತರಿಗೆ ಪ್ರತಿ ನಿತ್ಯವೂ ಭೋಜನದ ವ್ಯವಸ್ಥೆ ಇದೆ. ನಾನು ಸುಮಾರು ಎಪ್ಪತ್ತು ವರ್ಷದ ಹಿಂದೆ ನನ್ನ ಭಾವಂದಿರಾದ ಬೊಮ್ಮಗಟ್ಟೆಯ ಮಾನಕರಿ ರಾಘವೇಂದ್ರಾಚಾರ್ಯರೊಡನೆ ಜಗದ್ವಿಖ್ಯಾತರಾಗಿದ್ದ ಶ್ರೀ ಶ್ರೀ ಸುಶೀಲೇಂದ್ರ ತೀರ್ಥರ ಕಾಲದಲ್ಲಿ ಮಂತ್ರಾಲಯ ಕ್ಷೇತ್ರಕ್ಕೆ ಮೊದಲನೆ ಆವರ್ತಿ ಹೋಗಿದ್ದೆ. ಇಪ್ಪತ್ತು ವರ್ಷದ ನಂತರ ಶ್ರೀ ಶ್ರೀ ಸುಯಮೀಂದ್ರರ ಕಾಲದಲ್ಲಿ ಹೋಗಿ ದರ್ಶನ, ಸೇವಾದಿಗಳನ್ನು ಹೊಂದಿದೆ. ಕ್ಷೇತ್ರ ಯಾವ ರೀತಿ ಅಭಿವೃದ್ಧಿ ಪಡೆಯುತ್ತಿದೆ ಎಂಬ ಅರಿವಾಯಿತು. ಈಗಿನ ಎರಡು ದಶಕಗಳಲ್ಲಿ ಹಲವಾರು ಸಲ ನನ್ನ ವಿದ್ಯಾ ಗುರುಗಳಾದ ಕೀರ್ತಿ ಶೇಷರಾದ ಗೌಡಗೆರೆ ಗೋಪಾಲಕೃಷ್ಣಾಚಾರ್ಯರೊಡನೆಯೂ ಪ್ರತ್ಯೇಕವಾಗಿಯೂ ಈ ಕ್ಷೇತ್ರ ಯಾತ್ರೆ ನಡೆಯಿತು. ಶ್ರೀ ಶ್ರೀ ಸುಜಯೀಂದ್ರ ತೀರ್ಥರು ಆದರದಿಂದ ಬರಮಾಡಿಕೊಂಡು ಬೇಕಾದ ಸೌಕರ್ಯ ಏರ್ಪಡಿಸಿ ಯೋಗಕ್ಷೇಮ ವಿಚಾರಿಸಿ ತೀರ್ಥ ಪ್ರಸಾದ ಫಲ ಮಂತ್ರಾಕ್ಷತೆಗಳನ್ನು ಅನುಗ್ರಹಿಸಿದರು. ಶ್ರೀಗಳವರ ಮೊಕ್ಕಾಂ ಬೆಂಗಳೂರು ಸೀತಾಪತಿ ಅಗ್ರಹಾರದ ಶ್ರೀ ಮಠದಲ್ಲಿ ನನ್ನ ಗುರುಗಳಾದ ಗೌಡಗೆರೆ ಆಚಾರ್ಯರೊಂದಿಗೆ ರಹಸ್ಯ ಭೇಟಿಯ ಸಮಯದಲ್ಲಿ ಬಿಚ್ಚು ಮನಸ್ಸಿನಿಂದ ದ್ವೈತಶಾಸ್ತ್ರದ ಅತಿ ಕಠಿಣವಾದ ವಾಕ್ಯಾರ್ಥ ಪೂರ್ವಪಕ್ಷ ಸಿದ್ಧಾಂತ ಯುಕ್ತಿಗಳಿಂದ ಶೃತಿಸ್ಮೃತಿಗಳ ಹೇರಳವಾದ ಉದಾಹರಣೆಗಳ ವಿಚಾರ ವಿನಿಮಯ ಒಂದು ಘಂಟೆ ಹೊತ್ತು ನಡೆಯಿತು. ನಾನು ಸುಮ್ಮನೆ ಕೇಳುತ್ತ ಕುಳಿತಿದ್ದೆ. ಗಹನವಾದ ವಿಚಾರ. ನನ್ನ ಗ್ರಹಣ ಶಕ್ತಿಗೆ ಮೀರಿದ್ದಾಗಿತ್ತು. ಶ್ರೀಗಳವರು ಮಂದಹಾಸದಿಂದ ಆಚಾರ್ಯರನ್ನು ಶ್ಲಾಘಿಸಿ ಸಂಪ್ರದಾಯ ಬದ್ಧವಾಗಿ ಶಾಸ್ತ್ರಾಭ್ಯಾಸ ಮಾಡಿದವರಿಗೇ ಈ ರೀತಿ ಸ್ಪಷ್ಟಾರ್ಥ ಹೊಳೆಯುವುದು. ನಿಮ್ಮ ಶಾಸ್ತ್ರಾಧಾರದ ಮಾತಿನ ಚೌಕಟ್ಟಿನಲ್ಲಿ ನನ್ನ ಅಭಿಪ್ರಾಯವನ್ನು ಸ್ಪಷ್ಟೀಕರಿಸಿದ್ದೀರಿ ಎಂದು ಹೇಳಿ ಭೂರಿದಕ್ಷಿಣೆ ಸಹಿತ ಫಲ ಮಂತ್ರಾಕ್ಷತೆ ಅನುಗ್ರಹಿಸಿದರು.

ಶ್ರೀಗಳವರು ಪೀಠಾರೋಹಣ ಮಾಡಿದ ನಂತರ, ಶ್ರೀ ಸುಶೀಲೇಂದ್ರತೀರ್ಥರಿಂದ ಪ್ರಾರಂಭವಾಗಿದ್ದ "ಸಮೀರ ಸಮಯಸಂವರ್ಧಿನಿ" ಎಂಬ ಮಹಾವಿದ್ವತ್ ಸಭೆಯನ್ನು ವರ್ಷಕ್ಕೆ ಎರಡಾವರ್ತಿ ಮಂತ್ರಾಲಯದಲ್ಲಿ ಶ್ರೀ ರಾಯರ ಆರಾಧನಾ ಸಮಯದಲ್ಲಿ ಒಂದು ಸಲ, ಸಂಚಾರದಲ್ಲಿದ್ದರೆ

ಪ್ರಸಿದ್ಧ ಪಟ್ಟಣಗಳಲ್ಲಿ ಇನ್ನೊಂದು ಸಲ ಜರಗುವಂತೆ ಏರ್ಪಡಿಸಿದರು. ಬೆಂಗಳೂರಿನಲ್ಲಿ ಒಂದಾವರ್ತಿ ಮಂತ್ರಾಲಯದಲ್ಲಿ ಒಂದು ಬಾರಿ ಈ ಸಭೆಗೆ ನನ್ನ ಗುರುಗಳೊಂದಿಗೆ ಹೋಗಿ ಸಭಾ ಕಾರ್ಯಕಲಾಪಗಳನ್ನು ಹತ್ತಿರದಿಂದ ನೋಡುವ ಭಾಗ್ಯ ನನಗೆ ದೊರೆತಿತ್ತು. ಶ್ರೀಮಠಸ್ಥವಿದ್ವಾಂಸರುಗಳೂ ಆಗಮಿಸಿ ಮೊದಲೇ ಸೂಚಿಸಿದ್ದ ವಿಷಯಗಳ ಮೇಲೆ ವಿಪುಲವಾಗಿ ಚರ್ಚೆ ನಡೆಯಿತು. ಶ್ರೀ ಶ್ರೀ ಗಳವರು ಅಧ್ಯಕ್ಷತೆ ವಹಿಸಿ ಕಾರ್ಯ ಕಲಾಪಗಳನ್ನು ವೀಕ್ಷಿಸುತ್ತಿದ್ದರು. ಶ್ರೀಗಳವರ ಪೂರ್ವಾಶ್ರಮದ ಕಿರಿಯ ಪುತ್ರರಾದ ರಾಜಾಸುಜ್ಞಾನೇಂದ್ರಾಚಾರ್ಯರು (ರಾಜಾಗಿರಿಯಾಚಾರ್ಯರು) (ಶ್ರೀ ಮಠದ ದಿವಾನರಾದ) ವಿದ್ವತ್ಸಭೆಯ ಕಾರ್ಯದರ್ಶಿಗಳಾಗಿ ಸಭಾ ಕಾರ್ಯಕ್ರಮವನ್ನು ಶಿಸ್ತಿನಿಂದ ನಿರ್ದೇಶಿಸಿ ವಿದ್ವಾಂಸರ ಹಾಗೂ ನೆರೆದ ಪ್ರೇಕ್ಷಕರ ಸಂತೋಷಕ್ಕೆ ಪಾತ್ರರಾಗುವರು. ಶ್ರೀಮಠಸ್ಥ ವಿದ್ವಾಂಸರಿಗೂ ಅವರವರ ವಿದ್ವತ್ತಿಗೆ ಅನುಗುಣವಾಗಿ ಭೂರಿ ಸಂಭಾವನೆಯನ್ನು ಶ್ರೀಗಳವರು ಅನುಗ್ರಹಿಸಿದರು. ನನ್ನ ನಿರೀಕ್ಷಣೆ ಮೀರಿ ನನಗೂ ದಕ್ಷಿಣೆಯನ್ನಿತ್ತರು. ಶಾಲು, ಪೀತಾಂಬರ ಶೇಷ ವಸ್ತ್ರ ಅರ್ಹತೆ ಮೇಲೆ ಮರ್ಯಾದೆ ಸಲ್ಲಿಸುವುದರಲ್ಲಿ ಹಿಂಜರಿಯುತ್ತಿರಲಿಲ್ಲ.

ಕ್ರಿ. ಶ. 1971ರಲ್ಲಿ ಶ್ರೀ ಶ್ರೀ ರಾಘವೇಂದ್ರಸ್ವಾಮಿಗಳವರ ತ್ರಿಶತಮಾನೋತ್ಸವ ಸಮಿತಿ (ರಿ.) ಬೆಂಗಳೂರು. ಇದಕ್ಕೆ ಶ್ರೀಯುತ ಡಿ. ಎಸ್. ರಾಘವೇಂದ್ರಾಚಾರ್ಯರು ಅಧ್ಯಕ್ಷರಾಗಿಯೂ ಶ್ರೀಯುತ ಟಿ. ಎಸ್. ಲಕ್ಷ್ಮೀನಾರಾಯಣರಾವ್ ಗೌರವ ಕಾರ್ಯದರ್ಶಿಯಾಗಿಯೂ ತ್ರಿಶತಮಾನೋತ್ಸವ ಸಮಾರಂಭವು ತಾ|| 25-9-71 ರಿಂದ 27-9-71ರವರೆಗ ವಿಜೃಂಭಣೆಯಿಂದ ನಡೆಸಲ್ಪಟ್ಟಿತು. ಭಾರತದ ಉಪರಾಷ್ಟ್ರಪತಿಗಳಾಗಿದ್ದ ಮಾನ್ಯ ಶ್ರೀ ಜಿ. ಎಸ್. ಪಾಠಕ್‌ರವರು ಉತ್ಸವವನ್ನು ಉದ್ಘಾಟಿಸಿದರು. ಪರಮ ಪೂಜ್ಯರಾದ ಶ್ರೀ ಶ್ರೀ ಸುಜಯೀಂದ್ರ ತೀರ್ಥ ಶ್ರೀ ಪಾದಂಗಳವರು ಅಧ್ಯಕ್ಷತೆ ವಹಿಸಿ ಅನುಗ್ರಹ ಭಾಷಣ ಮಾಡಿದರು. ಆ ಬಾಲ ವೃದ್ಧರಿಗೂ ಪಂಡಿತ ಪಾಮರರಿಗೂ ತಿಳಿಯುವಂತೆ ಸುಲಭವಾದ ಅರ್ಥಗರ್ಭಿತವಾದ ಮಾತುಗಳಿಂದ ಆ ಭಾಷಣವು ಗಂಭೀರತೆಯ ಹೊನಲನ್ನು ಹರಿಯಿಸಿತು. ಜೀವನಕ್ಕಾಗಿ ಜನರು ಪ್ರತಿನಿತ್ಯವೂ ಹೆಚ್ಚುಕಾಲ ಕಳೆಯುವುದು ಅಗತ್ಯವೆಂಬಂತೆ ತೋರುತ್ತಿದೆ. ಮಾನವ ಶರೀರ ಭಗವಂತನಿಂದ ದತ್ತವಾಗಿರುವುದು. ಈ ಲೋಕದ ಜೀವನಕ್ಕಾಗಿಯೇ ಅಲ್ಲ. ಈ ಭಾರತ ಭೂಮಿಯಲ್ಲಿ ಸದ್ವೈಷ್ಣವನಾಗಿ ಜನಿಸಿದಾಗ ಪರಲೋಕ ಸಾಧನೆ ಅತ್ಯಗತ್ಯವಾಗಿ ಮಾಡಿಕೊಳ್ಳಬೇಕು. ಅಪ್ರಮೋಚಿತ ನಿತ್ಯನೈಮಿತ್ತಿಕ ಕರ್ಮಗಳನ್ನು ಮಾಡಿಕೊಂಡು ಶಾಸ್ತ್ರಾಧ್ಯಯನ ಗುರುಮುಖೇನ ಮಾಡಿ ಅನುಷ್ಠಾನದಲ್ಲಿ ತಂದು ಉದ್ಧೃತರಾಗಬೇಕು ಮುಂತಾಗಿ ಹೃದಯಂಗಮವಾಗಿ ಲಲಿತ ಮನೋಹರವಾದ ಶೈಲಿಯಲ್ಲಿ ಉಪದೇಶ ಮಾಡಿದರು.

ಶ್ರೀ ರಾಯರ ತ್ರಿಶತಮಾನೋತ್ಸವ ಸ್ಮಾರಕವಾಗಿ ಪಂಡಿತಪ್ರಕಾಂಡ ಪಿ. ಪಿ. ಲಕ್ಷ್ಮೀನಾರಾಯಣ ಉಪಾಧ್ಯಾಯರ ಪ್ರಧಾನ ಸಂಪಾದಕತ್ವದಲ್ಲಿ ಶ್ರೀಗಳವರ ಆಜ್ಞಾನುಸಾರವಾಗಿ "ಶ್ರೀ ಗುರುಸಾರ್ವಭೌಮ" ಎಂಬ ಮಾಸ ಪತ್ರಿಕೆಯು ಬೃಂದಾವನ ಆಫೀಸು ಮಂತ್ರಾಲಯದಿಂದ ಪ್ರಕಟವಾಯಿತು. ಈಗ ಈ ಮಾಸ ಪತ್ರಿಕೆಯು ಪಂಡಿತರಾಜ ಮಾಗಡಿ ರಂಗನಾಥಾಚಾರ್ಯರ ಸಂಪಾದಕತ್ವದಲ್ಲಿ ಶ್ರೀ ಗಿರಿಯಾಚಾರ್ಯರ ಸಹಕಾರದಿಂದ ಮುಂದುವರಿಸಲ್ಪಡುತ್ತಿದೆ. ಲೋಕಕಲ್ಯಾಣವೇ ಮುಖ್ಯ ಗುರಿ. ಮಧ್ವಮತಾನುಯಾಯಿಗಳು ಅತ್ಯಗತ್ಯವಾಗಿ ತಿಳಿದು ಅನುಷ್ಠಾನ ಪರರಾಗಲು ಉಪಯುಕ್ತವಾದ ವಿಷಯಗಳನ್ನು ಸಂಗ್ರಹವಾಗಿಯೂ ವಿಶದವಾಗಿಯೂ ನಿರೂಪಿಸಿ ಅತಿ ಮುಖ್ಯವಾದ ಗ್ರಂಥಗಳ ಅರ್ಥ ವಿಶೇಷದ ಕೈಗನ್ನಡಿಯೋಪಾದಿಯಲ್ಲಿ ಭಕ್ತವೃಂದವನ್ನು ಆನಂದಗೊಳಿಸುತ್ತಿದೆ.

ಗುರುಸಾರ್ವಭೌಮ ಸಂಸ್ಕೃತ ಮಹಾ ಪಾಠಶಾಲಾ, ಮಂತ್ರಾಲಯ.

ಈ ವಿದ್ಯಾ ಪೀಠದ ಸ್ಥಾನ-ಮಾನವನ್ನು ಹೆಚ್ಚು ಆಕರ್ಷಣೀಯವಾಗಿ ಅಭಿವೃದ್ಧಿಪಡಿಸಿದರು. ಘನ ಸರ್ಕಾರದಿಂದ ನಡೆಸುವ ಸಂಸ್ಕೃತ ಕಾಲೇಜುಗಳ ಮಾದರಿಯಲ್ಲಿ ದಕ್ಷ ಪಂಡಿತರನ್ನು ಪಾಠ ಹೇಳಲು ನಿಯಮಿಸಿರುತ್ತಾರೆ. ಬಹುಸಂಖ್ಯಾತ ವಿದ್ಯಾರ್ಥಿಗಳಿಗೆ ಅಶನ, ವಸತಿಗಳಿಗೆ ಉತ್ಕೃಷ್ಟವಾದ ಏರ್ಪಾಟು ಮಾಡಿ ಕ್ರಮವಾಗಿ ಹಿಂದಿನ ಗುರುಕುಲದಲ್ಲಿ ನಡೆದಂತೆ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹನೆಸಗಿರುವುದು ಜನಜನಿತವಾಗಿದೆ.

ಗ್ರಂಥಗಳ ಮುದ್ರಣ ಕಾರ್ಯ

ಶ್ರೀಗಳವರು ಬಹುದೂರದರ್ಶಿಗಳು ; ಪೂರ್ವಾಪರ ವಿವೇಚನೆ ಮಾಡಿಯೇ ಒಂದು ಕಾರ್ಯಕ್ಕೆ ಉದ್ಯುಕ್ತರಾಗುವುದು. ಪ್ರಾಚೀನಾಚಾರ್ಯರುಗಳಿಂದ ರಚಿತವಾದ ಗ್ರಂಥಗಳ ಮುದ್ರಣ ವಿಷಯದಲ್ಲಿ ಉತ್ಸಾಹಭರಿತರು. ಹಸ್ತಲಿಖಿತ ಗ್ರಂಥಗಳ ಪರಿಶೋಧನೆಯನ್ನು ಅರ್ಹರಾದ ವಿದ್ವಾಂಸರಿಂದ ಮಾಡಿಸಿ ತಪ್ಪುಗಳಿಲ್ಲದಂತೆ ಅಂದವಾಗಿ ಪ್ರತಿಯನ್ನು ಮುದ್ರಣಕ್ಕಾಗಿ ಕಳುಹಿಸಲು ಆಜ್ಞಾಪಿಸಿದ್ದರು.

ಶ್ರೀ ರಾಘವೇಂದ್ರ ವಿಜಯ (ಅರ್ಥ, ತಾತ್ಪರ್ಯ, ವಿಶೇಷಾಂಶಸಹಿತ)

ಭಾಟ್ಟಸಂಗ್ರಹ (ಎರಡು ಭಾಗಗಳಲ್ಲಿ) ಮುದ್ರಿತವಾಗಿ ವಿದ್ಯಾರ್ಥಿಗಳಿಗೂ ಪಂಡಿತರಿಗೂ ಉಪಯುಕ್ತವಾಗಿದೆ.

"ಆಮೋದ" ಸಹಿತ ಶ್ರೀ ವ್ಯಾಸರಾಜಕೃತ್ "ಶ್ರೀಮನ್ನ್ಯಾಯಾಮೃತ" ಗ್ರಂಥ ಮುದ್ರಿತವಾಗುತ್ತಿದೆ. ಪರಿಮಳಸಹಿತ ಶ್ರೀಮನ್ನ್ಯಾಯಸುಧಾದಿ ಗ್ರಂಥಗಳು ಮುದ್ರಿತವಾಗಲು ಯೋಜನೆಯನ್ನು ಸಿದ್ಧಪಡಿಸಿದ್ದಾರೆ. ಪರಿಮಳ ವೈಭವವೆಂಬ ಅನೇಕ ವ್ಯಾಖ್ಯಾನ ವಿಚಾರ ಮಾಡಿದ ಅಭಿಪ್ರಾಯ ಹೊಂದಿರುವ ಪ್ರತಿಜಿಜ್ಞಾಸಾಧಿಕರಣಕ್ಕೆ ಸಿದ್ಧವಾಗಿದೆ.

ಪ್ರತಿಷ್ಠಾಪನಾಕಾರ್ಯ

ತಮ್ಮ ಓದಿನ ಗುರು ಪೀಳಿಗೆಯವರಿಂದ ಪ್ರತಿಷ್ಠಿತ ಬೃಂದಾವನಗಳ ಪೂಜಾ, ಹಸ್ತೋದಕ, ನಿತ್ಯಗಟ್ಲೆ, ವಿಶೇಷಕಟ್ಟಲೆಗಳಿಗೆ ನ್ಯೂನತೆಯಿಲ್ಲದಂತೆ ಆಯಾ ಊರುಗಳಲ್ಲಿ ತಕ್ಕ ಸಿಬ್ಬಂದಿಯನ್ನಿಟ್ಟು ಸಮರ್ಪಕವಾಗಿ ಸೇವಾ ನಡೆಸಿಕೊಂಡು ಬರಲು ಏರ್ಪಾಟು ಮಾಡಿದ್ದಾರೆ. ಮುಖ್ಯ ಪ್ರಾಕಾರ ಹಾಗು ಶ್ರೀ ರಾಯರ ಮೃತ್ತಿಕಾ ಬೃಂದಾವನ ಸೇವೆ ಸೂತ್ರಗಳಿಗೆ ಅನುಕೂಲವಾಗುವಂತೆ ವಿಶಾಲವಾದ ಕಟ್ಟಡಗಳನ್ನು ಕಟ್ಟಿಸಿ, ಸಜ್ಜನ ವೃಂದಕ್ಕೆ ಬಹು ಉಪಕಾರ ಮಾಡಿದ್ದಾರೆ. ರಾಯಚೂರು, ಹೈದರಾಬಾದು, ಬೆಂಗಳೂರು ಜಯನಗರದ ಮಠಗಳಲ್ಲಿ ಸೌಕರ್ಯದ ವ್ಯವಸ್ಥೆಯ ಮಾದರಿಯಾಗಿದೆ. ಅರ್ಚಕರು, ಪಾಠಕರು, ಪುರೋಹಿತರು, ಪೌರಾಣಿಕರು, ಮೇಲ್ವಿಚಾರಣೆ ಆಡಳಿತ ವರ್ಗ ಜನಗಳನ್ನು ಆದರದಿಂದ ಸಹಕರಿಸುವುದು ಪ್ರಶಂಸನೀಯವಾಗಿದೆ. ಕಾಲ ಕಾಲಕ್ಕೆ ಆದಾಯ ವೆಚ್ಚದ ಲೆಕ್ಕ ಪರಿಶೋಧನೆ ಇತ್ಯಾದಿ ಏರ್ಪಾಟು ಮಾಡಿ ಸಹಸ್ರಾರು ಜನ ಹವ್ಯ, ಕವ್ಯ, ಸೇವಾದಿಗಳನ್ನು ತೃಪ್ತಿಯಿಂದ ನಡೆಸಲು ಅನುಕೂಲ ಪಡಿಸಿರುವುದು ಪ್ರಸಿದ್ಧವಾಗಿದೆ.

ಶ್ರೇಷ್ಠ ದರ್ಜೆಯಲ್ಲಿ ಉತ್ತೀರ್ಣರಾದ ಬಡವಿದ್ಯಾರ್ಥಿಗಳಿಗೆ ಆಂಗ್ಲಭಾಷಾ, ವಿಜ್ಞಾನ, ತಾಂತ್ರಿಕ ವ್ಯಾಸಂಗವನ್ನು ಮುಂದುವರಿಸಿ ಉಚ್ಚ ಶಿಕ್ಷಣ ಪಡೆಯಲು ವಿದ್ಯಾರ್ಥಿವೇತನವನ್ನಿತ್ತು ಉತ್ತೇಜನಕೊಟ್ಟಿದ್ದಾರೆ.

ಮಾಧ್ವಪೀಠಾಧಿಪತಿ ಸಹಜವಾದ ಸ್ನೇಹ ಸಂಬಂಧವನ್ನು ನಿಕಟಗೊಳಿಸಿಕೊಳ್ಳುವುದರ ಜತೆಗೆ ಮಾಧ್ವಸಮಾಜದವರಿಗೆ ತತ್ತ್ವ ಧರ್ಮ ಪ್ರಚಾರಗಳ ಬಗ್ಗೆ ವಿಚಾರ ವಿನಿಮಯ ಮಾಡುವುದರಲ್ಲಿ ಹಿಂತೆಗೆದವರೇ ಅಲ್ಲ. ಶ್ರೀ ವ್ಯಾಸರಾಜ ಮಠಾಧೀಶ್ವರರಾದ ಕೀರ್ತಿಶೇಷ ಶ್ರೀ ಮದ್ವಿದ್ಯಾಪ್ರಸನ್ನ ತೀರ್ಥ ಶ್ರೀ ಪಾದಂಗಳವರನ್ನೂ ಶ್ರೀ ಶ್ರೀ ಪಾದರಾಜ ಮಠಾಧೀಶ್ವರರಾಗಿದ್ದ ಶತಾಯುಷಿ ಶ್ರೀ ಸತ್ಯನಿಧಿ ಶ್ರೀ ಪಾದಂಗಳವರನ್ನೂ ಬೆಂಗಳೂರು ಸೀತಾಪತಿ ಅಗ್ರಹಾರ ಶ್ರೀ ಮಠದಲ್ಲಿ ಏಕಕಾಲದಲ್ಲಿ ಆಹ್ವಾನಿಸಿ ಸಂಸ್ಥಾನ ದೇವಪೂಜಾ, ಭಿಕ್ಷ, ಪಾದಪೂಜಾದಿಗಳು ನಡೆದದ್ದು ದರ್ಶನ ಮಾಡಿ ತೀರ್ಥ ಪ್ರಸಾದ ಫಲ ಮಂತ್ರಾಕ್ಷತೆ ಪಡೆಯುವ ಭಾಗ್ಯ ನನಗೆ ಲಭ್ಯವಾಗಿತ್ತು. ಶ್ರೀ ವ್ಯಾಸರಾಜ ಮಠಾಧೀಶ್ವರರು ಶ್ರೀ ಶ್ರೀ ಪಾದರಾಜ ಮಠಾಧೀಶರು ಶ್ರೀ ಮೂಲರಾಮ ಪೂಜಾ ವೈಭವವನ್ನು ಈಕ್ಷಿಸುವುದು ಶ್ರೀ ರಾಘವೇಂದ್ರ ಮಠಾಧೀಶ್ವರಾ ಶ್ರೀ ಸುಜಯೀಂದ್ರತೀರ್ಥರು ಶ್ರೀ ಮೂಲ ಗೋಪಾಲಕೃಷ್ಣ, ಶ್ರೀ ಗೋಪೀನಾಥ ಪೂಜಾವನ್ನು ಆಸಕ್ತಿಯಿಂದ ಈಕ್ಷಿಸುವುದು–ಈ ರೀತಿ ಪರಸ್ಪರವಾಗಿ ಸೌಹಾರ್ದಯುತವಾಗಿ ನಡೆದುದು ಕಣ್ಣಿಗೆ ಕಟ್ಟಿದ ಹಾಗೆ ಇದೆ. ಈ ಸಂದರ್ಭದಲ್ಲಿ ಶ್ರೀ ಸುಜಯೀಂದ್ರತೀರ್ಥರು ಉಭಯ ಶ್ರೀ ಪಾದಂಗಳವರಿಗೆ ವಿಪುಲ ಕಾಣಿಕೆಯಿತ್ತು ಗೌರವಿಸಿದ ನೋಟದಲ್ಲಾದ ಆನಂದವನ್ನು ಮರೆಯುವಂತೇ ಇಲ್ಲ. "ದಾತಾ ಭವತಿ ವಾನ ವಾ" ಸುಭಾಷಿತದ ಈ ಕೊನೆ ಭಾಗವನ್ನು ಮರೆಸುವಂತೆ ದಾತೃವಾಗಿದ್ದರು. ನಿರೀಕ್ಷಣೆ ಮೀರಿ ದ್ರವ್ಯಾದಿಗಳನ್ನು ದಾನ ಮಾಡುತ್ತಿದ್ದರು. ನಿರಾಡಂಬರರು ಹಸನ್ಮುಖಿಗಳು.

ವೈರಾಗ್ಯ ಭಾಗ್ಯಾ ನಂತರ ಶಮದಮಾದಿಗಳನ್ನು ಹೊಂದಿ ಜ್ಞಾನಾಭಿವೃದ್ಧಿಗಾಗಿ ಸಪರಿಮಳ ಶ್ರೀ

ಮನ್ನ್ಯಾಯಸುಧಾದಿ ಗ್ರಂಥಗಳನ್ನು ಓದತಕ್ಕ ಅಧಿಕಾರಿಗಳಿಗೆ ಊಟ ಮತ್ತು ವಸತಿ ಸೌಕರ್ಯಗಳನ್ನು ಮಂತ್ರಾಲಯದಲ್ಲಿ ಒದಗಿಸಿದ್ದಾರೆ. ಪರಿಮಳಾದಿ ಗ್ರಂಥ ಟಿಪ್ಪಣಿಗಳ ಅವಲೋಕನದಿಂದ ಶ್ರೀ ಮನ್ನ್ಯಾಯ ಸುಧಾ ಪಾಠವು ಬಹಳ ವೈಭವದಿಂದ ಪಂಡಿತರಾಜ ಶ್ರೀ ಮಾಗಡಿ ರಂಗನಾಥಾಚಾರ್ಯರು ಶ್ರೀ ಪಾದಪುತ್ರ ಪಂಡಿತ ಕೇಸರಿ ಶ್ರೀ ಗಿರಿಯಾಚಾರ್ಯರೂ ಈ ಕಳೆದ 2 ವರ್ಷಗಳಿಂದಲೂ ಪ್ರವಚನ ಮಾಡುತ್ತಿದ್ದಾರೆ. ನೂರಾರು ವಿದ್ಯಾರ್ಥಿಗಳು ಲಾಭ ಹೊಂದುತ್ತಿದ್ದಾರೆ. ಧೀಮಸಕಟ್ಟೆ ಶ್ರೀ ಪಾದಂಗಳವರು ಉಪಸ್ಥಿತರಿದ್ದು ಜ್ಞಾನಾರ್ಜನೆ ಮಾಡುತ್ತಿದ್ದು ಅವರ ವಸತಿ ಪೂಜಾ ಭಿಕ್ಷಾ ಎಲ್ಲವನ್ನೂ ಶ್ರೀ ಸುಜಯೀಂದ್ರ ತೀರ್ಥರ ಆಜ್ಞಾನುಸಾರ ಶ್ರೀಮಠದಿಂದ ನಿರ್ವಹಿಸುತ್ತಿದ್ದಾರೆ. ತತ್ತ್ವಪ್ರಕಾಶಿಕ (ಭಾವದೀಪ ಸಹಿತ) ಮುಂತಾದ ಗ್ರಂಥಗಳ ಪಾಠವು ಕ್ರಮವಾಗಿ ಶ್ರೀ ಮಾಗಡಿ ರಂಗನಾಥಾಚಾರ್ಯರಿಂದ ಬಾಲಕರಿಗೆ ನಡೆಯುತ್ತಿದೆ.

ಹೀಗೆ ಜ್ಞಾನ ವೈರಾಗ್ಯ ಭಕ್ತ್ಯಾದಿ ಕಲ್ಯಾಣ ಗುಣ ಶಾಲಿಗಳಾದ ಶ್ರೀ ರಾಜಾ ವೆಂಕಟರಾಘವೇಂದ್ರಾಚಾರ್ಯರು ಶ್ರೀ ಶ್ರೀ ಸುಯಮೀಂದ್ರತೀರ್ಥ ಶ್ರೀ ಪಾದಂಗಳವರಿಂದ ವೇದಾಂತ ಸಾಮ್ರಾಜ್ಯದಲ್ಲಿ ಪಟ್ಟಾಭಿಷಿಕ್ತರಾಗಿ ಶ್ರೀ ಶ್ರೀ ಮತ್ಸುಜಯೀಂದ್ರತೀರ್ಥರೆಂಬ ಅಭಿಧಾನದಿಂದ ಶ್ರೀಮಠದ ಸರ್ವತೋಮುಖವಾದ ಅಭಿವೃದ್ಧಿಗೆ ಶ್ರಮಿಸಿ ಸಹಸ್ರಾರು ಭಕ್ತರ ಜ್ಞಾನಾಭಿವೃದ್ಧಿಗೆ ಕಾರಣರಾಗಿ ವಿರಾಜಮಾನರಾಗಿದ್ದರು. ಯತಿ ಪ್ರಣವಕಲ್ಪದಲ್ಲಿ ಶ್ರೀಮದಾಚಾರ್ಯರು ನಿರ್ದೇಶಿಸಿರುವಂತೆ ಸನ್ಯಾಸ ಧರ್ಮವನ್ನು ಪರಿಪಾಲಿಸಿದರು. "ವಿಷ್ಣೋಃ ಸರ್ವೋತ್ತಮತ್ವಂಚಸರ್ವದಾ ಪ್ರತಿಪಾದಯ" ಎಂಬ ಆದೇಶವನ್ನು ಪ್ರತಿನಿತ್ಯವೂ ಆಚರಣೆಯಲ್ಲಿ ತಂದರು. "ಸತ್ಯಪೂತಂವದೇದ್ವಾಕ್ಯಂ ಮನಃ ಪೂತಂ ಸಮಾಚರೇತ್" ಎಂಬುದನ್ನು ತಮ್ಮ ನಡವಳಿಕೆಯಲ್ಲಿ ತೋರಿಸಿದರು. ದೃಢ ನಿರ್ಧಾರವುಳ್ಳವರು. ಸ್ಪಷ್ಟವಾದಿಗಳು, ದಾಕ್ಷಿಣ್ಯಕ್ಕಾಗಿ ಅಭಿಪ್ರಾಯವನ್ನು ಬದಲಾಯಿಸುತ್ತಿರಲಿಲ್ಲ. ಮಿತ ಭಾಷಿಗಳು. ತರ್ಕ ಬದ್ಧವಾಗಿ ಸೂತ್ರಪ್ರಾಯವಾದಿಯಂತಿರುವ ನುಡಿಗಳು. ಅನಗತ್ಯ ಮಾತಾಡದೇ ಬೇರೆಯವರನ್ನು ನಿಂದಿಸದೆ ಕಾರ್ಯೋನ್ಮುಖರಾಗಿ ನಿರಂತರ ಜಪತಪಾನುಷ್ಠಾನ ನಿರತರಾಗಿ ಸಚ್ಛಾಸ್ತ್ರಪರಾಂಬರಿಸುತ್ತಿದ್ದರು. ಆಧುನಿಕ ಶ್ರೀಮನ್ಮಂತ್ರಾಲಯ ಕ್ಷೇತ್ರದ ಶಿಲ್ಪಿಗಳ ವಿಷಯವಾಗಿ ಅಲ್ಪಮತಿಗೆ ತಿಳಿದಂತೆ ಈ ಮುಂದಿನ ಶ್ಲೋಕದಿಂದ ಉಪಸಂಹರಿಸುತ್ತೇನೆ.

ವಿಷ್ಣೋರ್ಧ್ಯಾನಪರಾಯಣಾಃ ಶುಭತಮಾಃ ಸಂಪ್ರಾಪ್ತಸಂಪದ್ಗುಣಾಃ
ಪ್ರಜ್ಞಾಶೀಲದಯಾದಿಧರ್ಮನಿಪುಣಾ ನಿತ್ಯಾನ್ನದಾನೋತ್ಸುಕಾಃ ।
ಭಾಸ್ವತ್ಕೀರ್ತಿ ವಿಭೂಷಣಾಃ ಶುಭಗಣಾ ನಿತ್ಯಾರ್ಥಿಸಂತೋಷಣಾಃ
ಧೀರಾಃ ಸಾತ್ವಿಕವಂಶಪಾವನಕರಾಃ ಕುರ್ವಂತು ನೋ ಮಂಗಳಂ ॥

ಶ್ರೀ ಮತ್ಪರಮಹಂಸೇತ್ಯಾನೇಕ ಬಿರುದುಭೂಷಿತರೂ ಸದಾ ವಿಷ್ಣುಧ್ಯಾನಪರಾಯಣರೂ ಶುಭತಮರೂ ಸಂಪ್ರಾಪ್ತಸಂಪದ್ಗುಣರೂ ಪ್ರಜ್ಞಾಶೀಲ ದಯಾದಿ ನಿಪುಣರೂ ನಿತ್ಯಾನ್ನದಾನೋತ್ಸುಕರೂ ಭಾಸ್ವತ್ಕೀರ್ತಿ ವಿಭೂಷಣರೂ ಶುಭಗುಣರೂ ನಿತ್ಯಾರ್ಥಿ ಸಂತೋಷಣರೂ, ಸಾತ್ವಿಕವಂಶ ಪಾವನಕರರೂ ವೇದ ಬ್ರಾಹ್ಮಣ ರಕ್ಷಕರೂ ಆಗಿದ್ದ ಶ್ರೀ ರಾಘವೇಂದ್ರಸ್ವಾಮಿಗಳವರ ದಿಗ್ವಿಜಯ ವಿದ್ಯಾ ಸಿಂಹಾಸನಾಧೀಶ್ವರರಾಗಿದ್ದ ಶ್ರೀ ಮತ್ಸುಜಯೀಂದ್ರ ತೀರ್ಥ ಶ್ರೀ ಪಾದಂಗಳವರು ಪಾರ್ಥಿವ ಶರೀರದಿಂದ ಕಣ್ಮರೆಯಾಗಿ ಪರಂಧಾಮಕ್ಕೆ ಸುಖ ಪ್ರಯಾಣ ಮಾಡಿ ಭಕ್ತವೃಂದವನ್ನು ಶೋಕ ಸಾಗರದಲ್ಲಿ ಮುಳುಗಿಸಿದರು. ಯಶಸ್ಕಾಯದಿಂದ ನಮ್ಮೊಡನೆ ಇದ್ದು ಮಾರ್ಗದರ್ಶನ ಮಾಡಿ ಅನುಗ್ರಹಿಸುತ್ತಿದ್ದಾರೆ. ಸ್ಫೂರ್ತಿಪಡೆದು ಶಿಷ್ಟಾಚಾರವಂತರಾಗಿ ಬಾಳುವಿಕೆಯನ್ನು ನಡೆಸಿ ಧನ್ಯರಾಗೋಣ.

ಇಂತಹ ಮಾಧ್ವಯತಿಪುಂಗವರ ವಿಷಯವಾಗಿ ವಿಶೇಷ ಸಂಚಿಕೆಯನ್ನು ಪ್ರಕಟಿಸುವ ಸತ್ಕಾರ್ಯವನ್ನು ಕೈಗೊಂಡಿರುವ ಜ್ಞಾನಜ್ಯೋತಿ ಕಲಾಮಂದಿರದ ಕಾರ್ಯಕರ್ತರಿಗೆ ಪ್ರೋತ್ಸಾಹ ದೊರೆತು ನಾಡಿನ ಸಜ್ಜನರ ಮನ್ನಣೆಗೆ ಪಾತ್ರವಾಗಿ ಸಂಸ್ಥೆಯು ಅಭಿವೃದ್ಧಿ ಹೊಂದಲಿ ಎಂದು ಹಾರೈಸುತ್ತೇನೆ.

—

ಕಲಿಯುಗದ ಕಲ್ಪತರು ಮಂತ್ರಾಲಯ ಶ್ರೀರಾಘವೇಂದ್ರ ಪ್ರಭುಗಳು

(ಲೇಖಕರು : **ಶ್ರೀಪಾಂಡುರಂಗಾಚಾರ್ಯ ಶ್ರೀನಿವಾಸಾಚಾರ್ಯ ನಾಯಿಕರ್, ಬೆಂಗಳೂರು**)

ಪರಮಾತ್ಮನ ಅನಂತನಾಮಗಳಲ್ಲಿ "ತ್ರಿಯುಗಹೂತಿ" ಎಂಬುದು ಒಂದುನಾಮ. ಈ ನಾಮವು ಪರಮಾತ್ಮನ ಅವತಾರಗಳು ಮೂರು ಯುಗದಲ್ಲಿ ಮಾತ್ರ ಎಂದು ಸೂಚಿಸುತ್ತದೆ. ಕಲಿಯುಗದಲ್ಲಿ ಅವನ ಅವತಾರವಿಲ್ಲದಿದ್ದರೂ ತನ್ನ ಇಚ್ಛೆಯಿಂದಲೇ ಕಾರ್ಯ ನಿರ್ವಹಿಸಬಲ್ಲ, ಇಲ್ಲವೇ ತನ್ನ ಸಮರ್ಥ ಸೇವಕರನ್ನು ಕಳುಹಿಸಿ ಕಾರ್ಯ ನಿರ್ವಹಿಸಬಲ್ಲ ಈ "ತ್ರಿಯುಗಹೂತಿ"ಯ ನಿಯಮಕ್ಕನುಸಾರವಾಗಿ ಈ ಯುಗದಲ್ಲಿ ಶ್ರೀಹರಿಯ ಆಜ್ಞೆಯನ್ನು ಶಿರಸಾವಹಿಸಿ ಶ್ರೀವಾಯುದೇವರು ಪಾಜಕಕ್ಷೇತ್ರದಲ್ಲಿ 748 ವರ್ಷಗಳ ಹಿಂದೆ ಅವತರಿಸಿದರು. ಬಾಲ್ಯದಲ್ಲಿ ಇವರು ವಾಸುದೇವನೆಂಬ ಹೆಸರುಳ್ಳವರು. ನಂತರ ಸನ್ಯಾಸಾಶ್ರಮ ಸ್ವೀಕರಿಸಿ ಶ್ರೀಮದಾನಂದತೀರ್ಥರೆಂಬ ನಾಮಧೇಯ ಉಳ್ಳವರಾದರು. ಮೂರವತಾರಗಳ ಉಲ್ಲೇಖ ವೇದಗಳಲ್ಲಿ ಉಕ್ತವಾಗಿದೆ.* ಅಲ್ಲಿ "ಮಧ್ವ" ಎಂದು ಹೇಳಲ್ಪಟ್ಟಿರುವುದರಿಂದ ಇವರು "ಮಧ್ವಾಚಾರ್ಯ"ರೆಂದು ಪ್ರಸಿದ್ಧರಾದರು. "ಮಧ್ವಾಖ್ಯಂ ಮತ್ರಸಿದ್ಧಂ" ಎಂದು ಶ್ರೀಮದ್ಧರಿವಾಯುಸ್ತುತಿ.
ಮತ್ತು ಶ್ರೀಮಧ್ವಾಚಾರ್ಯರೇ ತಮ್ಮ ಭಾಷ್ಯಾದಿ ಗ್ರಂಥಗಳಲ್ಲಿ ಅಂತ್ಯದಲ್ಲಿ ಮೂರವತಾರದ ವಿಷಯವನ್ನು ಘೋಷಿಸಿದ್ದಾರೆ.

ವಾಯೋಃ ರಾಮ ವಚೋನಯಂ ಪ್ರಥಮಕಂ
ಪೃಕ್ಷೋದ್ವಿತೀಯಂ ವಪುಃ। ಮಧ್ವೋಯತ್ತು
ತೃತೀಯಮೇತ ದಮುನಾ ಗ್ರಂಥಃಕೃತಃಕೇಶವೇ ॥

ಇವರು ಸಾಕ್ಷಾತ್ ಭಗವತ್ಕಾರ್ಯ ಸಾಧನೆಮಾಡಿದರು. ಇವರೊಡನೆ ಮತ್ತು ಇವರು ಮಾನವ ದೃಷ್ಟಿಗೆ ಅಗೋಚರರಾದ ಮೇಲೆ ತಂಡೋಪತಂಡ ದೇವತೆಗಳು ವಾಯುದೇವರ ಸೇವಾದ್ವಾರಾ ಭಗವಂತನ ಸೇವೆ ಮಾಡಿದರು ಅರ್ಥಾತ್ ಪರಂಪರಾ ಭಗವತ್ಕಾರ್ಯ ಸಾಧನೆ ಮಾಡಿದರು. ಇಂದ್ರ, ಸೂರ್ಯ, ನಾರದ, ಭೃಗು, ಅಗ್ನಿ, ಪ್ರಹ್ಲಾದ ಧ್ರುವಾದಿಗಳೂ ಇನ್ನಿತರ ದೇವತೆಗಳೂ ಭಿನ್ನ ಭಿನ್ನ ರೂಪದಿಂದ ಅವತರಿಸಿ ಬಂದು ಭಾರತೀರಮಣ ಮುಖ್ಯಪ್ರಾಣ ದ್ವಾರಾ ಶ್ರೀಹರಿಯ ಸೇವೆ ಮಾಡಿದರು.

ಇವರುಗಳಲ್ಲಿ ಲೋಕಖ್ಯಾತಿವೆತ್ತ ಮಂತ್ರಾಲಯ ಪ್ರಭುಗಳು ಪ್ರಹ್ಲಾದಾಂಶರೆಂದು ಜ್ಞಾನಿಗಳ ಮತ. ಈ ವಿಷಯದಲ್ಲಿ ಇವರ ಭಕ್ತಾದಿಗಳಲ್ಲಿ ಅಪಾರ ನಂಬಿಕೆ ಇದೆ. ಇದಕ್ಕೆ ಪೂರಕವಾಗಿ ಕೆಲವು ಲೇಖನಗಳಲ್ಲಿ, ಮತ್ತು ಗ್ರಂಥಗಳಲ್ಲಿ ಸ್ಮೃತಿಪ್ರಮಾಣಗಳನ್ನು ಉದಾಹರಿಸಿರುವುದು ಕಂಡುಬರುವುದು. ಇದು ಒಂದು ಪ್ರಕಾರ. ಇನ್ನೊಂದು ರೀತಿ ವಿಚಾರ ಮಾಡುವುದು. ಪ್ರಮಾಣ ಲಕ್ಷಣಾದಿ ಗ್ರಂಥಗಳಲ್ಲಿ ನಾಲ್ಕು ತರಹದ ಜ್ಞಾನವನ್ನು ಹೇಳಿದ್ದಾರೆ. ಈಶ್ವರಜ್ಞಾನ, ಲಕ್ಷ್ಮೀಜ್ಞಾನ, ಯೋಗಿಜ್ಞಾನ ಮತ್ತು ಅಯೋಗಿಜ್ಞಾನ. ಇದರಲ್ಲಿ ಅಯೋಗಿಜ್ಞಾನವು ಅಯಥಾರ್ಥ. ಯೋಗಿ ಜ್ಞಾನದಲ್ಲಿ ಇಂಥ ವಿಷಯಗಳಲ್ಲಿ ಸಾಕಷ್ಟು ಯಥಾರ್ಥಾಂಶವಿದೆ. ಅವರ ಸಮಕಾಲೀನರಾದ ಯೋಗಿ-ಯತಿವರ್ಯರು ಇವರು ಪ್ರಹ್ಲಾದಾಂಶರೆಂದು ತಮ್ಮ ಯೋಗಪ್ರಭಾವದಿಂದ ಲಬ್ಧವಾದ ಜ್ಞಾನದಿಂದ ಗುರುತಿಸಿದರು. ಸಾಮಾನ್ಯವಾಗಿ ತಮ್ಮ ಸ್ವರೂಪವನ್ನು ತಾವೇ ಹೇಳಿಕೊಳ್ಳಬಾರದೆಂಬ ನಿಯಮವಿದ್ದರೂ (ವಾಯುದೇವರ ಘೋಷಣೆ ಹರಿಯಾಜ್ಞೆಯಿಂದ, ಪ್ರಾಸಂಗಿಕ) ಪರರು ಗುರ್ತಿಸಬಾರದು ಅಥವಾ ಅವರು ಯಾರಿಗೂ ಹೇಳಬಾರದು ಎಂಬ ನಿಯಮವಿಲ್ಲ ಹೀಗೆ "ಯೋಗಿಜ್ಞಾನ" ಪ್ರಮಾಣದಿಂದ ಅನೇಕ ದೇವಾಂಶರ ಅಂಶಾದಿ ವಿಷಯಗಳು ತಿಳಿದಿವೆ ಮತ್ತು ಇವು

* "ತೃತೀಯಮಸ್ಯವೃಷಭಸ್ಯದೋಹಸೇ ದಶಪ್ರಮತಿಂ ಜನಯಂತ ಯೋಷಣಃ" । (ಬಳಿತ್ಥಾ ಸೂಕ್ತ)

ಗಳನ್ನು ನಂಬಿದರೆ ಭಕ್ತಿ ಆದರಗಳು ವೃದ್ಧಿಯಾಗುತ್ತವೆ ಯಾವ ಹಾನಿಯೂ ಇಲ್ಲ. ಆದರೆ ಯಥಾರ್ಥವಾಗಿ ವಿಷಯ ತಿಳಿಯಬೇಕಷ್ಟೇ. ಈ ರೀತಿಯಾಗಿ ಅವರ ಕಾಲದಲ್ಲಿದ್ದ ಜ್ಞಾನಿಗಳು ಶ್ರೀರಾಯರನ್ನು ಗುರುತಿಸಿದ್ದಾರೆ ಆ ಪ್ರಕಾರ ಈಗಲೂ ಇವರು ಮಾನ್ಯರಾಗಿದ್ದಾರೆ. ಸ್ಮೃತಿಪ್ರಮಾಣದಲ್ಲಿ ಹೇಳಿದ ವ್ಯಕ್ತಿ, ಈ ದೇಶ, ಈ ಕಾಲದಲ್ಲಿ ಇವರೇ ಎಂದು ಹೇಳಿದಂತಾಯಿತು. ಅಷ್ಟೇಕೆ ಅವರು ಪ್ರಹ್ಲಾದಾಂಶರು ಎಂಬುವದಕ್ಕೆ ಅವರಲ್ಲಿ ಬರತಕ್ಕ ಭಕ್ತಾದಿಗಳೇ ಸಾಕ್ಷಿ. ಸ್ವದೇಶದ ಪರದೇಶದ ಎಲ್ಲ ಕೋಮಿನವರು ಇವರ ಭಕ್ತವರ್ಗದಲ್ಲಿದ್ದಾರೆ. ಇದೂ ಒಂದು ರಾಜರ ಲಕ್ಷಣ. ರಾಜರ ದೃಷ್ಟಿಯಲ್ಲಿ ಎಲ್ಲರೂ ರಕ್ಷಣಾರ್ಹರು. ಯಾರೂ ತ್ಯಾಜ್ಯರಲ್ಲ. ಈಗ ಇವರು ಯತಿಗಳು-ಜ್ಞಾನಿಗಳು. ಸ್ವಭಾವ ಸಂಸ್ಕಾರ ಗಳಲ್ಲಿ ಔದಾರ್ಯವಿದೆ ಸಮತಾದೃಷ್ಟಿ ಇದೆ. ಎಂಥಾ ಸಮತೆ ಎಂದರೆ "ವಿದ್ಯಾ ವಿನಯಸಂಪನ್ನೇ ಬ್ರಾಹ್ಮಣೇಗವಿಹಸ್ತಿನಿ। ಶುನಿಚೈವಶ್ವಪಾಕೇಚ ಪಂಡಿತಾ ಸಮದರ್ಶಿನಃ" ।ಗೀತಾ। ಎಂಬ ಶ್ಲೋಕಕ್ಕೆ ಶ್ರೀಮದಾಚಾರ್ಯರ ಭಾಷ್ಯದಲ್ಲಿ ಮತ್ತು ಶ್ರೀರಾಯರ ಗೀತಾ ವಿವೃತ್ತಿಯಲ್ಲಿ ಎಂಥ ಸಮತೆ ವಿವರಿಸಿ ನಾಡಿದ್ದಾರೋ ಹಾಗೆ.

ಎರಡನೆಯದು ರಾಜರಲ್ಲಿ ಧನಶೇಖರವಿದ್ದು ರಿಕ್ತಹಸ್ತದಿಂದ ಹೇಗೆ ಕಳಿಸುವುದಿಲ್ಲವೋ, ಹಾಗೆಯೇ ಶ್ರೀರಾಘವೇಂದ್ರ ಗುರುಗಳು ಅವರಲ್ಲಿದ್ದ ಪುಣ್ಯವನ್ನು ಸರ್ವರ ಆಪನ್ನಿವಾರಕ ಮತ್ತು ಭಕ್ತರ ಇಷ್ಟಪ್ರಾಪ್ತಿಗಳಿಗಾಗಿ ಸೇವಿಸುವವರಿಗೆಲ್ಲ, ಬೇಡಬಂದವರಿಗೆಲ್ಲ ಧಾರಾಳವಾಗಿ ಕೊಡುತ್ತಾರೆ (ಯೋಗ್ಯತೆ ಮೀರದಂತೆ), ಪ್ರಹ್ಲಾದರಾಜರಾದಾಗ ಶ್ರೀನರಸಿಂಹದೇವರ ಅನುಗ್ರಹದಿಂದೊದಗಿದ ಸರ್ವತೋಮುಖ ಸಮೃದ್ಧಿಯಿಂದ (೧೧೦೦೦) ಹನ್ನೊಂದು ಸಹಸ್ರವರ್ಷ ರಾಜ್ಯವಾಳಿದರು. ಆಗಿನಿಂದಲೂ ಮತ್ತು ಈಗಲೂ ಇಷ್ಟು ಪುಣ್ಯಸಂಚಯ ಹೇಗೆ ಬಂತು ಎಂದರೆ, ಅವರ ಸ್ತೋತ್ರದಲ್ಲಿ ಬರುವಂತೆ. "ಹರಿಪಾದಕಂಜನಿಸೇವಣಾಲಬ್ಧ ಸಮಸ್ತ ಸಂಪದಃ", ಶ್ರೀಹರಿಯ ಪಾದಕಮಲಗಳ ಆರಾಧನೆಯಿಂದ ಸಂಪಾದಿಸಿದ ಸಮಸ್ತ ಪುಣ್ಯರೂಪವಾದ ಸಂಪತ್ ಇವರಲ್ಲಿದೆ ಆದ್ದರಿಂದ ಬೇಡಬಂದವರೆಲ್ಲರಿಗೂ ಲಭ್ಯ.

ಮೂರನೆಯದಾಗಿ ಪುಣ್ಯವು ಇವರಲ್ಲಿ ದೃಷ್ಟರೂಪದಲ್ಲಿಯೂ ಅದೃಷ್ಟರೂಪದಲ್ಲಿಯೂ ಇದೆ. ಮಂತ್ರಾಲಯದಲ್ಲಿ ನಡೆಯುವ ಅನ್ನದಾನ, ವಿದ್ಯಾದಾನ, ಪರಿಸರ, ಕಟ್ಟಡಗಳು, ವಿದ್ವಾಂಸರಸಭೆ ಸಂಭಾವನೆ ಇತ್ಯಾದಿಗಳೇ ಸಾಕ್ಷಿ. ಈ ವಿಷಯದ ಆಡಳಿತವನ್ನು ಶ್ರೀರಾಯರು ಅಲ್ಲಿಯ ಆಡಳಿತವರ್ಗದವರಿಂದ ನಡೆಯಿಸುತ್ತಾರೆ. ಆದರೆ ಪುಣ್ಯದ ವಿತರಣೆ ಪ್ರಭುಗಳು ಸಾಕ್ಷಾತ್ತಾಗಿ ತಾವೇ ಮಾಡುತ್ತಾರೆ. ಇಷ್ಟು ಮಹತ್ತರವಾದ ನಿರಂತರ ದಾನ, ಹರಿಸನ್ನಿಧಾನ, ಪ್ರಹ್ಲಾದಾಂಶವನ್ನೇ ಸೂಚಿಸುತ್ತವೆ.

ನಾಲ್ಕನೆಯದಾಗಿ ಪ್ರಜೆಗಳಲ್ಲಿ ರಾಜರದು ಒಂದು ನೈಸರ್ಗಿಕ ಅನುಕಂಪದೃಷ್ಟಿ. ಅದರಂತೆಯೇ, ಇಲ್ಲಿ ಶ್ರೀರಾಯರದು, ಎಲ್ಲ ಭಕ್ತ ಸಾಮಾನ್ಯರಲ್ಲಿಯೂ ಒಂದು ಸಹಜ ಅನುಕಂಪ. ಕೆಲವರು ಅವರಲ್ಲಿಗೆ ಹೋಗಿ ಸೇವೆ ಮಾಡಿ ಕೇಳಿಕೊಳ್ಳುತ್ತಾರೆ. ಇನ್ನು ಕೆಲವರು ಸೇವೆಮಾಡಿ ಕೇಳದೇ ಸುಮ್ಮನಿರುತ್ತಾರೆ. ಕಷ್ಟಗಳನ್ನು ಸಹಿಸುತ್ತಾರೆ. ಗೌರವ ತೋರಿಸಿ ಪೂಜೆಮಾಡಿ ಸುಮ್ಮನಾಗುತ್ತಾರೆ. ಆದರೆ ಗುರುಸಾರ್ವಭೌಮರು ಸಹಿಸಿ ಸುಮ್ಮನಿರುವರೇ ! ಭಕ್ತರ ಆಪತ್ತು ವಿಪತ್ತುಗಳನ್ನು ನೋಡಿಸಹಿಸರು ಬಂದಂಥ ಆಪತ್ತು, ವಿಪತ್ತು, ಸಂಕಟ, ರೋಗ, ದಾರಿದ್ರ್ಯ, ಅಪಾಯ, ಭಯ, ಭ್ರಾಂತಿ ಇತ್ಯಾದಿಗಳನ್ನು ಪರಿಹರಿಸಿ ವಿಶೇಷಾನುಗ್ರಹಮಾಡುತ್ತಾರೆ". ಸೇವಾನುರೂಪ ಉದಯೋನ ಪರಾವರತ್ವಂ" (ಭಾಗವತ) ಅವರ ಸೇವೆಗನುಗುಣವಾದ ಫಲ. ವೈಷಮ್ಯವಿಲ್ಲ.

ಐದನೆಯದಾಗಿ, ಭಾಗವತದಲ್ಲಿ, ಶ್ರೀನರಸಿಂಹದೇವರ ಅವತಾರವಾಗಿ ಕಾರ್ಯ ಸಮಾಪ್ತಿಯಾದೊಡನೆ, ದೇವರು ಪ್ರಹ್ಲಾದರಾಜರಿಗೆ ಮೋಕ್ಷಕೊಡುವುದಾಗಿ ತಿಳಿಸಿದರು. ಪ್ರಹ್ಲಾದರಾಜರು ತಾವು ಒಬ್ಬರೇ ಮೋಕ್ಷವನ್ನು ಪಡೆಯಲು ಒಪ್ಪಲಿಲ್ಲ. ಅವರು ಶ್ರೀನರಸಿಂಹದೇವರಿಗೆ ವಿನಯದಿಂದ ಬಿನ್ನಹ ಮಾಡಿದ ಭಾಗವತ ಶ್ಲೋಕ ಈ ಕೆಳಗಿನಂತಿದೆ.

"ಏವಂ ಜನಂ ನಿಪತಿತಂ ಪ್ರಭವಾಹಿಕೂಪೆ ।
ಕಾಮಾಭಿಕಾಮಮನುಯಃ ಪ್ರಪತನ್ ಪ್ರಸಂಗಾತ್॥
ಕೃತ್ವಾತ್ಮಸಾತ್ ಸುರರ್ಷಿಣಾ ಭಗವನ್‌ಗೃಹೀತಃ ।
ಸೋಽಹಂ ಕಥಂನು ವಿಸೃಜೇತವ ಭೃತ್ಯಸೇವಾಮ್" ॥ (ಸಪ್ತಮ ಸ್ಕಂಧ)

ನಮ್ಮಂಥ ಎಲ್ಲ ಕೃಪಣರನ್ನು ಮುಕ್ತಿಗೆ ಕರೆದುಕೊಂಡು ಹೋಗತಕ್ಕ ದೃಢ ಸಂಕಲ್ಪ ಮಾಡಿದ್ದನ್ನು ನೆಡೆಸಲು ಮಂತ್ರಾಲಯದಲ್ಲಿ ಬೃಂದಾವನದಲ್ಲಿ ಅವರ ವಾಸ. ಅವರಲ್ಲಿ ಬರತಕ್ಕ ಸರ್ವಭಕ್ತರಿಗೂ ಲೌಕಿಕ ಸಮಸ್ಯೆಗಳಿಗೆ ಮಾತ್ರ ಪರಿಹಾರ ನೀಡದೆ, ಪರಲೋಕದ ಸಾಧನೆಗೂ ಮನಸ್ಸು ಹರಿಯುವಂತೆ ಮಾಡುತ್ತಾರೆ. ಆಗ ನುಡಿದದ್ದು ಆಗಲೂ ನಡೆಸಿದರು ಮತ್ತೂ ಈಗಲೂ ನಡೆಸುತ್ತಿದ್ದಾರೆ. "ದೇವ ಸ್ವಭಾವೋ " ಎಂದು ಅವರ ಸ್ತೋತ್ರದಲ್ಲಿದೆ.

ಇಲ್ಲಿ ಮೇಲೆ ಹೇಳಿದ್ದರಲ್ಲಿ ಅನೇಕಾಂಶಗಳ ಅನುಭವಗಳನ್ನು ಗುರುರಾಜರ ಭಕ್ತರು ಪಡೆದಿದ್ದಾರೆ ಮತ್ತು ಪಡೆಯುತ್ತಲೇ ಇದ್ದಾರೆ.

ಅದಿರಲಿ, ಗುರುಸಾರ್ವಭೌಮರ ವ್ಯಕ್ತಿ ಪರಿಚಯ ಮಾಡಿಕೊಡತಕ್ಕ ಆಕರ ಗ್ರಂಥಗಳೆಂದರೆ ಈ ಕೆಳಗಿನ ನಾಲ್ಕು:-

ಸಂಖ್ಯೆ	ಗ್ರಂಥ	ಗ್ರಂಥಕರ್ತರು	ಭಾಷೆ
1	ಶ್ರೀರಾಘವೇಂದ್ರವಿಜಯ	ಶ್ರೀನಾರಾಯಣಾಚಾರ್ಯರು	ಸಂಸ್ಕೃತ
2	ಶ್ರೀರಾಘವೇಂದ್ರ ಸ್ತೋತ್ರ	ಶ್ರೀ ಅಪ್ಪಣ್ಣಾಚಾರ್ಯರು	ಸಂಸ್ಕೃತ
3	ಗುರುಗುಣಸ್ತವನ	ಶ್ರೀವಾದೀಂದ್ರತೀರ್ಥರು	ಸಂಸ್ಕೃತ
4	ಶ್ರೀರಾಘವೇಂದ್ರ ತಂತ್ರ	ಶ್ರೀ ಕೃಷ್ಣಾವಧೂತರು	ಸಂಸ್ಕೃತ

ಇವುಗಳಲ್ಲಿ ಮೊದಲನೆಯದು ಹತ್ತು ಸರ್ಗದ ಕಾವ್ಯ. ಚರಿತ್ರೆ ರೂಪ. ಎರಡನೆಯದು ಸರ್ವತೋಮುಖ ಮಹಿಮೋಪೇತ. ವ್ಯಕ್ತಿ ಪರಿಚಯ ಈ ಸ್ತೋತ್ರವು ಗುರುಸಾರ್ವಭೌಮರಿಂದ (ಬೃಂದಾವನದಿಂದ ಹೊರಟ ಧ್ವನಿಯಿಂದ) ಅನುಮೋದಿತವಾಗಿದೆ. ಇದು ಕೇವಲ ಸ್ತೋತ್ರವಲ್ಲ, ಮಂತ್ರ. ಮೂರನೆಯ ಕೃತಿ ಶ್ರೀರಾಘವೇಂದ್ರರ ಗ್ರಂಥರಚನಾ ಕುಶಲತೆಯ ಪ್ರಶಂಸನಾಪೂರ್ವಕ ಅವರ ವ್ಯಕ್ತಿತ್ವವನ್ನು ತಿಳಿಸುವ ಶ್ರೀವಾದೀಂದ್ರತೀರ್ಥವಿರಚಿತ ಸ್ತವನ. ನಾಲ್ಕನೆಯದು ಶ್ರೀಕೃಷ್ಣಾವಧೂತರಿಂದ ರಚಿತವಾದ ಹದಿನೈದು ಅಧ್ಯಾಯೋಪೇತ ಸ್ತೋತ್ರ ಸಮೂಹ ವಿವಿಧ ಛಂದೋ ವೃತ್ತಗಳಿಂದ ರಚಿತವಾಗಿದೆ. ಬೇಸರವಿಲ್ಲದೇ ರಾಗವಾಗಿ ಹೇಳಬಹುದು. ಶ್ರೀರಾಯರ ಮಹಿಮೆಯನ್ನು ಪೂಜಾಕ್ರಮವನ್ನು ಹೇಳಿದ್ದಾರೆ. ಇದರಲ್ಲಿ ಶ್ರೀರಾಘವೇಂದ್ರ ಸಹಸ್ರನಾಮವಿದೆ. ಇವೆಲ್ಲವೂ ಸಂಸ್ಕೃತ ಗ್ರಂಥಗಳೇ.

ಶ್ರೀರಾಘವೇಂದ್ರರು ಜನಸಾಮಾನ್ಯರ ದೃಷ್ಟಿಗೆ ಈಗ ಕಾಣುವುದಿಲ್ಲ. ಮೇಲಿನ ನಾಲ್ಕು ಸುಲೋಚನಗಳು ಶ್ರೀಗುರುರಾಜರ ಪರೋಕ್ಷ ಮತ್ತು ಅಪರೋಕ್ಷ ಜ್ಞಾನ ಪಡೆಯಲು ಭಕ್ತರಿಗೆ ಸಹಾಯಕವಾಗುವುವು.

ಇವುಗಳಲ್ಲಿ ಎರಡನೆಯ ಸುಲೋಚನ ಶ್ರೀ ಅಪ್ಪಣ್ಣಾಚಾರ್ಯರು ಮಾಡಿಕೊಟ್ಟದ್ದು. ಅವರು ಗುರುಗಳ ಸಾಕ್ಷಾತ್ ಅತಿಶಯ ಪ್ರೀತಿಯ ಶಿಷ್ಯರು. ಅವರಲ್ಲಿ ಪಾಠ ಓದಿದವರು. ಪ್ರವಚನ ಕೇಳಿದವರು. ವಾದಸಭೆಗಳಲ್ಲಿ ಗುರುರಾಜರ ವಾಗ್ವೈಖರಿ ಮೆಚ್ಚಿದವರು. ವಿಜಯಭೇರಿಯನ್ನು ಹೊಡೆಸಿದ ಗುರುಗಳನ್ನು ನೋಡಿ ಮನಸಾರೆ ತಣಿದವರು, ಅವರ ಯೋಗಪ್ರಭಾವ ಮಹಿಮಾತಿಶಯಗಳನ್ನು ನೋಡಿ ಆಶ್ಚರ್ಯಪಟ್ಟವರು, ಅವರ ಗ್ರಂಥರಚನಾ ಕೌಶಲವನ್ನು ನೋಡಿ ತಲೆದೂಗಿದವರು ಮತ್ತು ಅವರನ್ನು ನೋಡಿ ಮಹಿಮಾತಿಶಯಗಳನ್ನು ಮನನ ಮಾಡಿಕೊಂಡು ರಚಿಸಿದ ಸ್ತೋತ್ರ. ಕೊನೆಯ ಶ್ಲೋಕದ ಕೊನೆಯ ಪದಗಳು "ಸಾಕ್ಷೀ ಹಯಾಸ್ಯೋತ್ರಹಿ" ಎಂಬುದು ಗುರುಗಳ ಧ್ವನಿಯಿಂದ ಶ್ಲೋಕ ಪೂರ್ತಿಗೊಂಡಿತು. ಈ ಸ್ತೋತ್ರದಲ್ಲಿ ವ್ಯರ್ಥ ವಿಶೇಷಣಗಳಾಗಲಿ, ಅತಿಶಯೋಕ್ತಿಗಳಾಗಲಿ ಅಥವಾ ಉತ್ಪ್ರೇಕ್ಷೆಯಾಗಲಿ ಇಲ್ಲ ಎಂಬುದಕ್ಕೂ ಮತ್ತು ಭಕ್ತರ ಅಪೇಕ್ಷಿತ ನಿವೃತ್ತಿದ್ವಾರಾ ಅಭೀಷ್ಟಗಳನ್ನು ಈಡೇರಿಸಿಕೊಡುವ ಭರವಸೆ ರೂಪವಾಗಿಯೂ, ಹಲವು ಮಾತೇನು, ತಾವು ಮಾಡುವೆವೆಂಬುದಕ್ಕೆ ಹಯಗ್ರೀವ ದೇವರೇ ಸಾಕ್ಷಿ ಎಂದರು. ಶ್ರೀ ಅಪ್ಪಣ್ಣಾಚಾರ್ಯರು ಕೊಟ್ಟ ಈ ಸ್ತೋತ್ರರೂಪ ಸುಲೋಚನದಿಂದ, ಶ್ರೀರಾಘವೇಂದ್ರ ಗುರುಗಳು ನಮ್ಮ ಮನಸ್ಸಿನ ತೆರೆಯ ಮೇಲೆ ಭವ್ಯ ಸ್ತವನದ ಮೂಲಕ ಹೇಗೆ ಕಾಣುವರೆಂದು ಸ್ವಲ್ಪ ನೋಡುವಾ, ಅವರ ಪರಿಚಯವಾಗುವುದು.

ಗುರುಗಳ ಸ್ವರೂಪ :

1	ಭವ್ಯಸ್ವರೂಪೋ	ಮಂಗಳಕರವಾದ ನಯನಾನಂದ ಉಂಟುಮಾಡತಕ್ಕ ಸ್ವರೂಪ ಉಳ್ಳವರು.
2	ನಿರಸ್ತದೋಷೋ ನಿರವದ್ಯವೇಷಃ	ರಾಗಾದಿ ದೋಷಗಳಿಂದ ರಹಿತರು ನಿರ್ದುಷ್ಟವಾದ-ಪವಿತ್ರವಾದ ಆಕಾರವುಳ್ಳವರು.
3	**ದಿವಿಜದ್ರುಮೋಽಯಂ**	**ಕಲಿಯುಗದ ಕಲ್ಪತರು**
4	ವಿದ್ವತ್ ಪರಿಜ್ಞೇಯ ಮಹಾವಿಶೇಷಃ ।	ಮಹಾಜ್ಞಾನಿಗಳಿಂದಲೇ ತಿಳಿದುಕೊಳ್ಳಲು ಯೋಗ್ಯವಾದ ಮಹಿಮಾತಿಶಯರು.
5	ಪ್ರತ್ಯರ್ಥಿಮೂಕತ್ವನಿದಾನಭಾಷಃ ।	ಪ್ರತಿವಾದಿಗಳನ್ನು ತನ್ನ ವಾಕ್ಯಗಳಿಂದ ನಿರುತ್ತರ ಮಾಡತಕ್ಕವರು.

ಭಗವತ್ಸಾಕ್ಷಾತ್ಕಾರ ಮತ್ತು ಪುಣ್ಯಸಂಚಯ :-

1	ಅಪರೋಕ್ಷೀಕೃತ ಶ್ರೀಶಃ ಸಮುಪೇಕ್ಷಿತ ಭಾವಜಃ।	ಶ್ರೀಪತಿಯನ್ನು ಅಪರೋಕ್ಷೀಕರಿಸಿಕೊಂಡವರು ಮತ್ತು ಕಾಮಾದಿಗಳನ್ನು ಜಯಿಸಿದವರು.
2	ಹರಿಪಾದಕಂಜನಿಸೇವಣಾ ಲ್ಲಬ್ಧ ಸಮಸ್ತಸಂಪದಃ।	ಶ್ರೀಹರಿಯನ್ನು ಆರಾಧನಾ/ಉಪಾಸನಾ ಮಾಡುವುದರಿಂದ ಭಗವತ್ಪ್ರಸಾದ ರೂಪವಾದ ಸಕಲ ಸಂಪತ್ತನ್ನು ಹೊಂದಿದವರು. (ಪುಣ್ಯರೂಪದಲ್ಲಿ)

ಗುರುಗಳ ಅನುಗ್ರಹ ಅನಿಷ್ಟನಿವೃತ್ತಿ ರೂಪ :-

1	ಅಘಾದ್ರಿ ಸಂಭೇದನ ದೃಷ್ಟಿ ವಜ್ರಃ ।	ಪಾಪವೆಂಬ ಪರ್ವತವನ್ನು ಧ್ವಂಸಮಾಡಲಿಕ್ಕೆ ತಮ್ಮ ದೃಷ್ಟಿಯೇ ವಜ್ರಾಯುಧವಾಗಿ ಉಳ್ಳ
2	ಭವದುಃಖತೂಲಸಂಘಾಗ್ನಿಚರ್ಯಃ	ಸಾಂಸಾರಿಕ ದುಃಖವೆಂಬ ಹತ್ತಿಯರಾಶಿಗೆ ಅಗ್ನಿಸದೃಶರು
3	ಸಮಸ್ತ ದುಷ್ಟಗ್ರಹನಿಗ್ರಹೇಶಃ ।	ಪಿಶಾಚಾದಿ ದುಷ್ಟಗ್ರಹಗಳನ್ನು ನಿಗ್ರಹ ಮಾಡುವದರಲ್ಲಿ ಮಹಾ ಸಮರ್ಥರು.
4	ದುರತ್ಯಯೋಪಪ್ಲವ ಸಿಂಧುಸೇತುಃ ।	ದಾಟಲಸಾಧ್ಯವಾದ ಸಂಸಾರಸಿಂಧುವಿಗೆ ಸೇತುವೆಯಂತೆ.
5	ಮುಸ್ತಾಪತ್ರಯನಾಶನೋ ।	ತ್ರಿವಿಧ ತಾಪತ್ರಯಗಳನ್ನು ದೂರ ಮಾಡುವರು.
6	ಗ್ರಹಮಹಾಪಾಪಾಪಹಃ ।	ಶಾಕಿನೀ ಮೊದಲಾದ ಗ್ರಹಗಳಿಂದಲೂ, ಬ್ರಹ್ಮ ಇತ್ಯಾದಿ ಪಾಪಗಳಿಂದಲೂ ರಕ್ಷಣೆ ಮಾಡತಕ್ಕವರು.
7	ಅಜ್ಞಾನ ವಿಸ್ಮೃತಿ ಭ್ರಾಂತಿ ಸಂಶಯಾಪಸ್ಮೃತಿ ಕ್ಷಯಾಃ ತಂದ್ರಾ ಕಂಪವಚಃಕೌಂಠ್ಯ ಮುಖಾಯೇಯೇಂದ್ರಿಯೋದ್ಭವಾ। **ದೋಷಾಸ್ತೇನಾಶಮಾಯಾಂತಿ**	ಅಜ್ಞಾನ, ವಿಸ್ಮರಣ, ಅನ್ಯಥಾಜ್ಞಾನ, ಸಂಶಯ, ಮಲರೋಗ ಕ್ಷಯ, ನಡುಗುವುದು, ತೊದಲು ಇತ್ಯಾದಿ ದೋಷಗಳು ನಾಶವಾಗುತ್ತವೆ.
8	ಕಾಯಾಜಾನ್ ದೋಷಾನ್, ಆತ್ಮಾತ್ಮೀಯ ಸಮುದ್ಭವಾನ್ ಮೋಷಾನ್ ಹಂತಾ ।	ಕಾಯಿಕ ದೋಷಗಳು ಮತ್ತು ಮಾನಸಿಕ ದೋಷಗಳು ವ್ಯಾಧಿ ಮತ್ತು ಆಧಿ ದೂರಮಾಡತಕ್ಕವರು.
9	ಶರೀರಸ್ಥ ಸಮಸ್ತದೋಷಾನ್ ಹತ್ವಾ ನೋ ಅವತು ।	ಶರೀರದಲ್ಲಿ ತಕ್ಕ ಸಮಸ್ತ ದೋಷಗಳನ್ನು ಹೋಗಲಾಡಿಸಿ ರಕ್ಷಿಸಲಿ.
10	ಭಯಾಪಹಃ	ಭಯವನ್ನು ದೂರಮಾಡುವರು.
11	ಇತ್ಯಾದಿ	ಆದಿಪದದಿಂದ ಅಶೇಷ ಅನಿಷ್ಟಗಳನ್ನು ಇಲ್ಲಿ ಹೇಳಲಾಗಿಲ್ಲ. ಇಲ್ಲಿ ಹೇಳಿದ್ದಲ್ಲದೇ ಇನ್ನೆಂಥ ಅನಿಷ್ಟಗಳನ್ನು ನಿವಾರಣೆ ಮಾಡಲು ಗುರುಗಳು ಸಮರ್ಥರಿದ್ದಾರೆ.

ಗುರುಗಳ ಅನುಗ್ರಹ ಇಷ್ಟಪ್ರಾಪ್ತಿ ರೂಪ :-

1	ಶ್ರೀರಾಘವೇಂದ್ರೋಸಕಲ ಪ್ರದಾತಾ ಸ್ವಪಾದಕಂಜದ್ವಯ ಭಕ್ತಿಮದ್ಭ್ಯಃ ।	ಶ್ರೀರಾಘವೇಂದ್ರರು ತಮ್ಮ ಪಾದಕಮಲ ಆರಾಧಕ ಭಕ್ತರಿಗೆ ಎಲ್ಲ ಅಭೀಷ್ಟಗಳನ್ನು ಕೊಡುತ್ತಾರೆ.
2	ದೇವಸ್ವಭಾವೋದಿವಿಜದ್ರುಮೋಽಯಂ ಇಷ್ಟಪ್ರದೋಮೇಸತತಂಸ ಭೂಯಾತ್	ದೇವಾಂಶರಾದ ಕಲ್ಪವೃಕ್ಷಕ್ಕೆ ಸದೃಶರಾದ ಶ್ರೀರಾಘವೇಂದ್ರರು ಯಾವಾಗಲೂ ಇಚ್ಛಿತ ಫಲಗಳನ್ನು ಕೊಡುವವರಾಗಿ ಆಗಲಿ.
3	ಸಂತಾನ ಸಂಪತ್ ಪರಿಶುದ್ಧಭಕ್ತಿ ವಿಜ್ಞಾನ ವಾಗ್ದೇಹ ಸುಪಾಟವಾದೀನ್ ದತ್ವಾ ।	ಸಂತಾನ, ಸಂಪತ್, ಪರಿಶುದ್ಧ ಭಕ್ತಿ, ವಿಜ್ಞಾನ, ವಾಕ್, ದೇಹ ಸುಪಾಟವ ಇತ್ಯಾದಿಗಳನ್ನು ಕೊಡಲಿ.
4	ಭಿಷಿಸುತಾವಂಧ್ಯಾಸುಪುತ್ರಪ್ರದಃ ।	ಸಂತಾನದ ಆಶೆಯಿಲ್ಲದ, ವೈದ್ಯರಿಂದಲೂ ಬಂಜೆಯೆಂದು ಕರೆಸಿಕೊಂಡವಳಿಗೆ ಸುಪುತ್ರನನ್ನು ಕೊಟ್ಟವರು
5	ವ್ಯಂಗಸ್ವಂಗ ಸಮೃದ್ಧಿದಃ ।	ಅಂಗವಿಕಲರಿಗೆ ಪುಷ್ಟಿಯಾದ ಅಂಗಗಳನ್ನು ಕೊಟ್ಟವರು
6	ಸರ್ವತಂತ್ರ ಸ್ವತಂತ್ರೋಽಸೌ ಶ್ರೀಮಧ್ವಮತ ವರ್ಧನಃ ।	ಮಧ್ವಮತವನ್ನು ಅಭಿವೃದ್ಧಿಗೊಳಿಸುವುದರಲ್ಲಿ ಸರ್ವ ತಂತ್ರ ಸ್ವತಂತ್ರರು ।
7	ಓಂ ಶ್ರೀರಾಘವೇಂದ್ರಾಯನಮಃ । ಇತ್ಯಷ್ಟಾಕ್ಷರ ಮಂತ್ರತಃ ಜಪಿತಾತ್ । ಭಾವಿತಾಂ ನಿತ್ಯ ಇಷ್ಟಾರ್ಥಾಃಸ್ಯುರ್ನಸಂಶಯಃ।	ಓಂ ಶ್ರೀರಾಘವೇಂದ್ರಾಯನಮಃ ಎಂಬ ಅಷ್ಟಾಕ್ಷರ ಮಂತ್ರ ಜಪ ಮಾಡೋಣದರಿಂದ ಸಕಲ ಇಷ್ಟಾರ್ಥಗಳೂ ನೆರವೇರುತ್ತವೆ. ।
8	ಸರ್ವಾನಪಿಪುಮರ್ಥಾಂಶ್ಚದದಾತು ।	ಗುರುರಾಜರು ಸಕಲ ಪುರುಷಾರ್ಥಗಳನ್ನು ಕೊಡಲಿ.
9	ಇಹಾಮುತ್ರಾಪ್ತ ಸರ್ವೇಷ್ಟೋ ಮೋದತೆನಾತ್ರಸಂಶಯಃ ।	ಇಹಲೋಕದಲ್ಲಿ ಪರಲೋಕದಲ್ಲಿ ಸಕಲ ಇಷ್ಟವೂ ಆನಂದವೂ ಲಭಿಸುತ್ತದೆ.
10	ಸರ್ವಯಾತ್ರಾಫಲಾವಾಪ್ತ್ಯೈಯಥಾ ಶಕ್ತಿ ಪ್ರದಕ್ಷಿಣಮ್ ।	ಸರ್ವಯಾತ್ರಾಫಲ ಲಭಿಸಲೆಂದು ಗುರುಗಳ ಬೃಂದಾವನ ಪ್ರದಕ್ಷಿಣೆ ಮಾಡುತ್ತೇವೆ.
11	ತವ ಬೃಂದಾವನ ಜಲಂ ಶಿರಸಾಧಾರಯಾಮಿ ಅದ್ಯ ಸರ್ವತೀರ್ಥ ಫಲಾಪ್ತಯೇ ।	ಬೃಂದಾವನ ಅಭಿಷೇಕ ಮಾಡಿದ ಜಲದಿಂದ (ಪಾದೋದಕದಿಂದ), ತೀರ್ಥಯಾತ್ರಾಫಲ ಬರಲೆಂದು ಶಿರಸ್ಸಿನಲ್ಲಿ ಧಾರಣ ಮಾಡುತ್ತೇನೆ.
12	ಸರ್ವಾಭೀಷ್ಟಾರ್ಥಸಿದ್ಧ್ಯರ್ಥಂ ನಮಸ್ಕಾರಂ ಕರೋಮ್ಯಹಂ ।	ಸರ್ವ ಅಭೀಷ್ಟಸಿದ್ಧಿಯಾಗಲೆಂದು ನಮಸ್ಕಾರ ಮಾಡುತ್ತೇನೆ.
13	ತವಸಂಕೀರ್ತನಂ ವೇದಶಾಸ್ತ್ರಾರ್ಥಜ್ಞಾನ ಸಿದ್ಧಯೇ ।	ವೇದ ಶಾಸ್ತ್ರಗಳ ಜ್ಞಾನ ಸಿದ್ಧಿಗಾಗಿ ಗುರುರಾಜರ ಸಂಕೀರ್ತನೆಯನ್ನು ಮಾಡುತ್ತೇನೆ.
14	ಶಾಪಾನುಗ್ರಹಶಕ್ತೋಽನ್ಯೋರಾಘವೇಂದ್ರಾನ್ನ ವಿದ್ಯತೆ ।	ಶಾಪಾನುಗ್ರಹ ಶಕ್ತರಲ್ಲಿ ಶ್ರೀರಾಘವೇಂದ್ರರನ್ನು ಬಿಟ್ಟು ಇನ್ನು ಯಾರೂ ಇಲ್ಲ.
15	ಅಪೇಕ್ಷಿತ ಪ್ರದಾತಾನ್ಯೋ ರಾಘವೇಂದ್ರಾನ್ನ ವಿದ್ಯತೆ ।	ಅಪೇಕ್ಷಿತವನ್ನು ಕೊಡುವುದರಲ್ಲಿ ಶ್ರೀರಾಘವೇಂದ್ರರನ್ನು ಬಿಟ್ಟರೆ ಇನ್ನಾರೂ ಇಲ್ಲ ।
16	ಸಂಸಾರೇ ಅಕ್ಷಯಸಾಗರೇ ಪ್ರಕೃತಿತೋ ಅಗಾಧೆ ಸದಾ ದುಸ್ತರೆ ।	ದಾಟಲಸಾಧ್ಯವಾದ ಈ ಘೋರ ಸಂಸಾರದಿಂದ ನಮ್ಮನ್ನು ಪಾರುಮಾಡಿರಿ.

ಗುರುರಾಜರ ಸ್ತೋತ್ರ ಮಹಿಮಾ :-

1	ರಾಘವೇಂದ್ರ ಗುರುಸ್ತೋತ್ರಂ ಯಃಪಠೇತ್ ಭಕ್ತಿ ಪೂರ್ವಕಂ । ತಸ್ಯಕುಷ್ಟಾದಿರೋಗಾಣಾಂ ನಿವೃತ್ತಿಸ್ತ್ವರಯೊಭವೇತ್ ।	ಶ್ರೀರಾಘವೇಂದ್ರ ಗುರುಸ್ತೋತ್ರವನ್ನು ಭಕ್ತಿಪೂರ್ವಕ ಪಠಿಸುವುದರಿಂದ ಕುಷ್ಟಾದಿರೋಗಗಳು ಶೀಘ್ರವಾಗಿ ನಾಶವಾಗುತ್ತವೆ.

2	ಅಂಧೋಽಪಿ ದಿವ್ಯದೃಷ್ಟಿಸ್ಸ್ಯಾತ್ ಏಡಮೂಕೋಽಪಿವಾಕ್ಪತಿಃ । ಪೂರ್ಣಾಯುಃ ಪೂರ್ಣಸಂಪತ್ತಿ ।	ಕುರುಡನಿಗೆ ಕಣ್ಣುಗಳು ಬರುವುವು. ಹುಟ್ಟುಮೂಕರು ಸಾಕಷ್ಟು ಮಾತನಾಡುತ್ತಾರೆ. ಪೂರ್ಣಾಯು ಮತ್ತು ಪೂರ್ಣ ಸಂಪತ್ತಿಯನ್ನು ಹೊಂದುತ್ತಾನೆ.
3	ಯಃಪಿಬೇಜ್ಜಲಮೇತನ ಸ್ತೋತ್ರೇಣೈವಾಭಿಮಂತ್ರಿತಂ। ತಸ್ಯಕುಕ್ಷಿಗತಾದೋಷಾಸರ್ವೇ ನಶ್ಯಂತಿ ತತ್ಕ್ಷಣಾತ್ ।	ಈ ಸ್ತೋತ್ರದಿಂದ ಜಲಾಭಿಮಂತ್ರಣ ಮಾಡಿ, ಪ್ರಾಶನ ಮಾಡಿದರೆ ಉದರಶೂಲೆ ಕಡಿಮೆಯಾಗುವುದು.
4	ಯದ್ವೃಂದಾವನಮಾಸಾದ್ಯ ಪಂಗುಃ ಖಂಜೋಽಪಿವಾಜನಃ । ಸ್ತೋತ್ರೇಣಾನೇನಯಃ ಕುರ್ಯಾತ್ ಪ್ರದಕ್ಷಿಣ ನಮಸ್ಕೃತಿಃ ।	ಯಾವ ಬೃಂದಾವನ ಸಮೀಪಕ್ಕೆ ಹೋಗಿ ಕುಂಟರು, ಸಾಮರ್ಥ್ಯವಿಲ್ಲದವರು ಈ ಸ್ತೋತ್ರವನ್ನು ಹೇಳಿದ ಮಾತ್ರದಿಂದ ನಡೆದುಕೊಂಡು ಹೋಗಲು ಸಮರ್ಥರಾದರು.
5	ಸೋಮಸೂರ್ಯೋಪರಾಗೇಚ ಪುಷ್ಯಾರ್ಕಾದಿಸಮಾಗಮೇ ।	ಸೂರ್ಯಚಂದ್ರ ಗ್ರಹಣ ಸಮಯದಲ್ಲಿ, ಭಾನುವಾರ ಪುಷ್ಯಾ ನಕ್ಷತ್ರ ಬಂದಾಗ ಈ ಸ್ತೋತ್ರವನ್ನು ಪಠಣ ಮಾಡೋಣದರಿಂದ, ಭೂತಪ್ರೇತ ಪಿಶಾಚ ಬಾಧೆಗಳು ದೂರವಾಗುತ್ತವೆ.
6	ಏತತ್ಸ್ತೋತ್ರಂಸಮುಚ್ಚಾರ್ಯ ಗುರೋರ್ವೃಂದಾವನಾಂತಿಕೇ ದೀಪ ಸಂಯೋಜನಾತ್ ಜ್ಞಾನಂ ಪುತ್ರ ಲಾಭೋಭವೇ ಧ್ರುವಂ ।	ಗುರುಗಳ ಬೃಂದಾವನ ಸನ್ನಿಧಿಯಲ್ಲಿ ಈ ಸ್ತೋತ್ರ ಪಠಣಮಾಡಿ ಘೃತದೀಪವನ್ನಿಡುವುದರಿಂದ ಜ್ಞಾನಲಾಭ ಸತ್ಪುತ್ರ ಲಾಭ ಆಗುತ್ತದೆ.
7	ಪರವಾದಿಜಯ ಸರ್ವಾಭೀಷ್ಟಸಿದ್ಧಿ	ಪರವಾದಿಗಳ ಜಯಲಭ್ಯವಾಗುತ್ತದೆ. ಸರ್ವಾಭೀಷ್ಟಸಿದ್ಧಿಯಾಗುತ್ತದೆ.
8	ರಾಜಚೋರಮಹಾವ್ಯಾಘ್ರ ಸರ್ಪನಕ್ರಾದಿಪೀಡನಂ ।	ರಾಜರ, ಚೋರರ, ಹುಲಿಯ, ಸರ್ಪಗಳ, ಮೊಸಳೆಗಳ ಪೀಡೆಯು ಆಗುವುದಿಲ್ಲ.
9	ಯೋಭಕ್ತ್ಯಾಗುರುರಾಘವೇಂದ್ರ ಚರಣದ್ವಂದ್ವಂ ಸ್ಮರನ್ ಯಃಪಠೇತ್ ಸ್ತೋತ್ರಂ ದಿವ್ಯಮಿದಂ ಸದಾನಹಿ ಭವೇತ್ ಸಾಕ್ಷೀಹಯಾಸ್ಯೋಽತ್ರಹಿ ।	ಯಾರು ಗುರುಸ್ತೋತ್ರವನ್ನು ಭಕ್ತಿಪೂರ್ವಕ ಪಠಿಸುತ್ತಾರೋ ಅವರಿಗೆ ದುಃಖಾದಿಗಳು ಆಗುವುದಿಲ್ಲ ಆದರೇ ಸುಖವೇ ಆಗುತ್ತದೆ. ಕೀರ್ತಿ, ದಿಗ್ವಿಜಿತಾ, ಅತುಲವಾದ ವಿಭೂತಿ ಆಗುತ್ತದೆ. ಆಗಿಯೇ ಆಗುತ್ತದೆ ಎಂದು ದೃಢೀಕರಣಕ್ಕೆ “ಹಯಗ್ರೀವ ದೇವರೇ ಸಾಕ್ಷಿ” ಎಂದು ಶ್ರೀರಾಯರು ಹೇಳಿದರು.
10	ಇತ್ಯಾದಿ	ಅನೇಕ ಮಂಗಳಕರವಾದ ಫಲಗಳು ಲಭಿಸುವುವು ಎಂಬ ಮಾತಿನಲ್ಲಿ ಸಂದೇಹವಿಲ್ಲ.

ಹೀಗೆ ಅವರ ಮಹಿಮೆ, ಅವರ ಸ್ತೋತ್ರ ಮಹಿಮೆ ಮತ್ತು ಫಲ ಶ್ರೀರಾಘವೇಂದ್ರ ಗುರುಗಳು ಭಕ್ತರ ಅನಿಷ್ಟನಿವೃತ್ತಿ ಮತ್ತು ಅಭೀಷ್ಟಗಳನ್ನು ನೆರವೇರಿಸುವುದರಲ್ಲಿ ಶ್ರೀಹಯಗ್ರೀವರನ್ನು ಸಾಕ್ಷಿಯಾಗಿಟ್ಟು ಕೊಂಡಿದ್ದಾರೆ.

ಅವರು ಸಶರೀರ ಬೃಂದಾವನಸ್ಥರಾಗಿ ಮುನ್ನೂರ ಹದಿನೇಳು ವರ್ಷಗಳು ಕಳೆದವು. ಅವರಲ್ಲಿ ಬರತಕ್ಕ ಭಕ್ತರಸಂಖ್ಯೆ ದಿನೇ ದಿನೇ ಅಭಿವೃದ್ಧಿಯಾಗುತ್ತಲೇ ಇದೆ. ಮಹಿಮೆಗಳು ಈಗಲೂ ಲೆಕ್ಕವಿಲ್ಲದಷ್ಟು ನಡೆಯುತ್ತಲೇ ಇದೆ. ಮಂತ್ರಾಲಯದಿಂದ ಶ್ರೀರಾಯರ ಮಹಿಮೆಯ ಒಂದು ಗೆಜೆಟ್ಟನ್ನೇ ಹೊರಡಿಸಬೇಕು. ಸಂಸಾರದಲ್ಲಿ ನೊಂದವರಿಗೆ ಬೆಂದವರಿಗೆ, ಸಮಸ್ಯೆ ಅಪರಿಹಾರ್ಯವಾದವರಿಗೆ ಆಧ್ಯಾತ್ಮ ಮಾರ್ಗದಲ್ಲಿ ಅರಸತಕ್ಕವರಿಗೆ ಇನ್ನೂ ಅನೇಕರಿಗೆ ಇವರದೊಂದು ದೊಡ್ಡ ಆಶ್ರಯ. ಪ್ರತಿಯೊಬ್ಬರ ಸಮಸ್ಯೆಗೂ ಒಂದು ಯೋಗ್ಯ ಪರಿಹಾರ ಒದಗಿಸುತ್ತಾರೆ. ಆದ್ದರಿಂದಲೇ ಶ್ರೀ ಅಪ್ಪಣಾಚಾರ್ಯರು ಗುರುಗಳನ್ನು **“ದಿವಿಜದ್ರುಮೋಽಯಂ ಕಲ್ಪವೃಕ್ಷ”** ಇವರು ಎಂದು ಕೊಂಡಾಡಿದ್ದಾರೆ.

ಶ್ರೀ ಜಗನ್ನಾಥದಾಸರು "ಸುರಪನಾಲಯದಂತೆ ಮಂತ್ರಾಲಯ" ಎಂದು ಹಾಡಿದ್ದಾರೆ. ಯಾಕೆಂದರೆ ಗುರುಗಳು ಕಾಮಧೇನು ಮತ್ತು ಕಲ್ಪವೃಕ್ಷದಂತಿದ್ದಾರೆ.

ಶ್ರೀರಾಯರು ಏಳುನೂರುವರ್ಷ ಬೃಂದಾವನದಲ್ಲಿದ್ದು ಭಕ್ತರಿಗೆ ಅನುಗ್ರಹಮಾಡುವದಾಗಿ ಹೇಳಿದ್ದರು. ಈ ಈ ಸಮಯದಲ್ಲಿ ಮುನ್ನೂರರ ಮೇಲೆ ಕಳೆದುಹೋಯಿತು. ಈ ಏಳುನೂರು ಕಳೆದ ಮೇಲೆ ನಮ್ಮಗಳ ಗತಿ ಏನೆಂದು ಈಗಾಗಲೇ ಭಕ್ತರ ಕಾತರ. ಎರಡುನೂರು ವರ್ಷಗಳ ಹಿಂದೆಯೇ ಶ್ರೀಪ್ರಾಣೇಶದಾಸರು ಕಲಿಕಾಲ ಬಲದಿಂದ ಸಂತೃಪ್ತರಾದ ಜನರನ್ನು ಉದ್ಧಾರಮಾಡಲು ಪುನಃ ಬನ್ನಿರಿ ಎಂದು ಪ್ರಾರ್ಥಿಸಿದ್ದಾರೆ ಶ್ರೀಗುರುಸಾರ್ವಭೌಮರನ್ನು

"ಜನಮನ ತಣಿಸಲು । **ಇನ್ನೊಮ್ಮೆ ಬಾ ಗುರುರಾಯ॥** ಇದೇ ಪ್ರಾರ್ಥನೆಯನ್ನು ಪುನಃ ಮಾಡುತ್ತ ಈ ಪುಟ್ಟ ಲೇಖನವನ್ನು ಮುಗಿಸುವೆ.

ಇತಿ ಶ್ರೀಮಧ್ವೇಶಾರ್ಪಣಮಸ್ತು

ಶ್ರೀ ಶ್ರೀಸುಜಯೀಂದ್ರತೀರ್ಥರ ಸಂದರ್ಶನಗಳ ಸವಿನೆನಪು

ಲೇಖಕರು : **ಡಾ|| ಜಿ. ವರದರಾಜರಾವ್**, ಮೈಸೂರು

ಸುಯಮೀಂದ್ರ ಕರಾಬ್ಜೋತ್ಥಂ
ಸುವಿದ್ಯಾಬೋಧಕಂ ಸದಾ
ಸುಮೂಲಾರಾಮ ಪೂಜಾಢ್ಯಂ
ಸುಜಯೀಂದ್ರಗುರುಂಭಜೇ ||

ಶ್ರೀಮಾಧ್ವ ಪರಂಪರೆಯ ಕೆಲವು ಮಠಗಳ ಹೆಸರು ಆಯಾ ಸಂಸ್ಥಾನದ ಪರಂಪರೆಯಲ್ಲಿ ಪಟ್ಟಕ್ಕೆ ಬಂದ ಕೆಲವು ಯತಿವರೇಣ್ಯರ ಅಭಿಧಾನದಿಂದಲೇ ಸುಪ್ರಸಿದ್ಧಿಯಾಗಿರುವುದು ಒಂದು ವಿಶೇಷವೆನ್ನಬಹುದು. ಶ್ರೀಪದ್ಮನಾಭತೀರ್ಥರ ಪರಂಪರೆಯಲ್ಲಿ ಮುಳಬಾಗಿಲು ಸಂಸ್ಥಾನದ ಪೀಠವನ್ನು ಅಲಂಕರಿಸಿದ ಶ್ರೀ ಶ್ರೀಪಾದರಾಜರ ಅನಂತರ ಆ ಮಠವನ್ನು ಶ್ರೀಪಾದರಾಜರ ಮಠವೆಂದು ಕರೆಯುವುದು ರೂಢಿಯಾಗಿದೆ. ಶ್ರೀರಾಜೇಂದ್ರತೀರ್ಥರ ಪರಂಪರೆಯಲ್ಲಿ ಪಟ್ಟಕ್ಕೆ ಬಂದ ಶ್ರೀವ್ಯಾಸರಾಜರ ಅನಂತರ ಆ ಸಂಸ್ಥಾನವನ್ನು ಶ್ರೀವ್ಯಾಸರಾಜಮಠವೆಂದು ಕರೆಯುವುದು ಸಂಪ್ರದಾಯವಾಗಿ ಪರಿಣಮಿಸಿದೆ. ಹೀಗೆಯೇ ಶ್ರೀವಿಭುಧೇಂದ್ರತೀರ್ಥರ ಪರಂಪರೆಯಲ್ಲಿ ಆ ಸಾಮ್ರಾಜ್ಯವನ್ನು ಆಳಿದ ಶ್ರೀರಾಘವೇಂದ್ರತೀರ್ಥರಿಂದ ಈಚೆಗೆ ಆ ಮಠವನ್ನು ರಾಯರಮಠವೆಂದು ಕರೆಯುವುದನ್ನು ಎಲ್ಲರೂ ಬಲ್ಲರು. ಇನ್ನು ಉಡುಪಿಯ ಅಷ್ಟಮಠಗಳ ವಿಚಾರವನ್ನು ಪರಿಶೀಲಿಸಿದ್ದೇ ಆದರೆ, ಆಯಾ ಸಂಸ್ಥಾನವನ್ನು ಒಂದೊಂದು ಊರಿನ ಹೆಸರಿನಿಂದ ಕರೆಯುವುದೇ ರೂಢಿಯಲ್ಲಿದೆ ಆದರೂ ಶ್ರೀವಿಷ್ಣುತೀರ್ಥರು ಅಲಂಕರಿಸಿದ ಸೋದೆ ಮಠವು ಆ ಸಂಸ್ಥಾನದ ಪರಂಪರೆಯಲ್ಲಿ ಇಪ್ಪತ್ತನೆಯವರಾಗಿ ಪೀಠವನ್ನು ಅಲಂಕರಿಸಿದ ಶ್ರೀವಾದಿರಾಜತೀರ್ಥರ ಅನಂತರ ಅದನ್ನು ಸೋದೆ ಶ್ರೀವಾದಿರಾಜರಮಠವೆಂದು ಕರೆಯುವುದು ಬೆಳಕಿಗೆ ಬಂದಿದೆ. ಈ ವೈಶಿಷ್ಟ್ಯವನ್ನು ವಿಶ್ಲೇಷಿಸುವುದು ಬಹು ತೊಡಕೆನ್ನಿಸಿದರೂ. ಆಯಾ ಮಠದ ಕೀರ್ತಿ ಪ್ರತಿಷ್ಠೆಗಳು ಯಾವ ಯತಿಗಳ ಕಾಲದಲ್ಲಿ ಧರ್ಮಕರ್ಮ ಸಂಯೋಗ ಬಲದಿಂದ ಅತ್ಯಧಿಕವಾಗಿ ಇತ್ಯೋಪತಿಶಯವಾಗಿ ಲೋಕಮಾನ್ಯವಾಗಿ ವಿರಾಜಿಸಿತೋ ಆ ಕಾರಣದಿಂದ ಈ ವಿಶಿಷ್ಟ ಸಂಪ್ರದಾಯವು ತನಗೆ ತಾನಾಗಿಯೇ ಪ್ರವರ್ಧಿಸಿತು ಎನ್ನಬಹುದು. ಅಂಥ ಅಸದೃಶ ಮಾಹಾತ್ಮ್ಯೆಯನ್ನು ಮೆರೆದ ಆ ಯತಿಪುಂಗವರು ದೈವಾಂಶಪುರುಷರೆಂಬ ಭಾವನೆ ಬೆಳೆದು ಬಂದಿರುವುದನ್ನು ಕಾಣಬಹುದು.

ಶ್ರೀರಾಘವೇಂದ್ರ ತೀರ್ಥರ ಮಹಿಮಾ ವಿಶೇಷಗಳನ್ನು ಮನಗಂಡರೆ ಆ ಮಠಕ್ಕೆ ರಾಯರಮಠವೆಂದು ಹೆಸರು ಬರಲು ಕಾರಣವೇನೆಂದು ಸ್ವವಿದಿತವಾಗುತ್ತದೆ. ಶ್ರೀರಾಘವೇಂದ್ರತೀರ್ಥರು ಸಂನ್ಯಾಸವನ್ನು ಕೈಕೊಂಡ ಕ್ಷಣದಿಂದ ಅವರ ಮಹಿಮಾ ಪರಂಪರೆ ಹೇಗೆ ಬೆಳಕಿಗೆ ಬಂದಿತೆನ್ನುವುದನ್ನು ಅವರ ಜೀವನಚರಿತ್ರೆಯನ್ನು ಓದುವುದರಿಂದ ತಿಳಿಯಬಹುದು. ಶ್ರೀಸುಧೀಂದ್ರತೀರ್ಥರ ಕೃಪಾಕಟಾಕ್ಷವೊಂದು ಕಡೆ ಅವರನ್ನು ದೀಕ್ಷಾಬದ್ಧರಾಗಲು ಕೈನೀಡಿ ಕರೆದರೆ, ಶ್ರೀಶಾರದಾ ದೇವಿಯ ದಿವ್ಯದರ್ಶನವೊಂದು ಕಡೆ ಅವರ ಚಂಚಲ ಚಿತ್ತಕ್ಕೆ ಅಚಲ ಶಕ್ತಿಯನ್ನು ನೀಡಿತು. ಇದೊಂದು ಅಪೂರ್ವ ಸುಯೋಗವಲ್ಲದೆ ಅಮೃತಘಳಿಗೆಯೂ ಹೌದು ! ಅವರು ಸಂಸ್ಥಾನಾಧಿಪತ್ಯವನ್ನು ಸ್ವೀಕರಿಸಿದುದೇ ತಡ. ಒಂದೆಡೆ ವಿದ್ವತ್ವಲಯದಲ್ಲಿ ಅವರ ಹೆಸರು ವಿರಾಜಿಸಲಾರಂಭಿಸಿ ಪರಿಮಳಾಚಾರ್ಯರೆನ್ನಿಸಿದರು. ಇನ್ನೊಂದು ಕಡೆ ಅವರ ಅಂತರಂಗದಲ್ಲಿ ಹುದುಗಿದ್ದ ಅಪಾರವಾದ ಅಂತಃಕರಣ ಜೀವನದಲ್ಲಿ ನೊಂದು ಬೆಂದವರಿಗಾಗಿ ಮುಡಿಪಾಯಿತು. ಅವರ ಈ ಲೋಕಕಲ್ಯಾಣಕಾರ್ಯ ತಮ್ಮ ಪೂರ್ವಾಶ್ರಮದ ಪತ್ನಿಯ ಪಿಶಾಚತ್ವವನ್ನು ಪರಿಹಾರಮಾಡುವುದರಿಂದಲೇ ಪ್ರಾರಂಭವಾಯಿತು ಎನ್ನಬಹುದು. ತಮಿಳುನಾಡಿನಲ್ಲಿದ್ದ ಶ್ರೀಗುರುರಾಜರು ಪುಣ್ಯಕ್ಷೇತ್ರಗಳನ್ನೆಲ್ಲ ಸಂಚರಿಸಿ, ಆದವಾನಿಗೆ ಬಂದು ಅಲ್ಲಿಯ ನವಾಬನಿಂದ ಮಂಚಾಲೆಯೆನ್ನಿಸಿದ್ದ ನೆಲೆಯನ್ನು ಬಳುವಳಿಯನ್ನಾಗಿ ಪಡೆದದ್ದೇ ಒಂದು ಸೋಜಿಗವಲ್ಲವೆ? ನವಾಬನ ಪಾಣಿ

ಗೊದೆರೋ ಅದೊಂದು ಅಭುಕ್ತ ಮೂಲೆ. ರಾಯರಾದರೋ ಅದು ಶ್ರೀಪ್ರಹ್ಲಾದರಾಜರು ಯಾಗಮಾಡಿದ ಸ್ಥಳನೆಂದು ತಮ್ಮ ದಿವ್ಯದರ್ಶನದಿಂದ ಬಲ್ಲವರಾಗಿದ್ದರು ಅವರ ಪಾದಧೂಳಿಯಿಂದ ಅನತಿ ಕಾಲದಲ್ಲಿಯೇ ಅದು ಪವಿತ್ರ ಸ್ಥಾನವಾಯಿತು. ಶ್ರೀರಾಯರ ಕೀರ್ತಿ ಹೆಚ್ಚಿದಂತೆಲ್ಲ ಅದು ತೀರ್ಥಕ್ಷೇತ್ರವೆನ್ನಿಸಿ ಮಂತ್ರಾಲಯವೆನ್ನಿಸಿತು. ಶ್ರೀಗುರುರಾಜರ ಹೃದಯವೈಶಾಲ್ಯವನ್ನು ತಿಳಿಯಬಯಸುವವರು, ಅವರು ಈ ಮೊದಲು ಆ ಕ್ಷೇತ್ರ ದೇವತೆಯಾಗಿದ್ದ ಮಂಚಾಲಮ್ಮನಿಗೂ ಅಲ್ಲಿಯೇ ಇರಲು ಹೇಗೆ ಎಡೆ ಕಲ್ಪಿಸಿಕೊಟ್ಟರೆಂಬುದರ ಮೂಲಕ ಕಾಣಬಹುದು. ಇಂದಿಗೂ ಯಾತ್ರಿಗಳು ಮಂಚಾಲಮ್ಮನನ್ನು ಸಂದರ್ಶನಮಾಡದೆ ಬರುವಂತಿಲ್ಲ. ಶ್ರೀಗಳವರು ವೃಂದಾವನ ಪ್ರವೇಶಮಾಡಿದ ಮೇಲಂತೂ ಅವರ ಮಹಿಮೆಗಳಿಗೆ ಇತಿಮಿತಿಗಳಿಲ್ಲ. ಜಾತಿ, ಮತ, ಕುಲ, ಗೋತ್ರಗಳೆಂಬ ಭೇದವಿಲ್ಲದೆ ಅವರು ತಮ್ಮ ಭಕ್ತರಿಗೆ ಹೇಗೆ ಅನುಗ್ರಹಿಸುತ್ತಿರುವರೆಂಬುದನ್ನು ನೆನೆದರೆ ಆಶ್ಚರ್ಯವಾಗುತ್ತದೆ. ಮಂತ್ರಾಲಯದಲ್ಲಿ ಅವರ ಮಹಿಮೆ ಕಂಡುಬರುವುದು ಹಾಗಿರಲಿ, ಅವರ ಮೃತ್ತಿಕಾ ವೃಂದಾವನಗಳಿರುವ ನಾಡಿನ ಹಲವಾರು ಕಡೆಗಳಲ್ಲಿಯೂ ಅವರ ಲೋಕಕಾರುಣ್ಯ ಹೇಗೆ ಪ್ರಕಟವಾಗಿದೆಯೆಂಬುದನ್ನು ಕೇಳಬಹುದು. ಈ ಎಲ್ಲವನ್ನು ಪರಿಗಣಿಸಿದರೆ, ಶ್ರೀರಾಘವೇಂದ್ರತೀರ್ಥರಿಂದ ಆ ಸಂಸ್ಥಾನದ ಹೊಣೆ ಹೇಗೆ ಸಾವಿರಮಡಿಯಾಯಿತೆನ್ನುವುದನ್ನು ಅರ್ಥಮಾಡಿಕೊಳ್ಳಬಹುದು. ಅವರ ಪ್ರಭಾವದಿಂದಲೋ ಎಂಬಂತೆ ಅವರ ತರುವಾಯ ಪೀಠಕ್ಕೆ ಬಂದ ಪ್ರತಿಯೊಬ್ಬ ಯತಿಗಳ ಕಾಲದಲ್ಲಿಯೂ ಈ ವೈಭವವು ಮುಂದುವರಿಯುತ್ತ ಬಂದಿದೆ.

ಶ್ರೀ ಶ್ರೀ ಸುಯಮೀಂದ್ರತೀರ್ಥರ ಕರಸಂಜಾತರಾದ ಶ್ರೀ ಶ್ರೀ ಸುಜಯೀಂದ್ರತೀರ್ಥರೂ ಶ್ರೀರಾಯರ ಮಠದ ಮೇಲುಪಂಕ್ತಿಯನ್ನು ಚಾಚೂ ತಪ್ಪದೆ ನಡೆಸಿಕೊಂಡು ಬಂದಿರುವುದನ್ನು ಮಂತ್ರಾಲಯದಲ್ಲಿ ಆಗಿರುವ ಅಭಿವೃದ್ಧಿ ಕಾರ್ಯಗಳ ಮೂಲಕ ಯಾರಾದರೂ ತಿಳಿಯಬಹುದು. ಶ್ರೀ ಶ್ರೀಸುಜಯೀಂದ್ರ ತೀರ್ಥರನ್ನು ನಾನು ಮೊದಲನೆಯ ಬಾರಿಗೆ ಕಂಡ ಸಂದರ್ಭವಂತೂ ಇಂದಿಗೂ ಹಚ್ಚ ಹಸುರಾಗಿದೆ. ಆಗ ತಾನೇ ಸಂನ್ಯಾಸವನ್ನು ಸ್ವೀಕರಿಸಿದ್ದ ಶ್ರೀ ಶ್ರೀ ಸುಜಯೀಂದ್ರತೀರ್ಥರು ನಂಜನಗೂಡಿನ ರಾಯರ ಮಠದಲ್ಲಿ ಬಿಡಾರ ಮಾಡಿದ್ದರು. ನಂಜನಗೂಡಿಗೆ ಯಾತ್ರಿಕನಾಗಿ ಹೋಗಿದ್ದ ನಾನು, ಮಾಧ್ವ ಮಹಾಪೀಠಗಳಲ್ಲಿ ಒಂದಾದ ರಾಯರ ಮಠದ ಉತ್ತರಾಧಿಕಾರಿಯನ್ನು ನೋಡಬೇಕೆಂಬ ಆಸಕ್ತಿಯಿಂದ ಯತಿಗಳ ಸಂದರ್ಶನವನ್ನು ಮಾಡಿದೆ. ಪ್ರಕಾಂಡ ಪಂಡಿತರಾದ ಶ್ರೀ ಶ್ರೀಸುಜಯೀಂದ್ರತೀರ್ಥರು ತಮ್ಮನ್ನು ಕಾಣಲು ಬಂದವರನ್ನೆಲ್ಲ ಅತ್ಯಂತ ಹಾರ್ದಿಕವಾಗಿ ಕಂಡು ಮಾತನಾಡಿದರು. ನನ್ನ ಪೂರ್ವೋತ್ತರಗಳನ್ನೆಲ್ಲ ಸಾವಧಾನವಾಗಿ ಕೇಳಿ ತಿಳಿದರು. ಆಗ ಪ್ರಾಸಂಗಿಕವಾಗಿ ಮಾತನಾಡುವಲ್ಲಿ ಹರಿದಾಸಸಾಹಿತ್ಯದ ಅಧ್ಯಯನದ ಪ್ರಸ್ತಾಪ ಬಂದಿತು. ಆಗ ಶ್ರೀಗಳವರು ಹರಿದಾಸ ಸಾಹಿತ್ಯವನ್ನು ಕೇವಲ ಸಾಹಿತ್ಯ ಅಥವಾ ಸಂಗೀತದ ದೃಷ್ಟಿಯಿಂದ ಅಧ್ಯಯನ ಮಾಡಿದರೆ ಸಾಲದೆಂದೂ, ಅಪರೋಕ್ಷ ಜ್ಞಾನಿಗಳು ರಚಿಸಿದ ಒಂದೊಂದು ಕೃತಿಯಲ್ಲಿಯೂ ಸಿದ್ಧಾಂತದ ಅಂಶ ಹುದುಗಿರುವುದರಿಂದ ಅವುಗಳನ್ನು ಆಧ್ಯಾತ್ಮಿಕ ದೃಷ್ಟಿಯಿಂದಲೂ ಮನನ ಮಾಡಬೇಕೆಂದು ಅಭಿಪ್ರಾಯಪಟ್ಟರು. ಅಂದು ಅವರು ಆಡಿದ ಆ ಮಾತಿನ ಸತ್ಯಾಂಶವೇನೆಂಬುದು ಈಗ ತಕ್ಕಮಟ್ಟಿಗೆ ನನ್ನ ಮನಸ್ಸಿಗೆ ಅರಿವಾಗುತ್ತಿದೆ. ಅಲ್ಲಿ ಸೇರಿದ್ದ ಇತರರು ಮಧ್ವ ಸಿದ್ಧಾಂತಕ್ಕೆ ಸಂಬಂಧಿಸಿದಂತೆ ಅನೇಕ ಪ್ರಶ್ನೆಗಳನ್ನು ಕೇಳುತ್ತಿದ್ದರು. ಶ್ರೀಗಳವರು ಯಾರ ಮಾತನ್ನು ಅಲಕ್ಷಿಸದೆ ತುಂಬ ಸಾವಧಾನದಿಂದ ಉತ್ತರ ಕೊಡುತ್ತಿದ್ದರು. ಅವರ ಸರಳತೆ ಮತ್ತು ಸಹೃದಯತ್ವಗಳು ನನ್ನ ಮನಸ್ಸನ್ನು ತುಂಬ ಆಕರ್ಷಿಸಿದುವು.

ಶ್ರೀಸುಜಯೀಂದ್ರ ತೀರ್ಥರು 10-1-1967ರಲ್ಲಿ ಸಂಸ್ಥಾನಾಧಿಪತ್ಯವನ್ನು ವಹಿಸಿಕೊಂಡ ಅನತಿ ಕಾಲದಲ್ಲಿಯೇ ಅವರನ್ನು ಮತ್ತೊಮ್ಮೆ ಸಂದರ್ಶಿಸುವ ಸುಯೋಗ ಒದಗಿಬಂದಿತು. 1968ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯವರು ಹರಿದಾಸ ಸಾಹಿತ್ಯದ ಪ್ರಕಟನೆಯನ್ನು ಕೈಕೊಂಡ ಸಂದರ್ಭದಲ್ಲಿ ಹರಿದಾಸರ ಹಸ್ತಪ್ರತಿಗಳ ಸಂಗ್ರಹಕ್ಕಾಗಿ ಬೇರೆ ಬೇರೆ ಊರುಗಳಿಗೆ ಹೋಗಬೇಕಾಗಿ ಬಂದಿತು. ಆಗ ನನ್ನ ಮಿತ್ರರಾದ ಡಾ|| ಕೆ. ರಾಘವೇಂದ್ರರಾಯರೂ ನಾನೂ ರಾಯಚೂರು ಜಿಲ್ಲೆಯಲ್ಲಿ ಪ್ರವಾಸ ಮಾಡುವಲ್ಲಿ ಮಂತ್ರಾಲಯಕ್ಕೂ ಹೋದೆವು. ಶ್ರೀಪಾದಂಗಳವರು ನಮ್ಮ ಕಾರ್ಯದ ವಿವರಗಳನ್ನೆಲ್ಲ ಕೇಳಿ, ತಮ್ಮ ಸಂತೋಷವನ್ನು ವ್ಯಕ್ತಪಡಿಸಿ ನಮ್ಮ ಕೆಲಸ ಸಫಲವಾಗುವಂತೆ ಆಶೀರ್ವದಿಸಿದರು. ಅನಂತರ

ಶ್ರೀಪಾದರ ಪೂರ್ವಾಶ್ರಮದ ಪುತ್ರರಾದ ವಿದ್ವಾನ್ ಶ್ರೀ ಗಿರಿಯಾಚಾರ್ಯರು ನಮಗೆ ಮಂತ್ರಾಲಯದ ಅಭಿವೃದ್ಧಿಗಾಗಿ ಶ್ರೀಗಳವರು ನಿಯೋಜಿಸಿರುವ ಕಾರ್ಯಗಳ ಪರಿಚಯ ಮಾಡಿಕೊಟ್ಟರು. ನಾವು ಮಠದ ಗ್ರಂಥ ಭಂಡಾರದಲ್ಲಿ ಹರಿದಾಸ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಏನಾದರೂ ಸಾಮಗ್ರಿ ದೊರೆಯಬಹುದೇ ಎಂದು ವಿಚಾರಿಸಿದೆವು. ಸಮಗ್ರ ಗ್ರಂಥಭಂಡಾರವನ್ನೇ ಪುನರ್ವ್ಯವಸ್ಥೆ ಮಾಡಲು ಉದ್ದೇಶಿಸಿದುದರಿಂದ, ಅವರು ತಮ್ಮ ಬಳಿಯಲ್ಲಿದ್ದ ಪುಸ್ತಕದ ಪಟ್ಟಿಯನ್ನು ಅವಲೋಕಿಸಲು ಅವಕಾಶ ಕಲ್ಪಿಸಿಕೊಟ್ಟರು. ಅವುಗಳಲ್ಲಿ ಶ್ರೀಜಗನ್ನಾಥ ದಾಸರ ಹರಿಕಥಾಮೃತಸಾರದ ಓಲೆಯ ಪ್ರತಿಯೊಂದಿರುವುದು ತಿಳಿದುಬಂದಿತು. ಉಳಿದವುಗಳಲ್ಲಿ ಬಹುಪಾಲು ಮುದ್ರಿತ ಪುಸ್ತಕಗಳು ಅವುಗಳಲ್ಲಿಯೂ ಕೆಲವು ಹಳೆಯ ಪ್ರತಿಗಳಿರಬಹುದೆಂದು ತೋರುತ್ತದೆ. ಶಿಥಿಲವಾದ ಅನೇಕ ಗ್ರಂಥಗಳನ್ನು ಪುನರುಜ್ಜೀವನ ಕಾರ್ಯವನ್ನು ಕೈಕೊಂಡಿದ್ದನ್ನು ಕಂಡು ಆನಂದವಾಯಿತು. ಅಮೂಲ್ಯ ಗ್ರಂಥಗಳು ಬಹುಕಾಲ ಬಾಳಲೆಂಬ ಉದ್ದೇಶದಿಂದ ಅವುಗಳನ್ನು ಓಲೆಯ ಜರಿಯ ಮೇಲೆ ವಿಶೇಷ ರೀತಿಯ ಶಾಯಿಯಿಂದ ನಕಲು ಮಾಡಿಸುತ್ತಿದ್ದುದನ್ನು ಕಂಡು ಸ್ವಲ್ಪ ಸೋಜಿಗವೇ ಆಯಿತು. ಉತ್ತರ ಭಾರತದಲ್ಲಿ ಬಹಳ ಹಿಂದಿನ ಕಾಲದಲ್ಲಿಯೇ ಭೂರ್ಜಪತ್ರದ ಮೇಲೆ ಬರೆಯುವ ಪದ್ಧತಿ ಇತ್ತು. ದಕ್ಷಿಣಭಾರತದಲ್ಲಿಯಾದರೋ ಓಲೆಯ ಗರಿಯ ಮೇಲೆ ಕಂಸದಿಂದ ಅಕ್ಷರಗಳನ್ನು ಕೊರೆದು ಅದಕ್ಕೆ ನಿಗದಿತವಾದ ಪುಡಿಯೊಂದನ್ನು ಬಳಿಯುತ್ತಿದ್ದರು. ಆದ್ದರಿಂದ ಮಠದವರು ಕೈಕೊಂಡಿದ್ದ ಈ ನಕಲು ಕಾರ್ಯ ನಮಗೆ ಅತಿಶಯವಾಗಿ ತೋರಿತು.

ಹರಿದಾಸ ಸಾಹಿತ್ಯದ ಹಸ್ತಪ್ರತಿಗಳನ್ನು ಸಂಗ್ರಹಿಸುವುದರ ಜೊತೆಗೆ ಬೇರೆ ಬೇರೆ ಎಡೆಗಳಲ್ಲಿ ಹರಿದಾಸರ ಕೃತಿಗಳನ್ನು ಹೇಗೆ ಹಾಡುತ್ತಿರುವವರು ಎನ್ನುವುದನ್ನು ತಿಳಿಯುವ ಸಲುವಾಗಿ ಧ್ವನಿಮುದ್ರಣ ಕಾರ್ಯವನ್ನು ಮಾಡುತ್ತಿದ್ದೆವು. ಮಂತ್ರಾಲಯದಲ್ಲಿ ರಾಯರನ್ನು ಕುರಿತ ಕೆಲವು ಹಾಡುಗಳನ್ನು ಧ್ವನಿಮುದ್ರಿಸಬೇಕೆಂದು ತೊಡಗಿದೆವು. ಅಲ್ಲಿದ್ದ ಭಕ್ತಾದಿಗಳು ಅತ್ಯಂತ ಉತ್ಸಾಹದಿಂದ ಮುಂದೆ ಬಂದರು. ಸಾಧ್ಯವಾದಷ್ಟು ಜನರನ್ನು ಆಯ್ದುಕೊಂಡು ಧ್ವನಿಮುದ್ರಿಸಿಕೊಂಡೆವು. ಆ ಸ್ಥಳದ ಮಹಾತ್ಮ್ಯವೋ ಎಂಬಂತೆ ಕೆಲವರಂತೂ ಬಹಳ ಭಕ್ತಿ ಪರವಶರಾಗಿ ಹಾಡಿದರು. ನಾವು ತೆಗೆದುಕೊಂಡು ಹೋಗಿದ್ದ ಸಾಮಗ್ರಿಯೇ ಸಾಲದೆ ಬರಲು ನಾವು ಅಷ್ಟಕ್ಕೇ ತೃಪ್ತರಾಗಬೇಕಾಯಿತು. ನಾನು ಮಂತ್ರಾಲಯವನ್ನು ಮೊತ್ತ ಮೊದಲಿಗೆ ನೋಡುತ್ತಿದ್ದುದರಿಂದ ಅಲ್ಲಿ ಎಲ್ಲವೂ ಅಪೂರ್ವವಾಗಿ ತೋರಿಬಂದುವು. ಶ್ರೀಗಳವರ ಅನುಗ್ರಹದಿಂದ ರಾಯರ ಬೃಂದಾವನ ದರ್ಶನವೊದಲ್ಗೊಂಡು ಎಲ್ಲವೂ ಸುಗಮವಾಗಿ ನೆರವೇರಿದುವು.

1980 ವರೆಗೆ ಮಂತ್ರಾಲಯವನ್ನು ಪುನಃ ನೋಡುವ ಅವಕಾಶ ಲಭಿಸಿರಲಿಲ್ಲ. ಶ್ರೀಸುಜಯೀಂದ್ರತೀರ್ಥರು ಅಧಿಪತ್ಯವನ್ನು ಕೈಕೊಂಡಂದಿನಿಂದ ಅಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿರುವ ಸಂಗತಿಯನ್ನು ಕೇಳಬಲ್ಲೆ. 1980ರಲ್ಲಿ ರಾಯಚೂರಿನಲ್ಲಿ ಕರ್ನಾಟಕ ಸರ್ಕಾರದ ಸಾಹಿತ್ಯ ಅಕಾಡೆಮಿಯವರು ಹರಿದಾಸ ಸಾಹಿತ್ಯ ಸಮ್ಮೇಳನವನ್ನು ಏರ್ಪಡಿಸಿದ್ದರಿಂದ, ಬಿಡುವು ಮಾಡಿಕೊಂಡು ಮಂತ್ರಾಲಯಕ್ಕೆ ಹೋಗುವ ಅವಕಾಶ ಪ್ರಾಪ್ತವಾಯಿತು. ತುಂಗಭದ್ರ ನದಿಯ ಮೇಲೆ ಸೇತುವೆಯನ್ನು ಕಟ್ಟಿದ್ದರಿಂದ ಈ ಬಾರಿಯ ಪ್ರಯಾಣ ಬಹಳ ಸುಗಮವಾಯಿತು. ಹರಿದಾಸ ಸಾಹಿತ್ಯ ಸಮ್ಮೇಳನಕ್ಕೆ ಆಗಮಿಸಿದ್ದ ಕೆಲವು ಪ್ರತಿನಿಧಿಗಳೊಂದಿಗೆ ರಾಯಚೂರಿನಿಂದ ನೇರವಾಗಿ ಮೋಟಾರಿನಲ್ಲಿ ಒಂದು ಸಂಜೆ ಮಂತ್ರಾಲಯವನ್ನು ಸಂದರ್ಶಿಸಲು ಹೊರಟೆವು. ಈ ಮೊದಲು 1968ರಲ್ಲಿ ಕಂಡ ಮಂತ್ರಾಲಯದ ಅವರಣಕ್ಕೂ 1980 ರಲ್ಲಿ ಈಗ ಕಣ್ಣಾರೆ ಕಂಡ ಮಂತ್ರಾಲಯಕ್ಕೂ ಅಜಗಜಾಂತರವೆನ್ನಿಸಿತು. ಮಠದ ಇಡೀ ಆವರಣಕ್ಕೆ ಮೇಲ್ಛಾವಣಿಯನ್ನು ಹೊದಿಸಿದ್ದರಿಂದ ಭಕ್ತಾದಿಗಳು ಭಜನೆ ಮಾಡುವುದಕ್ಕೂ, ಏಕಾಂತ ಧ್ಯಾನ ಮಾಡುವುದಕ್ಕೂ ತುಂಬ ಪ್ರಶಸ್ತವಾಗಿತ್ತು. ನಾವು ಸಂಜೆ ಹೋಗಿದ್ದುದರಿಂದ ರಾಯರ ವೃಂದಾವನದ ದರ್ಶನವಂತೂ ಬಹಳ ಚೆನ್ನಾಗಿ ಆಯಿತು. ನದಿತೀರದಲ್ಲಿದ್ದ ಉಪವನ ಹಾಗೂ ಯಾತ್ರಿಕರಿಗಾಗಿ ವ್ಯವಸ್ಥೆ ಮಾಡಿದ್ದ ಇತರ ಸೌಕರ್ಯಗಳು ಮನಸ್ಸಿಗೆ ಮೆಚ್ಚುಗೆಯಾದವು. ಶ್ರೀ ಶ್ರೀಸುಜಯೀಂದ್ರತೀರ್ಥರು ಮಂತ್ರಾಲಯಕ್ಕೆ ಬರುವ ಭಕ್ತರಿಗೆ ಮಾಡಿರುವ ಈ ಅಭಿವೃದ್ಧಿ ಕಾರ್ಯಗಳು ತುಂಬ ಅಭಿನಂದನೀಯವೇ ಸರಿ.

ಶ್ರೀಗಳವರ ಅಧಿಕಾರಾವಧಿಯಲ್ಲಿ ಮಂತ್ರಾಲಯವು ತನ್ನ ಹೆಸರಿಗೆ ತಕ್ಕಂತೆ ಭಕ್ತವೃಂದದವರಿಗೆ

ಪವಿತ್ರ ತೀರ್ಥಕ್ಷೇತ್ರವೆನ್ನಿಸಿದರೆ ಆ ಸ್ಥಳಕ್ಕೆ ಬರುವ ಇತರ ಪ್ರವಾಸಿಗಳಿಗೆ ಅದು ಒಂದು ಪ್ರಶಸ್ತವಾದ ಆಧ್ಯಾತ್ಮಿಕ ಕೇಂದ್ರವೆನ್ನಿಸಿತು. ಶ್ರೀಗಳವರ ಕಾರ್ಯಕ್ಷೇತ್ರ ಇಷ್ಟಕ್ಕೇ ಸೀಮಿತವಾಗಲಿಲ್ಲ. ಪ್ರಕಾಂಡ ಪಂಡಿತರಾದ ಅವರು, ಈ ಮೊದಲೇ ಪ್ರಾರಂಭವಾಗಿದ್ದ ಗುರುಸಾರ್ವಭೌಮ ಸಂಸ್ಕೃತ ಮಹಾಪಾಠಶಾಲೆಯನ್ನು ವಿದ್ಯಾಪೀಠವನ್ನಾಗಿ ಪರಿವರ್ತಿಸಿ, ಸಂಸ್ಕೃತದ ವ್ಯಾಸಂಗವು ಅವಿಚ್ಛಿನ್ನವಾಗಿ ಸಾಗುವಂತೆ ಎಲ್ಲ ಸೌಕರ್ಯಗಳನ್ನು ಕಲ್ಪಿಸಿಕೊಟ್ಟರು. ಗ್ರಂಥಾಲಯವಂತೂ ವಿದ್ವಾಂಸರಿಗೆ ಒಂದು ಅಕ್ಷಯಭಂಡಾರವೇ ಸರಿ. ಶ್ರೀ ಮಠ ಸಮೀರ ಸಂವರ್ಧಿನೀ ಸಭೆಯನ್ನು ವರ್ಷಕ್ಕೆ ಎರಡು ಬಾರಿ ನಡೆಸಿ ವಿದ್ವಾಂಸರಿಗೆ ವಿಶೇಷ ಉತ್ತೇಜನವನ್ನು ನೀಡಿದರು. ಶ್ರೀಗಳವರ ಕಾಲದಲ್ಲಿ ಪ್ರಾರಂಭವಾದ "ಗುರುಸಾರ್ವಭೌಮ" ಎಂಬ ಪತ್ರಿಕೆ, ಮಠದ ಮುಖವಾಣಿ ಮಾತ್ರವಾಗದೆ, ವಿದ್ವತ್ಪೂರ್ಣ ಲೇಖನಗಳಿಂದ ಕೂಡಿ ಈಗಾಗಲೇ ಸರ್ವಮಾನ್ಯವಾಗಿದೆ. ಹೀಗೆಯೇ ಶ್ರೀಪಾದಂಗಳವರ ನೇತೃತ್ವದಲ್ಲಿ ಪ್ರಕಟವಾಗಿರುವ ಗ್ರಂಥಗಳೂ ಸಹ ಅಮೂಲ್ಯವಾದುವು. ಶ್ರೀರಾಘವೇಂದ್ರತೀರ್ಥರ "ಭಾಟ್ಟಸಂಗ್ರಹ"ದ ಪ್ರಕಟಣೆಯೊಂದೇ ವಿಶೇಷ ಸಂಗತಿಯೇ ಸರಿ. ಶ್ರೀವಿಜಯೀಂದ್ರರ 'ಆಮೋದ' ಟಿಪ್ಪಣಿ ಸಮೇತವಾದ 'ನ್ಯಾಯಾಮೃತ' ಮತ್ತು "ಸಾರಾಸಾರವಿವೇಚನೀ" ಗ್ರಂಥಗಳು ಪ್ರಶಸ್ತವಾದುವು. ಶ್ರೀನಾರಾಯಣಾಚಾರ್ಯ ವಿರಚಿತ "ಶ್ರೀರಾಘವೇಂದ್ರ ವಿಜಯ"ದ ಪ್ರಕಟನೆಯೂ ಗಮನಾರ್ಹವಾದುದು.

ಒಟ್ಟಿನಲ್ಲಿ ಹೇಳುವುದಾದರೆ, ಶ್ರೀಸುಯಮೀಂದ್ರತೀರ್ಥರು ಯಾವ ಮಹತ್ವಾಕಾಂಕ್ಷೆಯನ್ನು ಇಟ್ಟುಕೊಂಡು ಶ್ರೀಸುಜಯೀಂದ್ರತೀರ್ಥರನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ಆಯ್ಕೆಮಾಡಿದರೋ ಅವರ ಆಶೋತ್ತರಗಳನ್ನು ಶ್ರೀಗಳವರು ಸಾವಿರಮಡಿಯಾಗಿ ನೆರವೇರಿಸಿದರು ಎನ್ನಬಹುದು. ಸುಮಾರು ಎರಡು ದಶಕಗಳ ಕಾಲ (12-1-1967 ರಿಂದ 12-2-1986) ಅವಿಶ್ರಾಂತವಾಗಿ ಶ್ರಮಿಸಿ ಶ್ರೀರಾಯರಮಠದ ಏಳಿಗೆಯ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದರು. ಶಾಲಿವಾಹನ ಶಕ 1907ನೆಯ ಕ್ರೋಧನ ಸಂವತ್ಸರ ಮಾಘಶುದ್ಧ ಚತುರ್ಥೀ ಬುಧವಾರದಂದು (12-2-1986) ಮಧ್ಯರಾತ್ರಿ ಶ್ರೀಗಳವರು ಶ್ರೀಹರಿಪದವನ್ನು ಸೇರಿದಾಗ್ಯೂ ಸಹಸ್ರಾರು ಭಕ್ತರ ಹೃದಯಾಂತರಾಳದಲ್ಲಿ ನೆಲೆಸಿ ಎಂದೆಂದಿಗೂ ಅವಿರತ ಪ್ರಾತಃಸ್ಮರಣೀಯರಾಗಿದ್ದಾರೆ. ಈ ಮಹಾಸಂಸ್ಥಾನದ ಪೀಠವು ಒಂದುಕ್ಷಣವೂ ತೆರವಾಗದಿರುವಂತೆ ಶ್ರೀಗಳವರು ತಮ್ಮ ಅಮೃತಹಸ್ತದಿಂದಲೇ ಉತ್ತರಾಧಿಕಾರಿಯನ್ನಾಗಿ ನಿಯೋಜಿಸಿದ ಶ್ರೀ ಶ್ರೀಸುಶಮೀಂದ್ರತೀರ್ಥ ಶ್ರೀಪಾದಂಗಳವರು ಈಗ ಮಠಾಧಿಪತ್ಯದ ಹೊಣೆಯನ್ನು ಹೊತ್ತಿರುತ್ತಾರೆ.

ಪ್ರಕೃತ ಶ್ರೀಗಳವರು ತಮ್ಮ ಚಿಕ್ಕಂದಿನಿಂದಲೂ ಮೈಸೂರಿನಲ್ಲಿರುವ ಸುಬ್ಬರಾಯನ ಕೆರೆ ರಾಯರಮಠದ ವೃಂದಾವನ ಸಾನಿಧ್ಯದಲ್ಲಿಯೇ ಕಾರ್ಯನಿರತರಾಗಿ ಇದ್ದುದರಿಂದ ಈ ಸಂಸ್ಥಾನದ ಸತ್ಸಂಪ್ರದಾಯಗಳನ್ನೆಲ್ಲ ಚೆನ್ನಾಗಿ ಬಲ್ಲವರು. ಶ್ರೀಮೂಲ ರಾಮದೇವರ ಅನುಗ್ರಹದಿಂದಲೂ ಶ್ರೀರಾಘವೇಂದ್ರತೀರ್ಥರ ಕೃಪಾಕಟಾಕ್ಷದಿಂದಲೂ ಶ್ರೀಸುಜಯೀಂದ್ರತೀರ್ಥರ ಆಶೀರ್ವಾದಬಲದಿಂದಲೂ ಶ್ರೀ ಶ್ರೀ ಸುಶಮೀಂದ್ರತೀರ್ಥರು ಸಂಸ್ಥಾನದ ಕೀರ್ತಿಯನ್ನು ಇನ್ನೂ ಮಿಗಿಲಾಗಿ ಬೆಳಗಲೆಂದು ಆಶಿಸೋಣ.

ಗುರುರಾಜರ ಜೀವನದಲ್ಲಿ ಮಹತ್ವಪೂರ್ಣ ಸಂದರ್ಭಗಳು

ಲೇಖಕಿ : **ಶ್ರೀಮತಿ ಶಾಕೋಳು ಸತೋಜರಾವ್**

ಶ್ರೀರಾಘವೇಂದ್ರರು ದ್ವೈತವೇದಾಂತದ ಗುರು ಪರಂಪರೆಯಲ್ಲಿ ಒಂದು ವಿಶಿಷ್ಟವಾದ ವ್ಯಕ್ತಿತ್ವ. ಪೂರ್ವಾಶ್ರಮದಲ್ಲಿ ದೊಡ್ಡ ವೈದಿಕನಾಗಿ ಎರಡರಲ್ಲೂ ಸಿದ್ಧಿಯನ್ನು ಪಡೆದವರು. ಇಂತಹ ಪುಣ್ಯಪುರುಷರು ಏನು ಮಾಡಿದ್ದರು ಎಂಥಾ ಬಾಳನ್ನು ಬಾಳಿದ್ದರು ಎಂದು ತಿಳಿಯುವ ಪ್ರಯತ್ನದಿಂದ ಇವರ ಜೀವನ ಚರಿತ್ರೆಯನ್ನು ಓದಿ ಅರ್ಥಮಾಡಿಕೊಳ್ಳುವುದೇ ಒಂದು ಸಾಧನೆಯೂ ಹೌದು, ಮನುಷ್ಯನ ಕಲ್ಪನೆಗೆ ಮೀರಿದ ಕಾರ್ಯಗಳು ಅತಿಮಾನುಷ ಮಹಿಮೆಗಳೆನಿಸುವುವು. ಇಂತಹ ಕಾರ್ಯಮಾಡಿ ತೋರಿಸಿದವರನ್ನು ಅವತಾರಪುರುಷರೆಂದು ಕರೆಯುವರು.

ಗುರುರಾಜರ ಜೀವನದಲ್ಲಿ ಅನೇಕ ಮಹತ್ವಪೂರ್ಣ ಘಟನೆಗಳು, ನಡೆದವೆಂದು ಗ್ರಂಥಗಳಿಂದ ತಿಳಿದುಬರುತ್ತದೆ. ಬಾಲ್ಯದಿಂದಲೂ ವೆಂಕಣ್ಣಭಟ್ಟ ಅಪೂರ್ವ ತೇಜಸ್ಸಿನಿಂದ ಕೂಡಿದವನಾಗಿ ಸಕಲರ ತನುಮನವನ್ನು ಸೆಳೆಯುತ್ತಿದ್ದನು. ಶ್ರೀಸುಧೀಂದ್ರತೀರ್ಥ ಶ್ರೀಪಾದಂಗಳವರ ಕೃಪಾಕಟಾಕ್ಷಕ್ಕೆ ಪಾತ್ರನಾಗಿ, ಶ್ರೀಗಳವರಲ್ಲಿ ವ್ಯಾಸಂಗಮಾಡುವ ಸದಾವಕಾಶ ಹೊಂದಿದನು. ಅವನು ಕುಂಭಕೋಣೆಗೆ ಸುಧಾಪಾಠಕ್ಕಾಗಿ ಬಂದನು.

ವೆಂಕಣ್ಣಭಟ್ಟನ ಸಹಾಧ್ಯಾಯಿಗಳು ವಿಶೇಷತಃ ಕುಂಭಕೋಣವಾಸಿಗಳಾಗಿದ್ದರು. ಅವರು ತಾವೇ ಪರಮ ಪ್ರವೀಣರೆಂದೂ ಹೊಸಬನಾದ ಭಟ್ಟನು ಯಾತಕ್ಕೂ ತರನಲ್ಲವೆಂದೂ ಗರ್ವಿಷ್ಠರಾಗಿದ್ದರು. ತಾವು ಉತ್ತಮ ತರಗತಿಯಲ್ಲಿ ವ್ಯಾಸಂಗ ಮಾಡುವವರಾಗಿದ್ದುದರಿಂದ ಸಾಮಾನ್ಯರೊಡನೆ ಮಾತನಾಡುವುದು ತಮ್ಮ ಅಂತಸ್ತಿಗೆ ಅಗೌರವ, ಕಡಿಮೆ ಎಂಬ ಭಾವನೆ ಅವರಲ್ಲಿದ್ದು, ಮಿತಭಾಷಿಯಾದ ಭಟ್ಟನು ಪೆದ್ದನಿರಬೇಕೆಂದು ಅವನನ್ನು ತಮ್ಮಿಂದ ದೂರ ವಿಟ್ಟರು. ಆದರೆ ಭಟ್ಟ ಯಾವುದನ್ನೂ ಲೆಕ್ಕಿಸದೆ ತನ್ನ ಪಾಠಪ್ರವಚನಗಳಲ್ಲಿ ಹೆಚ್ಚು ಆಸಕ್ತಿ ತೋರಿದವನಾಗಿ ಸಂಗಡಿಗರು ಆಡುವ ಮಾತಿಗೆ ಗಮನ ಕೊಡದವನಂತೆ ಇದ್ದಾಗ, ಸಂಗಡಿಗರಿಗೆ ಇವನ ಉದಾಸೀನ ದ್ವೇಷವಾಗಿ ಪರಿಣಮಿಸಿತು. ಸಾಧ್ಯವಾದರೆ ಭಟ್ಟನನ್ನು ಕುಂಭಕೋಣದಿಂದ ಓಡಿಸಿಬಿಡಬೇಕೆನ್ನುವ ದುರಾಲೋಚನೆ ಅವರದಾಯ್ತು.

ತನಗಿಂತಲೂ ಚಿಕ್ಕವರು ತಮಗೆ ತಿಳಿಯುವ ವಿಷಯದಲ್ಲಿ ಪ್ರಶ್ನೆಮಾಡಿದರೆ ಅವರಿಗೆ ಪ್ರೀತಿಯಿಂದ ವಿಷಯವನ್ನು ವಿವರಿಸುತ್ತಿದ್ದನು. ತಾನು ಸ್ವಾಮಿಗಳಲ್ಲಿ ವ್ಯಾಸಂಗಮಾಡಿದ ಸುಧಾಗ್ರಂಥದ ಪ್ರಮೇಯಾಂಶವನ್ನು ಪುಷ್ಟೀಕರಿಸಿ "ಪರಿಮಳ" ಎಂಬ ಹೆಸರಿನಿಂದ ಗ್ರಂಥವಾಗಿ ಬರೆದಿಡುತ್ತಿದ್ದನು. ಭಟ್ಟನು ವಾಸವಾಗಿದ್ದ ಮಂಟಪಕ್ಕೆ ಅಡ್ಡಗೋಡೆಯನ್ನಾಗಲಿ ಬಾಗಿಲೂ ಇರಲಿಲ್ಲ. ರಾತ್ರಿಯ ಹೊತ್ತು ಬೆಳಕಿಗೇ ಗತಿಯಿರಲಿಲ್ಲ. ಮರಗಳ ಕೆಳಗೆ ಉದುರಿಬಿದ್ದ ತರಗೆಲೆಗಳನ್ನು ತಂದುರಿಸಿ ಆ ಬೆಳಕಿನಲ್ಲಿ ಗ್ರಂಥವನ್ನು ಬರೆದಿಡುತ್ತಿದ್ದನು. ಅನೇಕ ರಾತ್ರಿಗಳನ್ನು ಊಟವಿಲ್ಲದೆ ಕಳೆಯುತ್ತಿದ್ದನು. ಇಷ್ಟು ಕಷ್ಟಪಡುತ್ತಿದ್ದರೂ ಭಟ್ಟನು ಈ ಸಂಗತಿಯನ್ನು ಒಂದುದಿನವೂ ಗುರುವಿನ ಮುಂದೆ ಹೇಳಿಕೊಳ್ಳುತ್ತಿರಲಿಲ್ಲ.

ಭಟ್ಟನಲ್ಲಿ ಹುಡುಕಿದರೂ ದೋಷಗಳು ಸಿಗುವಂತಿರಲಿಲ್ಲ. ಸಹಾಧ್ಯಾಯಿಗಳೆಲ್ಲಾ ಒಂದು ಬಾರಿ ಭಟ್ಟನು ತಮ್ಮೊಂದಿಗೆ ವ್ಯಾಸಂಗಮಾಡಲು ಅರ್ಹನಲ್ಲವೆಂದು ಸ್ವಾಮಿಗಳ ಬಳಿಗೆ ಬಂದು ತಿಳಿಸುತ್ತಾ ಅವನನ್ನು ತರಗತಿಯಿಂದ ಹೊರಹಾಕುವಂತೆ ಅವರಲ್ಲಿ ವಿನಂತಿಸಿಕೊಂಡರು. ಸ್ವಾಮಿಗಳು, ಭಟ್ಟನ ಯೋಗ್ಯತೆಯನ್ನರಿತಿದ್ದವರು, ತಾವು ಆ ಬಗ್ಗೆ ವಿಚಾರಮಾಡುವುದಾಗಿ ತಿಳಿಸಿದರು.

ಮರುದಿನ ಸ್ವಾಮಿಗಳು ಪಾಠಮಾಡುತ್ತಿದ್ದಾಗ ವಿಷಯವೊಂದನ್ನು ವಿವರಿಸದೆ, ವಿದ್ಯಾರ್ಥಿಗಳೇ ವಾಕ್ಯವನ್ನು ಚೆನ್ನಾಗಿ ಯೋಚಿಸಿಕೊಂಡು ಬರಬೇಕೆಂದು ಹೇಳಿಕಳುಹಿಸಿದರು.

ಭಟ್ಟನು ಗುರುಭಕ್ತಿಯ ಪ್ರಭಾವದಿಂದಲೋ ಎಂಬಂತೆ ತನ್ನ ಬುದ್ಧಿಬಲದಿಂದ [illegible] ಸಮಂಜಸಾರ್ಥ ವಿವರಣೆಯನ್ನು ಪುಸ್ತಕದಲ್ಲಿ ಬರೆದಿಟ್ಟಿದ್ದನು.

ಆ ರಾತ್ರಿ ಸ್ವಾಮಿಗಳು ದ್ವಾರಪಾಲಕನೊಬ್ಬನ ಕೈಯಲ್ಲಿ ದೀಪವನ್ನು ಹಿಡಿಸಿಕೊಂಡು ಎಲ್ಲಾ ವಿದ್ಯಾರ್ಥಿಗಳೂ ಗಾಢನಿದ್ರೆಯಲ್ಲಿರುವುದನ್ನು ಕಂಡು, ಭಟ್ಟನ ಮುರುಕು ಮಂಟಪಕ್ಕೂ ಬಂದು ನೋಡಿದರು. ಅದುವರೆಗೆ ಭಟ್ಟನು ಆ ಮುರುಕು ಮಂಟಪದಲ್ಲಿರುವುದರ ಕಲ್ಪನೆ ಸ್ವಾಮಿಗಳಿಗಿರಲಿಲ್ಲ. ಭಟ್ಟ ವ್ಯಾಸಂಗ ಮುಗಿಸಿ ಅದೇ ತಾನೇ ಮಲಗಿ ನಿದ್ರಾಪರವಶನಾಗಿದ್ದನು, ಸ್ವಾಮಿಗಳು ಬಂದ ಪರಿವೆಯೂ ಅವನಿಗಿರಲಿಲ್ಲ. ಛಿದ್ರ ಛಿದ್ರ ಕಾಗದದಲ್ಲಿ ಭಟ್ಟನು ಏನು ಬರೆದಿರುವನೆಂದು ಸ್ವಾಮಿಗಳು ಕಣ್ಣು ತೆರೆದು ನೋಡಿದಾಗ ಆ ದಿನದ ಸಂದಿಗ್ಧ ವಾಕ್ಯದ ಸ್ಪಷ್ಟಾರ್ಥವು ಅಲ್ಲಿ ಬರೆಯಲ್ಪಟ್ಟಿದ್ದನ್ನು ಓದಿ ಸ್ವಾಮಿಗಳಿಗೆ ಪರಮಾನಂದವಾಯಿತು. ಅನಂತರ ಮರುದಿನ ತರಗತಿಯಲ್ಲಿ ಸ್ವಾಮಿಗಳು ವಿದ್ಯಾರ್ಥಿಗಳೆದುರಿನಲ್ಲಿ ವೆಂಕಣ್ಣ ಭಟ್ಟನ ಪ್ರತಿಭೆಯನ್ನು ಕೊಂಡಾಡಿದರು. ಅಲ್ಲದೆ ಅವರು ದಿವಾನರಿಂದ ಹೊಸದೊಂದು ಶಾಲನ್ನು ತರಿಸಿ ವೆಂಕಣ್ಣ ಭಟ್ಟನಿಗೆ ಹೊದಿಸಿ ಅವನಿಗೆ "ಪರಿಮಳಾಚಾರ್ಯ", ಎಂಬ ಅನ್ವರ್ಥ ಬಿರುದನ್ನು ಅನುಗ್ರಹಿಸಿದರು.

ವೆಂಕಣ್ಣ ಭಟ್ಟನ ಜೀವನದಲ್ಲಿ ಮತ್ತೊಂದು ಅಮೂಲ್ಯವಾದ ಘಟನೆ.

ಬಡತನದ ಸಂಸಾರವಾದರೂ ಭಟ್ಟನದು ತೃಪ್ತ ಜೀವನವಾಗಿತ್ತು. ವೆಂಕಣ್ಣ ಭಟ್ಟನ ಹೆಂಡತಿ ಸರಸ್ವತಿಗೆ ಗಂಡನೆಂದರೆ ಗೌರವ ಪೂಜ್ಯಭಾವನೆ. ಪತಿಯ ವಿದ್ವತ್ತನ್ನು ನೋಡಿ ಅವಳು ಮಮ್ಮೊಕಳಾಗುತ್ತಿದ್ದಳು. ಒಂದು ಬಾರಿ ಶ್ರೀಮಂತನೊಬ್ಬನು ತನ್ನ ಮನೆಗೆ ಊಟಕ್ಕೆ ಬರಲು ವೆಂಕಣ್ಣ ಭಟ್ಟನನ್ನು ಆಹ್ವಾನಿಸಿದ್ದನು. ಸ್ನಾನಾಹ್ನಿಕಗಳನ್ನು ಮುಗಿಸಿ ವೆಂಕಣ್ಣ ಭಟ್ಟ ಶ್ರೀಮಂತರ ಮನೆಗೆ ಹೋದಾಗ ಶ್ರೀಮಂತನ ಮನೆಯ ಅಹಂಕಾರಿಯಾದ ಪುರೋಹಿತನೂ ಅವನ ಸಂಗಡಿಗರು ಭಟ್ಟನನ್ನು ಗಂಧತೇಯಲು ಕೂಡಿಸಿದರು.

ಊಟದ ಸಮಯ ಹತ್ತಿರವಾದರೂ ಗಂಧತೇಯುವ ಕಾರ್ಯ ಮುಗಿದಿರಲಿಲ್ಲ. ಇದನ್ನು ನೋಡಿ ಬೇಸರಗೊಂಡ ಆ ಪುರೋಹಿತನು ವೆಂಕಣ್ಣ ಭಟ್ಟನನ್ನು ಕುರಿತು "ಬಂಡೆ ಉಂಡೆ ಗಂಧ ತೇಯಲು ಕೈಲಾಗದ ನೀನು ಎಂಥಾ ವೈದಿಕ ಬ್ರಾಹ್ಮಣನಯ್ಯಾ" ಎಂದು ಮೂದಲಿಸಿ ಅಲ್ಲಿಂದ ಹೊರಟುಹೋದಾಗ, ಮೂದಲಿಕೆಯಿಂದ ಮನನೊಂದ ಭಟ್ಟನು, ತಾನೆ ಪಾರಾಯಣ ಮಾಡುತ್ತಿದ್ದ ಅಗ್ನಿಸೂಕ್ತವನ್ನೇ ಪಠಿಸುತ್ತಾ ಗಂಧತೇಯ್ದು ಕೆಲಸಮುಗಿಸಿದನು. ಅನಂತರ ಊಟಕ್ಕೆ ಕುಳಿತ ಬ್ರಾಹ್ಮಣರೆಲ್ಲರೂ ಗಂಧವನ್ನು ಹಚ್ಚಿಕೊಳ್ಳುತ್ತಿರುವಂತೆಯೇ ಉರಿ, ಉರಿ, ಎಂದು ಕೂಗಲಾರಂಭಿಸಿದರೆ ಗಂಧವನ್ನು ಹಚ್ಚಿಕೊಂಡ ಪುರೋಹಿತರಿಗೂ ಗಂಧವು ತನ್ನ ಬಿಸಿ ತೋರಿಸಿತ್ತು. ಅವನೇ ವೆಂಕಣ್ಣ ಭಟ್ಟನಲ್ಲಿ ಕ್ಷಮೆಯಾಚಿಸಿದ. ತನ್ನಿಂದ ಎಂತಹ ಅಚಾತುರ್ಯವಾಯಿತೆಂದು ಭಟ್ಟ ಪಶ್ಚಾತ್ತಾಪಪಡುತ್ತಾ ಮತ್ತೆ ವರುಣ ಮಂತ್ರದಿಂದ ನೀರನ್ನು ಸಂಪ್ರೋಕ್ಷಿಸಿ ಅದೇ ಗಂಧವನ್ನು ಎಲ್ಲರಿಗೂ ಕೊಡಲು ಅದು ಉರಿಯಬಾಧೆ ನಿವಾರಿಸಿತು. ಈ ಘಟನೆಯ ನಂತರ ಭಟ್ಟನನ್ನು ಎಲ್ಲರೂ ಒಬ್ಬ ಪವಾಡಪುರುಷನೆಂದೇ ಬಗೆದರು. ಎಲ್ಲರ ದೃಷ್ಟಿಯಲ್ಲಿ ಅವನು ಮಹಾತ್ಮನಾದ.

ಸುಧೀಂದ್ರತೀರ್ಥಸ್ವಾಮಿಗಳಿಗೆ ವೆಂಕಣ್ಣ ಭಟ್ಟನನ್ನು ನೋಡಿದಲಾಗಾಯ್ತು ಅವನ ಮೇಲೆ ಕಣ್ಣಿತ್ತು, ಅವನು ತಂದೆಯೊಡನೆ ಶ್ರೀಮಠಕ್ಕೆ ಬಂದು ತಮ್ಮ ದರ್ಶನ ತೆಗೆದುಕೊಂಡಾಗ ಐದುವರ್ಷದ ಬಾಲಕನಾಗಿದ್ದ. ತಿರುಪತಿ ತಿಮ್ಮಪ್ಪನ ದಯೆಯಿಂದ ಜನಿಸಿದ ಈ ಬಾಲಕನನ್ನು ತಮ್ಮ ವಶಕ್ಕೆ ಒಪ್ಪಿಸು ಎಂದು ಕೇಳಲು ಸ್ವಾಮಿಗಳ ಮನಸ್ಸಿಗೆ ಒಪ್ಪಿಗೆಯಾಗಿರಲಿಲ್ಲ. ತಮ್ಮ ವಸ್ತು ಇಂದಲ್ಲ ನಾಳೆ ತಮ್ಮದಾಗುತ್ತದೆಂಬ ಧೈರ್ಯದಿಂದ ಅವರು ನಿಶ್ಚಿಂತರಾಗಿದ್ದರು.

ಈಗ ಭಟ್ಟನು ಅವರ ಬಳಿಯೇ ವ್ಯಾಸಂಗ ಮಾಡಿಕೊಂಡಿದ್ದನು. ಅಲ್ಲದೆ ಶ್ರೀಸುಧೀಂದ್ರತೀರ್ಥರಿಗೆ ದೇಹಾಲಸ್ಯವೂ ತಲೆದೋರಿತ್ತು. ತಮ್ಮ ಗುರುಪೀಠಕ್ಕೆ ಬರಲು ವೆಂಕಣ್ಣ ಭಟ್ಟನೇ ಯೋಗ್ಯವ್ಯಕ್ತಿ ಎಂಬುವರಿಗೆ ತಿಳಿದಿತ್ತು. ಈ ಬಗ್ಗೆ ಯಾವ ಮಾತನ್ನು ಹೊರಗೆ ಪ್ರಕಟಿಸಲಿಲ್ಲ. ತುಂಬು ಸಂಸಾರದ ಸುಳಿಯಲ್ಲಿ ಸಿಕ್ಕಿಬಿದ್ದಿರುವ ವೆಂಕಣ್ಣ ತಮ್ಮ

[illegible] ಭಟ್ಟ ಯೌವನಸ್ಥ. ಸುಂದರನಾದ ಚಿಕ್ಕವಯಸ್ಸಿನ ಪತ್ನಿ. ಮುದ್ದು ಬಾಲಲೀಲೆಗಳನ್ನಾಡುವ ಚಿಕ್ಕಮಗ. ಇವುಗಳನ್ನೆಲ್ಲಾ ತೊರೆದು ಭಟ್ಟ ಸನ್ಯಾಸಿಯಾಗಿ ಗುರುಪೀಠವನ್ನು ಏರಲು ಒಪ್ಪುವನೇ ಎಂದವರು ಮನದಲ್ಲೇ ತರ್ಕಿಸುತ್ತಿದ್ದರು. ಹಾಸಿಗೆ ಹಿಡಿದು ಮಲಗಿದ ಶ್ರೀಗಳವರು ತಮ್ಮ ಅನಂತರದ ಗುರುಪೀಠದ ವ್ಯವಸ್ಥೆ ಮಾಡಲೇಬೇಕಾಗಿತ್ತು. ಸುಧೀಂದ್ರತೀರ್ಥಸ್ವಾಮಿಗಳಿಗೆ ಪೂರ್ವಾಶ್ರಮದ ಒಬ್ಬ ಸಮೀಪ ಬಂಧುವಿದ್ದನು ಅವನಿಗೆ ತಂದೆತಾಯಿಗಳಿಲ್ಲದ, ತಬ್ಬಲಿಯಾಗಿದ್ದು, ಶ್ರೀಮಠದಲ್ಲಿದ್ದು, ಶ್ರೀಗಳವರ ಸೇವೆಯನ್ನು ಮಾಡಿಕೊಂಡಿದ್ದನು. ಅವನೇ ಬಾಲ್ಯದಿಂದಲೂ ವೈರಾಗ್ಯಭಾವ ತಳೆದು, ಈ ಸಂಸಾರ ಕೂಪಕ್ಕೆ ಬಿದ್ದು ನರಳುವ ಮುಂಚೆಯೇ ಸನ್ಯಾಸಿಯಾಗಬೇಕೆಂದು ನಿಶ್ಚಯಿಸಿ ಶ್ರೀಗಳವರನ್ನು ತನಗೆ ಸನ್ಯಾಸ ನೀಡಬೇಕೆಂದು ಪದೇ ಪದೇ ಬೇಡಿಕೊಳ್ಳುತ್ತಿದ್ದನು. ಒತ್ತಾಯದಿಂದ ಸನ್ಯಾಸ ಕೊಡುವುದು ಸಾಧ್ಯವಿಲ್ಲ. ಅಲ್ಲದೆ ಸನ್ಯಾಸ, ವೈರಾಗ್ಯ, ಸಂಸ್ಕಾರರೂಪವಾದವು. ಗುರುಪೀಠಕ್ಕೆ ಏರಲು ಬೇಕಾದ ಯೋಗ್ಯತೆಯಾಗಲೀ ಜಾತಕಾಕ್ಯತೆಯಾಗಲೀ ಅವನಿಗಿರಲಿಲ್ಲ. ಆದರೆ ಅವನಲ್ಲಿ ವಿಶೇಷ ಪಾಂಡಿತ್ಯವಿತ್ತು. ಶ್ರೀಗಳವರು ಅವನ ಸನ್ಯಾಸದ ವಿಷಯವನ್ನು ಮುಂದಕ್ಕೆ ಹಾಕುತ್ತಲಿದ್ದರು. ಕಡೆಗೆ ಬೇರೆ ದಾರಿಗಾಣದೆ, ಶ್ರೀಗಳವರು ತಮ್ಮ ದೇಹಾಲಸ್ಯದ ಸ್ಥಿತಿಯನ್ನು ನೆನೆದು ಈ ಬಗ್ಗೆ ಒಂದು ನಿರ್ಧಾರಕ್ಕೆ ಬರಲೇಬೇಕಾಯಿತು. ಅವರು ವೆಂಕಣ್ಣಭಟ್ಟನನ್ನು ಕರೆಸಿದರು. ಅವನ ಮುಂದೆ, ತಾವು ಅವನನ್ನು ಕರೆಸಿದ ಕಾರಣವನ್ನು ವಿವರಿಸಿದರು. ತಮ್ಮ ಗುರುಪೀಠದ ಚರಿತ್ರೆಯನ್ನು ಅವನಿಗೆ ತಿಳಿಸಿದರು. ಆದರೆ ಭಟ್ಟ ಈ ಬಗ್ಗೆ ಮೌನ ತಳೆದ.

“ಯಾಕೆ ನಿನಗೆ ಶ್ರೀಮಧ್ವಾಚಾರ್ಯರ ಗುರುಪೀಠದ ಸೇವೆ ಇಷ್ಟವಿಲ್ಲವೇ. ಎಂದು ಸ್ವಾಮಿಗಳು ಕಳಕಳಿಯಿಂದ ಅವನನ್ನು ಪ್ರಶ್ನಿಸಿದರು. ಈ ಮಾತಿಗೂ ಅವನು ಮೌನ ಒಡೆಯಲಿಲ್ಲ.

“ನಿನ್ನನ್ನು ನೋಡಿದಾಗಲಾಗಾಯ್ತು ನಾನು ನಿನ್ನನ್ನೇ ಈ ಗುರುಪೀಠಕ್ಕೆ ಯೋಗ್ಯನೆಂದು ತಿಳಿದಿದ್ದೇನೆ. ನನ್ನ ನಿರೀಕ್ಷೆ ಹೆಚ್ಚಾಯಿತೇನೋ ಎನ್ನಿಸಿದರೂ ಶ್ರೀಮಧ್ವಾಚಾರ್ಯರ ಪರಂಪರೆಯಲ್ಲಿ ಶ್ರೀವ್ಯಾಸರಾಯರಂಥವರೂ ಶ್ರೀವಿಜಯೀಂದ್ರತೀರ್ಥರಂಥವರೂ ಏರಿದ ಈ ದ್ವೈತ ಸಿಂಹಾಸನವನ್ನು ಏರಿ ಶ್ರೀ ಮೂಲರಾಮನನ್ನು ಪೂಜಿಸಲು ಸಾಮಾನ್ಯರಿಂದ ಸಾಧ್ಯವಿಲ್ಲ, ಇದಕ್ಕೆ ದೈವಯೋಗವಿರಬೇಕು. ಅಂತಹ ದೈವಯೋಗ ನಿನಗೆ ಇದೆ ಎಂದು ತಿಳಿದಿದ್ದೇನೆ. ಸನ್ಯಾಸವಾಗಲೀ ವೈರಾಗ್ಯವಾಗಲೀ ಬಲವಂತ ಮಾಘಸ್ನಾನವಾಗಬಾರದು. ಸ್ವಾಮಿಗಳು ವೆಂಕಣ್ಣಭಟ್ಟನಿಗೆ ಹೇಳಿದರು.

ಆದರೂ ಭಟ್ಟ ಸನ್ಯಾಸ ಸ್ವೀಕರಿಸಲು ಉತ್ಸಾಹ ತೋರದಿದ್ದಾಗ, ಮೌನವೇ ಅವನ ನಿರ್ಧಾರವೆಂದು ತಿಳಿದ ಸ್ವಾಮಿಗಳು ಕಟುಕರಾಗದೆ, ಬದಲಿಗೆ ತಮ್ಮ ಆಶ್ರಯದಲ್ಲಿದ್ದು, ತನಗೆ ಸನ್ಯಾಸ ನೀಡಬೇಕೆಂದು ಕಾಡುತ್ತಿದ್ದ ತಮ್ಮ ಸಂಬಂಧಿಯನ್ನು ಕರೆದು “ನಿನಗೆ ಮಠಾಧಿಪತ್ಯ ಬೇಕೋ ಅಥವಾ ಸನ್ಯಾಸಬೇಕೋ” ಎಂದು ಪ್ರಶ್ನಿಸಿದರು. ಅವನು “ನನಗೆ ಸನ್ಯಾಸಮಾತ್ರ ಸಾಕೆಂದನು. ಶ್ರೀಗಳವರು ಅವನಿಗೆ ಆಶ್ರಮನೀಡಿ ಯಾದವೇಂದ್ರರೆಂಬ ನಾಮದಿಂದ ಕರೆದರು. ಮೂಲರಾಮನನ್ನುಳಿದು ಇತರ ಪೂಜೆಗಳೆಲ್ಲವನ್ನೂ ನೂತನ ಯತಿಗಳಿಗೆ ಒಪ್ಪಿಸಿದರು.

ಕೆಲವು ದಿನಗಳಾದ ಮೇಲೆ ಯಾದವೇಂದ್ರರು ದೇಶಸಂಚಾರಕ್ಕೆ ಹೊರಟರು. ಸ್ವಾಮಿಗಳಿಗೂ ಪೂರ್ಣಗುಣವಾಯ್ತು. ಆದರೆ ವೃದ್ಧಾಪ್ಯದಿಂದ ಮತ್ತೆ ಶ್ರೀಸುಧೀಂದ್ರರು ಅನಾರೋಗ್ಯದಿಂದ ಕೂಡಿದವರಾದರು. ಒಂದು ದಿನ ರಾತ್ರಿ ಇವರಿಗೆ ಮೂಲರಾಮರು ಗುರುರೂಪದಿಂದ ದರ್ಶನನೀಡಿ “ಪರಿಮಳಾಚಾರ್ಯರಿಗೆ ಆಶ್ರಮಕೊಡಿ” ಎಂದು ಹೇಳಿದ ಹಾಗಾಯ್ತು. ಸ್ವಾಮಿಗಳು ಮರುದಿನ ಪರಿಮಳಾಚಾರ್ಯ” ನನ್ನ ಕರೆಸಿ, “ಭಟ್ಟರೇ ನಿಮ್ಮ ಮಗನ ಉಪನಯನ ಈ ಮಾಘಮಾಸದಲ್ಲೇ ಆಗಲಿ ಎಂದು ಹೇಳಿ ಉಪನಯನದ ಖರ್ಚಿಗಾಗಿ ಅಪಾರ ಧನ ನೀಡಿದರು. ಮಾಘಮಾಸದಲ್ಲಿ, ಪರಿಮಳಾಚಾರ್ಯರೇ ತಮ್ಮ ಮಗನಾದ ಲಕ್ಷ್ಮೀನಾರಾಯಣನಿಗೆ ಉಪನಯನಮಾಡಿದರು. ಶ್ರೀಸುಧೀಂದ್ರಸ್ವಾಮಿಗಳಿಂದ ನೂತನ ವಟುವಿಗೆ ಬ್ರಹ್ಮೋಪದೇಶವಾಯಿತು.

ಆ ರಾತ್ರಿಯೇ ಪರಿಮಳಾಚಾರ್ಯರಿಗೆ ಸ್ವಪ್ನವಾಗಿ ಅದರಲ್ಲಿ ವಾಗ್ದೇವಿಯ ದರ್ಶನವಾಯ್ತು. ಸರ್ವಾಭರಣ ಭೂಷಿತಳಾದ ಮಂದಹಾಸದಿಂದ ಎದುರಿಗೆ ನಿಂತಿದ್ದ ವಾಗ್ದೇವಿಯನ್ನು ನೋಡಿ ಆಚಾರ್ಯರು [illegible]

ತಿಳಿದರು. ಪಾದಗಳಿಗೆ ನಮಸ್ಕರಿಸಿ ನಿಂತ ಆಚಾರ್ಯರನ್ನು ನೋಡಿ ಪ್ರಸನ್ನಳಾದ ದೇವಿಯು "ಆಚಾರ್ಯ, ನಾನು ಜ್ಞಾನಸಾಗರ ಮಥನಕಾಲದಲ್ಲಿ ಉದಿಸಿದ ವಿದ್ಯಾಲಕ್ಷ್ಮಿಯು. ಜನ್ಮವೆತ್ತಿ ಬಹುಕಾಲವಾದರೂ ಪಾಲಿಕರಿಲ್ಲದೆ ಕೃಶಳಾಗಿರಲು ಆನಂದತೀರ್ಥ, ಜಯತೀರ್ಥರುಗಳಿಂದ ನನಗೆ ಯೌವನ ಉಂಟಾಗಿತ್ತು. ಕಲ್ಪಾಂತ ಪರ್ಯಂತ ಜೀವಿಸಿರುವೆನೆಂಬ ನನ್ನಿಂದ ವ್ಯಾಸತೀರ್ಥರು ನ್ಯಾಯಾಮೃತಪಾನಮಾಡಿಸಿ ಜ್ಞಾನಚಂದ್ರನ ಚಂದ್ರಿಕೆಯಲ್ಲಿ ತರ್ಕತಾಂಡವ ನರ್ತನ ಮಾಡಿಸಿದರು.

ವಿಜಯೀಂದ್ರರೇ ಮೊದಲಾದ ಮುನಿಗಳು ದಿವ್ಯವಸ್ತ್ರಾಭರಣಗಳಿಂದ ನನ್ನನ್ನು ಶೃಂಗರಿಸಿದರು. ಆದರೇನು ಮತ್ತೆ ಅಜ್ಞಾನವು ಮುಸುಕಿ ಕತ್ತಲೆಯಾಯಿತು. ಮನಬಂದಂತೆ ಸಂಚರಿಸಿ ಪರಿಮಳಯುಕ್ತವಾದ ಸುಧಾಪಾನ ಮಾಡಬೇಕಾದರೆ ಕಾರ್ಮುಗಿಲಿನಿಂದ ಚಂದ್ರಿಕೆಯು ಮಬ್ಬಾಗಿ ಪ್ರಕಾಶ ಶೂನ್ಯವಾಗಿದೆ. ಸುಧೀಂದ್ರರು ನನ್ನನ್ನು ರಾಜಸಭೆಗಳಲ್ಲಿ ಮೆರೆಸಿದರೂ ಅಜ್ಞಾನಾಂಧಕಾರದಲ್ಲಿ ನಿರ್ಭಯಳಾಗಿ ಸಂಚರಿಸುವಂತಿಲ್ಲ. ನಿನಗೆ ಪ್ರಸನ್ನಳಾಗಿರುವೆನು. ನಿನ್ನ ವಾಕ್ಕಿನಲ್ಲಿ ಜಯಪ್ರದಳಾಗಿ ನೆಲೆಸಲು ನಿರ್ಧರಿಸಿರುವೆನು. ಮೂಲರಾಮರೇ ನಿನ್ನ ಸೇವೆಯನ್ನು ಸ್ವೀಕರಿಸಲು ಸಿದ್ಧರಾಗಿರುವರು. "ಕ್ಷಿಪ್ರದಲ್ಲಿ ಸನ್ಯಾಸಿಯಾಗು" ಎಂದು ನುಡಿದಳು.

ಆಚಾರ್ಯರು ಎಚ್ಚೆತ್ತರು. ಆನಂದಬಾಷ್ಪಗಳಿಂದ ಪುಳಕಿತರಾಗಿ ಅವರು ಈ ವಿಷಯವನ್ನು ತಮ್ಮ ಪ್ರಿಯ ಪತ್ನಿಗೆ ತಿಳಿಸಲು ಇಚ್ಛೆಪಟ್ಟರೂ, ಸನ್ಯಾಸ ಎಂದು ಕೇಳಿದರೆ ತಮ್ಮ ಪತ್ನಿ ಏನೆನ್ನುವಳೋ ಎಂದು ಯೋಚಿಸಿ ಮರುದಿನ ಸೂಕ್ತ ಸಂದರ್ಭದಲ್ಲಿ ವಿಷಯವನ್ನು ತಿಳಿಸಿದರಾಯಿತೆಂದುಕೊಂಡರು.

ತಮ್ಮ ಜೀವಿತ ಚರಿತ್ರೆಯ ಒಂದೊಂದಂಶವೂ ಆಚಾರ್ಯರ ನೆನಪಿಗೆ ಬಂತು. ಎಲ್ಲಕ್ಕಿಂತ ಮಿಗಿಲಾಗಿ ಗುರುಗಳ ಆಜ್ಞೆಯೂ, ವಾಗ್ದೇವಿಯ ವರವೂ ಅವರಿಗೆ ಸ್ಪಷ್ಟವಾಗಿ ಸ್ಮರಣೆಗೆ ಬಂದು, ಅವರು ಗುರುಗಳ ಆಜ್ಞೆಯನ್ನು ಪರಿಪಾಲಿಸಲು ಸಿದ್ಧರಾದರು. ಮರುದಿನ ತಮ್ಮ ಪತ್ನಿಗೆ ಆಚಾರ್ಯರು ತಮ್ಮ ನಿರ್ಧಾರ ತಿಳಿಸಿದಾಗ ಆಕೆ ಪತಿ ಸನ್ಯಾಸ ಸ್ವೀಕರಿಸುವ ವಿಷಯ ತಿಳಿದೇ ಮೂರ್ಛಿತಳಾದಳು. ಆಕೆ ತಿಳಿವಿಗೆ ಬಂದ ನಂತರ ಆಚಾರ್ಯರು ಆಡಿದ ಯಾವ ಮಾತಿಗೂ ಎದುರಾಡಲಿಲ್ಲ. ಲೋಕವೆಲ್ಲವೂ ಪೂಜಿಸುವ ಆ ಮಹಾನುಭಾವನ ಅರ್ಧಾಂಗಿಯಾಗಿದ್ದೇನೆಂಬ ಹೆಮ್ಮೆ ತನ್ನ ಪಾಲಿಗಿದ್ದೇ ಇರುತ್ತದೆ. ಮೇಲಾಗಿ ತಾನು ಬೇಡವೆಂದರೂ ತನ್ನ ಮಾತು ನಡೆಯಲಾರದೆಂದೆಣಿಸಿ ಸ್ವಾರ್ಥವನ್ನು ತ್ಯಾಗಮಾಡಿ ಸರಸ್ವತಿ ಗಂಡನ ಆಶ್ರಮ ಸ್ವೀಕಾರಕ್ಕೆ ಅನುಮತಿ ಇತ್ತಳು.

ಅನಂತರ ಶಾಲಿವಾಹನ ಶಕ 1545ನೇ ರುಧಿರೋದ್ಗಾರಿ ಸಂವತ್ಸರದ ಫಾಲ್ಗುಣ ಶುದ್ಧ ದ್ವಿತೀಯಾ ಕ್ರಮ ಸನ್ಯಾಸವೂ ಶ್ರೀರಾಘವೇಂದ್ರತೀರ್ಥರೆಂಬ ಆಶ್ರಮ ನಾಮಕರಣವೂ ಸಕಲ ರಾಜಮರ್ಯಾದೆಗಳೊಂದಿಗೆ ಮಹಾಪಟ್ಟಾಭಿಷೇಕವೂ ನಡೆದವು. ಶ್ರೀರಾಘವೇಂದ್ರ ಸ್ವಾಮಿಗಳ ಮಹಿಮೆ ವರ್ಣಿಸಲಸದಳವಾಗಿವೆ.

ಹೀಗೆ ರಾಘವೇಂದ್ರಸ್ವಾಮಿಗಳ ಪೂರ್ವಾಶ್ರಮದಲ್ಲೇ ಅನೇಕ ಮಹತ್ವಪೂರ್ಣ ಘಟನೆಗಳು ಜರುಗಲ್ಪಟ್ಟಿವೆ. ದೊಡ್ಡವರು ಬಾಳಿದ ರೀತಿಯಲ್ಲೇ ಸಮಾಜಕ್ಕೊಂದು ನೀತಿಪಾಠವಿರುತ್ತದೆ. ಇಂತಹ ಮಹಾನುಭಾವರ ಜೀವನ ನಮ್ಮ ಜೀವನಕ್ಕೆ ಒಂದು ಮಾರ್ಗದರ್ಶನವಾಗುತ್ತದೆ. ಇಂತಹ ಮಹನೀಯರನ್ನು ಪ್ರತಿದಿನವೂ ಸ್ಮರಿಸುವ ಮಾತ್ರದಿಂದ ನಮ್ಮ ಪಾಪಗಳು ತೊಳೆದು ಪರಮಾತ್ಮನ ಅನುಗ್ರಹಕ್ಕೆ ಪಾತ್ರರಾಗುವೆವು ಎಂಬುದು ಸರ್ವವಿದಿತವಾದ ವಿಷಯವೂ ಹೌದು.

ಕೀರ್ತಿಶೇಷರಾದ ಶ್ರೀಮತ್ಸುಜಯೀಂದ್ರತೀರ್ಥ ಶ್ರೀಪಾದಂಗಳವರು

ಲೇ॥ **ಮಾಗಡಿ ರಂಗನಾಥಾಚಾರ್ಯ**, ಮಂತ್ರಾಲಯ

ಸುಯಮೀಂದ್ರಕರಾಬ್ಜೋತ್ಥಂ ಸುವಿದ್ಯಾಬೋಧಕಂ ಸದಾ ।
ಸುಮೂಲರಾಮಪೂಜಾಢ್ಯಂ ಸುಜಯೀಂದ್ರಗುರುಂಭಜೇ ॥

ಮಾನವಜನ್ಮದ ಮಹತ್ವ—ಜೀವವರ್ಗವು ಜನ್ಮತಾಳುವ ನಾನಾ ಯೋನಿಗಳಲ್ಲಿ ಮಾನವನಾಗಿ ಹುಟ್ಟುವುದೇ ಒಂದು ಭಾಗ್ಯ.

"ದುರ್ಲಭೋಮಾನುಷೋದೇಹಃ
ದೇಹಿನಾಂಕ್ಷಣಭಂಗುರಃ ।
ತತ್ರಾಪಿದುರ್ಲಭಂಮನ್ಯೇ
ವೈಕುಂಠಪ್ರಿಯದರ್ಶನಮ್ ॥

ಎಂಬ ಭಾಗವತದ ವಚನದಂತೆ ಮಾನವನಾಗಿ ಹುಟ್ಟಿ ಆ ಜನ್ಮದಲ್ಲಿ ದುರ್ಲಭವಾದ ಪರಮಾತ್ಮನ ಅನುಗ್ರಹಕ್ಕೆ ಪಾತ್ರನಾಗಲು ಬಹುಪುಣ್ಯಮಾಡಿರಬೇಕು. ಅಂತಹ ಪುಣ್ಯ ಪರಿಪಾಕವಿಲ್ಲವಾದರೆ, ಕ್ರಿಮಿ, ಕೀಟ, ನಾಯಿ, ಕತ್ತೆ ಮೊದಲಾದ ಹೀನಯೋನಿಗಳಲ್ಲಿ ಹುಟ್ಟಿ ನಾನಾಬಗೆಯಾದ ದುಃಖಪರಂಪರೆಗೆ ಸಿಕ್ಕಿ ಜೀವನು ನರಳಬೇಕಾಗುತ್ತದೆ. ಮಾನವಜನ್ಮದಲ್ಲಿ ಬಂದಿರುವವನಿಗೆ ಇರತಕ್ಕ ಸೌಕರ್ಯಗಳು ಮತ್ತಾವ ಜನ್ಮದಲ್ಲೂ ಸಾಮಾನ್ಯವಾಗಿ ಇರುವುದಿಲ್ಲ. ಕೂಲಂಕಷವಾಗಿ ಪರಿಶೀಲಿಸಿದರೆ ಇದೊಂದು ಜೀವನಿಗೆ ಲಭ್ಯವಾಗಿರುವ ಸುವರ್ಣಾವಕಾಶವೆಂದೇ ಅರಿಯಬೇಕಾಗಿದೆ. ಯುಕ್ತಾಯುಕ್ತ ವಿವೇಚನಾಶಕ್ತಿ ಸಂಪನ್ನನಾದ ಮನುಷ್ಯನ ಮುಂದೆ ಇರತಕ್ಕ ಸಮಸ್ಯೆಗಳು ಹೇರಳವಾಗಿವೆ. ಕರ್ತವ್ಯಗಳಂತೂ ಅಪಾರವಾಗಿವೆ. ಹೀಗಿರುವಲ್ಲಿ ವಿವೇಕಶಾಲಿಯಾದವನು ಮಾಡಬೇಕಾದ ತತ್ವ ವಿಮರ್ಶೆಯು ಈ ಕೆಳಗೆ ಕಂಡಂತೆ ಹಲವು ಬಗೆಯಾಗಿವೆ.

ತತ್ವವಿಮರ್ಶೆ—ಪರಮಾತ್ಮನ ದಯೆಯಿಂದ ಮನುಷ್ಯ ವರ್ಗದಲ್ಲಿ ಜನ್ಮತಾಳಿರುವ ಚೇತನನು ಚಿಂತಿಸಬೇಕಾದ ಆತ್ಮಪರಿಶೋಧನೆಯು ಈ ರೀತಿ ಇದೆ. ನಾನು ಯಾರು? ಏತಕ್ಕಾಗಿ ಇರುತ್ತೇನೆ? ಎಲ್ಲಿಂದ ಬಂದಿದ್ದೇನೆ? ಹೇಗೆ ಬಂದಿದ್ದೇನೆ? ಹಿಂದೆ ಏನಾನಾಗಿ ಏನೇನನ್ನು ಅನುಭವಿಸಿದ್ದೇನೆ. ನನ್ನ ಕರ್ತವ್ಯವು ಏನು? ಈಗ ಏನು ಮಾಡುತ್ತಿದ್ದೇನೆ. ಏನನ್ನು ಆಚರಿಸಬೇಕು" ಮಾನವನು ತನ್ನ ಮೇಲ್ಮೆಗಾಗಿ ಆಚರಿಸತಕ್ಕವುಗಳಾವುವು? ಅವುಗಳನ್ನು ವಿಧಿಸತಕ್ಕ ವಿಧಿನಿಷೇಧ ಶಾಸ್ತ್ರಗಳಾವುವು? ಅವುಗಳಂತೆ ನಾನು ಇದ್ದೇನೆಯೋ ಹೇಗೆ? ನನ್ನ ಕರ್ತವ್ಯಗಳಲ್ಲಿ ಲೋಪದೋಷಗಳು ಏನೇನಿವೆ? ಆ ತಪ್ಪುಗಳನ್ನು ತಿದ್ದಿಕೊಂಡು ಆದರ್ಶವಾದ ಬಾಳ್ವೆಯಲ್ಲಿ ಬಾಳಲು ಸಾಧ್ಯವಿಲ್ಲವೇ? ಅದಕ್ಕಾಗಿ ನಾನೇನು ಪ್ರಯತ್ನಮಾಡಬೇಕು. ಹುಟ್ಟು-ಸಾವುಗಳ ಪರಂಪರೆಗೆ ಸಿಕ್ಕಿ ನರಳುತ್ತಿರುವ ಜೀವನಕ್ಷೇತ್ರದಲ್ಲಿ ತನಗೆ ನಿಜವಾಗಿಯೂ ಯಾವುದು ಹಿತವೆಂಬುದನ್ನು ಅರಿಯದೆ. ನಿತ್ಯವೂ ಅನೇಕ ಲೌಕಿಕವ್ಯವಹಾರಗಳಲ್ಲಿ ಮಿಂಚಿ ಕಡೆಗೆ ಒಂದಾನೊಂದು ದಿನ ಕಣ್ಮರೆಯಾಗುತ್ತಿರುವ ಈ ಬಾಳುವೆಗೆ ಇದರಲ್ಲಿ ಮುಳುಗಿ ತೇಲುತ್ತಿರುವ ಈ ಜೀವನಿಗೆ ಮುಂದೇನು ಗತಿ? ಮುಖ್ಯವಾಗಿ ಮನುಷ್ಯನಾಗಿ ಹುಟ್ಟಿದ ಮೇಲೆ ಸಾಧಿಸಬೇಕಾದ ಸಾಧನಗಳು ಯಾವುವು? ಈ ಚಿತ್ರವಿಚಿತ್ರವಾದ ಪ್ರಪಂಚದ ಸೃಷ್ಟಿ ನಿಯಮದ ಹಿಂದೆ ಅಡಗಿರತಕ್ಕ ರಹಸ್ಯವು ಏನು? ಯಾವ ಮಹಾನುಭಾವನ ನಿಯಂತ್ರಣಕ್ಕೆ ಒಳಪಟ್ಟು ಈ ಬಗೆಬಗೆಯಾದ ಬಾಹ್ಯಪ್ರಪಂಚವು ಅನಾದಿಯಾದ ಮೂಲಪ್ರಕೃತಿಯ ವಿಕಾರವಾಗಿ ಕಂಡುಬಂದಿದೆ. ಮುಂದಾದರೂ ಇದರ ಇತಿಮಿತಿಗಳೇನು?

"ಸುಖಮೇವ ಮೇಸ್ಯಾತ್ ದುಃಖಮನಾಗಿ ಮಾಭೂತ್" ಎಂದರೆ ನನಗೆ ಯಾವಾಗಲೂ ಶಾಶ್ವತವಾದ ಸುಖವೇ ಉಂಟಾಗಲಿ, ಲೇಶಮಾತ್ರವೂ ದುಃಖವು ಆಗದಿರಲಿ ಎಂದು ಎಲ್ಲರೂ ಬಯಸುವ, ನಿಜವಾದ ನಿತ್ಯವಾದ ಆನಂದವನ್ನು ಪಡೆಯುವ ಬಗೆ ಹೇಗೆ? ಅನಾದಿಯಾಗಿ ಬಂದು ಒದಗಿರತಕ್ಕ, ಬೆನ್ನುಹತ್ತಿದ ಪಿಶಾಚಿಯಂತೆ ಕಾಡಿಸುತ್ತಲಿರುವ ಈ ಸಂಸಾರಬಂಧಿಂಧವ ಬಿಡುಗಡೆಯು ಹೇಗೆ? ನನ್ನನ್ನು ದುಃಖಕ್ಕೆ ಈಡುಮಾಡುತ್ತಿರುವ ಬಂಧಗಳು ಯಾವುವು? ಅವುಗಳ ಮೇಲಿನ ಹತೋಟಿಯು ಒದೆತಪವು ನನಗೆ ನಿಜವಾಗಿಯೂ ಇವೆಯೇ? ಒಂದು ವೇಳೆ ನನಗೆ ಇರುವುದಾದರೆ ಕ್ಷಣಮಾತ್ರದಲ್ಲಿ ಅಂತಹ ಬಂಧವನ್ನು ಕಿತ್ತೊಗೆದು ಮೋಕ್ಷವನ್ನು ಏತಕ್ಕೆ ಪಡೆಯಬಾರದು. ಅದಿಲ್ಲದ ಪಕ್ಷದಲ್ಲಿ ಆಯಾ ಜೀವರ ಚಿತ್ರವಿಚಿತ್ರವಾದ ಸುಖದುಃಖಗಳಿಗೆ ಕಾರಣವಾದುದು ಯಾವುದು? ಅವಕ್ಕೆ ನಿಯಾಮಕನು ಯಾರು? ಅಸಂಖ್ಯಾತರಾದ ಜೀವರಿಗೆ ಪ್ರೇರಕನಾಗಿರುವವನು ಯಾರು? ಅವನ ಶಕ್ತಿಯು ಎಂತಹುದು. ಈ ಪ್ರಾಕೃತವಾದ ಅನಾದಿಯಾದ ಬಂಧಕ್ಕೆ ಆ ಮಹಾಪ್ರಭಾವನು ಸ್ವಾಮಿಯಾಗಿರುವನಾದರೆ, ಅವನ ಅನುಗ್ರಹದಿಂದಲೇ ಈ ಬಂಧವು ನಾಶವಾಗಬೇಕಾಗಿರುವ ಪ್ರಯುಕ್ತ ಅವನ ಪ್ರಸಾದವು ಹೇಗಾದೀತು? ಅವನ ಅಗ್ರಹಕ್ಕಾಗಿ (ಪ್ರಸಾದಕ್ಕಾಗಿ) ನಾನು ಆಚರಿಸಬೇಕಾದ ಸಾಧನಗಳು ಯಾವುವು? ಅವನ್ನು ತಿಳಿಸುವ ಪ್ರಮಾಣಗಳು ಯಾವುವು? ಅತೀಂದ್ರಿಯಗಳಾದ ಪಾಪ, ಪುಣ್ಯ, ಸ್ವರ್ಗ, ನರಕ, ಪರಮಾತ್ಮ, ಮೋಕ್ಷ ಇವೆಲ್ಲವೂ ಯಾವ ಅನಾದಿಯಾದ ಅಪೌರುಷೇಯವಾದ ವೇದದಿಂದ ತಿಳಿಯಲ್ಪಡುತ್ತವೆಯೋ, ಆ ವೇದವಾಣಿಯ ಆದೇಶವು ಎಂತಹುದು? ಅವನ್ನು ನಮಗೆ ಉಪದೇಶವನ್ನೀಯುವ ನಿಜವಾದ ಗುರುಗಳು ಯಾರು? ಅವರನ್ನು ಕಾಣುವ ಬಗೆ ಹೇಗೆ? ಇತ್ಯಾದಿಯಾದ ಅನೇಕ ಬಗೆಗಳಾದ ಪ್ರಶ್ನೆಗಳು ನಮ್ಮ ಮುಂದೆ ಪರಿಶೀಲನೆಗಾಗಿ ತೋರಿಬರುತ್ತಿರುವುದು ಸಹಜವಾಗಿದೆ. ಈ ರೀತಿ ಆತ್ಮ ತತ್ವಸಂಚಿಂತನೆಯಿಂದ ಎಚ್ಚೆತ್ತವನು ತನ್ನ ಜೀವನಕ್ಷೇತ್ರದಲ್ಲಿ ನಿತ್ಯದ ವ್ಯವಹಾರದಲ್ಲಿ, ವಿಚಾರದಲ್ಲಿ, ತನ್ನ ಆಗುಹೋಗುಗಳಲ್ಲಿ, ಲೋಕವಿಲಕ್ಷಣನಾಗಿಯೇ ಕಂಡು ಬರುತ್ತಾನೆ. ಅನಿತ್ಯವಾದ, ಹೇಯವಾದ, ಕ್ಷುದ್ರವಾದ, ಪ್ರಾಪಂಚಿಕ ವ್ಯವಹಾರಗಳಿಂದ ದೂರನಾಗಿರುತ್ತಾನೆ. ವೈರಾಗ್ಯಭಾಗ್ಯಸಂಪನ್ನನಾಗಿ ಸರ್ವದಾ "ಉತ್ತಿಷ್ಠತ, ಜಾಗ್ರತ, ಪ್ರಾಪ್ಯವರಾನ್ನಿಬೋಧತ" (ಕಠೋಪನಿಷತ್) ಎಂಬ ವೇದಪುರುಷನ ಸಂದೇಶದಂತೆ ಸರ್ವನಿಯಾಮಕನಾದ ಪರಮಾತ್ಮನ ಅನುಗ್ರಹಕ್ಕಾಗಿ, ತತ್ವಜ್ಞಾನಕ್ಕಾಗಿ ತಕ್ಕ ಗುರುಗಳನ್ನು ಪಡೆದು ಅವರ ಉಪದೇಶದಂತೆ ಸಿದ್ಧಿಮಾರ್ಗವನ್ನು ಅನುಸರಿಸಿ ಮೋಕ್ಷಾಪೇಕ್ಷಿಯಾಗಿ ಭಕ್ತಿಶ್ರದ್ಧೆಗಳಿಂದ, ಧ್ಯಾನದಂತೆ, ಪ್ರಜ್ಞಾನದಂತೆ ಅಪರ್ವಯುಕ್ತವಾದ ಆಚಾರ್ಯರ ವ್ಯವಹಾರಗಳನ್ನು ಮನಗಂಡು ಆಚರಿಸಿ ಪರಮಾತ್ಮನ ದಯೆಗೆ ಪಾತ್ರನಾಗಿ ಕೃತಕೃತ್ಯನಾಗುತ್ತಾನೆ.

ಗುರುಗಳ ಹಿರಿಮೆ—ಸರ್ವೋತ್ತಮನಾದ ಶ್ರೀಮನ್ನಾರಾಯಣನು, ರಾಮಕೃಷ್ಣಾದಿ ಅವತಾರಗಳಲ್ಲಿ ಭಕ್ತರನ್ನು ಉದ್ಧರಿಸಿರತಕ್ಕ ವಿಚಾರವನ್ನು ನಾವು ರಾಮಾಯಣ ಮಹಾಭಾರತಾದಿ ಗ್ರಂಥಗಳಿಂದ ತಿಳಿದಿದ್ದೇವೆ. ಪರಮಾತ್ಮನಾದರೋ ಭಕ್ತಿಗೆ ಒಲಿಯುವನೇ ಹೊರತು ರೂಪ, ಗುಣ, ಮೊದಲಾದವುಗಳಿಗೆ ಮೆಚ್ಚತಕ್ಕವನಲ್ಲ. "ಅಪ್ರಚ್ಯುತೋ ಗುರುದ್ವಾರಾ ಪ್ರಸಾದಕೃತ್" ಎಂಬಂತೆ ಗುರುಗಳ ಮೂಲಕವಾಗಿಯೇ ಪರಮಾತ್ಮನು ಅನುಗ್ರಹಿಸತಕ್ಕವನೆಂದು ಪ್ರಮಾಣಗಳು ಸಾರುತ್ತಲಿವೆ. ಪರಮಾತ್ಮನನ್ನು ಕಾಣಬೇಕಾದರೆ, ಅವಿದ್ಯೆಯೆಂಬ ನಿದ್ರೆಯಿಂದ, ಎದ್ದೇಳಿ ಎಚ್ಚರಗೊಳ್ಳಿ, ಶ್ರೇಷ್ಠರಾದ ಗುರುಗಳಲ್ಲಿ ಹೋಗಿ ಎಂದೇ ವೇದವಾಣಿಯು ಯೋಗ್ಯ ಚೇತನರನ್ನು ಸ್ಫೂರ್ತಿಗೊಳಿಸುತ್ತಲಿದೆ.

ಆ ವೇದವಾಣಿಯ ಸಂದೇಶವು ಈ ರೀತಿ ಇದೆ—ಎಲೈ ಸಾಧಕರೇ! ನಾನಾ ಬಗೆಗಳಿಂದ ಮೋಹಕಗಳಾದ ವಿಷಯಗಳನ್ನು ಮನಸ್ಸಿನಿಂದ ಚಿಂತಿಸುವುದರಿಂದ ಏನೂ ಪ್ರಯೋಜನವಿಲ್ಲ. ಅದರಿಂದ ದೂರ ಸರಿಯಿರಿ, ಆಲಸ್ಯವನ್ನು ಬಿಡಿರಿ, ಮಹಾತ್ಮರಾದ ಗುರುಗಳನ್ನು ಹುಡುಕಿ ಪಡೆಯಿರಿ. ಅವರಿಂದ ಪರಮಾತ್ಮನನ್ನು ತಿಳಿಯಿರಿ, ನಮ್ಮ ಕಷ್ಟಪರಂಪರೆಗಳನ್ನು ಪರಿಹಾರ ಮಾಡುವ ಶಕ್ತಿಯುಳ್ಳವನು ಆ ಸರ್ವೋತ್ತಮನಾದ ಆ ದೇವಾಧಿದೇವನೇ ಹೊರತು ಮತ್ತಾರಿಂದಲೂ ಸಾಧ್ಯವಿಲ್ಲ. ಈ ಸಂಸಾರವಾದರೋ, ಕೂದಲನ್ನು ಕತ್ತರಿಸುವ ಸಾಣೆ ಹಿಡಿದ ಚೂಪಾದ ಕತ್ತಿಯಂತಿದೆ, ಬಹುದುಃಖಕ್ಕೆ ಕಾರಣವಾಗಿದೆ. ಇದನ್ನು ಬಹಳ ಪ್ರಯತ್ನಮಾಡಿ ಕಷ್ಟದಿಂದ ದಾಟಬೇಕಾಗಿದೆ. ಇದರಿಂದ ದಾಟಿಸುವವನು ಶ್ರೀಹರಿಯೇ ಹೊರತು ಬೇರೆ ಉಪಾಯವೇ ಇಲ್ಲ. ಆ ಶ್ರೀಹರಿಯನ್ನು ವೈರಾಗ್ಯ, ಭಕ್ತಿಮೂಲಕ

ವಾಗಿ ಶ್ರವಣ, ಧ್ಯಾನಗಳೆಂಬ ಮಾರ್ಗದಿಂದ ಅತಿಕ್ಲೇಶದಿಂದ ತಿಳಿದು ಅವನನ್ನು ಸಾಕ್ಷಾತ್ಕರಿಸಿ ಮುಂದೆ ಅರ್ಚಿರಾದಿ ಮಾರ್ಗಗಳ ಮೂಲಕವಾಗಿ ಮೋಕ್ಷಕ್ಕೆ ಹೋಗಬೇಕಾಗಿದೆ "ಎಂದು ಜ್ಞಾನಿಗಳು ಹೇಳುತ್ತಾರೆ" ಎಂದು ವೇದವಾಣಿಯ ಸಂದೇಶವಾಗಿದೆ.

ವೇದಪುರುಷನ ಸಂದೇಶದಂತೆ ನಾವು ಪಡೆಯಬೇಕಾಗಿರುವ ಗುರುಗಳಾದರೋ ಹಂಸನಾಮಕ ಪರಮಾತ್ಮನಿಂದ ಪ್ರಾರಂಭವಾಗಿರುವ ಪರಂಪರೆ ಸೇರಿದವರಾಗಿರಬೇಕು. ಇಂತಹ ಭವ್ಯವಾದ, ದಿವ್ಯವಾದ ಪರಂಪರೆಗೆ ಸೇರಿದ ಹಿಂದೆ ಶ್ರೀನೃಸಿಂಹ ದೇವರ ಪರಮಾನುಗ್ರಹಕ್ಕೆ ಪಾತ್ರರಾಗಿ ಪ್ರಹ್ಲಾದರಾಜರಾಗಿಯೂ, ಶ್ರೀಕೃಷ್ಣ ಪರಮಾತ್ಮನನ್ನು ತಮ್ಮ ತಪೋಬಲದಿಂದ ಭಕ್ತಿಭಾವದಿಂದ ಮೆಚ್ಚಿಸಿ ಕುಣಿಸಿದ ಕೀರ್ತಿಸಂಪನ್ನರಾದ ಶ್ರೀವ್ಯಾಸರಾಜರಾಗಿಯೂ, ಅವತರಿಸಿದ್ದ, ಇಂದಿಗೆ ಕಲಿಯುಗದ ಕಲ್ಪವೃಕ್ಷ ಕಾಮಧೇನುಗಳೆಂಬ ಕೀರ್ತಿಪ್ರತಿಷ್ಠೆಗಳಿಗೆ ವಿಷಯರಾದ ಶ್ರೀಮದ್ರಾಘವೇಂದ್ರ ಗುರುಸಾರ್ವಭೌಮರು ವಿಶ್ವವಿಖ್ಯಾತರಾಗಿ ಶ್ರೀಮನ್ಮಂತ್ರಾಲಯ ದಿವ್ಯಕ್ಷೇತ್ರದಲ್ಲಿ ಅಸಂಖ್ಯಾತರಾದ ಭಕ್ತರಿಗೆ ಇಷ್ಟಾರ್ಥಗಳನ್ನು ಕರುಣಿಸುತ್ತಾ ವಿಜೃಂಭಿಸುತ್ತಿರುತ್ತಾರೆ. ಇಂತಹ ಶ್ರೀಗುರುರಾಜರ ದಿವ್ಯ ಪರಂಪರೆಯಲ್ಲಿ ಶ್ರೀಮದಾಚಾರ್ಯರಿಂದ 52ನೆಯವರಾಗಿಯೂ, ಶ್ರೀರಾಘವೇಂದ್ರಗುರುಸಾರ್ವಭೌಮರಿಂದ 20ನೆಯವರಾಗಿಯೂ ವೇದಾಂತ ಸಾಮ್ರಾಜ್ಯ ಪೀಠವನ್ನು ಅಲಂಕರಿಸಿ ಅಖಂಡವಾಗಿ 23 ವರ್ಷಗಳ ಕಾಲ ಪೀಠಾಧಿಪತಿಗಳಾಗಿ ಶಾಶ್ವತಗಳಾದ ಇತರರಿಗೆ ಅನುಕರಣೀಯವಾದ ಸತ್ಕಾರ್ಯಗಳನ್ನು ನಡೆಸಿದ ಮಹಾನುಭಾವರು ಶ್ರೀಶ್ರೀಸುಜಯೀಂದ್ರತೀರ್ಥಶ್ರೀಪಾದಂಗಳವರು.

ಈ ಮಹಾನುಭಾವರು ಪೂರ್ವಾಶ್ರಮದಲ್ಲಿ ಶ್ರೀಗುರುರಾಜರ ಪೂರ್ವಾಶ್ರಮದ ಗೌತಮ ಗೋತ್ರಕ್ಕೆ ಸೇರಿದವರೇ ಆಗಿದ್ದರು. ಶ್ರೀಮಂತ್ರಾಲಯ ಕ್ಷೇತ್ರದಲ್ಲಿರುವ ಶ್ರೀರಾಘವೇಂದ್ರ ಗುರುಸಾರ್ವಭೌಮರ ದಿವ್ಯ ಬೃಂದಾವನದ ಪಕ್ಕದಲ್ಲಿರುವ ಶ್ರೀವಾದೀಂದ್ರಗುರುವರೇಣ್ಯರಂತೆ ಶ್ರೀಮತ್ಸುಜಯೀಂದ್ರ ತೀರ್ಥರೂ ಸಹ ಉಭಯವಂಶಾಬ್ಧಿ ಚಂದ್ರಮರೇ ಆಗಿರುತ್ತಾರೆ. ಇವರ ಪೂರ್ವಾಶ್ರಮದ ಹೆಸರು ಶ್ರೀವೆಂಕಟರಾಘವೇಂದ್ರಾಚಾರ್ಯರು ತಮ್ಮ 54ನೇ ವಯಸ್ಸಿನಲ್ಲಿ ಇವರು ಪ್ರಾತಃಸ್ಮರಣೀಯರಾದ ಶ್ರೀಮತ್ಸುಯಮೀಂದ್ರ ತೀರ್ಥ ಶ್ರೀಪಾದಂಗಳವರಿಂದ 1963ನೇ ಇಸವಿಯಲ್ಲಿ ಆಶ್ರಮಸ್ವೀಕಾರಮಾಡಿ ಅಖಂಡವಾಗಿ 23 ವರ್ಷಗಳ ಕಾಲ ವೇದಾಂತ ಸಾಮ್ರಾಜ್ಯ ಪೀಠಾಧಿಪತಿಗಳಾಗಿ ಶ್ರೀಮದ್ರಾಘವೇಂದ್ರ ಗುರುಸಾರ್ವಭೌಮರ ಪರಮಾನುಗ್ರಹಕ್ಕೆ ಪಾತ್ರರಾಗಿ ಆಚಂದ್ರಾರ್ಕವಾಗಿ ಶ್ರೀಮಠದ ಕೀರ್ತಿಪ್ರತಿಷ್ಠೆಗಳು ಬೆಳಗುವಂತಹ ಮಹೋನ್ನತಗಳಾದ, ಶಾಶ್ವತಗಳಾದ ಭವ್ಯವಾದ ಸತ್ಕಾರ್ಯಗಳನ್ನು ಮಾಡಿ ಕೃತಕೃತ್ಯರಾಗಿ ಕೀರ್ತಿಶೇಷರಾಗಿರುತ್ತಾರೆ. ಶ್ರೀಮತ್ಸುಜಯೀಂದ್ರತೀರ್ಥ ಶ್ರೀಪಾದಂಗಳವರ ಕಾಲದಲ್ಲಿ ಆಗಿರತಕ್ಕ ಭವ್ಯವಾದ ಅಭಿವೃದ್ಧಿ ಕಾರ್ಯಗಳ ಪಕ್ಷಿನೋಟ.

1) ಇವರ ಕಾಲದಲ್ಲಿ ಶ್ರೀಮಂತ್ರಾಲಯ ಕ್ಷೇತ್ರವು ವಿಶೇಷವಾಗಿ ಅಭಿವೃದ್ಧಿಯನ್ನು ಹೊಂದಿದೆ.

2) ಶ್ರೀಗುರುರಾಜರ ದಿವ್ಯ ಬೃಂದಾವನದ ಪ್ರಾಂಗಣದಲ್ಲಿ ಹಿಂದಿನ ಹಳೆಯ ನೆಲ ಭಾಗವನ್ನು ಬದಲಾಯಿಸಿ ಶಾಶ್ವತವಾದ ಭದ್ರವಾದ ತಾರಸೀಕಟ್ಟಡವನ್ನು ರಚಿಸಲಾಗಿದೆ.

3) ಯಾತ್ರಿಕರ ಸೌಕರ್ಯಕ್ಕಾಗಿ ನೂರಾರು ಕಾಟೇಜುಗಳು ನಿರ್ಮಿತವಾಗಿವೆ.

4) ಸಕಲ ಸೌಕರ್ಯಗಳನ್ನುಳ್ಳ ವಿಶಾಲವಾದ ಪರಿಮಳ ಕಲ್ಯಾಣಮಂಟಪವು ರಚಿತವಾಗಿದೆ.

5) ಶ್ರೀಮಠದ ಆದಾಯದಲ್ಲಿ ಶಾಶ್ವತವಾದ ಒಂದುಕೋಟಿಗೂ ಮೀರಿದ ಸಂಸ್ಕೃತಿ ಪ್ರಸಾರಾಂಗವಾಗಿ ನಡೆಸತಕ್ಕ ಜ್ಞಾನಕಾರ್ಯ ಧರ್ಮಕಾರ್ಯಗಳಿಗಾಗಿ ನಿಧಿಯನ್ನು ಏರ್ಪಡಿಸಲಾಗಿದೆ.

6) ಹಿಂದೆ ಎಂದೂ ಅಚ್ಚಾಗದಿರುವ ಪ್ರಾಚೀನಗ್ರಂಥಗಳು ಅಚ್ಚಾಗಿ ಪ್ರಕಾಶಗೊಳಿಸಲ್ಪಟ್ಟಿವೆ.

7) ಪ್ರತಿವರ್ಷವೂ ಹಿಂದೆ ನಡೆಸುತ್ತಿದ್ದ ಶ್ರೀಮತ್ಸಮೀರ ಸಮಯ ಸಂವರ್ಧಿನಿ' ಸಭೆಯನ್ನು ಮಹಾಕ್ಕೆ ಎರಡಾವರ್ತಿ ಶ್ರೀಗಳವರು ತಮ್ಮ ಕಾಲದಲ್ಲಿ ಏರ್ಪಡಿಸಿರುತ್ತಾರೆ.

8) ದೇಶದ ಮೂಲೆ ಮೂಲೆಗಳಿಂದ ವಿದ್ವಾಂಸರನ್ನು ಕರೆಯಿಸಿ ಪ್ರೋತ್ಸಾಹಿಸಿ ವಿದ್ಯಾಪ್ರಸಾರಕ್ಕೆ, ಜ್ಞಾನ ಕಾರ್ಯಕ್ಕೆ ವಿಶೇಷಾಕಾರವಾಗಿ ಉತ್ತೇಜನವನ್ನೀಯುವ ಕಾರ್ಯಕ್ರಮವನ್ನು ವ್ಯವಸ್ಥೆಗೊಳಿಸಿರುತ್ತಾರೆ.

9) "ನಾನ್ನೋದಕಸಮಂದಾನಂ" ಎಂಬಂತೆ ಭಕ್ತವೃಂದಕ್ಕೆ ಪ್ರತಿನಿತ್ಯವೂ ಸಹಸ್ರಾರು ಜನಕ್ಕೆ ಅನ್ನದಾನದ ಏರ್ಪಾಟನ್ನು ಮಾಡಿರುವುದರಿಂದ ಒಂದುತಿಂಗಳಿಗೆ ಸುಮಾರು ಒಂದುಲಕ್ಷಜನರು ಪ್ರಸಾದವನ್ನು ಸ್ವೀಕರಿಸುತ್ತಿರುವುದು ಪ್ರತ್ಯಕ್ಷ ನಿರ್ದಶನವಾಗಿದೆ.

10) ಪ್ರಾಚೀನಗಳಾದ ಶಾಸ್ತ್ರಗಳ ಪಾಠಪ್ರವಚನಗಳ ಪ್ರೋತ್ಸಾಹಾಂಗವಾಗಿ "ಶ್ರೀರಾಘವೇಂದ್ರ ಗುರುಸಾರ್ವಭೌಮ ಸಂಸ್ಕೃತಿ ವಿದ್ಯಾಪೀಠವನ್ನು" ಸ್ಥಾಪಿಸಿ ಅದರಲ್ಲಿ ಸುಪ್ರಸಿದ್ಧರಾದ ರಾಷ್ಟ್ರಪ್ರಶಸ್ತಿವಿಜೇತರಾದ ಪಂಡಿತರುಗಳನ್ನು ಪಾಠಹೇಳಲು ನೇಮಿಸಿ, ನೂರಾರು ಜನ ವಿದ್ಯಾರ್ಥಿಗಳಿಗೆ ಊಟ, ವಸತಿ, ವಸ್ತ್ರ ವೇತನ ಮೊದಲಾದ ಸಕಲ ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿರುತ್ತಾರೆ

11) ದೇಶ, ವಿದೇಶಗಳಲ್ಲಿ ಆಬಾಲವೃದ್ಧರವರೆವಿಗೂ, ತತ್ವವಿಚಾರವು ತಿಳಿಯಲೆಂಬ ದೃಷ್ಟಿಯಿಂದ ಪ್ರತಿತಿಂಗಳೂ ಪ್ರಕಟಿಸಲ್ಪಡುವ, "ಶ್ರೀಗುರುಸಾರ್ವಭೌಮ" ಎಂಬ ಹೆಸರಿನ ಮಾಸಪತ್ರಿಕೆಯನ್ನು ಸ್ಥಾಪಿಸಿ ನಡೆಸುತ್ತಿರುವ ಏರ್ಪಾಟನ್ನು ಶ್ರೀಗಳವರು ಮಾಡಿರುವುದು ಅಭಿನಂದನೀಯ ಕಾರ್ಯವಾಗಿದೆ. ಜಿಜ್ಞಾಸು ಜನಗಳಿಗೆ ಇದರಿಂದ ಮಹೋಪಕಾರವಾಗಿದೆ. ಇದೊಂದು ಚಿರಸ್ಮರಣೀಯ ಉಪಕಾರವಾಗಿದೆ.

12) ಶ್ರೀಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠದ "ಅಂಗವಾಗಿ ಸುಮಾರು ಇಪ್ಪತ್ತನಾಲ್ಕು ಪ್ರಮುಖ ನಗರಗಳಲ್ಲಿ ಶಾಖಾ ವಿದ್ಯಾಪೀಠಗಳನ್ನು ಸ್ಥಾಪಿಸಿ, ಅಲ್ಲಿಯ ವಿದ್ಯಾರ್ಥಿಗಳು ಸಂಸ್ಕೃತ ಭಾಷೆಯನ್ನು ಕಲಿಯಲು ತಕ್ಕ ಏರ್ಪಾಟನ್ನು ಮಾಡಲಾಗಿದೆ.

13) ಶ್ರೀಮತ್ಸುಜಯೀಂದ್ರತೀರ್ಥರ ಕಾಲದಲ್ಲಿ ಶ್ರೀಮಂತ್ರಾಲಯದ ಪ್ರಧಾನ ಕೇಂದ್ರದಲ್ಲೂ, ಅದರ ಶಾಖಾ ಮಠಗಳಲ್ಲೂ ಒಟ್ಟು ಸುಮಾರು ಒಂದು ಸಹಸ್ರ ಜನಕ್ಕೆ ಜೀವನಮಾರ್ಗವನ್ನು ಕಲ್ಪಿಸಿಕೊಡಲಾಗಿದೆ.

14) ಶ್ರೀಗುರುರಾಜರ ಭವ್ಯವಾದ ಬೃಂದಾವನಕ್ಕೆ ಚಿನ್ನದ ಕವಚನನ್ನು ಮಾಡಿಸಲಾಗಿದೆ.

15) ಕಟ್ಟಡಗಳ ನಿರ್ಮಾಣಕ್ಕಾಗಿ ಪ್ರತ್ಯೇಕವಾದ ವ್ಯವಸ್ಥೆಯನ್ನು ಮಾಡಿರುವುದಲ್ಲದೆ ಪ್ರಸಿದ್ಧಗಳಾದ ನಗರಗಳಲ್ಲಿ ಮುಖ್ಯವಾಗಿ ರಾಯಚೂರು, ಹೈದರಾಬಾದ್, ಬೆಂಗಳೂರು, ಮದರಾಸು, ಬಳ್ಳಾರಿ ಮೊದಲಾದ ನಗರಗಳಲ್ಲಿ ವಿಸ್ತಾರವಾದ ಕಲ್ಯಾಣಮಂಟಪಗಳನ್ನು ಕಟ್ಟಿಸಿ ಜನತೆಯ ಕಲ್ಯಾಣ ಕಾರ್ಯಗಳಿಗೆ ಉಪಕಾರ ಮಾಡಿರುವುದು ಶ್ಲಾಘನೀಯವಾಗಿದೆ.

16) ಶ್ರೀಮಠದ ಧಾರ್ಮಿಕ ಕಾರ್ಯಗಳೆಲ್ಲಾ ಹಿಂದಿನ ಸಂಪ್ರದಾಯಕ್ಕೆ ಚಾಚೂ ತಪ್ಪದಂತೆ ಶಿಸ್ತಿನಿಂದ ನಡೆದು ಬರುವಂತೆಯೂ, ಶಿಷ್ಯವರ್ಗಕ್ಕೆ ನಿತ್ಯನೈಮಿತ್ತಿಕ ಧರ್ಮಕಾರ್ಯಗಳನ್ನರಿಯಲು ಪ್ರತಿವರ್ಷವೂ ಸಾವಿರಾರು ರೂಗಳನ್ನು ಖರ್ಚುಮಾಡಿ ಪಂಚಾಂಗವನ್ನು ಅಚ್ಚುಮಾಡಿಸಿ, ಉಚಿತವಾಗಿ ಹಂಚುವ ಏರ್ಪಾಟನ್ನು ಮಾಡಿರುತ್ತಾರೆ.

17) ಅಣುಮಂತ್ರಾಲಯವೆಂದು ವಿಖ್ಯಾತವಾದ ಶ್ರೀಹೊಸರಿತ್ತಿ ಕ್ಷೇತ್ರದಲ್ಲಿ ಭವ್ಯವಾದ ಮುಖಮಂಟಪದ ನಿರ್ಮಾಣವು ಶ್ರೀಗಳವರ ಕಾಲದಲ್ಲಿ ನಡೆದಿದೆ. ಮತ್ತು ಪ್ರತಿನಿತ್ಯದ ಹಸ್ತೋದಕ ಮೊದಲಾದ

ಧಾರ್ಮಿಕ ಕಾರ್ಯಗಳು ಯಾವ ಲೋಪವೂ ಇಲ್ಲದಂತೆ ಆ ಕ್ಷೇತ್ರದಲ್ಲಿ ನಡೆಯಲು ಅಲ್ಲಿ ಶಾಶ್ವತವಾದ ನಿಧಿಯನ್ನು ಏರ್ಪಡಿಸಿರುತ್ತಾರೆ.

18) ಶ್ರೀರಂಗಕ್ಷೇತ್ರದಲ್ಲಿ ಶ್ರೀಮಠಕ್ಕೆ ಸಂಬಂಧಪಟ್ಟಂತಿರುವ ಭಾಗದಲ್ಲಿ ಭವ್ಯವಾದ ವಿಶಾಲವಾದ ಪ್ರಾಕಾರ ನಿರ್ಮಾಣವೂ, ಬೆಲೆ ಬಾಳತಕ್ಕ ರಜತರಥವೂ ಶ್ರೀಗಳವರ ಕಾಲದಲ್ಲಿ ಆಗಿರುತ್ತದೆ.

19) ಕುಂಭಕೋಣ ಕ್ಷೇತ್ರದಲ್ಲಿ ಶ್ರೀಮಠದ ಹೊಸ ಕಟ್ಟಡವು ತಯಾರಾಗಿದೆ.

20) ಬೆಂಗಳೂರಿನ ಜಯನಗರದ 5ನೇ ಬ್ಲಾಕಿನ ಶ್ರೀಮಠವೂ ಸಹ ಶ್ರೀಗಳವರ ಕಾಲದಲ್ಲಿ ನಿರ್ಮಾಣವಾಗಿದೆ.

21) ಬೆಂಗಳೂರು ನಗರದಲ್ಲಿ ಸೀತಾಪತಿ ಅಗ್ರಹಾರದಲ್ಲಿರುವ ಶ್ರೀಮಠದ ಮುಂಭಾಗದಲ್ಲಿ ಸುಮಾರು ಆರು ಲಕ್ಷರೂಪಾಯಿಗಳ ವೆಚ್ಚದಿಂದ ವಿಶಾಲವಾದ ಕಲ್ಯಾಣ ಮಂಟಪಕ್ಕೆ ತಕ್ಕ ಹಣವನ್ನು ಮಂಜೂರು ಮಾಡಿ, ಅದು ನಿರ್ಮಾಣವಾಗಲು ಶ್ರೀಗಳವರು ಕಾರಣರಾಗಿರುತ್ತಾರೆ.

22) ಸುಪ್ರಸಿದ್ಧ ಕ್ಷೇತ್ರವಾದ ಶ್ರೀತಿರುಪತಿ ಕ್ಷೇತ್ರದಲ್ಲಿ ಬೆಟ್ಟದ ಮೇಲೆ ಹೊಸದಾಗಿ ಶ್ರೀಮಠದ ಕಟ್ಟಡವು ರಚಿತವಾಗುತ್ತಿದೆ. ಇದರ ಪ್ರಾರಂಭವು ಶ್ರೀಗಳವರ ಕಾಲದಲ್ಲೇ ನಡೆದಿದೆ.

23) ಶ್ರೀಮಂತ್ರಾಲಯ ಕ್ಷೇತ್ರದಲ್ಲಿ ನೀರಿನ ದಾಸ್ತಾನಿನ ಟ್ಯಾಂಕ್ ನಿರ್ಮಾಣವು ಶ್ರೀಗಳವರ ಕಾಲದಲ್ಲಿ ನಡೆದಿದೆ.

24) ಶ್ರೀಮಂತ್ರಾಲಯ ಕ್ಷೇತ್ರದಲ್ಲಿ ಭಕ್ತಜನರ ಸೌಕರ್ಯಕ್ಕಾಗಿ ಅನೇಕ ಲಕ್ಷರೂಪಾಯಿಗಳ ವೆಚ್ಚದಿಂದ ಆಧುನಿಕ ಸೌಕರ್ಯವುಳ್ಳ ಆಸ್ಪತ್ರೆಯ ನಿರ್ಮಾಣವು ಶ್ರೀಸುಜಯೀಂದ್ರ ತೀರ್ಥಗುರುವರೇಣ್ಯರ ಕಾಲದಲ್ಲೇ ಪ್ರಾರಂಭವಾಗಿದೆ.

25) ಆಂಧ್ರಪ್ರದೇಶದಲ್ಲಿ ಪ್ರಸಿದ್ಧವಾದ ಅನಂತಪುರದಲ್ಲಿ ಶ್ರೀರಾಯರ ಮಠವು ಹೊಸದಾಗಿ ಪ್ರಾರಂಭವಾಗಲು ಕಾರಣಕರ್ತರು ಶ್ರೀಮತ್ಸುಜಯೀಂದ್ರ ತೀರ್ಥ ಶ್ರೀಪಾದಂಗಳವರು.

26) ಶ್ರೀಮಂತ್ರಾಲಯ ಕ್ಷೇತ್ರದಲ್ಲಿ ನಡೆಯುತಕ್ಕ ನಿತ್ಯ ಸೇವೆಗಳಲ್ಲಿ "ಪ್ರತ್ಯಕ್ಷ ಗಜವಾಹನೋತ್ಸವವು "ಶ್ರೀಮತ್ಸುಜಯೀಂದ್ರರ ಕಾಲದಲ್ಲಿ' ಪ್ರಾರಂಭವಾಯಿತು.

27) ದೇಶವಿದೇಶಗಳಿಂದ ಬರತಕ್ಕ ಭಕ್ತರು ಭಕ್ತಿಭಾವದಿಂದ ಮುಡಿ ಕೊಡಲಿಕ್ಕೆ ತಕ್ಕ ಏರ್ಪಾಟನ್ನು ನದೀ ಗಡ್ಡೆಯಲ್ಲಿ ಮಾಡಿಸಿದವರು ಶ್ರೀಸುಜಯೀಂದ್ರತೀರ್ಥರು.

28) ಶ್ರೀಮಂತ್ರಾಲಯ ಕ್ಷೇತ್ರದಲ್ಲಿ ಹೊಸ ಹೊಸ ಬಡಾವಣೆಗಳು ಶ್ರೀಸುಜಯೀಂದ್ರತೀರ್ಥರ ಕಾಲದಲ್ಲಿ ನಡೆದಿವೆ.

29) ಶ್ರೀಮತ್ಸುಜಯೀಂದ್ರರ ಅಮೃತಹಸ್ತದಿಂದ ಹೊಸದಾಗಿ ಮದರಾಸ್ ನಗರದಲ್ಲಿಯೂ, ಚಾರಿತ್ರಿಕ ಹಿನ್ನೆಲೆಯನ್ನುಳ್ಳ ಚಿತ್ರದುರ್ಗದಲ್ಲಿಯೂ, ಬಾಗಲಕೋಟೆಯಲ್ಲಿಯೂ, ಇನ್ನೂ ಅನೇಕ ಕಡೆ ಶ್ರೀಗುರುರಾಜರ ಮೃತ್ತಿಕಾ ಬೃಂದಾವನಗಳು ಪ್ರತಿಷ್ಠಿತಗಳಾಗಿರುವುವಲ್ಲದೆ, ಶ್ರೀಸುಜಯೀಂದ್ರರು ವಿಶೇಷಕಾರವಾಗಿ ಶ್ರೀಗುರುರಾಜರ ಪರಮಾನುಗ್ರಹಕ್ಕೆ ಪಾತ್ರರಾಗಿದ್ದುದರಿಂದ, ಅವರಿಂದ ಪ್ರತಿಷ್ಠಿತವಾದ ಕಡೆಗಳಲ್ಲೆಲ್ಲಾ ದಿನದಿನಕ್ಕೂ ಅತಿಶಯಿತವಾದ ಪೂಜಾ ವೈಭವಾದಿಗಳು ಅವಿಚ್ಛಿನ್ನವಾಗಿ ನಡೆಯುತ್ತಲಿವೆ.

30) ಆರ್ಥಿಕ ದೃಷ್ಟಿಯಿಂದ ಶ್ರೀಸುಜಯೀಂದ್ರರ ಕಾಲದಲ್ಲಿ ಶ್ರೀಮಠವು ಇಡೀ ಮಾಧ್ವ ಮಠಗಳಲ್ಲೆಲ್ಲಾ "ಶ್ರೀಮಂತ ಮಠವೆಂಬ" ಕೀರ್ತಿಪ್ರತಿಷ್ಠೆಗಳಿಗೆ ಪಾತ್ರವಾಗಿ ಇಡೀ ಭಾರತ ಭೂಮಿಯಲ್ಲಿ ಮಾತ್ರವಲ್ಲದೆ ವಿದೇಶಗಳಲ್ಲೂ ವಿಖ್ಯಾತಿಯನ್ನು ಪಡೆದಿರತಕ್ಕ ಸಂಗತಿಯು ವಿಶ್ವವಿದಿತವಾಗಿದೆ.
ಶ್ರೀರಾಘವೇಂದ್ರ ಗುರುಸಾರ್ವಭೌಮರ ವೇದಾಂತ ಸಾಮ್ರಾಜ್ಯ ಪೀಠವನ್ನು ಅಲಂಕರಿಸಿದ್ದ ಶ್ರೀಸುಜಯೀಂದ್ರತೀರ್ಥ ಶ್ರೀಪಾದಂಗಳವರನ್ನು ಓರ್ವಶಕ ಪುರುಷರೆಂದು ವಿಮರ್ಶಕರು ಕರೆದಿರುತ್ತಾರೆ.

31) ಈ ಮಹಾನುಭಾವರು ಶ್ರೀಗುರುರಾಜರ ಮೂಲಬೃಂದಾವನದ ಸನ್ನಿಧಾನದಲ್ಲಿ ಅವಿಚ್ಛಿನ್ನವಾಗಿ ಶ್ರೀಮತ್ಪರಿಮಳ ವ್ಯಾಖ್ಯಾ ಸಹಿತವಾಗಿ ಶ್ರೀಮನ್ನ್ಯಾಯಸುಧಾ ಪಾಠಪ್ರವಚನವನ್ನು ಏರ್ಪಡಿಸಿರುವುದಲ್ಲದೆ ಅದು ನಿತ್ಯವೂ ನಡೆಯುತ್ತಿರುವುದು ಅತ್ಯಂತ ಶ್ಲಾಘನೀಯವಾದ ವಿಷಯವಾಗಿದೆ. ಜಿಜ್ಞಾಸುಗಳಾದ ಸಜ್ಜನರಿಗೆ ಇಂತಹದೊಂದು ಸುವರ್ಣಾವಕಾಶವನ್ನು ಕಲ್ಪಿಸಿಕೊಟ್ಟು ಶ್ರೀಮತ್ಸುಜಯೀಂದ್ರತೀರ್ಥರು ಸರ್ವ ಸಜ್ಜನರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಇಂತಹ ಅಮೋಘ ಸತ್ಕಾರ್ಯಗಳನ್ನು ನಡೆಸಿರತಕ್ಕ ಶ್ರೀ ೧೦೮ ಶ್ರೀಮತ್ಸುಜಯೀಂದ್ರ ತೀರ್ಥಗುರುವರೇಣ್ಯ ಅಂತರ್ಗತನಾದ ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಮನ್ಮೂಲರಾಮಚಂದ್ರದೇವರಿಗೆ ಭೂಯೋ ಭೂಯೋನಮ ಉಕ್ತಿಯನು ಸಮರ್ಪಿಸಿ ಈ ಚಿಕ್ಕ ಲೇಖನವನ್ನು ಆ ಮೂಲರಾಮನ ಅಡಿದಾವರೆಗಳಲ್ಲಿ ಸಮರ್ಪಿಸಿ ವಿರಮಿಸುತ್ತೇನೆ.

ಯಾವದಸ್ತಿತ್ರಯ ಲೋಕೋನಾರಾಯಣಮುಖೋದ್ಗತಾ |
ಯಾವದ್ರಾಮಚರಿತಂ ವಾಲ್ಮೀಕಿಮುಖನಿಸ್ಸೃತಮ ||
ಯಾವಚ್ಚವಂಶೋಽಸ್ತ್ಯಾರ್ಯಾಣಾಂ ಯಾವದಸ್ತಿ ಹಿಮಾಲಯಃ |
ಯಾವದ್ಗಂಗಾಚಗೋದಾಚ ಸುಜಯೀಂದ್ರಪ್ರಪೋಷಿತ |
ತಾವಚ್ಛ್ರೀರಾಘವೇಂದ್ರಸ್ಯ ಮಠಃಸ್ಥಾಸ್ಯತಿಭೂತಲೇ ||

॥ ಶ್ರೀ ॥

ಶ್ರೀ ರಾಘವೇಂದ್ರರ ತತ್ವಗಳು

ಬರೆದವರು :

ಕೆ. ಎಸ್. ಸತ್ಯನಾರಾಯಣಾಚಾರ್ಯ
ಮಾಧ್ವವೇದಾಂತ ಪಾಠಶಾಲಾ
ರಾಜಾಜಿನಗರ, ಬೆಂಗಳೂರು.

" ಪೂಜ್ಯಾಯ ರಾಘವೇಂದ್ರಾಯ ಸತ್ಯಧರ್ಮ ರತಾಯಚ ।
ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನವೇ ॥

1. ಇಂದು ಎಲ್ಲಾ ವರ್ಣದವರು ಮಂತ್ರಾಲಯ ಪ್ರಭುಗಳನ್ನು ಗುರುಗಳೆಂದು ಭಕ್ತಿ ಮಾಡುತ್ತಾರೆ. ಐಹಿಕ, ಆಮುಷ್ಮಿಕ (ಪಾರಮಾರ್ಥಿಕ) ಫಲಗಳನ್ನು ಕೊಡುವುದರಲ್ಲಿ ಕಾಮಧೇನು ಕಲ್ಪವೃಕ್ಷರಾಗಿ ವೃಂದಾವನದಲ್ಲಿ ರಾರಾಜಿಸುತ್ತಿದ್ದಾರೆ. ಇವರಲ್ಲಿ ಹೆಚ್ಚಿನ ಭಕ್ತಿ ಬರಬೇಕಾದರೆ ಇವರ ಮಹಾತ್ಮ್ಯೆ ಮತ್ತು ಅವರ ತತ್ವಗಳನ್ನು ತಿಳಿದರೆ ಅವರು ಪ್ರೀತರಾಗಿ ಇಷ್ಟಾರ್ಥಗಳನ್ನು ಕರುಣಿಸುತ್ತಾರೆ. ಶ್ರೀ ರಾಘವೇಂದ್ರರ ತತ್ವಗಳೇನು ? ಎಂದು ಸಾಮಾನ್ಯರು ಪ್ರಶ್ನಿಸಿದರೆ, ಅವರ ಹೆಸರಿನಲ್ಲಿ ತತ್ವಗಳು ಅಡಗಿವೆ "ತತ್ವ' ಎಂದರೆ ಒಂದು ವಸ್ತುವು ಹೇಗೆ ಇರುವುದೋ ಹಾಗೆ (ಯಥಾರ್ಥ) ತಿಳಿಸುವುದು ತತ್ವ. ರಾಘವೇಂದ್ರರ ಶಬ್ದದ ನಿರ್ವಚನ ಹೀಗಿದೆ.

" ಅಘಶ್ಚ ವೇಂಚ ಅಘವೇಂ, ಅಘವೇಂ ದ್ರ್ಯತಿ ರಾತೀತಿ ಅಘವೇಂದ್ರಃ,
ರಾಜತೇ ಇತಿ ರಃ, ರಶ್ಚಾಸೌ ಅಘವೇಂದ್ರಶ್ಚ ರಾಘವೇಂದ್ರಃ

ಇದರ ತಾತ್ಪರ್ಯ ಸಂಚಿತ ಮತ್ತು ಆಗಾಮಿ ಕರ್ಮಜನಿತ ಪಾಪಗಳನ್ನು ನಾಶ ಮಾಡಿ ವಿರಾಜಮಾನ ರಾಗಿದ್ದಾರೆ. ಆದ್ದರಿಂದ ರಾಘವೇಂದ್ರ ಅಂದರೆ ಸಕಲ ಪಾಪನಾಶಕರು ಎಂಬುವೇ ಮೊದಲನೇ ತತ್ವ.

ಇದಕ್ಕೆ ದೃಷ್ಟಾಂತ : ಅವರ ಚರಿತ್ರೆಯಲ್ಲಿ ತಾಮ್ರಪರ್ಣಿತೀರದ ಕಲ್ಲಿಡ ಕುರ್ಚಿಯಲ್ಲಿ ಪತಿತ ಬ್ರಾಹ್ಮಣನನ್ನು ಶಂಖೋದಕ ಪ್ರೋಕ್ಷಣೆಯಿಂದ ಸಕಲ ಪಾಪಗಳನ್ನು ನಿವಾರಣೆ ಮಾಡಿ ಪಂಕ್ತಿ ಭೋಜನ ಮಾಡಿಸಿದರು. ಅವರ ಸ್ತೋತ್ರದಲ್ಲಿ " ಅಘಾದ್ರಿಸಂಭೇದನ ದೃಷ್ಟಿ ವಜ್ರಃ ಕ್ಷಮಾಸುರೇಂದ್ರೋಽವತುಸದಾಮಾಂ ಸದಾಽಯಂ."

2. ಇನ್ನು ಎರಡನೇ ತತ್ವ : ಸತ್ಯಧರ್ಮ ರತಾಯ ಚ : ಸತ್ಯ ಶಬ್ದಕ್ಕೆ ಯಥಾರ್ಥ ಅಥವಾ ತತ್ವಾವೇದಕ ಎಂದು. ಅಂದರೆ ವಸ್ತುಸ್ಥಿತಿಯನ್ನು ಹೇಗಿರುತ್ತದೆಯೋ ಹಾಗೆ ತಿಳಿಸಿ ಕೊಡುವ ವೇದ, ಶಾಸ್ತ್ರ, ಪುರಾಣ

ಇತಿಹಾಸಗಳು. ಆ ವೇದಗಳ ಧರ್ಮದಲ್ಲಿ ನಿರತರಾಗಿರುವವರು. ಅಂದರೆ ವೇದಶಾಸ್ತ್ರಗಳೆಲ್ಲಾ ಪ್ರಮಾಣಗಳು, ಅದು ಹೇಳಿದಂತೆಯೇ ನಡೆಯಬೇಕೆಂಬುದು ಎರಡನೇ ತತ್ವ.

ಇದಕ್ಕೆ ಪ್ರಮಾಣ :

ಸತ್ಯಂ ಸತ್ಯಂ ಪುನಃ ಸತ್ಯಂ ಉದ್ಧೃತ್ಯ ಭುಜಮುಚ್ಯತೇ ।
ವೇದಶಾಸ್ತ್ರಾತ್ ಪರಂನಾಸ್ತಿ ನದೈವಾತ್ ಕೇಶವಾತ್ಪರಂ ॥

1. ಅವರ ಚರಿತ್ರೆಯಲ್ಲಿ ಅಗ್ನಿಸೂಕ್ತದಿಂದ ತೆಗೆದ ಗಂಧವು ವಿಪ್ರರಿಗೆ ತಾಪ ಬರಲು, ವರುಣ ಸೂಕ್ತದಿಂದ ಆ ತಾಪವನ್ನು ನಿವಾರಣೆ ಮಾಡಿದರು.

2. ವಿಜಯರಾಘವ ನಾಯಕನು ಕೊಟ್ಟ ರತ್ನಹಾರವನ್ನು ಯಜ್ಞೇಶ್ವರನಿಗೆ ಸಮರ್ಪಿಸಿದಾಗ ಖಿನ್ನಮನಸ್ಕನಾದ ರಾಜನಿಗೆ ಪುನಃ ಯಜ್ಞಕುಂಡದಿಂದ ಆ ಮಾಲೆಯನ್ನು ಮರಳಿಸಿದರು.

3. ಇನ್ನು " ಸತ್ಯಧರ್ಮ " ಎಂದರೆ ಸತ್ಯವಾದ ಪ್ರಪಂಚಗಳನ್ನೇ ಸೃಷ್ಟಿ ಮಾಡುವ ಧರ್ಮವುಳ್ಳ ಶ್ರೀಹರಿ. ಇದು " ಓಂ ಜನ್ಮಾದ್ಯಸ್ಯಯತಃ ಓಂ " ಎಂಬ ಸೂತ್ರಾನುಸಾರಿ ಅರ್ಥ. ಜಗಜನ್ಮಾದಿ ಅಷ್ಟಕರ್ತೃತ್ವವುಳ್ಳ ಶ್ರೀಹರಿಯಲ್ಲಿ ನಿರತರಾಗಿರುವವರು. ಅಂದರೆ ಶ್ರೀಹರಿಯೇ ಸರ್ವೋತ್ತಮ ಎಂಬ ತತ್ವವನ್ನು ಸಾಧಿಸುವವರು.

ಇದಕ್ಕೆ ಪ್ರಮಾಣ :

ಅಗ್ನಿ ರ್ವೈದೇವಾನಾಂ ವಿಷ್ಣುಃ ಪರಮಃ ।
ಹರಿಸರ್ವೋತ್ತಮ ಸಾಕ್ಷಾತ್ ರಮಾಬ್ರಹ್ಮ ತದಪರಂ ।
ಉತ್ತಮಃ ಪುರುಷಸ್ತು ಅನ್ಯಃ ಪರಮಾತ್ಮೇದುದಾಹೃತಃ ॥
ಇಂದ್ರಿಯೇಭ್ಯ ಪರಾಹ್ಯರ್ಥಃ........ಪುರುಷಾನ್ನ ಪರಂಕಿಂಚಿತ್ ಸಾಕಾಷ್ಠಾಸಾಪರಾಗತಿಃ ॥

ದೃಷ್ಟಾಂತ : ಗುರುಸ್ತೋತ್ರದಲ್ಲಿ ಶ್ರೀ ರಾಘವೇಂದ್ರರ ಅಗಮ್ಯ ಮಹಿಮಾಗಳಿಗೂ, ಅವರ ಶಾಪಾನುಗ್ರಹ ಶಕ್ತಿಗೂ, ಜ್ಞಾನಭಕ್ತಿ ವೈರಾಗ್ಯ ಮುಂತಾದ ಇಷ್ಟಪ್ರದಗಳಿಗೆ ಕಾರಣವನ್ನು ಹೀಗೆ ಹೇಳಿದ್ದಾರೆ. " ಶ್ರೀ ರಾಘವೇಂದ್ರೋ ಹರಿಪಾದಕಂಜ ನಿಷೇವಣಾತ್ ಲಬ್ಧ ಸಮಸ್ತಾಸಂಪತ್ ". ಅಂದರೆ ಶ್ರೀ ಹರಿಯ ಪಾದಕಮಲಗಳನ್ನು ಅತ್ಯಂತ ಭಕ್ತಿಯಿಂದ ಸೇವಿಸುವ ಮೂಲಕ ಈ ಮೇಲೆ ಹೇಳಿದ ಸಂಪತ್ತನ್ನು ಹೊಂದಿದ್ದಾರೆ.

4. " ಸತ್ಯಧರ್ಮ " : ಪರಮಾತ್ಮನಿಂದ ಸೃಷ್ಟವಾದ ಸತ್ಯವಾದ ಪ್ರಪಂಚವು ಧರ್ಮಉಳ್ಳದ್ದು. ಅರ್ಥ ಕ್ರಿಯಾಕಾರಿಯಾಗಿದ್ದರಿಂದ. ಈ ಪ್ರಪಂಚದಲ್ಲಿ ನಾವು ಅನುಭವಿಸುವ ಸುಖದುಃಖಾದಿಗಳು ಸತ್ಯವೇ ಹೊರತು ಭ್ರಾಂತಿಯಲ್ಲ. ಇದು ಎಲ್ಲರ ಅನುಭವಕ್ಕೆ ಕಾರಣವಾಗಿದೆ. ಆದ್ದರಿಂದ ಈ ಜಗತ್ತು ಸತ್ಯ ಎಂಬ ತತ್ವದಲ್ಲಿ ರತರಾಗಿರುವವರು.

ಪ್ರಮಾಣ : " ವಿಶ್ವಂ ಸತ್ಯಂ ಮಘವಾನಾ ".

ದೃಷ್ಟಾಂತ : ಅವರ ಚರಿತ್ರೆಯಲ್ಲಿ ದುಃಖಕ್ಕೆ ಈಡಾದ ಕಿರೀಟಗಿರಿ ದೇಸಾಯಿ ಪುತ್ರ ಮಾವಿನ ಹಣ್ಣಿನ ಸೀಕರಣೆಯಲ್ಲಿ ಬಿದ್ದು ಪ್ರಾಣಬಿಟ್ಟಾಗ ಬದುಕಿಸಿದ್ದು. ನವಾಬನ ಮಗ ಹಾವು ಕಚ್ಚಿ ಸತ್ತಾಗ ಬದುಕಿಸಿದ್ದು, ದನಗಾಹಿ ವೆಂಕಣ್ಣನಿಗೆ ಆಪತ್ಕಾಲದಲ್ಲಿ ರಕ್ಷಣೆಮಾಡಿ ದಿವಾನಗಿರಿ ಯನ್ನು ಕೊಡಿಸಿದ್ದು, ಇನ್ನೂ ಅನೇಕ ದುಃಖ ಪ್ರಾಪ್ತವಾದ ಸಮಯದಲ್ಲಿ ಬಾಧಿತರಾದ ಭಕ್ತರನ್ನು ಉದ್ಧಾರ ಮಾಡಿರುವುದೇ ಪ್ರತ್ಯಕ್ಷ ಪ್ರಮಾಣ. ಇದು ಸತ್ಯವೇ ಹೊರತು ಮಿಥ್ಯೆಯಲ್ಲ.

5. " **ಸತ್ಯಧರ್ಮ** " ಈ ಸತ್ಯವಾದ ಪ್ರಪಂಚದಲ್ಲಿ ಅನೇಕ ಜೀವರಾಶಿಗಳು ಇದ್ದಾರೆ. ಆ ಜೀವರಾಶಿಗಳಲ್ಲಿ ಪರಸ್ಪರ ಭೇದವೆಂಬುದು ನಾವು ಕಾಣುತ್ತಾ ಇದ್ದೇವೆ. ಹೇಗೆಂದರೆ ಒಬ್ಬನು ಕ್ರೂರಿ, ಇನ್ನೊಬ್ಬನು ಔದಾರ್ಯ, ಗುಣವಂತ, ಗುಣಹೀನ, ಬುದ್ಧಿವಂತ, ದಡ್ಡ, ಧನಿಕ, ನಿರ್ಧನಿಕ ಹೀಗೆ ನೂರಾರು ಭೇದಗಳನ್ನು ತಿಳಿದಿದ್ದೇವೆ. ಇವೆಲ್ಲವೂ ಪ್ರತ್ಯಕ್ಷ ಪ್ರಮಾಣದಿಂದ ಸಿದ್ಧವಾಗಿವೆ. ಮತ್ತು ನನ್ನ ಸುಖ ಇನ್ನೊಬ್ಬನ ಸುಖಕ್ಕೆ ಕಾರಣವಾಗುವುದಿಲ್ಲ. ಹಾಗೆಯೇ ದುಃಖವೂ ಕೂಡ. ಆದ್ದರಿಂದ ಜಗತ್ತಿನಲ್ಲಿ ಯಥಾರ್ಥವಾದ ಜೀವರುಗಳ ಭೇದ ಇವೆ ಎಂಬುದೇ ತತ್ವ. ಈ ತತ್ವದಲ್ಲಿರತರಾಗಿರುವವರು ಶ್ರೀ ರಾಘವೇಂದ್ರರು.

ಪ್ರಮಾಣ : " ಸತ್ಯಂಭಿದಾ, ಸತ್ಯಂಭಿದಾ, ಮ್ಯೆವಾರುರುಣ್ಯೋ...."

ದೃಷ್ಟಾಂತ : ನಾನಾ ಜೀವರಾಶಿಗಳು ಪಡುವ ನಾನಾ ಕಷ್ಟಗಳನ್ನೂ ಅವರ ಸೇವಾ ಸಂಕಲ್ಪದ ಪ್ರಕಾರ ಹೋಂದಿಸುವವರಾಗಿದ್ದಾರೆ. ಇದರಿಂದ ಅನೇಕ ಜೀವಭೇದಗಳು ಇವೆ ಎಂಬುದು ಸ್ಪಷ್ಟ. ಗುರುಸ್ತೋತ್ರದಲ್ಲಿ " ಅಪೇಕ್ಷಿತ ಪ್ರದಾನ್ಯೋರಾಘವೇಂದ್ರಾನ್ನ ವಿದ್ಯತೇ "

6. " **ಸತ್ಯಧರ್ಮ** " ಸತ್‌ಶಬ್ದವಾಚೀ ನಾರಾಯಣ, ಅವನ ಧರ್ಮಗಳು ಸೃಷ್ಟಿ, ಸ್ಥಿತಿ, ಸಂಹಾರ, ನಿಯಮನ, ಜ್ಞಾನ, ಅಜ್ಞಾನ, ಬಂಧ, ಮೋಕ್ಷ. ಇವೆಲ್ಲವೂ ಜೀವರಾಶಿಗಳಿಗೋಸ್ಕರ ಮತ್ತು ಶ್ರೀಹರಿಯ ಕ್ರೀಡಾ. ಈ ನಿಯಮ್ಯ ನಿಯಾಮಕ ಭಾವ ಜೀವ ಮತ್ತು ಈಶ್ವರ ಸಂಬಂಧ ಯಾರು ಕೊಡುವವರೋ ಅವರ ಅಧೀನರು, ಅವನ್ನು ಪಡೆಯುವವರು, ಆದ್ದರಿಂದ ಸಕಲ ಜೀವಜಡಾತ್ಮಕ ಪ್ರಪಂಚವು ಈಶನಾದ ಶ್ರೀಹರಿಯ ಆಧೀನ. ಅಂದರೆ ಜೀವರೆಲ್ಲರೂ ಹರಿಯ ಅನುಚರರು. ಈ ತತ್ತ್ವದಲ್ಲಿ ರತರಾಗಿರುವವರು ಶ್ರೀ ರಾಘವೇಂದ್ರರು. ಇದಕ್ಕೆ ಪ್ರಮಾಣ.

" ಯಸ್ಯ ಪ್ರಸಾದಾತ್ ಪರಮಾರ್ತಿರೂಪೋ ಅಸ್ಮದ್ ಸಂಸಾರಾನ್ಮುಚ್ಯತೇ ನಾಪರೇಣ "

ಅವರನ್ನು " ಶ್ರೀಮದ್ರಾಮಪದಾರವಿಂದಮಧುಪಃ " ಎಂದು ಕೊಂಡಾಡಿದ್ದಾರೆ. ಶ್ರೀಮೂಲರಾಮನ ಪಾದಾರವಿಂದದಲ್ಲೇ ಭಕ್ತಿ ಮಾಡಿ ಅವನು ಹೇಗೆ ನಾಡಿಸುತ್ತಾನೋ ಹಾಗೆ ನಡೆಯುವವರು. ಆದ್ದರಿಂದ ಎಲ್ಲಾ ಜೀವರಾಶಿಗಳೂ ಶ್ರೀಹರಿಯ ಅನುಚರರು.

7. ಈ ಸತ್ಯವಾದ ಜಗತ್ತಿನಲ್ಲಿ ತಾರತಮ್ಯವೆಂಬುದು ಪ್ರತಿ ಜೀವರಾಶಿಗಳಲ್ಲಿ, ಪ್ರತಿ ವಸ್ತುವಿನಲ್ಲಿ, ಜ್ಞಾನದಲ್ಲಿ, ಶಕ್ತಿಯಲ್ಲಿ, ಸಾಮರ್ಥ್ಯದಲ್ಲಿ, ಮೋಕ್ಷದಲ್ಲಿ ಅವರು ಮಾಡುವ ಸಾಧನದಲ್ಲಿ ಮತ್ತು ಇನ್ನೂ ಅನೇಕ ವಿಧದಲ್ಲಿ ನಾವು ಕಾಣುತ್ತೇವೆ. ಒಬ್ಬ ಶಿಷ್ಯ ಅವನ ಗುರುವಿನಿಂದ ನಿಯಾಮಕನಾಗಿದ್ದಾನೆ. ಆ ಗುರು ಅವನ ಗುರುವಿನಿಂದ, ಹೀಗೆ ಎಲ್ಲಾ ಕಾರ್ಯಗಳಿಗೂ ಒಬ್ಬರಿಂದ ಇನ್ನೊಬ್ಬರಿಗೆ ನಿಯಾಮಕರು ಮತ್ತು ಅವರಿಗಿಂತ ಶಕ್ತಿ ಸಾಮರ್ಥ್ಯದಲ್ಲಿ ಉಚ್ಚರು

ಆಥವಾ ನೀಚರು. ಹೀಗೆ ಸತ್ಯ ಪ್ರಪಂಚದಲ್ಲಿ ಈ ರೀತಿ ' ತಾರತಮ್ಯ' ಎಂಬ ಧರ್ಮವನ್ನು ಸ್ವಭಾವದಿಂದಲೇ ಅಸ್ತಿತ್ವ ಇದೆ ಎಂಬ ತತ್ತ್ವದಲ್ಲಿ ರತರಾಗಿರುವವರು.

ಪ್ರಮಾಣ : ಇಂದ್ರಿಯೇಭ್ಯಃ ಪರಾಹ್ಯರ್ಥಾಃ ಅರ್ಥೇಭ್ಯಶ್ಚ ಪರಂ ಮನಃ...........

...........ಇಂದ್ರಿಯಾಭಿಮಾನಿ ದೇವತೆಗಳಿಂತ ಅರ್ಥಾಭಿಮಾನಿ ದೇವತೆಗಳು, ಅವರಿಗಿಂತ ಮನೋಭಿಮಾನಿ ದೇವತೆಗಳು, ಅವರಿಗಿಂತ ಬುದ್ಧ್ಯಾಭಿಮಾನಿಗಳು, ಮಹದಭಿಮಾನಿಗಳು, ಅವರಿಗಿಂತ ಅವ್ಯಕ್ತ ತತ್ತ್ವಾಭಿಮಾನಿ ಮಹಾಲಕ್ಷ್ಮಿ, ಅವರಿಗಿಂತ ಪುರುಷ ತತ್ತ್ವ (ಅಂದರೆ ಶ್ರೀಹರಿ) ಹೀಗೆ ತಾರತಮ್ಯೋಪೇತರು.

8. ಮುಕ್ತಿ ಎಂಬುದು " ಸ್ವಸ್ವರೂಪ ಆನಂದ ಆವಿರ್ಭಾವ " ಅಂದರೆ ತನ್ನಲ್ಲಿರತಕ್ಕ ಆನಂದವು ವ್ಯಕ್ತವಾಗುವಿಕೆ ಸಜ್ಜನ ಜೀವರೆಲ್ಲಾ ಮೋಕ್ಷಕ್ಕೆ ಪಾತ್ರರು. ಅವರ ಆನಂದ ಸಂಸಾರವಸ್ಥೆಯಲ್ಲಿ ಸುಪ್ತವಾಗಿ ವ್ಯಕ್ತವಾಗುವುದಿಲ್ಲ. ಎಲ್ಲಾ ಕರ್ಮಗಳನ್ನು ಅನುಭವಿಸಿ ಗುರುಗಳ ಅನುಗ್ರಹ ದ್ವಾರಾ ಆನಂದ ವ್ಯಕ್ತವಾಗುವುದು. ಶ್ರೀ ರಾಘವೇಂದ್ರರ ತತ್ತ್ವದಲ್ಲಿ ಮತ್ತು ಅವರಲ್ಲಿ ಭಕ್ತಿ ಮಾಡಿದವನು ಮೋಕ್ಷಕ್ಕೇ ಹೋಗುತ್ತಾರೆ. ಇದಕ್ಕೆ ನಿದರ್ಶನ : ಚಿತ್ರದುರ್ಗದಲ್ಲಿ ವೆಂಕಣ್ಣನೆಂಬುವವನಿಗೆ ಅಗ್ನಿಪ್ರವೇಶ ಮಾಡಿಸಿ ಮೋಕ್ಷವನ್ನು ದಯಪಾಲಿಸಿದರು. ಈ ಮೋಕ್ಷವು ಶ್ರೀ ಹರಿಯ ದಯದಿಂದಲೇ ಹೊರತು ಬೇರೆಯವರಿಂದಲ್ಲ.

ಇದಕ್ಕೆ ಪ್ರಮಾಣ : " ಮೋಕ್ಷಮಿಚ್ಛೇ ಜನಾರ್ದನಾತ್ " ||
ಅಜ್ಞಾನಂ ಜ್ಞಾನದೋ ವಿಷ್ಣುಃ, ಜ್ಞಾನಿನಾಂ ಮೋಕ್ಷದಶ್ಚಸಃ |
ಆನಂದದಶ್ಚಮುಕ್ತನಾಂ ಸರ್ವೈಕೋ ಜನಾರ್ಧನ ||

ಅದ್ದರಿಂದ ಶ್ರೀ ಹರಿಯ ಮೋಕ್ಷಪ್ರದಾತೃತ್ವ (ನಿಜವಾದ ಸುಖದ ಅನುಭವ ಮಾಡಿಕೊಡುವವನು) ಎಂಬ ಸತ್ಯಧರ್ಮದಲ್ಲಿ ರತರಾಗಿರುವವನು ಇದೇ ಅವರ ತತ್ತ್ವ.

9. ಭಕ್ತಿ ಎಂಬುದು ದೊಡ್ಡವರಲ್ಲಿ ಮಹಾತ್ಮಜ್ಞಾನದಿಂದ ಮಾಡತಕ್ಕ ಸ್ನೇಹ, ಇದು ನಿರ್ಮಲವಾಗಿರಬೇಕು. ಮತ್ತು ಧೃಢವಾಗಿರಬೇಕು. ಅಖಂಡವಾಗಿರಬೇಕು. ಇಂಥಾ ಭಕ್ತಿಯನ್ನು ಗುರುಗಳಲ್ಲಿ ಮತ್ತು ಶ್ರೀ ಹರಿಯಲ್ಲಿ ತಾರತಮ್ಯೋಪೇತವಾಗಿ ಮಾಡುವುದೇ ಅಮಲಾಭಕ್ತಿ. ಅಂದರೆ ಮೋಕ್ಷಕ್ಕೇ ಸಾಧನಾಂಗವಾದ ಈ ಆಮಲಾಭಕ್ತಿ ಅನಿಷ್ಟ ನಿವೃತ್ತಿ ಪೂರ್ವಕ ಇಷ್ಟಪ್ರಾಪ್ತಿವಾಗಿರುತ್ತದೆ ಸಂಚಿತ, ಆಗಾಮಿ ಮತ್ತು ಪ್ರಾರಬ್ಧ ಕರ್ಮಗಳು ನಾಶವಾಗಿ ಇಷ್ಟ ಪ್ರಾಪ್ತಿಯಾದ ಮೋಕ್ಷವು ಎಲ್ಲರಿಗೂ ಆನಂದಪ್ರದ ಇಂತಹ ನಿರ್ಮಲಭಕ್ತಿಯಿಂದಲೇ ಸಾಧನೆ ಮಾಡಬೇಕು.

ಇದಕ್ಕೆ ಪ್ರಮಾಣ : " ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ "
" ತಮೇವ ವಿದಿತ್ವಾ ಅಮೃತತ್ತ್ವಮೇತಿ "

ಗುರುಸ್ತೋತ್ರದಲ್ಲಿ " ಯೋ ಭಕ್ತ್ಯಾ ಗುರು ರಾಘವೇಂದ್ರ ಚರಣದ್ವಂದ್ವಂ ಸ್ಮರನ್ ಯಃ ಪಠೇತ್....
ಕಿಂತ್ವಿಷ್ಟಾರ್ಥ ಸಮೃದ್ಧಿರೇವ ಕಮಲಾನಾಥ ಪ್ರಸಾದೋದಯಾತ್........"

ಇಂತಹ ಸತ್ಯವಾದ ಭಕ್ತಿಯನ್ನು ಶ್ರೀಹರಿಯು ಕರುಣಿಸಿ ಸಾಧನೆ ಮಾಡಿಸುವನೆಂಬ ಧರ್ಮದಲ್ಲಿ ರತರಾಗಿರುವವರು ಶ್ರೀ ರಾಘವೇಂದ್ರರು.

9. I ಯಾವುದೇ ವಸ್ತುವನ್ನು ಯಥಾರ್ಥವಾಗಿ ತಿಳಿಯಬೇಕಾದರೆ ಪ್ರಮಾಣಗಳು ಬೇಕು. ಅದು ಪ್ರತ್ಯಕ್ಷ (*cognition*), ಅನುಮಾನ (*Qnference*), ಆಗಮ (*defectless scripture*) ಎಂದು. ಬಾಹ್ಯ ವಸ್ತುಗಳನ್ನು ಯಾವ ದೋಷವೂ ಇಲ್ಲದ ಇಂದ್ರಿಯಗಳಿಂದ ಗ್ರಹಿಸುವ ಜ್ಞಾನವೇ ಪ್ರತ್ಯಕ್ಷ.

II ಪ್ರತ್ಯಕ್ಷದಿಂದ ಸಾಧ್ಯವಾಗದ ಬಾಹ್ಯ ಮತ್ತು ಆಂತರಿಕ ವಸ್ತುಗಳನ್ನು ಸತ್ತರ್ಕದಿಂದ ಊಹಿಸಿ ತಿಳಿಯುವುದೇ ಅನುಮಾನ.

III ನಿರ್ದುಷ್ಟವಾದ ಪೌರುಷೇಯ, ಅಪೌರುಷೇಯ ವಾಕ್ಯಗಳಿಂದ ಪ್ರತ್ಯಕ್ಷ ಮತ್ತು ಅನುಮಾನಕ್ಕೆ ಗೋಚರವಾಗದ ಬಹುವ್ಯಾಪ್ತಿಯುಳ್ಳ ಅತೀಂದ್ರಿಯ ಪದಾರ್ಥಗಳನ್ನು ಯಥಾರ್ಥವಾಗಿ ತಿಳಿಸಿಕೊಡುವ ಜ್ಞಾನಕ್ಕೆ ಆಗಮ ಎಂದು ಹೆಸರು. ಈ ಮೂರು ಪ್ರಮಾಣಗಳಿಂದ ಸರಿಯಾಗಿ ತತ್ತ್ವವನ್ನು ತಿಳಿದು ಶ್ರೀಹರಿಗುರುಗಳಲ್ಲಿ ಭಕ್ತಿ ಮಾಡಿದರೆ ಸತ್ಯಧರ್ಮನಾದ ಶ್ರೀಹರಿಯು ಪ್ರಾಪ್ತನಾಗುತ್ತಾನೆ. ಇದಕ್ಕೆ ಈ ಮೇಲೆ ಹೇಳಿದ ಪ್ರಮಾಣಗಳಿಂದಲೇ ಸಾಕ್ಷ್ಯ ಎಂಬುವ ಶ್ರೀ ರಾಘವೇಂದ್ರರು.

10. ಶ್ರೀಹರಿಯು ಸರ್ವೋತ್ತಮ ದೇವರು. ಅವನೇ ಬಂಧಮೋಚಕ. ಅವನನ್ನು ಪ್ರತ್ಯಕ್ಷದಿಂದಾಗಲಿ, ಅನುಮಾನದಿಂದಾಗಲಿ ತಿಳಿಯಲು ಸಾಧ್ಯವಿಲ್ಲ. ಅವನು ಸದಾಗಮದಿಂದಲೇ ತಿಳಿಯಲು ಸಾಧ್ಯ. ಆ ಸದಾಗಮಗಳೇ :

" ಋಗ್ ಯಜುಸ್ ಸಾಮ ಅಥರ್ವಾಭಿಃ ಭಾರತಂ ಪಂಚರಾತ್ರಕಂ ।
ಮೂಲರಾಮಾಯಣಶ್ಚೈವ ಶಾಸ್ತ್ರಮಿತ್ಯಭಿಧೀಯತೇ " ॥

ಈ ಸದಾಗಮಗಳಿಂದಲೇ ಶ್ರೀಹರಿಯು ವೇದ್ಯನು ಎಂಬುದೇ ಶ್ರೀ ರಾಘವೇಂದ್ರರ ತತ್ತ್ವ. ಗುರುಸ್ತೋತ್ರದಲ್ಲಿ " ತವ ಸಂಕೀರ್ತನಂ ವೇದ ಶಾಸ್ತ್ರಾರ್ಥ ಜ್ಞಾನ ಸಿದ್ಧಯೇ " ಎಂದು ಶ್ರೀ ರಾಘವೇಂದ್ರರನ್ನು ಸೇವಿಸಿದರೆ ವೇದಶಾಸ್ತ್ರ ಜ್ಞಾನವಾಗಿ ಶ್ರೀಹರಿಯು ತಿಳಿಯಲ್ಪಡುತ್ತಾನೆ.

ಈ ಮೇಲಿನ ಸಂಪೂರ್ಣ ತತ್ತ್ವಗಳನ್ನು ಶ್ರೀ ಗುರು ಸ್ತೋತ್ರದಲ್ಲಿ :

" ಶ್ರೀ ಪೂರ್ಣಬೋಧಗುರು ತೀರ್ಥ ಪಯೋಬ್ಧಿಪಾರಾ ಕಾಮಾರಿಮಾಕ್ಷ ವಿಷಮಾಕ್ಷ ಶಿರಃ ಸ್ಪೃಶಂತೀ. ಪೂರ್ವೋತ್ತರಾಮಿತತರಂಗ ಚರತ್ಸುಹಂಸ ದೇವಾಲಿ ಸೇವಿತ ಪರಾಂಘ್ರಿ, ಪಯೋಜಲಗ್ನ. ಜೀವೇಶಭೇದ ಗುಣಪೂರ್ತಿ ಜಗತ್ಸು ತತ್ತ್ವ ನೀಚೋಚ್ಚಭಾವ ಮುಖನಕ್ರ ಗಣೈಸಮೇತಾ...."

ಈ ಮೇಲಿನ ಶ್ರೀ ರಾಘವೇಂದ್ರರ ತತ್ತ್ವಗಳನ್ನು ತಿಳಿದು ಭಕ್ತಿ ಮಾಡಿದರೇ ಅವರು ಒಲಿಯುವರು. ಆದಷ್ಟು ಯಥಾಶಕ್ತಿಯಾಗಿ ಅವರ ಗ್ರಂಥಗಳ ಅಧ್ಯಯನ ಮಾಡಿ ಕೃತಾರ್ಥರಾಗಬೇಕೆಂಬುದೇ ಈ ಕೃತಿಯ ಉದ್ದೇಶ.

॥ ಶ್ರೀ ಕೃಷ್ಣಾರ್ಪಣಮಸ್ತು ॥

ಶ್ರೀ ಅಪ್ಪಣಾಚಾರ್ಯ ವಿರಚಿತ
ಶ್ರೀ ರಾಘವೇಂದ್ರ ಸ್ತೋತ್ರ - ಭಾವಾನುವಾದ

ಪೂಜ್ಯಾಯ ರಾಘವೇಂದ್ರಾಯ ಸತ್ಯಧರ್ಮರತಾಯ ಚ ।
ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನವೇ ॥

ಕಲಿಯುಗದ ಕಲ್ಪವೃಕ್ಷರಾದ ಮಂತ್ರಾಲಯ ಮಹಾಪ್ರಭು ಶ್ರೀ ರಾಘವೇಂದ್ರರು ಯಾರಿಗೆ ತಾನೇ ವಿದಿತರಾಗಿಲ್ಲ. ಅಂಥ ಮಹಾಮಹಿಮರ ವಿಷಯ ಚರ್ಚಿಸುವದು ಸಾಧಾರಣ ಜನರ ಕಾರ್ಯವಲ್ಲವಾದರೂ " ಮನೋವಿಶುದ್ಧ್ಯೈ ಚರಿತಾನುವಾದಃ ; ಎಂಬಂತೆ ನಮ್ಮ ವಾಕ್ಶುದ್ಧಿಗೋಸ್ಕರ ನಾವು ಅವರ ಬಗ್ಗೆ ಹೇಳಬೇಕಷ್ಟೆ.

ಸರ್ವಜನಾದರಣೀಯರಾದ ಮಹಾಮಹಿಮರ ಬಗ್ಗೆ " ಸಂಕ್ಷಿಪ್ತ ವಾಕ್ಯಮಯಿಮಂದ ಬುದ್ಧೌ ಸಂತೋ ಗುಣೌಘಾಃ ಕರುಣಾಃ ಕ್ರಿಯಾಸುಃ ", ಹೆಚ್ಚು ಮಾತನಾಡಲು ಅಸಮರ್ಥನಾದ ನನ್ನ ವಿಷಯದಲ್ಲಿ ಸಜ್ಜನರು ದಯಾವಂತರಾಗಬೇಕು. ಸಜ್ಜನರ ಸಮಾಜದಲ್ಲಿ ಸದಾಗೇಗೀಯಮಾನಚರಿತರಾದ ಮಹನೀಯರ ವಿಷಯದಲ್ಲಿ ಅವರ ಅನುಗ್ರಹಕ್ಕೆ ಅತೀವ ಪಾತ್ರರಾದ ಶ್ರೀ ಅಪ್ಪಣಾರ್ಯರು ಮಂತ್ರಸದೃಶವಾದ, ಹಯಗ್ರೀವ ಸಾಕ್ಷಿತವಾದ ಸ್ತೋತ್ರವನ್ನು ರಚಿಸಿದ್ದು. ಅದರ ಪಾಠಕ್ರಮ ಅನೂಚಾನವಾಗಿ ನಡೆದು ಬಂದದ್ದು ಸರ್ವತ್ರ ಪ್ರಸಿದ್ಧ. ಆ ಸ್ತೋತ್ರದ ಸಾರಾಂಶ ಬರುವಂತೆ ಯಥಾಶಕ್ತಿ ಇಲ್ಲಿ ಯತ್ನಿಸಲಾಗಿದೆ. ಶ್ರೀ ಗುರು ಕೃಪಾ ಕಟಾಕ್ಷದಿಂದಲೇ ಅದು ಪೂರೈಸಬೇಕು. ಅದು ದೊರೆಯಬೇಕೆಂದು ಕೇಳಿಕೊಳ್ಳುವೆನು.

ಜಗದ್ಗುರುಗಳಾದ ಶ್ರೀ ಪೂರ್ಣಬೋಧರ ಸಿದ್ಧಾಂತವೆಂಬ ಸಮುದ್ರದ ಆಚೆಯ ದಂಡೆಯನ್ನು ಮುಟ್ಟಿದ ಶ್ರೀ ರಾಘವೇಂದ್ರರು ಪೂರ್ವಮೀಮಾಂಸಾದಿ ಶಾಸ್ತ್ರಗಳಲ್ಲಿ ತಲಸ್ಪರ್ಶಿಯಾದ ಜ್ಞಾನವನ್ನು ಪಡೆದವರಾದುದರಿಂದ ಮಧ್ವ ಸಿದ್ಧಾಂತವೆಂಬ ಸಮುದ್ರ ತಳದಲ್ಲಿ ಅಡಕವಾಗಿರುವ ತತ್ವಗಳನ್ನು ಹುಡುಕಿ ತೆಗೆದರು. ಆ ರತ್ನಗಳೆಂದರೆ ಜೀವೇಶ್ವರಭೇದ, ಜಗತ್ಸತ್ಯತ್ವ, ಜೀವರಲ್ಲಿಯ ತಾರತಮ್ಯ ಇತ್ಯಾದಿಗಳು. ಈ ತತ್ವಗಳನ್ನು ಕಂಡುಹಿಡಿಯಬೇಕಾದರೆ ಅನೇಕ ಭಿನ್ನ-ಭಿನ್ನಮತೀಯರೆಂಬ ಕ್ರೂರ ಜಲಜಂತುಗಳೊಡನೆ ಕಾದಾಡಿ ಸಫಲತೆ ಪಡೆದು ತತ್ವರತ್ನಗಳನ್ನು ಒದಗಿಸಿ ಕೊಟ್ಟಿದ್ದಾರೆ. ಇಂಥ ಶ್ರೀರಾಮರು ನಮ್ಮ ಬುದ್ಧಿಗತ ದೋಷಗಳನ್ನ ತೆಗೆದು ಹಾಕಿ ನಮ್ಮನ್ನು ಪವಿತ್ರಗೊಳಿಸಲಿ. 1-2.

ಶ್ರೀ ರಾಘವೇಂದ್ರರು ತಮ್ಮ ಪಾದಪದ್ಮಾರಾಧಕರಾದ ಭಕ್ತರ ಪರ್ವತಪ್ರಾಯವಾದ ಪಾಪರಾಶಿಯನ್ನು ಕ್ಷಣಾರ್ಧದಲ್ಲಿ ಇಂದ್ರನು ತನ್ನ ವಜ್ರಾಯುಧದಿಂದ ಪರ್ವತದಂತೆ ಧ್ವಂಸಗೊಳಿಸಲು ಅವತರಿಸಿದವರು ಇಂಥ ಸಮರ್ಥರಾದ ರಾಯರು ನಮ್ಮನ್ನು ರಕ್ಷಿಸಲಿ. 3

ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನ ಪಾದಪದ್ಮ ಸೇವನೆಯಿಂದ ಒಂದು ವಿಶಿಷ್ಟ ಶಕ್ತಿಯನ್ನು ಪಡೆದು ಸಮಸ್ತ ಜನರ ಇಷ್ಟಾರ್ಥವನ್ನು ಒದಗಿಸುವ ಕಲ್ಪವೃಕ್ಷರಾಗಿರುವರು ದೇವಸ್ವಭಾವದ ಮೂರ್ತರೂಪರಾದ ಇವರು ನಮ್ಮ ಅಭೀಷ್ಟಗಳನ್ನು ಒದಗಿಸುತ್ತಲಿರುವದು ಎಲ್ಲರ ಅನುಭವ ಸಿದ್ಧ ಮಾತು. 4

ಭಕ್ತರ ತಾಪತ್ರಯಗಳ ವಿಧ್ವಂಸನದಲ್ಲಿ ಸಮರ್ಥರಾದ ಇವರು ಒಂದು ಅಗ್ನಿಕಣವು ಪರ್ವತಪ್ರಾಯವಾದ

ಅರಳೆಯ ರಾಶಿಯನ್ನ ಸುಲಭವಾಗಿ ಸುಟ್ಟುಹಾಕುವಂತೆ ಭಕ್ತರಿಗೆ ಬಂದೊದಗಿದ ದುಷ್ಟಗ್ರಹಪೀಡಾ ಪಾಪರಾಶಿಯನ್ನು ಸುಲಭವಾಗಿ ಸುಟ್ಟು ಹಾಕುವರು. 5

ಶ್ರೀ ರಾಯರು ಸಮಸ್ತದೋಷರಹಿತರಾದುದರಿಂದ ಸರ್ವದಾ ಹರಿಭಕ್ತಿಭೂಷಾ-ಭೂಷಿತರು, ಪ್ರತಿವಾದಿಗಳ ಜಯದಲ್ಲಿ ಸದಾಸನ್ನದ್ಧರು; ಇವರ ಮಹಿಮೆಯನ್ನು ಸಾಧಾರಣ ಜನರು ಅರಿಯಲಾರರು. ತಮ್ಮ ವಿಶಿಷ್ಟವಾದ ವಾಗ್ವೈಖರಿಯಿಂದ ಪ್ರತಿವಾದಿಗಳನ್ನು ಸಹಜವಾಗಿಯೇ ಪರಾಜಿತಗೊಳಿಸುವರು. 6

ಶ್ರೀ ರಾಯರು ತಮ್ಮನ್ನು ಶರಣುಹೋದವರಿಗೆ ಸಂಪತ್ತು, ಸಂತಾನ, ಪರಮಾತ್ಮನ ವಿಷಯದಲ್ಲಿ ಪರಿಶುದ್ಧ ಭಕ್ತಿ, ವಾಕ್ಪಾಟವ, ಮೊದಲಾದ ಫಲಗಳನ್ನ ಕೊಡುವರಲ್ಲದೆ ಅವರ ಶಾರೀರಿಕ-ರೋಗಾದ್ಯುಪದ್ರವದೋಷಗಳನ್ನ ದೂರ ಮಾಡಿ ಆರೋಗ್ಯ ಸಂಪತ್ತನ್ನು ದಯಪಾಲಿಸುವವರು. 7

ಶ್ರೀ ರಾಯರ ಪಾದೋದಕವು ಒಂದು ಪವಿತ್ರತಮ ಗಂಗಾ ನದಿ ಇದ್ದಂತೆ ಅದರ ಸಂಪರ್ಕದಿಂದ ಭಕ್ತ ವರ್ಗದ ಪಾಪರಾಶಿ ಎಲ್ಲ ನಾಶವಾಗಿ ಅಸಾಧಾರಣವಾದ ಪುಣ್ಯ ಪ್ರಾಪ್ತಿಯಾಗುವದು ಹಾಗೂ ಸಾಂಸಾರಿಕ ದುಃಖ-ಕೋಟಲೆಗಳೆಲ್ಲ ದೂರವಾಗಿ ಹರಿಭಕ್ತಿಪರಾಯಣನಾಗುವಂತಾಗುವದು. 8

ಶ್ರೀ ರಾಯರ ಪಾದಪದ್ಮಧೂಳಿಯಿಂದ ಧೂಸರಿತಾಂಗನಾದ ಭಕ್ತನು ಹಾಗೂ ಅವರ ನಾಮಸ್ಮರಣವೆಂಬ ಮಂತ್ರದಿಂದ ಪಾವಿತ್ರ್ಯಾಂಗನಾದ ಭಕ್ತನು ಅದರ ಪುಣ್ಯಬಲದಿಂದ ಯಥೇಷ್ಟಜ್ಞಾನ, ಭಕ್ತಿ, ವೈರಾಗ್ಯಾದಿಗಳಿಂದ ಯುಕ್ತನಾಗುವನು. 9

ಮಧ್ವಸಿದ್ಧಾಂತದ ಪ್ರಸಾರ ಕಾರ್ಯದಲ್ಲಿ ಸದಾಸನ್ನದ್ಧರಾದ ಶ್ರೀ ರಾಯರು. ಶ್ರೀಹರಿಯ ಅನುಗ್ರಹ ಬಲದಿಂದ ಭಕ್ತರ ಬೇಕಾದ ಕಾರ್ಯವನ್ನ ಮಾಡಲು ಸಮರ್ಥರು. ಈ ಮಹನೀಯರು ಶ್ರೀ ವಿಜಯೀಂದ್ರ ಕರಕಮಲ ಸಂಜಾತರಾದ ಸುಧೀಂದ್ರರ-ವರಪುತ್ರಕರು. 10

ಪರಮ ಕರುಣಾಲಯರಾದ ಶ್ರೀ ರಾಘವೇಂದ್ರ ಯತಿವರೇಣ್ಯರು ತಮ್ಮ ಭಕ್ತರಿಗೆ ಜ್ಞಾನಸಂಪತ್ತನ್ನು, ಸಂತಾನಸಂಪತ್ತನ್ನು, ಆಯುರಾರೋಗ್ಯಸಂಪತ್ತನ್ನು ರಾಶಿರಾಶಿಯಾದ ಪುಣ್ಯನಿಧಿಯನ್ನು ದಯಪಾಲಿಸುವುದರಲ್ಲಿ ಸಮರ್ಥರೆಂದು ಪ್ರಸಿದ್ಧಿ ಇದೆ. 11

ಶ್ರೀ ರಾಯರು, ಪ್ರತಿವಾದಿ ಜನರ ಮನಸ್ಸನ್ನು ಸುಲಭವಾಗಿ ತಮ್ಮ ಕಡೆ ಒಲೆಯುವಂತೆ ಮಾಡಿ ಅವರನ್ನು ನಿರುತ್ತರರನ್ನಾಗಿ ಮಾಡಲು ಬಹು ಚತುರರು. ಅಲ್ಲದೆ ಸಕಲ ಶಾಸ್ತ್ರಗಳಲ್ಲಿ ಚತುರಸ್ರಪಂಡಿತರಾದ ಇವರ ಸಮಾನ ಚತುರರು ಆಗಿನ ಕಾಲದಲ್ಲಿ ಮತ್ತಾರೂ ಇರಲಿಲ್ಲ. 12

ಈ ಅಸಾಧಾರಣ ಶಕ್ತಿ ರಾಯರಲ್ಲಿ ಬರಬೇಕಾದರೆ ಅವರು ಶ್ರವಣ ಮನನ-ನಿದಿಧ್ಯಾಸಾದಿಗಳಿಂದ ಪರಮಾತ್ಮನ ಅಪರೋಕ್ಷ ಜ್ಞಾನವನ್ನು ಪಡೆದವರಾಗಿದ್ದರು. ಅಲ್ಲದೆ ಪರಮಾತ್ಮ ತಿರಿಕ್ತ ಸಮಸ್ತ ವಿಷಯಗಳಲ್ಲಿ ವೈರಾಗ್ಯವನ್ನು ಪಡೆದವರಾಗಿದ್ದರು. ಪರಮಾತ್ಮನ ಪರಮಾನುಗ್ರಹದಿಂದ ಸಮಸ್ತ ಜನರಿಗೂ ಅವರವರ ಅಪೇಕ್ಷಿತವನ್ನು ಪೂರೈಸಲು ಸಮರ್ಥರಾಗಿದ್ದರು ಅದಕ್ಕಾಗಿಯೆ ಗುರುಗಳೆಂದರೆ ರಾಯರು ಎಂದು ಪ್ರಸಿದ್ಧಿ. 13

ದಯಾ, ದಾಕ್ಷಿಣ್ಯ, ವೈರಾಗ್ಯ, ವಾಕ್ಪಾಟವ, ಈ ಉತ್ತಮ ಗುಣಗಳ ಮೂರ್ತಿ ರೂಪರಾದ ರಾಯರು ಶಾಪವನ್ನು ಕೊಡುವದರಲ್ಲಾಗಲಿ, ಅನುಗ್ರಹವನ್ನು ಮಾಡುವದರಲ್ಲಾಗಲಿ ಸಮರ್ಥರಾಗಿರುವರು. ಅಂಥ ಸಮರ್ಥರಾದವರನ್ನು ಮತ್ತೆ ನಾವು ಕಾಣಲಾರೆವು. 14

ಶ್ರೀ ರಾಯರ ಅನುಗ್ರಹದಿಂದ ಭಕ್ತಜನರಲ್ಲಿಯ ತಪ್ಪು ತಿಳುವಳಿಕೆ, ಮರೆವು, ಅನ್ಯಥಾ ಜ್ಞಾನ, ಅನಿಯಮಿತ ಜ್ಞಾನ ಕ್ಷಯ ಇವೆಲ್ಲವುಗಳೂ ಮತ್ತು ಆಲಸ್ಯ. ಶಾರೀರಿಕ-ಮಾನಸಿಕ ಸಂಪನ್ನ ಭಾವವಿದ್ದರೂ ತಕ್ಕ ಮಾತು ಬರದಿರುವಿಕೆ, ಮೊದಲಾದ ದೋಷಗಳು ತತ್ಕ್ಷಣದಲ್ಲಿ ಮಾಯವಾಗುವುವು. 15

"ಓಂ ಶ್ರೀ ರಾಘವೇಂದ್ರಾಯ ನಮಃ", ಎಂಬ ಅಷ್ಟಾಕ್ಷರ ಮಂತ್ರಜಪವನ್ನು ಭಕ್ತಿಪರವಶರಾಗಿ ಜಪಿಸುವ ಭಕ್ತಜನರ ಇಷ್ಟಾರ್ಥಗಳು ಸಿದ್ಧಿಸುವುವು ಎಂಬ ವಿಷಯದಲ್ಲಿ ಸಂದೇಹವೇ ಇಲ್ಲ. ಆದರೆ ಈ ಮಂತ್ರ ಪ್ರಭಾವದಿಂದ ಗುರುಗಳು ನನ್ನ ಮೇಲೆ ಅನುಗ್ರಹ ಮಾಡಿ ನನ್ನ ಮತ್ತು ನನ್ನ ಆತ್ಮೀಯರ ಶಾರೀರಿಕ, ಮಾನಸಿಕ ದೋಷಗಳನ್ನು ನಾಶಗೊಳಿಸಲೆಂದು ಮತ್ತೆ ಮತ್ತೆ ನಾನು ಪ್ರಾರ್ಥಿಸುತ್ತೇನೆ. ಮತ್ತು ನನಗೆಲ್ಲಾ ಗುರುಗಳು ಧರ್ಮ, ಅರ್ಥ, ಕಾಮ, ಮೋಕ್ಷರ ರೂಪ ಪುರುಷಾರ್ಥಗಳನ್ನು ಒದಗಿಸಿಕೊಡಲೆಂದು ಕೇಳಿಕೊಳ್ಳುತ್ತೇನೆ. 16–17

ಹೀಗೆಲ್ಲ ಅಪ್ಪಣಾಚಾರ್ಯರು ಶ್ರೀ ರಾಘವೇಂದ್ರರ ಮಹಾಮಹಿಮೆಯನ್ನು ವರ್ಣಿಸಿ ಈ ಮಹಿಮೆಯನ್ನು ವರ್ಣಿಸಿ ಈ ಮಹಿಮೆಯನ್ನು ಹೇಳುವ ಮಂತ್ರವನ್ನು ಜಪಿಸುವದರಿಂದ ಆಗುವ ಫಲಶ್ರುತಿಯನ್ನು ಹೇಳುತ್ತಿದ್ದಾರೆ. ಪ್ರಾತಃ, ಮಧ್ಯಾಹ್ನ, ಸಾಯಂಕಾಲಗಳಲ್ಲಿ ಈ ಮಂತ್ರಪಠಿಸುವವನು. ಐಹಿಕ ಸುಖಗಳನ್ನೆಲ್ಲ ಪಡೆದು ಪರತ್ರದಲ್ಲಿ ಪ್ರಾಪ್ತವಾಗಲಿರುವ ಮೋಕ್ಷಕ್ಕೂ ಅರ್ಹನಾಗುವನು. ಈ ವಿಷಯದಲ್ಲಿ ಸ್ವಲ್ಪ ಸಂಶಯಕ್ಕೂ ಅವಕಾಶವಿರುವುದಿಲ್ಲ. 18

ಶ್ರೀ ರಾಘವೇಂದ್ರರ ಮಹಿಮೆಯನ್ನು ಸಾಧಾರಣ ಜನರು ತಿಳಿಯಲಾರರು. ಯಾಕೆಂದರೆ ಅವರ ಯಶಸ್ಸು ಸಮಸ್ತ ದಿಕ್ಕುಗಳಲ್ಲಿ ಹಬ್ಬಿದೆ. ಅಲ್ಲದೇ ಅವರು ಅಪಾರವಾದ ಮಧ್ವಸಿದ್ಧಾಂತವೆಂಬ ಸಮುದ್ರಕ್ಕೆ ಚಂದ್ರನಂತಿರುವರು. ಅಂದರೆ, ಅದರ ಅಭಿವೃದ್ಧಿಗೆ ಕಾರಣೀಭೂತರಾಗಿರುವರು. ಇಂಥ ಪುಣ್ಯಪುರುಷರಾದ ಶ್ರೀ ರಾಯರು ನನ್ನನ್ನು ರಕ್ಷಿಸಲಿ. 19

ಸಮಸ್ತ ತೀರ್ಥಯಾತ್ರೆಗಳಿಂದ ಉಂಟಾದ ಫಲವು ಶ್ರೀ ರಾಯರ ವೃಂದಾವನ ಪ್ರದಕ್ಷಿಣೆಯಿಂದ ಉಂಟಾಗುತ್ತದೆ. ಇವರ ಪಾದೋದಕವನ್ನು ಶಿರಸಾ ಧರಿಸುವವರಿಂದ ಸರ್ವ ತೀರ್ಥಗಳ ಗ್ರಹಣದಿಂದುಂಟಾಗುವ ಫಲವು ಲಭಿಸುವದರಲ್ಲಿ ಸಂದೇಹವಿಲ್ಲ. ಅಂಥ ಮಹಾನುಭಾವರು ರಾಯರು. 20

ರಾಯರ ವೃಂದಾವನಕ್ಕೆ ಪ್ರದಕ್ಷಿಣೆ ಹಾಕಿ ಪಾದೋದಕ ಗ್ರಹಣ ಮಾಡುವವರಿಂದ ಸಕಲ ಅಭೀಷ್ಟಗಳೂ ಸಿದ್ಧಿಸುವದರಲ್ಲಿ ಯಾವ ಸಂಶಯವೂ ಇಲ್ಲ. ಇಷ್ಟು ಮಾತ್ರವಲ್ಲದೆ ಶ್ರೀ ರಾಯರಿಗೆ ನಮಸ್ಕರಿಸುವುದರಿಂದ, ಅವರ ನಾಮ ಸಂಕೀರ್ತನದಿಂದ ವಿಪುಲವಾದ ವೇದಶಾಸ್ತ್ರಾರ್ಥ ಜ್ಞಾನವೂ ದೊರಕುವುದು. ಗುರುಗಳ ಅನುಗ್ರಹವಿಲ್ಲದೆ ಕೇವಲ ಪರಿಶ್ರಮದಿಂದ ಶಾಸ್ತ್ರಾರ್ಥ ಜ್ಞಾನವಾಗಲಾರದು. ರಾಯರ ಸೇವೆಯಿಂದ ಐಹಿಕ ಫಲ ಪ್ರಾಪ್ತಿ ಮಾತ್ರವಲ್ಲದೆ ಮೋಕ್ಷರೂಪ ಉತ್ತಮ ಫಲಪ್ರಾಪ್ತಿಯಾಗಿ ಅವರು ದೊರೆಯುವರೆಂದು ತಿಳಿಯುವುದು. 21

ಈ ಸಂಸಾರವೆಂಬುದು ಒಂದು ಅಪಾರವಾದ ಸಮುದ್ರ. ಇದು ಬಹಳ ಆಳವಾದದ್ದು. ಇದರ ಆಳ ಇಷ್ಟು ಎಂದು ಯಾರೂ ಕಂಡುಹಿಡಿಯಲು ಸಾಧ್ಯವಾಗಿರುವದಿಲ್ಲ. ಇದನ್ನು ದಾಟುವುದು ಬಹಳ ಕಠಿಣಸಾಧ್ಯ. ಯಾಕೆಂದರೆ ಇದರಲ್ಲಿ ಕಾಮ, ಕ್ರೋಧ, ಲೋಭ, ಮದ, ಮತ್ಸರ ಎಂಬ ಕ್ರೂರ ಜಲಜಂತುಗಳು ಸದಾ ವಿದ್ಯಮಾನ. ಅಲ್ಲದೆ ಈ ಸಮುದ್ರದಲ್ಲಿ ಜಲ ಚಕ್ರವೃತ್ತಗಳು ಅವು ಎಂದರೆ ಅನೇಕ ಕ್ಷುದ್ರ ದಾಮಿಷಗಳು. ಇವುಗಳಲ್ಲಿ ಮನುಷ್ಯ ಸಿಕ್ಕರೆ ಪಾರಾಗುವುದೆ ಕಠಿಣ, ಎಲ್ಲ ಕಡೆಯಿಂದಲೂ ಇರುವ ಭಯ ಅಹಂಭಾವ ಇವುಗಳು ಸಮುದ್ರ ಬರುಗದಂತಿರುವುದು ದುಃಖ-ಉತ್ಕಟತ್ವನೆಂಬ ಭಯಕಾರಿ ಎಂಬ ವಿಷ. ಈ ಸಮುದ್ರದಲ್ಲಿರುವುದು ಇಂಥ ಸಮುದ್ರ ದಾಟಲು ಗುರುಗಳ

ಅನುಗ್ರಹ ಅವಶ್ಯಬೇಕು. ಓ, ರಾಯರೇ ಇಂಥ ಸಮುದ್ರದಿಂದ ನನ್ನನ್ನು ಪಾರುಮಾಡಿರಿ ಎಂದು ಭಕ್ತನು ಬೇಡಿಕೊಳ್ಳುವನು. 22

ಶ್ರೀ ರಾಯರ ಸ್ತೋತ್ರದ ಪಾಠದಿಂದ ಕುಷ್ಠ್ಯಾದಿ ಮಹಾ ರೋಗಗಳೇ ದೂರವಾಗುವುವೆಂದಮೇಲೆ ಸಾಧಾರಣ ರೋಗಗಳು ದೂರವಾಗುವುವೆಂದು ಬೇರೆ ಹೇಳಬೇಕಿಲ್ಲ. ಸ್ತೋತ್ರ ಪಾಠದಿಂದ ಕುರುಡನೂ ದಿವ್ಯದೃಷ್ಟಿಯನ್ನು ಪಡೆಯುವನು, ಮೂಕನು ವಾಚಸ್ಪತಿಯಾಗುವನು. ಅಲ್ಪವೆ ಪೂರ್ಣಾಯುಷ್ಯವಂತನು ಆರೋಗ್ಯಾದಿ ಸಂಪತ್ತನ್ನು ಪಡೆದವನೂ ಆಗುವನು. 23-24

ಈ ಸ್ತೋತ್ರದಿಂದ ಪವಿತ್ರವಾದ ಜಲವನ್ನು ತೆಗೆದುಕೊಂಡವರ ಉದರಗತವಾದ ದೋಷಗಳು ದೂರವಾಗುವವು. 25

ಶ್ರೀ ರಾಯರ ವೃಂದಾವನದ ಎರಣುಹೋದ ಒಬ್ಬ ಕುಂಟನಾಗಲಿ, ಮೂಕನಾಗಲಿ ಈ ಸ್ತೋತ್ರವನ್ನು ಪಠಿಸುತ್ತ ವೃಂದಾವನ ಪ್ರದಕ್ಷಿಣೆಯನ್ನು ಹಾಗೂ ನಮಸ್ಕಾರವನ್ನು ಮಾಡುವುದಾದರೆ ಶೀಘ್ರಗಾಮಿಯು ಬೇಗನೇ ನಡೆಯುವನು. ಆತನು ಅತಿಶೀಘ್ರಗಾಮಿಯು ಆಗುವನು. 26.

ಚಂದ್ರ-ಸೂರ್ಯರ ಗ್ರಹಣ ಸಮಯದಲ್ಲಾಗಲಿ ಪುಷ್ಯನಕ್ಷತ್ರದ, ಸೂರ್ಯನ, ಯೋಗದಲ್ಲಾಗಲಿ ಈ ಸರ್ವಶ್ರೇಷ್ಠ ಸ್ತೋತ್ರವನ್ನು ೧೦೮ ಸಲ ಪಠಿಸುತ್ತ ಅಭಿಷೇಚಿಸಿದವರು-ಭೂತ-ಪ್ರೇತ-ಪಿಶಾಚ ಮೊದಲಾದ ಪೀಡೆಯಿಂದ ದೂರವಾಗುತ್ತಾರೆ. 27

ಅಪ್ಪಣಾಚಾರ್ಯಕೃತ ಈ ಸ್ತೋತ್ರವು ಸಾಮಾನ್ಯವಾದುದಲ್ಲ. ಇದು ಮಂತ್ರಸದೃಶವಾದುದು. ಇದನ್ನು ಪಠಿಸುತ್ತ ರಾಯರಿಗೆ ದೀಪ ಸಮರ್ಪಣೆ ಮಾಡಿದರೆ ಪುತ್ರಸಂಪತ್ಪ್ರಾಪ್ತಿಯು ಅವಶ್ಯವಾಗಿ ಆಗುತ್ತದೆಂಬುದರಲ್ಲಿ ಸಂಶಯವಿಲ್ಲ. ಇಷ್ಟು ಮಾತ್ರವಲ್ಲದ ಪ್ರತಿವಾದಿಗಳ ಜಯ, ದಿವ್ಯವಾದ ಜ್ಞಾನಪ್ರಾಪ್ತಿ, ಭಕ್ತಿಯ ಅತಿಶಯತೆ ಇಷ್ಟಾರ್ಥಸಿದ್ಧಿ ಇವೆಲ್ಲವುಗಳೂ ನಿಶ್ಚಯವಾಗಿಯೂ ದೊರೆಯುವದರಲ್ಲಿ ಸಂದೇಹವಿಲ್ಲ. ಈ ಸ್ತೋತ್ರ ಪ್ರಭಾವದಿಂದ- ಚೋರಭಯ, ವ್ಯಾಘ್ರಾದಿಕ್ರೂರ ಪ್ರಾಣಿಗಳ ಭಯ, ಸರ್ಪನಕ್ರಗಳ ಭಯ ಮೊದಲಾದವುಗಳೆಲ್ಲ ನಿಶ್ಚಿತವಾಗಿ ದೂರಾಗುವವು. 28-29-30

ಯಾರು ಅನನ್ಯ ಭಕ್ತಿಯಿಂದ ಶ್ರೀ ರಾಘವೇಂದ್ರ ಮಹಾಪ್ರಭುಗಳ ಪಾದಪದ್ಮ ದ್ವಂದ್ವವನ್ನು ಸ್ಮರಿಸುತ್ತ ಈ ಅತಿಶ್ರೇಷ್ಠವಾದ ಪಾವನ ಮಂತ್ರವನ್ನು ಪಠಿಸುವರೋ ಅವರಿಗೆ ದುಃಖವು ಎಂದೂ ಬರಲು ಸಾಧ್ಯವಿಲ್ಲ. ಲಕ್ಷ್ಮೀಪತಿಯಾದ ನಾರಾಯಣನ ಅನುಗ್ರಹದಿಂದ ಅವರ ಮನೋಭಿಲಷಿತಸಿದ್ಧಿಗಳೆಲ್ಲ ಪ್ರಾಪ್ತವಾಗಿ ಅವರ ಕೀರ್ತಿ ಚಂದ್ರಿಕೆಯು ದಿಗಂತಗಳಲ್ಲಿ ಹಬ್ಬುವದರಲ್ಲಿ ಸಂಶಯವಿಲ್ಲ. ಅವರ ಜ್ಞಾನ ವೈರಾಗ್ಯಾದಿ ಸಂಪತ್ತು ಅಸಾಧಾರಣವಾದದ್ದಾಗಿ ಅಭಿವೃದ್ಧಿಯಾಗುವದು. ಈ ವಿಷಯದಲ್ಲಿ ಹಯಗ್ರೀವದೇವರೆ ಸಾಕ್ಷಿ ಎಂದು ಅಪ್ಪಣಾಚಾರ್ಯರು ಸ್ವಾನುಭವವನ್ನು ನಿವೇದಿಸಿರುವರು.

ಗುರುಗಳ ಪರಮಾನುಗ್ರಹದಿಂದ ಶ್ರೀ ರಾಘವೇಂದ್ರರ ಸ್ತೋತ್ರವನ್ನು ಮಾಡಿದುದಾಗಿ ಅಪ್ಪಣಾಚಾರ್ಯರು ಸಮಾಪ್ತಿಗೊಳಿಸಿರುವರು.

ಸತ್ಯರೂಪನಾದ, ಧರ್ಮಶಬ್ದ ಮುಖ್ಯವಾಚ್ಯನಾದ ಪರಮಾತ್ಮನಲ್ಲಿರತರಾದ, ಸಕಲ ಪೂಜ್ಯರಾದ ರಾಘವೇಂದ್ರರಿಗೆ ನಮಸ್ಕರಿಸಿರುವರು. ಶ್ರೀ ರಾಘವೇಂದ್ರರು ಭಕ್ತನಮ್ರರಾದ ಜನರ ಕಲ್ಪವೃಕ್ಷ ಕಾಮಧೇನುವಾಗಿರುವರು.

“ ಪ ರ ಮ ಪೂ ಜ್ಯ ಶ್ರೀ ಪೂ ರ್ಣ ಮ ಹಿ ಮ ರಾ ದ ”

ಶ್ರೀ ಶ್ರೀ ೧೦೮ ಸುಜಯೀಂದ್ರತೀರ್ಥ ಶ್ರೀ ಪಾದಂಗಳವರು

ಲೇಖಕರು : ಲಕ್ಷ್ಮಣದಾಸರು
ಬೆಂಗಳೂರು

ಶ್ರೀ ಶ್ರೀ ೧೦೮ ಸುಜಯೀಂದ್ರತೀಥ ಶ್ರೀಪಾದಂಗಳವರ ದಿವ್ಯ ಚರಿತ್ರೆ ನಮ್ಮಂಥ ಪಾಮರ ಜನರಿಂದ ವರ್ಣಿಸಲು ಅಸಾಧ್ಯವೇ ಸರಿ, ಆದರೂ ಸಹ ಕರ್ತವ್ಯದೃಷ್ಟಿ ಇಂದ ತಿಳಿದಷ್ಟು ವರ್ಣಿಸುತ್ತೇನೆ.

ಇವರು ಶ್ರೀ ಶ್ರೀ ರಾಘವೇಂದ್ರಾಂಘ್ರಿವಾರೀಜಭೃಂಗ. ಶ್ರೀ ಶ್ರೀ ಸುಜಯೀಂದ್ರರ ಪೂರ್ವಾಶ್ರಮದ ವಿಚಾರ ಹೀಗಿವ. ಶ್ರೀ ತಿಲಕನಾಮ ಸಂವತ್ಸರದ ಪುಷ್ಯ ಶುದ್ಧ ಅಷ್ಟಮೀ ದಿವಸ ಜನನ ವೆಂಕಟರಾಘವೇಂದ್ರಚಾರ್ಯರೆಂದು ನಾಮಕರಣ ಶುಕ್ಲಪಕ್ಷ ಚಂದ್ರನಂತೆ ದಿನೇ ದಿನೇ ಬೆಳೆದು, ವಿದ್ಯಾಭ್ಯಾಸದಲ್ಲಿ ಅತಿ ಚುರುಕತನದಿಂದ ನಡೆಯಿತು, ಸಕಾಲದಲ್ಲಿ ಉಪನಯನ ನಂತರ ಎಳಂದೂರಿನಲ್ಲಿ ಉತ್ತಮ ಪಂಡಿತರಲ್ಲಿ ಸುಸಂಸ್ಕೃತ ಅಭ್ಯಾಸ ಅದಾದಮೇಲೆ ಶ್ರೀ ಪಂಡಿತ ಪ್ರಶಾಂತರಾದ ಗುನ್ನಾಳ ವೆಂಕೋಬಾಚಾರ್ಯರಲ್ಲಿ ವಾಕ್ಯಾರ್ಥದಲ್ಲಿ ಪರಿಣತಿ ಹೊಂದಿದರು, ಅನೇಕ ಧಾರ್ಮಿಕ ವ್ರತಗಳನ್ನು ಚಿಕ್ಕಂದಿನಿಂದಲೇ ಆಚರಿಸಿ ಸುಗುಣ ಸುಶೀಲಸಂಪನ್ನರಾಗಿ ಲೋಕಪ್ರಖ್ಯಾತರಾಗಿದ್ದರು. ಪೂರ್ವಾಶ್ರಮದಲ್ಲಿಯೇ ಭಾರತದ ಅನೇಕತೀರ್ಥಕ್ಷೇತ್ರಯಾತ್ರೆಗೈದರು ಧರ್ಮಶ್ರೇಷ್ಠರು ಅನಂತರ ಶ್ರೀ ಶುಭಶೋಭನಕೃತು ಸಂವತ್ಸರದಲ್ಲಿ ಶ್ರೀ ಶ್ರೀ ೧೦೮ ಸುಯಮೀಂದ್ರತೀರ್ಥ ಶ್ರೀಪಾದಂಗಳವರಿಂದ ಯತ್ಯಾಶ್ರಮ ಸ್ವೀಕಾರ ಮಾಡಿದರು. (ನಂಜನಗೂಡಿನಲ್ಲಿ) ಗರಳಪುರವೆಂಬ ದಿವ್ಯ ನಗರದಲ್ಲಿ ಅಂದಿನಿಂದ ಶ್ರೀಮಠದ ಅಭಿವೃದ್ಧಿಗೈದು, ಸಕಲ ಜನಗಳಿಂದ ಕೀರ್ತಿ ಪಡೆದು, ಭಾರತ ದೇಶದಲ್ಲಿ ಅನೇಕ ಸ್ಥಳಗಳಲ್ಲಿ ವಿದ್ವತ್ಸಭೆಗಳನ್ನು ಏರ್ಪಡಿಸಿ, ಪ್ರಿಮತಸ್ಥರಿಗೂ ಉತ್ತಮ ಗೌರವನ್ನಿತ್ತು ಆದರಿಸುತ್ತಿದ್ದರು. ಇವರಲ್ಲಿ ಪಂಡಿತರು ಪಾಮರರು ಎಂಬ ಭೇದಭಾವನೆ ಇಲ್ಲದು ಬಂದು ವಿಶೇಷ ಇವರ ಕಾಲದಲ್ಲಿ ರಾಯಚೂರು, ಬಾಗಲಕೋಟೆ, ಪೂನಾ, ಹೈದ್ರಾಬಾದ್, ಬೆಂಗಳೂರು, ಬೊಂಬಾಯಿ, ಮದರಾಸ್ ಪ್ರಾಂತ, ಮಹಾರಾಷ್ಟ್ರ ಪ್ರಾಂತಗಳ ಶ್ರೀ ರಾಘವೇಂದ್ರರ ದಿವ್ಯ ವೃಂದಾವನಗಳ ಸ್ಥಾಪನೆ ಮಾಡಿ, ಅಲ್ಲಿಂದ ಬಂದ ಹಣವನ್ನು ಅಲ್ಲಲ್ಲೇ ಭದ್ರತಾ ಠೇವಣಿ ಯಾಗಿರಿಸಿ ಅವರ ಉನ್ನತಗಳಿಗೆ ಕಾರಣರಾಗಿದ್ದಾರೆ. ಅಲ್ಲದೇ ಶ್ರೀ ಹರಿದಾಸ ಸಾಹಿತ್ಯಕ್ಕೆ ಇವರ ಕೊಡುಗೆ ಅಪಾರವೇ ಸರಿ. ಪ್ರತಿನಿತ್ಯ ಎಣಿಕೆಗೂ ಅಸಾಧ್ಯವೆಂಬಂತೆ ಮೃಷ್ಟಾನ್ನದಲ್ಲಿ ಭಕ್ತಾದಿಗಳನ್ನು ತಣಿಸಿ ಕೀರ್ತಿಗೆ ಪಾತ್ರರಾಗಿದ್ದಾರೆ. ನನ್ನಂಥಾ ಅಲ್ಪನಿಂದ ಇವರ ಹೊಗಳಿಕೆ ಸಾಧ್ಯವಿಲ್ಲವೆಂದು ಇಲ್ಲಿಗೆ ನಿಲ್ಲಿಸಿದ್ದೇನೆ.

ರಾಗ – ಕಾಂಬೋಧಿ ಝಂಪೆತಾಳ

ತೆರಳಿದರು ವೈಕುಂಠವಾಸುದೇವನಪುರಕೆ ।
ಶ್ರೀ ಶ್ರೀ ಸುಜಯೀಂದ್ರಯತಿಕುಲತಿಲಕರು ॥ ಪ ॥

ತುಂಗಭದ್ರಾ ಸ್ನಾನ ಮಾಡಿ, ಊರ್ಧ್ವಪುಂಡ್ರ ಧರಿಸಿ ।
ಸಂಧ್ಯಾನಪ್ರಣವಜಪವನ್ನಗೈಯುತ್ತಾ
ತಂತ್ರಸಾರದಿಬಿಂಬಮೂರ್ತಿಧ್ಯಾನ ಮಾಡಿ
ಭಕ್ತಸಮೂಹವ ನೋಡುತ್ತ ಆನಂದದಿಂದಲಿ ॥ ೧ ॥

ಎಷ್ಟು ಹೇಳಲಿ ಇವರ ಚರಿತೆಯನು ನಾನು ।
ಅಪಾರ ಅಭಿವೃದ್ಧಿ ಕಾರ್ಯಗಳ ನೋಡಿ ।
ಶ್ರದ್ಧೆಯಲಿ ಹರಿಪಾದಪದ್ಮಗಳ ನೆನೆಸುತಲಿ ।
ಶುದ್ಧಾತ್ಮರಾದ ಶ್ರೇಷ್ಠ ಯತಿವರ್ಯರೀದಿನದಿ ॥ ೨ ॥

ಉದಯಾಸ್ತಮಯಪರಿಯಂತ ।
ಶ್ರೀಮೂಲರಾಮನನ್ನ ಹೃದಯದಲಿ ಶ್ರೀ ಲಕ್ಷ್ಮೀವಿಠಲನ್ನ ಭಜಿಸಿ
ಸಿದ್ಧರಾಗಿ ಮಾಘ ಶುದ್ಧ ಚೌತಿಯ ದಿನದಿ ತೆರಳಿದರು ॥ ೩ ॥

ಶ್ರೀಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠ ಮಂತ್ರಾಲಯ

ಒಂದು ಕಿರು ಪರಿಚಯ

ಲೇಖಕರು—ಆಚಾರ್ಯ ಸಾಣೂರು ಭೀಮಭಟ್ಟರು

ಸಂಜೆಯ ಸಮಯ. ತುಂಗಭದ್ರೆಯು ಮಂಜುಲನಾದ ಭರಿತಳಾಗಿ ಶ್ರೀಮೂಲರಾಮನ ಪೂಜಕರ ಪಾದಪದ್ಮಗಳಿಗೆ ಮಧುರಪಾದ್ಯವನ್ನರ್ಪಿಸುವಳೋ ಎಂಬಂತೆ ಹರಿಯುತ್ತಿದ್ದಾಳೆ. ಸಂಜೆಗೆಂಪು ನೀರಿನಲ್ಲಿ ಪ್ರತಿಫಲಿಸಿದೆ. ಹೊಂಬಣ್ಣದ ಸೀರೆಯುಟ್ಟು ತುಂಗಭದ್ರೆಯು ಶ್ರೀರಾಯರ ಪೂಜೆಗಾಗಿ ಧಾವಿಸುವಂತೆ ಕಾಣಿಸುತ್ತಿದ್ದಾಳೆ. ನಾವು ತುಂಗೆಯ ಪವಿತ್ರವಾದ ನೀರನ್ನು ಸ್ಪರ್ಶಿಸಿ ರಾಯರ ಸನ್ನಿಧಾನಕ್ಕೆ ಬರುತ್ತಾ ದೊಡ್ಡ ಪ್ರಾಕಾರದ ಒಳಹೊಕ್ಕರೆ ಒಂದು ಆಶ್ಚರ್ಯ ಕಾದಿದೆ.

ನಾವೇನಾದರೂ ಋಷಿಗಳ ಆಶ್ರಮದೊಳಗೆ ಪ್ರವೇಶಿಸುತ್ತಿದ್ದೇವೋ ಎನಿಸುತ್ತದೆ. 8 ರಿಂದ 14-16 ವಯಸ್ಸಿನೊಳಗಿನ ಬಾಲಕರು ವೈಶ್ವಾನರನ ಚಾಚಿದ ನಾಲಿಗೆಗೆ ತುಪ್ಪದಲ್ಲಿ ಅದ್ದಿದ ಸಮಿಧೆಯನ್ನು 'ಸ್ವಾಹಾ' ಎಂದು ಹಾಕುತ್ತಾ ಅಗ್ನಿಕಾರ್ಯ ಮಾಡುತ್ತಿದ್ದಾರೆ. ಮತ್ತೆ ಕೆಲವರು ವೇದಪಠನ ಮಾಡುತ್ತಿದ್ದಾರೆ. ಇನ್ನು ಕೆಲವರು ಕಾವ್ಯವ್ಯಾಕರಣ ಸಾಹಿತ್ಯ ಮುಂತಾದ ಶಾಸ್ತ್ರಗಳ ಚಿಂತನ ನಡೆಸುತ್ತಿದ್ದಾರೆ. ಸುಮಾರು 500 ವರ್ಷಗಳ ಹಿಂದೆ ಮಠಗಳಲ್ಲಿ ಋಷ್ಯಾಶ್ರಮಗಳಲ್ಲಿ ಇದ್ದಿರಬಹುದೆಂದು ಊಹಿಸಬಹುದಾದ ಸನ್ನಿವೇಶವನ್ನು ನಾವು ಇಂದು ಪ್ರತ್ಯಕ್ಷವಾಗಿ ಮಂತ್ರಾಲಯದಲ್ಲಿ ಕಾಣಬಹುದು. ಇದಕ್ಕೆಲ್ಲಾ ಪ್ರೇರಕಶಕ್ತಿಯಾಗಿದ್ದವರು, ಮೂಲಕಾರಣರಾಗಿದ್ದವರು ಹರಿಪದವನ್ನೈದಿದ ಶ್ರೀ ೧೦೦೮ ಶ್ರೀಮತ್ಸುಜಯೀಂದ್ರತೀರ್ಥ ಶ್ರೀಪಾದಂಗಳವರು.

ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಪುನರಂಕುರಿತವಾದ ಶ್ರೀಮದ್ ದ್ವೈತಸಿದ್ಧಾಂತವೆಂಬ ಸನಾತನಾಶ್ವತ್ಥವೃಕ್ಷದ ಬೆಳವಣಿಗೆಗೆ ಕಾರಣರಾದವರು ಶ್ರೀಮಟ್ಟೀಕಾಕೃತ್ಪಾದರು, ಶ್ರೀವಿಬುಧೇಂದ್ರ ತೀರ್ಥರು, ಶ್ರೀವಿಜಯೀಂದ್ರತೀರ್ಥರು, ಶ್ರೀಸುಧೀಂದ್ರತೀರ್ಥರು, ಮತ್ತು ಶ್ರೀರಾಘವೇಂದ್ರತೀರ್ಥರು. ಇವರ ಪರಂಪರೆಯಲ್ಲಿ ಬೆಳೆದುಬಂದ ಸನಾತನದ್ವೈತಸಿದ್ಧಾಂತದ ಅಧ್ಯಯನ, ಅವಬೋಧ, ಆಚರಣ ಪ್ರಚಾರಣಗಳು ನಿರಂತರವಾಗಿ ಮುಂದುವರಿಯುತ್ತವೆ ಎಂಬುದಕ್ಕೆ ಇಂದಿನ ಮಂತ್ರಾಲಯದ ಶ್ರೀಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠವು ಒಂದು ಜ್ವಲಂತ ಉದಾಹರಣವಾಗಿದೆ. ಕೀರ್ತಿಶೇಷ ಶ್ರೀಸುಶೀಲೇಂದ್ರತೀರ್ಥರು ಈ ಆಧುನಿಕ ಪರಂಪರೆಯ ವಿದ್ಯಾಲಯದ ಬುನಾದಿಯನ್ನು ಹಾಕಿ ಸಂಸ್ಕೃತ ಪಾಠಶಾಲೆಯೊಂದನ್ನು ಪ್ರಾರಂಭಿಸಿದರು. ಶ್ರೀಸುವ್ರತೀಂದ್ರರು, ಶ್ರೀಸುಯಮೀಂದ್ರರ ಕಾಲದಲ್ಲಿ ಅದು ಅಭಿವೃದ್ಧಿಹೊಂದುತ್ತಾ ಶ್ರೀಸುಜಯೀಂದ್ರತೀರ್ಥರ ಕಾಲದಲ್ಲಿ ಹಿಂದಿನ ಗುರುವರ್ಯರು ಕನಸು ಕಂಡಿದ್ದಷ್ಟು ಎತ್ತರಕ್ಕೆ ಇಂದು ಬೆಳೆದು ನಿಂತಿದೆ. ಮಂತ್ರಾಲಯದ ಈ ವಿದ್ಯಾಪೀಠವು ಶ್ರೀಕ್ಷೇತ್ರದಲ್ಲಿ ಸಂದರ್ಶಿಸಬೇಕಾದ ಮತ್ತೊಂದು ಪವಿತ್ರಸ್ಥಳವೆ ಆಗಿರೂಪುಗೊಂಡಿದೆ. ಈ ವಿದ್ಯಾಪೀಠದ ಪ್ರತಿಷ್ಠಾಪಕರಾದ ಶ್ರೀಮತ್ಸುಜಯೀಂದ್ರತೀರ್ಥರು ವಿದ್ಯಾಪೀಠದ ನಿರಂತರವಾದ ನಿರ್ವಹಣೆಗಾಗಿ ಅಭಿವೃದ್ಧಿಗಾಗಿ ಒಂದೂಕಾಲುಕೋಟಿ ಹಣವನ್ನು ಹಿಮಾಲಯದಂತೆ ಮೂಲನಿಧಿಯಾಗಿ ಇಟ್ಟು ಇದು ಗಂಗಾಪ್ರವಾಹದಂತೆ ಮುಂದುವರಿಯಬೇಕೆಂಬ ಸತ್ಯಸಂಕಲ್ಪವನ್ನು ಕಾರ್ಯರೂಪಕ್ಕೆ ತಂದಿದ್ದಾರೆ. ಇಂದು 10-12 ಮಂದಿ ಪಂಡಿತರು ವೇದ, ಸಾಹಿತ್ಯ, ಅಲಂಕಾರ, ತರ್ಕ, ವ್ಯಾಕರಣ ಮೀಮಾಂಸಾ ವೇದಾಂತಗಳ ಅಧ್ಯಾಪನ ಪ್ರವಚನಗಳನ್ನು ಪ್ರಾತಃಕಾಲದಲ್ಲಿ ಉದಯಿಸುವ ಸೂರ್ಯನೊಡನೆ ಪ್ರಾರಂಭಿಸಿ ಸಾಯಂಕಾಲದ ಸೂರ್ಯನೊಡನೆ ವಿರಮಿಸುತ್ತಿದ್ದಾರೆ. ಮಾನವನ ಪರಮಾಯುರ್ದಾಯದ ಸಂಖ್ಯೆ 120ರಷ್ಟು ಛಾತ್ರರಸಂಖ್ಯೆ ಮುಟ್ಟಿದೆ. ಅವರ ಭೋಜನ, ವಸತಿ, ವಸನಗಳಷ್ಟೇ ಅಲ್ಲದೆ ಪ್ರತಿತಿಂಗಳು ಅವರು ಇತರ ಸ್ಥಳದಲ್ಲಿ ಕನಸು ಕಾಣದಷ್ಟು ವಿದ್ಯಾರ್ಥಿವೇತನವು ದೊರೆಯುತ್ತದೆ. ಪೂರ್ತಿ ಅಧ್ಯಯನವಾದ ಮೇಲೆ ಪ್ರತಿಮಾಸದಲ್ಲಿ ಅವರ ಜೀವನಾವಶ್ಯಕತೆಗೆ

ತಕ್ಕಂತೆ ವೇತನವನ್ನು ಕೊಟ್ಟು ಅವರಿಂದ ವಿದ್ಯಾಕ್ಷೇತ್ರದಲ್ಲಿ ಸೇವೆಯನ್ನು ಮಾಡಿಸುವ ಭರವಸೆಯನ್ನು ಶ್ರೀಪಾದಂಗಳವರು ಕೊಟ್ಟಿದ್ದಾರೆ. ಈಗಾಗಲೇ ಈ ದಿಸೆಯಲ್ಲಿ ಕಾರ್ಯಪ್ರವೃತ್ತರೂ ಆಗಿದ್ದಾರೆ. ಪಾಠಶಾಲೆಗಾಗಿ ವಿದ್ಯಾರ್ಥಿಗಳ ವಸತಿಗಾಗಿ ಈಗಾಗಲೇ ಕೆಲವು ಭವನಗಳ ನಿರ್ಮಾಣವು ನಡೆದಿದೆ. ಈ ವಿದ್ಯಾಪೀಠಕ್ಕೆ ಬೃಂದಾವನ ಸನ್ನಿಧಿಯಿಂದ ಸ್ವಲ್ಪ ದೂರದಲ್ಲಿ ಪ್ರತ್ಯೇಕವಾದ ಪಾಠಶಾಲಾಕಟ್ಟಡ, ವಸತಿಗೃಹ, ಭೋಜನಗೃಹ ಇತ್ಯಾದಿಗಳನ್ನು ನಿರ್ಮಿಸಬೇಕೆಂಬ ಯೋಜನೆಯನ್ನೂ ಶ್ರೀ ಶ್ರೀಪಾದಂಗಳವರು ಇಟ್ಟುಕೊಂಡಿದ್ದರು. ಅದೂ ಕೂಡ ಇನ್ನು ಸ್ವಲ್ಪವೇ ಸಮಯದಲ್ಲಿ ಕಾರ್ಯರೂಪಕ್ಕೆ ಬರಲಿದೆ.

'ಮಠಶ್ಛಾತ್ರಾದಿ ನಿಲಯ' ಎಂಬ ಕೋಶಕಾರನ ಮಾತು ಅನ್ವರ್ಥವಾಗುವಂತೆ ಬಹಳ ಚಿಂತಿಸಿ, ಶ್ರಮಿಸಿ ಶ್ರೀ ಸುಜಯೀಂದ್ರ ತೀರ್ಥಗುರುಪಾದರು ಭಾರತದೇಶಕ್ಕೇ ಆದರ್ಶಪ್ರಾಯವಾದ ಗುರುಕುಲ ಪದ್ಧತಿಯ ವಿದ್ಯಾಪೀಠವನ್ನು ನಿರ್ಮಿಸಬೇಕೆಂದು ನಿರ್ಧರಿಸಿ ಅದರ ಯೋಜನೆಯನ್ನೆಲ್ಲಾ ಚಿತ್ರಿಸಿದ್ದರು. ಆದರೆ ಅದೆಲ್ಲವೂ ಕಾರ್ಯಗತವಾಗುವ ಮೊದಲೇ ವಾಯುಸುತ ಪ್ರಿಯ ಶ್ರೀರಾಮಚಂದ್ರನು ಅವರ ಆಯುಸ್ಸನ್ನು ಮುಗಿಸಿ, ತನ್ನ ಪಾದಾರವಿಂದಕ್ಕೆ ಕರೆದೊಯ್ದಿದ್ದಾನೆ. ಇದರಿಂದ ಭಕ್ತಕೋಟಿಗೆ ಬಹಳ ವಿಷಾದವಾಗಿದೆ ಆದರೂ ಭಕ್ತರ ಸಂಕಲ್ಪವನ್ನು ಈಡೇರಿಸುವ ಪಣ ತೊಟ್ಟಿರುವ ಆನಂದತೀರ್ಥರ ಪರಮದೈವನಾದ ಶ್ರೀರಾಮಚಂದ್ರನು ವಿದ್ಯಾಪೀಠದ ಸರ್ವತೋಮುಖವಾದ ಅಭಿವೃದ್ಧಿಯನ್ನು ಇಂದಿನ ಶ್ರೀಗಳವರ ಮೂಲಕ ಮತ್ತು ಹಿಂದಿನ ಶ್ರೀಗಳವರ ಪೂರ್ವಾಶ್ರಮ ಶ್ರೀಪಾದಪುತ್ರರ ಮೂಲಕ ನಡೆಸುತ್ತಾನೆಂದು ನಾವು ದೃಢವಾದ ಭರವಸೆಯನ್ನು ತಾಳೋಣ.

ಗುರುಭಕ್ತಿ

ಲೇಖಕರು :— ಅವಿನಾಶಿ

ಜಗದೊಡೆಯನ ಅಣತಿಯಿಲ್ಲದೆ ಒಂದು ಹುಲ್ಲುಕಡ್ಡಿಯೂ ಅಲುಗಾಡಲಾರದೆಂದ ಮೇಲೆ ಈ ಜಗತ್ತಿನ ಸಮಸ್ತ ಒಳಿತು-ಕೆಡುಕುಗಳನ್ನು ರೂಪಿಸುವವನು ಆ ಪ್ರಭು ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಅಂದಮೇಲೆ ಮನುಷ್ಯ ಒಳಿತಿಗೆ ಆ ಪ್ರಭುವಿನಲ್ಲಿ ಶರಣಾಗತರಾಗಬೇಕಾಗುತ್ತದೆ. ಅಲ್ಲದೆ ಒಳ್ಳೆಯ ಭಕ್ತನಾಗಬೇಕಾಗುತ್ತದೆ. ಅಂತಹ ಒಳ್ಳೆಯ ಭಕ್ತನಾಗುವುದು ಸಾಮಾನ್ಯ ವಿಷಯವಲ್ಲ. ಆಸೆ ಪಟ್ಟಮಾತ್ರಕ್ಕೆ ಭಕ್ತನಾಗುವುದು ಸುಲಭದ ಕಾರ್ಯವಲ್ಲ. ಸರಿಯಾದ ಅನುಷ್ಠಾನವಿರಬೇಕು. ಹಾಗಾಗಲು ಸರಿಯಾದ ಸದ್ಗುರುವಿನ ನಿರತಿಶಯವಾದ ಭಕ್ತಿಯನ್ನು ಬೆಳೆಸಬೇಕಾಗುತ್ತದೆ. ಗುರುವಿನ ಗುಲಾಮನಾದರೆ ಆ ಪರಮಾತ್ಮನಲ್ಲಿ ಭಕ್ತಿ ಹುಟ್ಟುತ್ತದೆ.

ಇಂದಿನ ಜಂಜಾಟದಲ್ಲಿ, ಸಂಸಾರದ ಏರುಪೇರುವಿನಲ್ಲಿ ಯಾವ ಗುರುವನ್ನು ಹುಡುಕಿಕೊಂಡು ಹೋಗುವುದು? ಹಾಗೆ ಹುಡುಕಿಕೊಂಡು ಹೊರಟರೂ ಸದ್ಗುರುವಿನಲ್ಲಿ ಲಭ್ಯಸಾಧ್ಯವಾಗದೆ ಹೋಗುತ್ತದೆ. ಆದ್ದರಿಂದಲೆ ಇಂದಿನ ಜಂಜಾಟದಲ್ಲಿ ಗುರುಗಳನ್ನು ಹುಡುಕಿಕೊಂಡು ಅಲೆದಾಡುವ ಬದಲು 'ಗುರುಗಳೆಂದರೆ ಮಂಚಾಲಿ ರಾಘಪ್ಪ' ಎಂಬ ಅಪರೋಕ್ಷಜ್ಞಾನಿಗಳ ನುಡಿ ಅಂದಿಗಿಂತ ಇಂದು ಹೆಚ್ಚಾಗಿ ಒಪ್ಪುತ್ತದೆ. ಇಂದು ಹೆಚ್ಚು ಅರ್ಥವತ್ತಾಗಿದೆ ಎಂಬುವ ಮಾತಿಗೆ ಇಂದು ನಡೆಯುತ್ತಿರುವ ವಿಶೇಷ ರೀತಿಯ ಪೂಜೆ, ಪುನಸ್ಕಾರಾದಿಗಳು ಇಲ್ಲಿ ಮಾತ್ರವೆ ಅಲ್ಲ, ದೇಶದಾದ್ಯಂತ ನಡೆಯುತ್ತಿರುವ ಸೇವೆಗಳು, ಪವಾಡಗಳೇ ಇದಕ್ಕೆ ಸಾಕ್ಷಿ. ಇಂತಹ ಗುರುಗಳ ಸೇವೆಯನ್ನು ಅನನ್ಯ ಭಕ್ತಿಯಿಂದಮಾಡಿ, ಹಾಡಿ, ಕೊಂಡಾಡಿ ಅವರನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಪಟ್ಟರೆ ಅದೇ ಹರಿ ಪೂಜೆ.

ಗುರು ಇಲ್ಲದೆ ಜ್ಞಾನ ಸಿದ್ಧಿ ಇಲ್ಲ. ಅದರ ಮುಂದೆ ಶುದ್ಧಿ ಇಲ್ಲ. ಗುರು ಕರುಣದಿಂದಲೇ ಹರಿಚರಣದ ಒಲವು ಮೂಡುತ್ತದೆ. ಗುರುಭಕ್ತಿ ಇದ್ದವನಿಗೆ ಮಾತ್ರವೇ ದೇವರಲ್ಲಿ ಭಕ್ತಿ ಮೂಡುತ್ತದೆ. ಗುರುವನ್ನು ಒಲಿಸಿಕೊಂಡವನಿಗೆ ಹರಿ ಒಲಿಯುವುದು ಕಷ್ಟವಲ್ಲವೆಂಬ ಮಾತು ಹಿಂದೆ ಆಗಿಹೋದ ಗುರುಗಳಲ್ಲಿ ಕಾಣಬಹುದಾಗಿದೆ.

ತಪಃ ಪ್ರಭಾವದ ಹಿರಿಮೆ, ಶಾಸ್ತ್ರಗಳ ಪಾಂಡಿತ್ಯ, ಮಂತ್ರ ಶಕ್ತಿಯ ಮಹತ್ವ, ಅನನ್ಯ ಭಕ್ತಿಯಿಂದ ಸೇವಿಸುವ ಸಜ್ಜನ ಸಮೂಹಕ್ಕೆ ನೆರಳಾಗಿರುವ 'ಸಾಕಾರಮೂರ್ತಿ' ಎಂದರೆ ಮಂತ್ರಾಲಯದ ಮಹಾಪ್ರಭುಗಳು ಶ್ರೀರಾಘವೇಂದ್ರ ಗುರುಗಳು–ಪರಮಪೂಜ್ಯರು. ಇಂತಹ ಯತಿವರೇಣ್ಯರ ಚರಿತ್ರೆಯನ್ನೂ, ಮಹಿಮೆಯನ್ನ ಯಾರಿಂದ ತಾನೇ ಸಂಪೂರ್ಣವಾಗಿ ವರ್ಣಿಸಲು ಸಾಧ್ಯ? ಅವರ ಅನುಗ್ರಹದಿಂದ ಹೊರಟ ಒಂದೆರಡು ತೊದಲು ಮಾತನ್ನು ಬರೆಯಬಹುದಷ್ಟೆ!

ಈವತ್ತಿನ ದಿವಸ, ನಾವು ಗುರುರಾಯರಲ್ಲಿ, ನಮ್ಮ ಇಷ್ಟಾರ್ಥಗಳನ್ನು ಕೇಳಲು ಹೋಗುತ್ತಿದ್ದೇವೆ. ಮನೆ ಬೇಕೆಂದು ಕೇಳುತ್ತವೆ. ಒಳ್ಳೆಯ ಹೆಂಡತಿ, ಮುದ್ದಾದ ಮಕ್ಕಳು, ಬೇರೆ ಎಲ್ಲಾ ವಿಚಾರಗಳಿಗೆ ಹೋಗಿ ಕೇಳುತ್ತೇವೆ. ಪಡೆದು ಬರುತ್ತಿದ್ದೇವೆ. ಈ ಕೆಲಸ ಇಲ್ಲಿಂದ ಮಂತ್ರಾಲಯದವರೆವಿಗೂ ನಡೆದುಬರುತ್ತದೆ. ಆದರೆ ಜ್ಞಾನದ ಬೇಡಿಕೆಗೆ ಹೋಗುವವರು ಎಷ್ಟು ಮಂದಿ ಇದ್ದೇವೆ? ಆದರೆ ನಾವು ಕೇಳಿದ್ದನ್ನು ಕೊಡುವ ಈ ನಮ್ಮ ಯತಿಗಳುವಿದ್ಯಾಭ್ಯಾಸಕ್ಕೆ, ಊಟಕ್ಕೆ ಎಷ್ಟು ಕಷ್ಟಪಟ್ಟರು. ಎಂಬುದು ಯೋಚಿಸಬೇಕಾದ ವಿಷಯ. ಕಷ್ಟಪಟ್ಟರೂ ಕೂಡ, ಆ ಕಷ್ಟವನ್ನೆಲ್ಲಾ ಆ ಶ್ರೀಹರಿಗರ್ಪಿಸಿ, ಜೀವನದಲ್ಲಿ ದಾರಿದ್ರ್ಯದಿಂದ ದಿಕ್ಕೆಟ್ಟವರಂತಾಗಿದ್ದರೂ ಧೃತಿಗೆಡದೆ, ಹೆಂಡತಿ ಮತ್ತು ಮಗನಲ್ಲಿ ಸಿಡುಕದೆ, ನಿಜವಾದ ಪ್ರೇಮ, ಆದರ ತೋರಿ, ಶಾಸ್ತ್ರಾಭ್ಯಾಸ ಮುಂದುವರೆಸಿ, ತಮ್ಮ ಗುರುಗಳ ಆದೇಶದಂತೆ ಸನ್ಯಾಸಿಯಾಗಿ ನಿಂತಿದ್ದನ್ನು ನೋಡಿದರೆ, ಗಮನಿಸಿದರೆ ನಿಜವಾದ ಸದ್ಭಕ್ತರಿಗೆ ಕಣ್ಣಲ್ಲಿ ನೀರು ಚಿಮ್ಮುತ್ತದೆ.

ಹೀಗಾಗಿ ಇಂತಹ ಮಹಾಮಹಿಮರು, ಕರುಣಾಶಾಲಿಗಳು, ಸಂಸಾರತಾರಕರು, ಅಜ್ಞಾನ ಪರಿಹಾರಕರು, ಆದ ಶ್ರೀರಾಘವೇಂದ್ರ ಸ್ವಾಮಿಗಳ ಪವಿತ್ರ ಪದತಳದಲ್ಲಿ ಒಂದು ತುಳಸಿದಳ ಸಮರ್ಪಣೆ. ●

ಶ್ರಾವಣ ಬಹುಳ ಬಿದಿಗೆ

ಲೇಖಕರು :— ಪದ್ಮಶ್ರೀ [illegible]

ಭಕ್ತರನ್ನು ಕೆಲವು ಬಾರಿ ಭಗವಂತನು ತನ್ನ ನಿಯಮಿತ ಕಾರ್ಯಗಳಿಗೆ ನಿಯಮಿಸುವುದುಂಟು. ಅಂಥವರು ವಿಭೂತಿಪುರುಷರಾಗಿ ಭಗವಂತನ ಕಾರ್ಯಸಾಧಕರಾಗಿ ಮೆರೆಯುತ್ತಾರೆ. ಲೋಕದಲ್ಲಿ ಅಸುರೀಶಕ್ತಿಗಳು ವಿಜೃಂಭಿಸಿ ಸಾತ್ವಿಕ ಶಕ್ತಿಗಳ ವಿಕಾಸಕ್ಕೆ ಅಡ್ಡಿ ಆತಂಕಗಳು ಒದಗಿದಾಗ ಭಗವಂತನ ಇಚ್ಛೆಯಂತೆ ಮಹನೀಯರು ಅವತರಿಸುತ್ತಾರೆ.

ಹೀಗೆ ಭಗವಂತನ ಕಾರ್ಯಸಾಧಕರಾಗಿ, ಭಕ್ತಿ-ಜ್ಞಾನ-ವೈರಾಗ್ಯಗಳನ್ನು ಬೆಳೆಸಲು ಅವತರಿಸಿದವರೇ ಭಾಗವತೋತ್ತಮರೂ, ಕರುಣಾಮೂರ್ತಿಗಳೂ, ತಪಸ್ವಿಗಳೂ ಆದ ಶ್ರೀರಾಘವೇಂದ್ರಸ್ವಾಮಿಗಳು.

ಕಲಿಯುಗದಲ್ಲಿ ಒಂದು ಕಾಲಿನ ಮೇಲೆ ಧರ್ಮದೇವತೆಯಾದ ಧೇನುವು ನಿಂತಿರುವುದೆಂದು ಪ್ರಾಜ್ಞರ ಮತವಿದೆ. ಅಧರ್ಮ ಹೆಚ್ಚಾಗಿರುವ ಕಲಿಯುಗದಲ್ಲಿ ಲೋಕಕಲ್ಯಾಣಕ್ಕಾಗಿ ಶ್ರೀರಾಘವೇಂದ್ರರ ಅವತಾರವಾಗಿದೆ.

ಆಚಾರ್ಯ ಮಧ್ವಾಚಾರ್ಯರ ತತ್ತ್ವದ ಸಾರವನ್ನೆಲ್ಲಾ ಹೀರಿ, ಲಘುಟಿಪ್ಪಣಿಗಳನ್ನು ಬರೆದು, ಮಧ್ವಮತವನ್ನು ಉದ್ಧರಿಸಿದ ಶ್ರೀರಾಘವೇಂದ್ರರು ಮಹಾಮಹಿಮರಾಗಿ ಇಂದಿಗೂ ನಮ್ಮನ್ನು ಸಂರಕ್ಷಿಸುತ್ತಿದ್ದಾರೆ.

"ತುಂಗಭದ್ರಾ ತೀರದ ಮಂಚಾಲೆ ಗ್ರಾಮದಲ್ಲಿಯೇ ಶ್ರೀರಾಘವೇಂದ್ರಸ್ವಾಮಿಗಳು ಬೃಂದಾವನಸ್ಥರಾಗಲು ಕಾರಣವೇನು ?" ಎಂಬ ಪ್ರಶ್ನೆಗೆ ಗುರುರಾಯರು ನೀಡಿದ್ದ ಉತ್ತರ :

"ಕೃತ, ತ್ರೇತಾ ಮತ್ತು ದ್ವಾಪರಯುಗದಲ್ಲೂ ಈ ಕ್ಷೇತ್ರ ಪುಣ್ಯಭೂಮಿಯಾಗಿತ್ತು. ಪ್ರಹ್ಲಾದರಾಜರು ಯಜ್ಞಮಾಡಿದ ಸ್ಥಳ. ಪಶ್ಚಿಮ ಘಟ್ಟದ ಸಹ್ಯಾದ್ರಿಪರ್ವತದ ವರಾಹಮೂಲ ಸ್ಥಳದಲ್ಲಿ ಹುಟ್ಟುವ ಯಮಳ ನದಿಗಳಾದ ತುಂಗ ಮತ್ತು ಭದ್ರ ನದಿಗಳು ಸಂಗಮಿಸಿ ತುಂಗಭದ್ರೆಯಾಗಿ ಇಲ್ಲಿ ಹರಿಯುತ್ತಿದ್ದಾಳೆ. ಈ ಕ್ಷೇತ್ರದಲ್ಲೇ ನಾವು ಬೃಂದಾವನದೊಳಗೆ ಅಡಗಿ, ಭಕ್ತರ ಸಕಲ ಅಭೀಷ್ಟಗಳನ್ನು ಕರುಣಿಸಿ, ಕಲಿಯುಗದ ಕಾಮಧೇನುವಿನಂತೆ ಮಹಿಮೆ ಬೀರುತ್ತಿದ್ದಾರೆ.

ಕೂಡಲಿಯಲ್ಲಿ ನರಸಿಂಹಸ್ವಾಮಿಯನ್ನು ಸಾಕ್ಷಾತ್ಕರಿಸಿಕೊಂಡಿದ್ದ ಪರಮ ಭಾಗವತರಾದ ಪ್ರಹ್ಲಾದರು ಗುರುರಾಜರಾಗಿ ಅವತರಿಸಿ ಬೃಂದಾವನದೊಳಗೆ ಅಡಗಿ, ಭಕ್ತರ ಸಕಲ ಅಭೀಷ್ಟಗಳನ್ನು ಕರುಣಿಸಿ, ಕಲಿಯುಗದ ಕಾಮಧೇನುವಿನಂತೆ ಮಹಿಮೆ ಬೀರುತ್ತಿದ್ದಾರೆ.

ವೀಣೆಯನ್ನು ನುಡಿಸಿ ಪರಮಾತ್ಮನನ್ನು ಒಲಿಸಿಕೊಂಡ ಶ್ರೀರಾಘವೇಂದ್ರರು, ಮಹಾಮಹಿಮೆಯಿಂದ ಕೂಡಿದ್ದ ಈ ಪ್ರದೇಶವನ್ನು ತಮ್ಮ ಕಾರ್ಯಕ್ಷೇತ್ರ ಮಾಡಿಕೊಂಡು, ಭಕ್ತಕೋಟಿಯನ್ನುದ್ಧರಿಸುತ್ತಿದ್ದಾರೆ.

ದೈವಾಂಶಸಂಭೂತರಾದ ಶ್ರೀರಾಘವೇಂದ್ರಸ್ವಾಮಿಗಳು ಶಾಲೀವಾಹನ ಶಕ 1671ನೇ ಶ್ರಾವಣ ಕೃಷ್ಣ ಬಿದಿಗೆಯ ದಿನ ಬೃಂದಾವನಸ್ಥರಾದ ದಿನ.

ಮಂತ್ರಾಲಯವು ಶ್ರೀಗುರುರಾಯರ ಬೃಂದಾವನದಿಂದಾಗಿ ಇಂದು ವಿಶ್ವದಾದ್ಯಂತ ಪ್ರಸಿದ್ಧಿ ಪಡೆದಿದೆ.

ಶ್ರೀಮತ್ಸುಜಯೀಂದ್ರತೀರ್ಥ ಮಂಗಳಾಷ್ಟಕಮ್

—ಕವಿ: ಶ್ರೀ ರಾಘವೇಂದ್ರಗುರು ವಂಶಭೂಷಣ **ರಾಜಾ ಶ್ರೀ ಎಸ್. ಗುರುರಾಜಾಚಾರ್ಯರು**

ಶ್ರೀಮಚ್ಛಾಷ್ಟಿಕವಂಶವಾರ್ಧಿಶಶಿನಃ ಶ್ರೀರಾಘವೇಂದ್ರಪ್ರಭೋಃ
ಕಾರುಣ್ಯಾಪ್ತಸುರೇಂದ್ರವೈಭವಲಸತ್ಕಾರುಣ್ಯವಾರಾಂನಿಧಿಃ।
ಶ್ರೀಮದ್ಭಾರತಸಾರ್ವಕಾರಿಕವರಾಮಾತ್ಯಾದಿಭಿಃ ಪೂಜಿತಃ
ಮಾನ್ಯಃ ಶ್ರೀಸುಜಯೀಂದ್ರತೀರ್ಥಗುರುರಾಟ್ ಕುರ್ಯಾತ್ಸದಾ ಮಂಗಲಮ್ ॥೧॥

ಶ್ರೀಮದ್ಗೌತಮಮೌನಿಗೋತ್ರಮಹಿತ ಶ್ರೀಷಾಷ್ಟಿಕಾಖ್ಯೇಽನ್ವಯೇ
ಸುಜ್ಞಾನೇಂದ್ರ ಬುಧೇಶ್ವರಾದುದಭವಲ್ಲಕ್ಷ್ಮ್ಯಂಬಿಕಾಯಾಂ ಭುವಿ।
ಶ್ರೀಮದ್ವೇಂಕಟರಾಘವೇಂದ್ರವಿಬುಧೇತ್ಯನ್ವರ್ಥನಾಮ್ನಾ ಶ್ರುತಃ
ಪೂಜ್ಯಃ ಶ್ರೀಸುಜಯೀಂದ್ರತೀರ್ಥಗುರುರಾಟ್ ಕುರ್ಯಾತ್ಸದಾ ಮಂಗಲಮ್ ॥೨॥

ಶ್ರೀಮನ್ಮಧ್ವಜಯಾರ್ಯರಾಜಿತ ಮಹಾವೇದಾಂತ ಸಿಂಹಾಸನೇ
ತತ್ರಾದ್ಯಗ್ರ್ಯಗುರುರಾಘವೇಂದ್ರಲಸಿತೇ ಪೀಠೇ ವ್ಯರಾಜತ್ಪ್ರಭುಃ।
ತ್ರ್ಯವಿಂಶಚ್ಛರದಂ ಹಿ ಯೋಽತಿಕುಶಲಂ ಸರ್ವಾನ್ಸದಾಪಾಲಯತ್
ಸೋಽಯಂ ಶ್ರೀಸುಜಯೀಂದ್ರತೀರ್ಥಗುರುರಾಟ್ ಕುರ್ಯಾತ್ಸದಾ ಮಂಗಲಮ್ ॥೩॥

ಶ್ರೀಬ್ರಹ್ಮಾರ್ಚಿತ ಮೂಲರಾಮ ಚರಣಾಂಭೋಜದ್ವಿರೇಫಾಯಿತಃ
ಶ್ರೀಮದ್ಧಂಸ ಸುವಂಶಸಾರಸಲಸಚ್ಛ್ರೀ ರಾಜಹಂಸಾಯಿತಃ।
ಮಾಯಾವಾದಿ ಕರೀಂದ್ರಗರ್ವದಲನೇ ಸಿಂಹಪ್ರಬರ್ಹಾಯಿತಃ
ಪೂಜ್ಯಃ ಶ್ರೀಸುಜಯೀಂದ್ರತೀರ್ಥ ಗುರುರಾಟ್ ಕುರ್ಯಾತ್ಸದಾಮಂಗಲಮ್ ॥೪॥

ಸದ್ವೇದಾಂತ ಸುತರ್ಕ ಪಾಣಿನಿನಯೇ ಸದ್ಧರ್ಮಶಾಸ್ತ್ರೇ ಶ್ರುತೌ
ಮೀಮಾಂಸೋಪನಿಷತ್ಪುರಾಣಕವಿತಾ ವೇದಾಂಗಶಾಸ್ತ್ರಾದಿಷು।
ಯಶ್ಚಾನನ್ಯಸಹಾಯಕೋಽತಿ ಕುಶಲಃ ವಿದ್ವಜ್ಜನಾನಂದಕಃ
ಸೋಽಯಂ ಶ್ರೀಸುಜಯೀಂದ್ರತೀರ್ಥ ಗುರುರಾಟ್ ಕುರ್ಯಾತ್ಸದಾ ಮಂಗಲಮ್ ॥೫॥

ವಿದ್ವತ್ತೋಷಣ ದೇವತಾರ್ಚನ ತಪೋಽನುಷ್ಠಾನ ಸತ್ಪ್ರತನಂ
ವಿದ್ಯಾಪೀಠ ವಿವರ್ಧನಂ ಪರಗುರೋರ್ಬೃಂದಾವನ ಸ್ಥಾಪನಂ।
ಕುರ್ವನ್ ಕಾಂಚನವಸ್ತ್ರರಾಜತಧನೈರನ್ಯೈರ್ಬುಧಾನ್ ತೋಷಯನ್
ಪೂಜ್ಯಃ ಶ್ರೀಸುಜಯೀಂದ್ರತೀರ್ಥಗುರುರಾಟ್ ಕುರ್ಯಾತ್ಸದಾ ಮಂಗಲಮ್ ॥೬॥

ಕರ್ಣಾಟಾಂಧ್ರ ಸುರಾಜ್ಯಪಾಲಸಚಿವೈಸ್ಸರ್ವೈ ರ್ಯದಾಸೇವಿತಃ
ವಿದ್ವದ್ವೈದಿಕಲೌಕಿಕಾಸ್ತಿಕಜನೈಃ ಶಿಷ್ಯೈಶ್ಚ ಭಕ್ತಾದಿಭಿಃ ।
ಆರಾಧ್ಯೋ ಸುಜನಾಲಿಪಾಲನ ಜಗತ್ಕಲ್ಯಾಣಕಾರೀ ವಿಭುಃ
ಪೂಜ್ಯಃ ಶ್ರೀ ಸುಜಯೀಂದ್ರತೀರ್ಥಗುರುರಾಟ್ ಕುರ್ಯಾತ್ಸದಾ ಮಂಗಲಮ್ ॥೭॥

ಶ್ರೀಮತ್ಸದ್ಗುರುಸಂಯಮೀಂದ್ರ ಕರುಣಾಸಂಪ್ರಾಪ್ತತುರ್ಯಾಶ್ರಮಃ
ಶ್ರೀಮಂತ್ರಾಲಯ ಸನ್ಮಠಂ ಸುರಪುರೀ ಪ್ರಖ್ಯಂ ಸಮಾಕಾರಯನ್ ।
ಕ್ಷೇತ್ರೇ ಮಂತ್ರಪುರೇ ಸುಕೀರ್ತಿಮಹಿತಃ ಬೃಂದಾವನಾಂತರ್ಗತಃ
ರಾಜಚ್ಛ್ರೀಸುಜಯೀಂದ್ರತೀರ್ಥ ಗುರುರಾಟ್ ಕುರ್ಯಾತ್ಸದಾ ಮಂಗಲಮ್ ॥೮॥

ಗುರುರಾಜಕವಿ ಪ್ರೋಕ್ತಮಷ್ಟಕಂ ಯಃ ಪಠೇತ್ಸದಾ ।
ಪುತ್ರಪೌತ್ರಾಯುರಾರೋಗ್ಯ ಸಂಪನ್ಮಂಗಳಭಾಗ್ಭವೇತ್ ॥ ॥೯॥

ಶ್ರೀಮತ್ಸುಜಯೀಂದ್ರತೀರ್ಥ ಸುಪ್ರಭಾತಮ್

—ಕವಿ ಶ್ರೀ ರಾಘವೇಂದ್ರ ಗುರುವಂಶಭೂಷಣ **ಶ್ರೀ ರಾಜಾ ಗುರುರಾಜಾಚಾರ್ಯರು**

ಶ್ರೀಗೌತಮಾನ್ವಯಸುಸಾತ್ವಿಕ ವಂಶಭೂಷ
ಶ್ರೀರಾಘವೇಂದ್ರ ಗುರುವಂಶಸುಧಾಬ್ಧಿ ಚಂದ್ರ ।
ಶ್ರೀಜ್ಞಾನಿದೈಶಿಕ ಸುಪುತ್ರಲಸದ್ಗುಣಾಢ್ಯ
ಶ್ರೀವೆಂಕಟಾಭಿಧಗುರೋ ತವ ಸುಪ್ರಭಾತಮ್ ॥೧॥

ಶ್ರೀರಾಘವೇಂದ್ರ ಚರಣಾಂಬುಜಮತ್ತ ಚಿತ್ತ
ಶ್ರೀರಾಘವೇಂದ್ರಕರುಣಾಪ್ತ ಶುಭಾರ್ಥವಿತ್ತ ।
ಶ್ರೀರಾಘವೇಂದ್ರ ಮಠವರ್ಧನದತ್ತ ದೀಕ್ಷ
ಶ್ರೀರಾಘವೇಂದ್ರಪರಮೇಷ್ಟ ಶುಭಪ್ರಭಾತಮ್ ॥೨॥

ಶ್ರೀಮೂಲರಾಮ ಪದಪಂಕಜ ಭೃಂಗರಾಜ !
ಶ್ರೀಮಧ್ವಮೌನಿವರವಂಶ ಸುಧಾಬ್ಧಿರಾಜ !
ಶ್ರೀರಾಘವೇಂದ್ರಕುಲಸಾರಸ ಹಂಸರಾಜ !
ಶ್ರೀಮದ್ಯತೀಂದ್ರಸುಜಯೀಂದ್ರ ! ಶುಭಪ್ರಭಾತಮ್ ॥೩॥

ಶ್ರೀಮಧ್ವರಾಜರಘುರಾಜಪದಾಬ್ಜ ಸೇವಿನ್
ವಿದ್ವತ್ಸಭಾಸುವಿಬುಧೇಷ್ಟದ ಭೋಜರಾಜ !
ಶ್ರೀರಾಘವೇಂದ್ರಯತಿರಾಜ ಮಠಾಧಿರಾಜ !
ವಿದ್ಯಾಧಿರಾಜ ಸುಜಯೀಂದ್ರ ಶುಭಪ್ರಭಾತಮ್ ॥೪॥

ಕಾಶೀಶರಕ್ಷಕರಘೂದ್ವಹಪಾದಪದ್ಮ
ಸಂಸೇವಿಮಂತ್ರನಿಲಯಾಧಿಪಸತ್ಕೃಪಾಢ್ಯ ।
ಶ್ರೀಸಂಯಮೀಂದ್ರವರಪುತ್ರಸದರ್ಘ್ಯಗಾತ್ರ
ಧೀಶಾಢ್ಯ ತೇ ಸುಜಯಿತೀರ್ಥ ಶುಭಪ್ರಭಾತಮ್ ॥೫॥

ಸದ್ಜ್ಞಾನಭಕ್ತಿಸುವಿರಕ್ತಿ ತಪೋಭಿಪೂರ್ಣ
ಸಚ್ಛಾಸ್ತ್ರಪಾಠನಪಟೋ ! ವಿಜಿತಾರಿಸಂಘ!
ವಿದ್ವಜ್ಜನಾವನ ವರಪ್ರದ ಸರ್ವವಂದ್ಯ
ಪೂಜ್ಯಾಢ್ಯ ತೇ ! ಸುಜಯಿತೀರ್ಥ ಶುಭಪ್ರಭಾತಮ್ ॥೬॥

ಶ್ರೀಮಧ್ವಸನ್ಮತಮತೀವ ಸುಕೌಶಲೇನ
ಸಂವರ್ಧಯನ್ ಜಗತಿ ಸರ್ವಜನಾದೃತೋಽಸಿ ।
ಶ್ರೀಮತ್ಸಮೀರ ಸಮಯಾಖ್ಯ ಸಭಾಪ್ರಸಾರಿನ್
ಭೋ ಸೌಜಯೀಂದ್ರ ! ಕಲಯೇ ತವ ಸುಪ್ರಭಾತಮ್ ॥೭॥

ಶ್ರೀರಾಘವೇಂದ್ರಗುರುವರ್ಯ ಸುಮೃತ್ತಿಕಾ-
ಸದ್ಬೃಂದಾವನಾನಿ ವಿವಿಧೇಷು ಪುರೇಷು ಭೂಯಃ ।
ಸಂಸ್ಥಾಪಯನ್ ಸುಜನಮಂಗಳಮಾತನೋಷಿ
ಭೂಯಾತ್ಪ್ರಭಾತಮಮಲಂ ಸುಜಯೀಂದ್ರತೀರ್ಥ ॥೮॥

ವಿದ್ಯಾನ್ನದಾನಬುಧಪೋಷಣತೀರ್ಥಯಾತ್ರಾ-
ಸಚ್ಛಿಷ್ಯಭಕ್ತಸುಜನೋದ್ಧರಣೈಕದಕ್ಷ ।
ಸಂಸೇವಿತಾಖಿಲಜನೇಷ್ಟದ ಕಾಮಧೇನೋ
ಶ್ರೀಸೌಜಯೀಂದ್ರಯತಿಪುಂಗವ ಸುಪ್ರಭಾತಮ್ ॥೯॥

ಶ್ರೀರಾಘವೇಂದ್ರಸದ್ವಂಶ್ಯ ಗುರುರಾಜಕವೀರಿತಮ್ ।
ಸುಪ್ರಭಾತಂ ಪಠೇದ್ಯಸ್ತು ಲಭಂತೇ ತೇ ಸುಮಂಗಲಮ್ ॥
ಸುಯಮೀಂದ್ರ ಕರಾಬ್ಜೋತ್ಥಂ ಸುವಿದ್ಯಾಬೋಧಕಂ ಸದಾ ।
ಸುಮೂಲರಾಮ ಪೂಜಾಢ್ಯಂ ಸುಜಯೀಂದ್ರ ಗುರುಂ ಭಜೇ ॥

ಶ್ರೀಸುಜಯೀಂದ್ರತೀರ್ಥರು

—ವಿದ್ವಾನ್ ಆರ್. ವಿಜಯೀಂದ್ರಾಚಾರ್ಯ

ಸಚ್ಛಾಸ್ತ್ರಾಬ್ಧಿಗಾಹಾನಚ ನಿಗಮ ಚರ್ಚಾಸು ಚತುರಾ||
ಸಚನ್ಯಾಯೇ ಪ್ರೌಢನಚ ವಿದಿತವೇದ್ಯಾ ಅಪಿವಯಂ||
ಪರಂ ಶ್ರೀಮತ್ಪೂರ್ವಶ್ರೀಗುರು ಕಾರುಣ್ಯ ಸರಣಿಂ||
ಪ್ರಪನ್ನಾ ಮಾನ್ಯಾಸ್ಮಃ ಕಿಮುಪಿಚವದಂತೋಪಿಮುಹಕಾಂ||

ಜ್ಞಾನ ಶ್ರೇಷ್ಠರೂ ತಪಸ್ಸಿದ್ಧಿಗಳೂ ದೇವಾಂಶಸಂಭೂತರೂ ಮತ್ತು ದೇವಸ್ವಭಾವರು ಆದ ಮಹನೀಯರ ಸಂದೇಶದಂತೆ ಗುರುಗಳಿಗೆ ಪ್ರಾಧಾನ್ಯತೆಯನ್ನ ಎಷ್ಟು ಮಟ್ಟಿಗೆ ದಯಪಾಲಿಸಿ ಅಸ್ಮದಾದಿಗಳಿಗೆ ಉಪದೇಶಿಸಿರುವುದು ಪ್ರತಿಯೊಬ್ಬ ಸಾತ್ವಿಕ ಜೀವರೂ ಶಿರಸಾವಹಿಸಿ ಮಾಡಬೇಕಾದ್ದು ಸರಿ. ಇಂಥ ಗುರುಗಳಿಗೆ ದ್ರೋಹ ಬಗೆಯುವವನು ಮೂರ್ಖನೆ ಸರಿ. ಪ್ರತ್ಯೇಕ ಯಾವ ವಿಧವಾದ ಯೋಗ್ಯತೆ ಇಲ್ಲದಿದ್ದರೂ ಮುಖ್ಯರಾಗಿ ಗುರುಗಳಕಾರುಣ್ಯ (ಅನುಗ್ರಹ) ಇದ್ದದ್ದೆ ಆದರೆ ಎಂಥ ಮಹತ್ಕಾರ್ಯವನ್ನಾದರೂ ಗುರುಗಳ ಅನುಗ್ರಹ ಬಲದಿಂದ ನಿರ್ವಹಿಸಬಹುದು ಅಂತ ಹೇಳ ಬಹುದಾಗಿದೆ.

ಪ್ರಕೃತ ಜ್ಞಾನಸುಧಾ ಸಂಪಾದಕರು ಸಾಹಿತ್ಯಪ್ರೇಮಿಗಳು ಕಲಾಪ್ರಿಯರೂ ಆದ ಶ್ರೀಧನ್ವಂತರಿಮಾಧವ ಮೂರ್ತಿಗಳು ಬಂದು **"ಶ್ರೀಸುಜಯೀಂದ್ರವೈಭವ"** ಎಂಬ ಸಂಚಿಕೆಯನ್ನು ಹೊರತರುವುದಾಗಿಯೂ ಅದಕ್ಕಾಗಿ ಒಂದು ಲೇಖನವನ್ನು ಕೊಡಬೇಕೆಂದು ಸಹಾ ಕಳಕಳಿಯಿಂದ ಹೇಳಲಾಗಿ ನನ್ನ ಮನಸ್ಸು ಪುಳಕಿತವಾಗಿ ಇಂಥ ಗುರುಸೇವ ನನಗೆ ಒದಗಿಬಂದಿದ್ದಕ್ಕಾಗಿ ಬಹಳ ಸಂತೋಷವಾಗಿ ಗುರುಗಳ ಮಹಿಮಾತಿಶಯವನ್ನು ಬರೆದುಕೊಡಲು ಗುರುಗಳಪ್ರೇರಣೆ ಮಾಡಿ ಬರೆಸಿದ್ದನ್ನು ವಾಚಕರ ಮುಂದಿಡುತ್ತಿದ್ದೇನೆ

ಶ್ರೀಸುಜಯೀಂದ್ರತೀರ್ಥ ಶ್ರೀಪಾದಂಗಳವರ ಪೂರ್ವಾಶ್ರಮದ ಹೆಸರು ವೆಂಕಟರಾಘವೇಂದ್ರಾಚಾರ್ಯ ರೆಂದು ಇವರ ತಾತಂದಿರ ಹೆಸರನ್ನೆ ಇವರಿಗಿಡಲಾಗಿತ್ತು. ಇವರ ತಾತಂದಿರಾದ ವೆಂಕಟರಾಘವೇಂದ್ರಾಚಾರ್ಯರಿಗೆ ಮೂರುಜನ ಗಂಡುಮಕ್ಕಳು. ಮೊದಲನೆಯವರು ಶ್ರೀವೇಣುಗೋಪಾಲಾಚಾರ್ಯ (ಶ್ರೀಸುಕೃತೀಂದ್ರ ತೀರ್ಥ ಶ್ರೀಪಾದಂಗಳವರು) ಎರಡನೆಯವರು ಶ್ರೀಕೃಷ್ಣಾಚಾರ್ಯರು. (ಶ್ರೀಸುಶೀಲೇಂದ್ರತೀರ್ಥ ಶ್ರೀಪಾದಂಗಳವರು.) ಮೂರನೆಯವರು ಶ್ರೀಸುಜ್ಞಾನೇಂದ್ರಾಚಾರ್ಯರು (ಶ್ರೀಸುಜಯೀಂದ್ರರ ಪೂರ್ವಾಶ್ರಮದ ತಂದೆಯವರು) ಮೇಲ್ಕಂಡ ಸುಜ್ಞಾನೇಂದ್ರಾಚಾರ್ಯರಿಗೆ ಇಬ್ಬರು ಗಂಡುಮಕ್ಕಳು. ಮೊದಲನೆಯವರು ಶ್ರೀರಾಜಾಗೋಪಾಲಚಾರ್ಯರು ಎರಡ ನೆಯವರೇ ವೆಂಕಟರಾಘವೇಂದ್ರಾಚಾರ್ಯರು (ಇವರೇ ಮುಂದೆ ಶ್ರೀಸುಜಯೀಂದ್ರತೀರ್ಥರಾದರು) ಪುರಾಣೇತಿಹಾಸ ಗಳಲ್ಲಿ ಕಂಡು ಬರುವಂತೆ.

"ಶುಚಿನಾಂ ಶ್ರೀಮತಾಂಗೇಹೇ"
"ಯೋಗ ಭ್ರಷ್ಟೋಪಜಾಯತೆ"

ಅಂತ ಶ್ರೀಕೃಷ್ಣ ಪರಮಾತ್ಮನು ಅರ್ಜುನನಿಗೆ ಹೇಳಿದಂತೆ ಜಗತ್ಪ್ರಸಿದ್ಧರೂ ದೇವಾಂಶರೂ ಚತುಷಷ್ಠಿ ಕಲಾ ಪೂರ್ಣರು ಮಹಾತಪಸ್ವಿಗಳು ಆದ ಶ್ರೀರಾಘವೇಂದ್ರಸ್ವಾಮಿಗಳ ಸದ್ವಂಶದಲ್ಲಿ ಮತ್ತು ಪರಮ ಪವಿತ್ರವಾದ ಗೌತಮ ಗೋತ್ರದಲ್ಲಿ ಮೇಲ್ಕಂಡ ಶ್ರೀಸುಜ್ಞಾನೇಂದ್ರಾಚಾರ್ಯರವರ ಉದರದಲ್ಲಿ ಅವತರಿಸಿ ಬಾಲ್ಯವನ್ನು ಕಳೆದು ಉಪನಯ ನಾದಿಗಳನ್ನು ಮುಗಿಸಿ ಗೃಹಸ್ಥಾಶ್ರಮ ಸ್ವೀಕಾರಮಾಡಿ ಆಗಿನ ಕಾಲದಲ್ಲಿ ಮಹಾಪಂಡಿತರು ಮತ್ತು ವಿಜ್ಞಾನಿಗಳು

ಆಗಿದ್ದ ಯಲತ್ತೂರು ಕೃಷ್ಣಾಚಾರ್ಯರಲ್ಲಿ ತರ್ಕ ಮತ್ತು ವ್ಯಾಕರಣಾದಿಗಳನ್ನು ಹಾಗು ಮೈಸೂರು ಆಸ್ಥಾನದ ಮಹಾ ಪಂಡಿತರಾಗಿದ್ದ ದೊಡ್ಡಬಳ್ಳಾಪುರ ವಾಸುದೇವ ಆಚಾರ್ಯರಲ್ಲಿ ವೇದಾಂತದಲ್ಲೂ ಗ್ರಂಥಗಳನ್ನು ಶ್ರೀಮುಷ್ಣಂ ಕೃಷ್ಣ ಮೂರ್ತಾಚಾರ್ಯರಲ್ಲಿ ಮೀಮಾಂಸಾದಿ ಗ್ರಂಥಗಳನ್ನು ಸಹಾ ಮುಗಿಸಿ ಚತುಶಾಸ್ತ್ರದಲ್ಲಿ ಮಹಾಪಂಡಿತರಾಗಿ ಜಗತ್ಪ್ರಸಿದ್ಧರೂ ತತ್ವಜ್ಞಾನಿಗಳೂ ಮತ್ತು ತಪಸ್ವಿಗಳು ಆಗಿದ್ದ ಶ್ರೀರಾಘವೇಂದ್ರಸ್ವಾಮಿಗಳ ಮಠದಲ್ಲಿ ಅಗ್ರ ಪೀಠಾಧೀಶರುಗಳು ಆಗಿದ್ದ ಶ್ರೀಸುಯಮೀಂದ್ರತೀರ್ಥ ಶ್ರೀಪಾದಂಗಳವರಿಂದ ನಂಜನಗೂಡಿನಲ್ಲಿ ಆಶ್ರಮ ಸ್ವೀಕರಿಸಿ ಅವರಿಂದ ಮಂತ್ರೋಪದೇಶವನ್ನು ಹೊಂದಿ ಸುಮಾರು 23 ವರ್ಷಗಳ ಹಿಂದೆ ಇವರು ಶ್ರೀಸುಜಯೀಂದ್ರತೀರ್ಥ: ಶ್ರೀಪಾದಂಗಳವರೆಂದು ಗುರುಗಳಿಂದ ನಾಮಾಂಕಿತರಾಗಿ ಶ್ರೀರಾಘವೇಂದ್ರಸ್ವಾಮಿಗಳವರ ಮಠದ ಪೀಠಾಧಿಪತಿಗಳಾದರು. ಆಶ್ರಮವಾದ ಸ್ವಲ್ಪ ದಿನಗಳೊಳಗಾಗಿ ಇವರು ಮಂತ್ರಾಲಯಕ್ಕೆ ದಿಗ್ವಿಜಯಮಾಡಿ ಶ್ರೀಮಠದ ಸುಧಾರಣೆಯಲ್ಲಿ ನಿರತರಾದರು. ಮಂತ್ರಾಲಯ ಈ ಮೊದಲು ಹೇಗಿತ್ತೆಂದು ಸ್ಥಳವಂದಿಗರು ವಯೋವೃದ್ಧರಾದವರನ್ನು ವಿಚಾರಿಸಿದರೆ ತಿಳಿಯುತ್ತೆ. ಮಂತ್ರಾಲಯದಲ್ಲಿ ಇದ್ದ ಹಳೇ ಛತ್ರ ಒಂದೇ ಬರತಕ್ಕ ಭಕ್ತಾದಿಗಳಿಗೆ ಆ ಕಾಲದಲ್ಲಿ ಆಶ್ರಯವಾಗಿತ್ತು. ಇವರು ಪೀಠಕ್ಕೆ ಬಂದ ಮೇಲೆ ಭಕ್ತಾದಿಗಳ ಅನುಕೂಲಕ್ಕಾಗಿ ಕೋಟ್ಯಾಂತರ ಹಣ ಖರ್ಚುಮಾಡಿ ಭಕ್ತರುಗಳಿಗೆ ಅನುಕೂಲ ಕಲ್ಪಿಸಿ ಕೊಟ್ಟಿರುತ್ತಾರೆ. ಅಲ್ಲದೆ ಭಾರತ ದೇಶದ ಮೂಲೆ ಮೂಲೆಗಳಿಂದ ಮಂತ್ರಾಲಯಕ್ಕೆ ಬರತಕ್ಕ ಭಕ್ತಾದಿಗಳ ಆದರಕ್ಕೂ ಪಾತ್ರರಾಗಿರುತ್ತಾರೆ.

ಇವರ ಕಾಲದಲ್ಲಿ ಆದ ಶಾಖಾಮಠಗಳು ಪೂನಾ, ಬೊಂಬಾಯಿ, ಬೆಂಗಳೂರು, ಸೊಲ್ಲಾಪುರ, ಮದರಾಸು, ಬಾಗಲಕೋಟೆ, ರಾಯಚೂರು, ಮೊದಲಾದ ಸ್ಥಳಗಳಲ್ಲಿ ಶ್ರೀಗುರುರಾಜರ ಬೃಂದಾವನ ಪ್ರತಿಷ್ಠೆಮಾಡಿ ಆಯಾ ಸ್ಥಳಗಳಲ್ಲಿ ಭಕ್ತರಿಗೆ ಅನುಕೂಲಮಾಡಿಕೊಟ್ಟು ಶ್ರೀಗುರುರಾಜರ ಸೇವಾ ನಿರಂತರವಾಗಿ ನಡೆಯುವಂತೆ ಏರ್ಪಡಿಸಿ ಕೀರ್ತಿಶಾಲಿಗಳಾದರು. ಮತ್ತು ಆಯಾ ಮಠಗಳಲ್ಲಿ ಸಂಸ್ಕೃತ ವಿದ್ಯೆಕ್ಕೆ ಪ್ರೋತ್ಸಾಹ ನೀಡಿ ಪಾಠಶಾಲೆಗಳನ್ನ ಏರ್ಪಡಿಸಿ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಿರುವ ವಿಷಯ ಸಕಲರಿಗೂ ತಿಳಿದ ವಿಷಯವಾಗಿದೆ.

ಮುಖ್ಯವಾಗಿ ಮಂತ್ರಾಲಯದಲ್ಲಿ ವಿದ್ಯಾಪೀಠವನ್ನು ಸ್ಥಾಪಿಸಿ ನೂರಾರು ವಿದ್ಯಾರ್ಥಿಗಳಿಗೆ ಮತ್ತು ಪಂಡಿತರಿಗೆ ಸಹ ಉಚಿತ ವಸತಿ ಮತ್ತು ಊಟದ ವ್ಯವಸ್ಥೆಯಿರುವುದಲ್ಲದೆ ವಿದ್ಯಾಪೀಠದಲ್ಲಿ 12 ವರ್ಷ ವಿದ್ಯಾಭ್ಯಾಸ ಮಾಡಿ ಪರೀಕ್ಷೆಗಳಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಅದೇ ವಿದ್ಯಾಪೀಠದಲ್ಲಿ ವೃತ್ತಿಯನ್ನು ಕಲ್ಪಿಸಿ ಸಹಸ್ರಾರು ರೂಪಾಯಿಯ ಮಾಸಾಶನವನ್ನು ಏರ್ಪಡಿಸಿರುವುದು ಸಕಲರಿಗೂ ತಿಳಿದ ವಿಷಯವಾಗಿದೆ.

ಶ್ರೀಮಠದ ಚರ-ಸ್ಥಿರ-ಆಸ್ತಿಗಳನ್ನು ರೂಢಿಸಿ ಮೊದಲಿನ ಆದಾಯಕ್ಕಿಂತಾ ನಾಲ್ಕುಪಟ್ಟು ಉತ್ಪತ್ತಿಯನ್ನು ಮಾಡಿ ಶ್ರೀಮಠದ ಪುರೋಭಿವೃದ್ಧಿಯಲ್ಲಿ ದೃಢಸಂಕಲ್ಪರಾಗಿದ್ದಾರೆ.

ಶ್ರೀಗುರುರಾಜರಿಗೆ ನಿತ್ಯೋತ್ಸವ ಪಕ್ಷೋತ್ಸವ ಮಾಸೋತ್ಸವ ಸಂವತ್ಸೋತ್ಸವಗಳು ವಿಜೃಂಭಣೆಯಿಂದ ಶಾಶ್ವತವಾಗಿ ನಡೆಯುವಂತೆಯೂ ಬರತಕ್ಕಂತಾ ಭಕ್ತಾದಿಗಳಿಗೆ ಸಂತೋಷವಾಗುವಂತೆಯೂ ಇದರಿಂದ ಶ್ರೀಗುರುರಾಜರು ಸುಪ್ರೀತರಾಗುವಂತೆಯೂ ಸಹ ಏರ್ಪಡಿಸಿರುವುದು ಭಾರತದೇಶದ ಸಕಲ ಭಕ್ತರಿಗೂ ತಿಳಿದ ವಿಷಯವಾಗಿದೆ.

ಪ್ರತಿ ವರ್ಷವು ಶ್ರೀಗುರುರಾಜರ ಆರಾಧನಾ ಕಾಲದಲ್ಲಿ ಮಾಮೂಲಿ ಮೇಲೆ ನಡೆಯುತ್ತಿದ್ದ ವಿದ್ವತ್ಸಭೆಯನ್ನು ಇವರ ಕಾಲದಲ್ಲಿ ವರ್ಷಕ್ಕೆ ಎರಡಾವರ್ತಿ ವಿದ್ವತ್ಸಭೆ ನಡೆಯುವಂತೆ ಏರ್ಪಡಿಸಿ ಸಂಸ್ಕೃತ ವಿದ್ಯಾರ್ಥಿಗಳು ಹಾಗೂ ಪಂಡಿತರುಗಳಿಗೆ ಹಾಗೂ ಸಂಸ್ಕೃತಕ್ಕೂ ವಿಶೇಷ ಪ್ರೋತ್ಸಾಹಗಳನ್ನು ನೀಡಲು ಬಹಳ ಕಾಳಜಿವಹಿಸಿ ಸಭಾಕಾಲಕ್ಕೆ ಶ್ರೀಮಠಸ್ಥ ಪಂಡಿತರುಗಳನ್ನು ಆಹ್ವಾನಿಸಿ ವಿದ್ವತ್ಸಭೆಯಲ್ಲಿ ಅವರುಗಳಿಗೆ ವಿಶೇಷ ಪಾರಿತೋಷಕಗಳ ಮೂಲಕ ಗೌರವಾದರಗಳನ್ನು ನೀಡಿ ಪ್ರೋತ್ಸಾಹಿಸಿ ಕೀರ್ತಿಧ್ವಜ ಪತಾಕೆಯನ್ನು ಪಡೆದಿರುತ್ತಾರೆ.

ಮುಖ್ಯವಾಗಿ ಇವರಲ್ಲಿ ಮಹಾದೊಡ್ಡ ಗುಣಗಳು ತುಂಬಿತ್ತು.

ದಾತೃತ್ವಂ ಪ್ರಿಯವಕ್ತೃತ್ವಂ ಧೀರತ್ವಂ
ವಿಚಾರತಜ್ಞತಾ ಅಭ್ಯಾಸೇನ ನಲಭ್ಯಂತೇ ಚತ್ವಾರಿ

ಸಹಜಾಗುಣಾ ಎಂಬಂತೆ ಈ ಒಂದೊಂದು ಗುಣವೊಬ್ಬೊಬ್ಬರಲ್ಲಿದ್ದರೆ, ಕೀರ್ತಿದಾಯಕವು ಇನ್ನು ನಾಲ್ಕು ಗುಣಗಳೂ ಒಬ್ಬರಲ್ಲಿ ಇದ್ದ ಕಾರಣ ಕೀರ್ತಿಶಾಲಿಗಳಾಗಿದ್ದಾರೆ. ಹರಿಗುರುಗಳ ಅಜ್ಞಾನುಸಾರ ಅನಿತರ ಸಾಧಾರಣ ಕೀರ್ತಿಯನ್ನು ಹೊಂದಿದವರಾದರೂ ಇದಕ್ಕೆ ಒಂದೇ ಉದಾಹರಣೆ ಕೊಡಬಹುದಾಗಿದೆ.

ಶ್ರೀಗುರುರಾಜರು ಬೃಂದಾವನ ಪ್ರವೇಶಮಾಡಿದ ನಂತರ ಶ್ರೀಯೋಗೀಂದ್ರರು ಪೀಠಾರೋಹಣ ಮಾಡಿದರು. ಇವರ ಲಾಗಾಯತು ಶ್ರೀಸುಜಯೀಂದ್ರರವರೆಗೆ ಬಂದಿದ್ದ ಪೀಠಾಧಿಪತಿಗಳೆಲ್ಲರೂ ಸಹ ತಪಸ್ವಿಗಳು ಹಾಗೂ ದೇವಾಂಶರೂ ಮತ್ತು ಚತುಷಷ್ಠಿಗಳು ಪರಿಪೂರ್ಣರಾದ ಪರಮ ವೈರಾಗ್ಯನಿಧಿಗಳು ಚತುರ್ಶಾಸ್ತ್ರಗಳಲ್ಲಿ ಪಾರಂಗತರಾಗಿದ್ದರೂ ಸಹ ಮಂತ್ರಾಲಯದ ಪುರೋಭಿವೃದ್ಧಿಗಳಿಗೆ ಏಕೆ ಮನಸ್ಸು ಕೊಡಲಿಲ್ಲ. ಅಂದರೆ ಅವರುಗಳೆಲ್ಲಾ ಅಪರೋಕ್ಷಜ್ಞಾನಿಗಳೂ ಶಾಪಾನುಗ್ರಹ ಶಕ್ತಿಶಾಲಿಗಳು ಆಗಿದ್ದುದರಿಂದ ಮುಂದೆ ನಮ್ಮಗಳ ಶಿಷ್ಯರಾದ ಶ್ರೀಸುಜಯೀಂದ್ರತೀರ್ಥ ಎಂಬುವರು ಪೀಠಕ್ಕೆ ಬರುತ್ತಾರೆ. ಅವರಿಗೆ ಆದಿಗಾಂತ ವಿಶ್ರಾಂತವಾದ ಕೀರ್ತಿಯನ್ನು ಮುಡುಪಾಗಿಡಬೇಕೆನ್ನುವುದೇ ಆ ಗುರು ಪರಂಪರೆಯವರ ಮಹದಾಶಯವಾಗಿತ್ತೆಂಬುದು ಹರಿಗುರುಗಳ ಪ್ರೇರಣೆಯಾಗಿತ್ತೆಂಬುದು ಊಹಿಸಬಹುದಾಗಿದೆ.

ಕಡೆಯದಾಗಿ ಶ್ರೀಸುಜಯೀಂದ್ರತೀರ್ಥ ಶ್ರೀಪಾದಂಗಳವರು ಭಾರತದೇಶದ ರಾಜಧಾನಿಯಾದ ದೆಹಲಿಯಲ್ಲಿ ಒಂದು ದೊಡ್ಡ ಶಾಖಾಮಠವನ್ನು ಸ್ಥಾಪಿಸಬೇಕೆಂಬುದು ಯೋಚಿಸಿ ಅದಕ್ಕೂ ನಿವೇಶನವನ್ನು ಹೊಂದಿ ಕಟ್ಟಡ ಪ್ರಾರಂಭಿಸಿದರು. ಪರಿಚಿತ ಹೀಗಾಯಿತು ಇಂತಹ ಪ್ರಾತಃಸ್ಮರಣೀಯರ ಮಹಿಮಾದೇಶವನ್ನು ಕೊಂಡಾಡುವ ಅವಕಾಶವನ್ನು ಮಾಡಿಕೊಟ್ಟಿರುವ ಜ್ಞಾನಸುಧಾ ಸಂಪಾದಕ ಮಂಡಲಿಯವರಿಗೆ ಅತ್ಯಂತ ಚಿರಋಣಿಯಾಗಿ ಅವರುಗಳಿಗೆಲ್ಲಾ ಹರಿಗುರುಗಳು ಪರಮಾನುಗ್ರಹಮಾಡಿ ಆಶೀರ್ವದಿಸಲಿ ಎಂದು ಪ್ರಾರ್ಥಿಸುತ್ತೇನೆ.

ಶ್ರೀವಿಭುಧೇಂದ್ರಪೀಠವನ್ನು ಬೆಳಗಿದ ದಿವ್ಯಜ್ಯೋತಿಗಳು ಮತ್ತು ಅವುಗಳಲ್ಲಿ ಶ್ರೀಸುಧೀಂದ್ರರ ಪಾತ್ರ

—ಲೇಖಕರು : **ಆರ್. ಕೃಷ್ಣಮೂರ್ತಿ**

ವೇದಗಳು, ಭಾರತ, ಪಾಂಚರಾತ್ರಾಗಮ, ಮೂಲರಾಮಾಯಣ, ಇವುಗಳನ್ನೂ, ಇವುಗಳಲ್ಲಿ ಅಡಕವಾಗಿರುವ ಪ್ರಮೇಯಾಂಶಗಳನ್ನು ಪುಷ್ಟೀಕರಿಸುವ ಇತರ ಶಾಸ್ತ್ರಗಳನ್ನೂ, ಸಚ್ಛಾಸ್ತ್ರಗಳೆಂದು ಪರಿಗಣಿಸಬೇಕೆಂದು ನಮಗೆ ಬೋಧಿಸಿ, ಈ ಸಚ್ಛಾಸ್ತ್ರಗಳನ್ನು, ಚೆನ್ನಾಗಿ ಮಂಥಿಸಿ, ಆಚಾರ್ಯರು, ತಾವೇ ನುಡಿದಿರುವಂತೆ, "ನಾನ್ಮದುಕ್ತಂ ಸದೃಶಂ ಹಿತರೂಪಂ" ಎಂಬ ತಮ್ಮ ಮಾತಿನ ಸತ್ಯತ್ವವನ್ನು ತಾವೇ ಮನಗಂಡು, ಪ್ರಸ್ಥಾನತ್ರಯಭಾಷ್ಯಗಳ, ಮತ್ತು ದಶಪ್ರಕರಣಗಳಂತಹ ಗ್ರಂಥಗಳ ಮೂಲಕ ಈ ಅಂಶವೂ ಜನತೆಯ ಮನಸ್ಸಿನಲ್ಲಿ ನಾಟುವಂತೆ ಮಾಡಿದ್ದಾರೆ. ಈ ಗ್ರಂಥಗಳ ಆಳವಾದ ವ್ಯಾಸಂಗವು, ಜನ್ಮಜರಾಮರಣರೂಪ ಸಂಸಾರಿಕ ಕ್ಲೇಶ ನಿವೃತ್ತಿ ಪೂರ್ವಕವಾಗಿ, ಶಾಶ್ವತ ಸ್ವರೂಪಾವಿರ್ಭೂತ, ಆತ್ಯಂತಿಕ ಆನಂದಾನುಭವರೂಪ ಮೋಕ್ಷಸಾಧನೆಗೆ ತಕ್ಕ ಯೋಗ್ಯತೆಯನ್ನು, ಒಬ್ಬ ವ್ಯಕ್ತಿಗೆ ಸಂಪಾದಿಸಿ ಕೊಡುವುದಲ್ಲದೆ, ಇಡೀ ವಿಶ್ವದ ಸಾತ್ವಿಕ ಜೀವರಾಶಿಗಳ, ಬಂಧ ವಿಮೋಚನಾಪೂರ್ವಕವಾಗಿ, ಪ್ರಪಂಚವನ್ನೇ ಸುಖಮಯವಾಗಿ ಮಾಡಬಲ್ಲದು ಎಂದು, ಅದ್ಭುತ ಆಧ್ಯಾತ್ಮಿಕ ಶಕ್ತಿಯನ್ನೂ, ಅವನಿಗೆ ಗಳಿಸಿಕೊಡಬಲ್ಲದೆಂಬುದನ್ನೂ, ನಮಗೆ ತೋರಿಸಿದ್ದಾರೆ. ಮುಂದೆ ನಾಲ್ಕು ಶತಮಾನಗಳ ನಂತರ, ವಿಜಯನಗರವನ್ನಾಳಿದ ಸಾಳುವ ತಿಮ್ಮ, ಸಾಳುವ ನರಸಿಂಹ ಮತ್ತು ಕೃಷ್ಣದೇವರಾಯ–ಇವರುಗಳು, ಕರ್ಣಾಟಕದ ನೈತಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನವನ್ನು ರೂಪುಗೊಳಿಸುವುದರಲ್ಲೂ ಶ್ರೀವ್ಯಾಸರಾಜ ಗುರುಸಾರ್ವಭೌಮರ ಸಲಹೆ ಮತ್ತು ಮಾರ್ಗದರ್ಶನವನ್ನು ಬೇಡಿದುದು ಹಿಂದೆ ವರ್ಣಿತವಾಗಿರುವ ರೀತಿಯಲ್ಲಿ ಅವರು, ಗಳಿಸಿದ ಅದ್ಭುತ ಆಧ್ಯಾತ್ಮಿಕ ಶಕ್ತಿ ಮಹಿಮೆಯಿಂದ.

"ಚಿತ್ರೈಃ ಪದೈಶ್ಚ ಗಂಭೀರೈಃ । ವಾಕ್ಯೈರ್ಮಾನೈರಖಂಡಿತೈಃ ।
ಗುರುಭಾವಂ ವ್ಯಂಜಯತಿ ಭಾತಿ ಶ್ರೀ ಜಯತೀರ್ಥವಾಕ್ ॥

ಎಂಬ ಉಕ್ತಿಯಂತೆ ಶ್ರೀಮದಾನಂದ ತೀರ್ಥ ಭಗವತ್ಪಾದಾಚಾರ್ಯರ ಭಾಷ್ಯಗಳ ನಿಜವಾದ ಭಾವವನ್ನು, ತಮ್ಮ ಟೀಕಾಗಳ ಮೂಲಕ ಅರಿಯುವಂತೆ ಮಾಡಿ, ಮುಮುಕ್ಷುಗಳಿಗೆ ಮಹೋಪಕಾರ ಮಾಡಿದವರು ಶ್ರೀಮಜ್ಜಯತೀರ್ಥರು, ಶ್ರೀಮದಾನಂದತೀರ್ಥ ಭಗವತ್ಪಾದ, ಗೀತಾಭಾಷ್ಯ ಗೀತಾತಾತ್ಪರ್ಯ, (ಗೀತಾಭಾಷ್ಯ ವ್ಯಾಖ್ಯಾನರೂಪವಾದ ಜಯತೀರ್ಥರ ಪ್ರಮೇಯ ದೀಪಿಕಾ, ಇವುಗಳಲ್ಲಿ ಅಡಕವಾಗಿರುವ ಪ್ರಮೇಯಾಂಶಗಳನ್ನು ಮುಮುಕ್ಷುಗಳಿಗೆ, ತಮ್ಮ ವ್ಯಾಖ್ಯಾನ ಗ್ರಂಥದ ಮೂಲಕ ಪರಿಚಯ ಮಾಡಿಕೊಟ್ಟಿರುವವರು, ಶ್ರೀವಿದ್ಯಾಧಿರಾಜರು ಮತ್ತು ಅವರ ಪರಂಪರೆಯಲ್ಲಿ ಬಂದ, ಹಲವು ಗುರುಗಳು ಎಂಬಂಶ ಶ್ರೀರಘೂತ್ತಮತೀರ್ಥರ ಮಾತುಗಳಿಂದ ವ್ಯಕ್ತವಾಗುತ್ತದೆ.

ಮುಂದೆ, ದಕ್ಷಿಣಭಾರತದ ವಿವಿಧಪ್ರಾಂತ್ಯಗಳಲ್ಲಿ ಸಂಚರಿಸಿ, ಜಪ ತಪ ಜ್ಞಾನೋಪದೇಶಗಳಿಂದ, ಜನತೆಯನ್ನು ಪಾವನಗೊಳಿಸಿದರು ಶ್ರೀರಾಜೇಂದ್ರ ತೀರ್ಥ ಶ್ರೀಪಾದಂಗಳವರು ಮತ್ತು ಅವರ ಪರಂಪರೆಯಲ್ಲಿ ಬಂದ, ಶ್ರೀವ್ಯಾಸರಾಯರು ಜಗನ್ನಾಥತೀರ್ಥರು ಮತ್ತು ವಿಭುದೇಂದ್ರತೀರ್ಥರು ಮತ್ತು ಅವರ ಪರಂಪರೆಯಲ್ಲಿ ಬಂದ, ಶ್ರೀರಾಘವೇಂದ್ರರು ಮತ್ತು ಶ್ರೀವರದೇಂದ್ರರು ಈ ಕಾಲವು ಹದಿನೇಳನೇ ಶತಮಾನದ ಮಧ್ಯಭಾಗದಿಂದ ಹದಿನೆಂಟನೇ ಶತಮಾನದ ಮಧ್ಯಭಾಗವೆಂದು ಹೇಳಬಹುದು.

ಶ್ರೀವ್ಯಾಸರಾಯರು, ವ್ಯಾಸ ಸಾಹಿತ್ಯದ ಮೂಲಕ ಶ್ರೀಮಧ್ವಾಚಾರ್ಯರ ದಿವ್ಯತತ್ವಗಳನ್ನು, ಮುಮುಕ್ಷುಗಳಿಗೆ ಪರಿಚಯ ಮಾಡಿಕೊಟ್ಟದು ಮಾತ್ರವಲ್ಲದೆ ವಾದಿರಾಜರು, ಪುರಂದರದಾಸರು, ಕನಕದಾಸರಂತಹ ದಾಸಶ್ರೇಷ್ಠರುಗಳಿಗೆ, ಸ್ಫೂರ್ತಿ ನೀಡಿ, ಮಧ್ವತತ್ವಗಳ ಹೊನಲು, ಸುಮಧುರ ಕನ್ನಡಗೀತೆಗಳು, ಸುಳಾದಿಗಳು, ಉಗಾಭೋಗಗಳ ಮೂಲಕ ಕರ್ನಾಟಕದಲ್ಲಿ ಹರಿಯುವಂತೆ ಮಾಡಿದರು. ಅಲ್ಲಿಂದ ಮುಂದೆ ಸುಮಾರು ಒಂದು ಅಥವಾ ಒಂದೂವರೆ ಶತಮಾನದ ನಂತರ, ಕನ್ನಡನಾಡಿನಲ್ಲಿ ಅವತರಿಸಿದ, ವಿಜಯದಾಸರು, ಗೋಪಾಲದಾಸರು, ಜಗನ್ನಾಥದಾಸರು, ಮೋಹನದಾಸರು ಮುಂತಾದ ಹರಿದಾಸರುಗಳು, ಭಕ್ತಿತತ್ವಗಳೇ ಮೂರ್ತಿವೆತ್ತಂತಿರುವ, ತಮ್ಮ ರಸಭರಿತ ಕನ್ನಡ ಕೃತಿಗಳ ಮೂಲಕ ಈ ಕಾರ್ಯವನ್ನು ಮುಂದುವರಿಸಿದರು. ಅಂತೆಯೇ ಶ್ರೀವಿಬುಧೇಂದ್ರ ಪೀಠದ ಗುರುಪರಂಪರೆಯಲ್ಲಿ ಬಂದ ವಿಜಯೀಂದ್ರರು, ರಾಘವೇಂದ್ರರು, ಮತ್ತು ವರದೇಂದ್ರರು, ವ್ಯಾಸ ಸಾಹಿತ್ಯದ ಮೂಲಕ ತತ್ವಗಳನ್ನು, ಉತ್ತರಕರ್ನಾಟಕ ರಾಯಚೂರು, ತಂಜಾವೂರು ಜಿಲ್ಲೆಗಳಲ್ಲೂ ಧಾರವಾಡ ಕೆಲವು ಪ್ರಾಂತ್ಯಗಳಲ್ಲೂ ಹರಡಿದರು. ವಿಜಯೀಂದ್ರರೂ, ವರದೇಂದ್ರರೂ, ತಮ್ಮ ಮಧುರವಾದ ಕನ್ನಡ ಕೃತಿಗಳ ಮೂಲಕ, ಮಧ್ವ ತತ್ವಗಳನ್ನು, ಉತ್ತರ ಕರ್ನಾಟಕ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಹರಡಿದರು. ವಿಜಯೀಂದ್ರರು, ಗುರುಭಕ್ತಿ ಪ್ರಚೋದಕವಾದ ಅನೇಕ ಸುಳಾದಿಗಳನ್ನು ರಚಿಸಿದ್ದಾರೆ. "ತನ್ತ್ರಸಾರಂ ಸಂಪ್ರಾಪ್ಯಸನ್ನಾತ್ ಪರ್ಯಾಪ್ತವಾಂಛಿತಂ" ಅಮರ್ತ್ಯೈರಾಶ್ರಿತ ಛಾಯಾಂ ಕಲ್ಪದ್ರುಮಪ್ರೋತ್ತಮಂ" ಎಂಬ ಉಕ್ತಿಯಲ್ಲಿ ಕಂಡುಬರುವಂತೆ ಶ್ರೇಷ್ಠವಾದ, ಅಖಿಲ ಪುರುಷಾರ್ಥ ಪ್ರವರ ಕೈವಲ್ಯದಾಯಕ ಮಧ್ವಾಚಾರ್ಯರ ತಂತ್ರಸಾರವನ್ನು ಸಾರವತ್ತಾದ ಪ್ರಮೇಯಾಂಶಗಳನ್ನು, ಕನ್ನಡಕ್ಕೆ ತರ್ಜುಮೆ ಮಾಡಿದ್ದಾರೆ.

"ಚತುರಧಿಕಶತಗ್ರಂಥರತ್ನ ಪ್ರಣೇತ" ಎಂಬ ಬಿರುದಾಂಕಿತ ವಿಜಯೀಂದ್ರರ ಪ್ರಮೇಯಾಂಶಗಳನ್ನು ಮನಸ್ಸಿನಲ್ಲಿ ಧಾರಣೆ ಮಾತ್ರ ನಾಟಕಾಲಂಕಾರ ಸಾಹಿತ್ಯ ವಿಷ್ಯನ್ಮಣಿಗಳಾಗಿದ್ದ, ಶ್ರೀಸುಧೀಂದ್ರರು, ಅವುಗಳನ್ನು. ಚಿತ್ತರಂಜಕವಾಗಿ, ಕಾಂತಾಸಮ್ಮಿತ ರೀತಿಯಲ್ಲಿ, ಅವುಗಳನ್ನು ತಿಳಿಸಬೇಕೆಂದು ತವಕಿಸುತ್ತಿದ್ದರು. ಅವರ ಈ ಸದಪೇಕ್ಷೆಯನ್ನು ಈಡೇರಿಸಿದವರು ಶ್ರೀರಾಘವೇಂದ್ರತೀರ್ಥರು ರಾಘವೇಂದ್ರತೀರ್ಥರಿಗೆ ತುರ್ಯಾಶ್ರಮ ನೀಡುವ ಮುನ್ನ, ಅವರಿಗೆ ಅಶ್ರಯಕೊಡಲು. ಸುಧೀಂದ್ರರ ಉದ್ದೇಶವೇನಿತ್ತೆಂಬುದನ್ನು, ಶ್ರೀರಾಘವೇಂದ್ರಸ್ವಾಮಿಗಳಿಗೆ ಬಾಲೆಯಾಗಿದ್ದ ಪತ್ನಿ ಮತ್ತು ಅನುಸರಿತ ಪುತ್ರನನ್ನೂ ಬಿಟ್ಟು ಸಂಸಾರ ಪರಿತ್ಯಾಗಮಾಡಲಿದ್ದ ಅಳುಕನ್ನು ವಿಶ್ವಕುಟುಂಬಿಗಳಾಗಿ. ಭಗವದ್ಭಕ್ತಿ ಮತ್ತು ಪ್ರಪತ್ತಿಯಿಂದ ಕೂಡಿರುವ ಯೋಗಕ್ಷೇಮವನ್ನು ಮೂಲರಾಮನೇ ವಹಿಸುವನೆಂದೂ. ಬೋಧಿಸಿದ ಶ್ರೀಸುಧೀಂದ್ರರ ಪ್ರಭಾವಕ್ಕೆ ರಾಘವೇಂದ್ರರು ಹೇಗೆ ಒಳಪಟ್ಟರೆಂಬುದನ್ನು ರಾಘವೇಂದ್ರ ವಿಜಯಕರ್ತರು. ಸ್ವಾರಸ್ಯಂಗವಾಗಿ ವರ್ಣಿಸಿದ್ದಾರೆ. ರಾಯರ ರಾಮಚಾರಿತ್ರ್ಯಮಂಜರಿ ಭಾರತ ತಾತ್ಪರ್ಯ ನಿರ್ಣಯ ಸಾರಸಂಗ್ರಹ ಮುಂತಾದ ಗ್ರಂಥಗಳೂ, ಅವರ ಪ್ರಾತಸಂಕಲ್ಪ ಗದ್ಯದ "ಕನುಮ ಮನಾಸಿಕ ಚರಣ ಸೀತಾಪತೀ. ಶ್ರೀರಾಮಚಂದ್ರ ಮೂರ್ತೆ. ತ್ವತ್ಪ್ರಸಾದಾನುಗ್ರಹ ಪಾತ್ರಭೂತೇನ, ಮನ್ನಿಯಾಮಕೇನ. ತ್ವಚ್ಚಿತ್ತಾಭಿಜ್ಞೇನ, ತ್ವಚ್ಚಿತ್ತಾನುಸಾರ ಚಿತ್ತೇನ. ಮದ್ಯೋಗ್ಯತಾಭಿಜ್ಞೇನ. ಶ್ರೀಭಾರತೀರಮಣೇನ, ಮುಖ್ಯಪ್ರಾಣೇನ ಪ್ರೇರಿತಸನ ಸತ್ಯಸ್ವಪಿತ್ತೇಃ ದೇಶಕಾಲೋಚಿತಂ ಕಾರ್ಯವಿಧತ್ವತ್ಪೂಜಾತ್ವ ಕಂಕರ್ವಾ. ಸ್ವಪ್ರೀತ್ಯರ್ಥಕರಿಷ್ಯೇ। ಮದಾಜ್ಞಾಕಾರಿಭಿರ್ಮೇ ಸಂಬಂಧ ಭಿಃ ದೀಯ್ಯ ಅಶೇಷೈರ್ಜನೈಃ ತ್ವತ್ಸರ್ವಕರ್ತೃತ್ವ ಸಾಹಯ್ಯತ್ರನು ಸಂಧಾನ ಪೂರ್ವಕಂ ಕರಯಿಷ್ಯೇಚ"

ಸುಧೀಂದ್ರರಿಂದ ರಾಘವೇಂದ್ರರಿಗೆ ದತ್ತವಾದ ಇಂಥಾ ಆಧ್ಯಾತ್ಮಿಕ ಸಂಪತ್ತಿನ ಪೋಷಣೆಯಲ್ಲಿ ಮತ್ತು ವಿತರಣೆಯಲ್ಲಿ ಶಿಷ್ಯಕೋಟಿಗಳು ಭಕ್ತಿ ಮತ್ತು ತ್ಯಾಗಪೂರ್ವಕವಾಗಿ ಸಹಕರಿಸಿ ಪೀಠದ ಪುರೋಭಿವೃದ್ಧಿಗೆ ಕಾರಣವಾಗುವರೆಂದು ನಿರೀಕ್ಷಣೆ.

ಓಂ ತತ್ಸತ್

ಶ್ರೀ ರಾಘವೇಂದ್ರತೀರ್ಥ ಸ್ತುತಿ ಪರಂಪರೆ

ಲೇ|| ಡಾ. ಜಿ. ವರದರಾಜರಾವ್

ಮೈಸೂರು.

ಪೂಜ್ಯಾಯ ರಾಘವೇಂದ್ರಾಯ ಸತ್ಯಧರ್ಮ ರತಾಯ ಚ ।
ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನವೇ ॥

ಶ್ರೀ ಮನ್ಮಾಧ್ವಯತಿ ಪರಂಪರೆಯಲ್ಲಿ ಶ್ರೀ ರಾಘವೇಂದ್ರತೀರ್ಥರ ಸ್ಥಾನ ಬಹು ವಿಶಿಷ್ಟವಾದದ್ದು. ಅವರು ವೃಂದಾವನದಲ್ಲಿ ನೆಲೆಸಿದ್ದರೂ ಮುನ್ನೂರು ವರ್ಷಗಳ ಕಾಲ ತಮ್ಮ ಲೋಕಕಾರುಣ್ಯವನ್ನು ತೋರಿಸುತ್ತಿರುವರೆಂಬುದಕ್ಕೆ ಇಂದಿಗೂ ನಾವು ಕೇಳುತ್ತಿರುವ ನೂರಾರು ನಿದರ್ಶನಗಳೇ ಸಾಕ್ಷಿ. ಇದು ಲೋಕಕಾರುಣ್ಯದ ವಿಷಯವಾಯಿತು. ಅವರು ಹರಿದಾಸ ಸಾಹಿತ್ಯದ ಪುನರುಜ್ಜೀವನ ಕಾರ್ಯಕ್ಕೂ ಪ್ರಮುಖ ಪ್ರೇರಕರೆಂಬುದು ಹರಿದಾಸ ಸಾಹಿತ್ಯದ ಇತಿಹಾಸದಿಂದ ತಿಳಿದುಬರುತ್ತದೆ. ಅವರ ಅನಂತರ ಹರಿದಾಸ ಸಾಹಿತ್ಯದ ಹೊನಲನ್ನು ಹರಿಸಿದ ಶ್ರೀ ವಿಜಯದಾಸರಾದಿ ಅಪರೋಕ್ಷ ಜ್ಞಾನಿಗಳ ಪರಂಪರೆಯನ್ನು ಎಲ್ಲರೂ ಬಲ್ಲರು. ಆದರೆ, ರಾಯರ ಈ ಭಕ್ತಾನುಗ್ರಹ ಅಷ್ಟಕ್ಕೇ ಸೀಮಿತವಾಗಲಿಲ್ಲ. ಅವರ ವೃಂದಾವನ ಸಾನ್ನಿಧ್ಯದಲ್ಲಿ ನಿಂತು ಭಕ್ತಿಪೂರ್ವಕವಾಗಿ ರಾಯರನ್ನು ಆರಾಧಿಸಿದ ಇತರರಿಗೂ ಈ ಅನುಭವಸ್ಪಂದವಾಗಿರುವುದಕ್ಕೆ ಕೆಲವು ನಿದರ್ಶನಗಳುಂಟು. ಅಂಥವರಲ್ಲಿ ಸುಪ್ರಸಿದ್ಧ ಗಮಕಿ ವರೇಣ್ಯರಾದ, ನಮ್ಮ ಸಮಕಾಲೀನರೇ ಆದ ಶ್ರೀ ಎಂ. ರಾಘವೇಂದ್ರರಾಯರೂ ಒಬ್ಬರು. ಅವರು "ಶ್ರೀ ರಾಘವೇಂದ್ರ ಗುರುಕೀರ್ತನ ಮಾಲಾ" ಎಂಬ ಸಣ್ಣ ಪುಸ್ತಕವೊಂದನ್ನು ಪ್ರಕಟಿಸಿರುವರು. ಈ ಪುಟ್ಟ ಪುಸ್ತಕದಲ್ಲಿ ಶ್ರೀಮದಪ್ಪಣ್ಣಾಚಾರ್ಯ ಕೃತ ಶ್ರೀ ರಾಘವೇಂದ್ರ ಸ್ತೋತ್ರವನ್ನು ಜನಪ್ರಿಯವಾದ ಸಾಹಿತ್ಯದ ಧಾಟಿಯಲ್ಲಿ "ಶ್ರೀ ರಾಘವೇಂದ್ರ ಗುರುಸ್ತೋತ್ರ" ಎಂಬ ಹೆಸರಿನಲ್ಲಿ ಬಹಳ ಸರಳವಾಗಿ ಅನುವಾದಿಸಿರುವರು. ಹಾಗೆಯೇ "ಶ್ರೀ ರಾಘವೇಂದ್ರ ಸದ್ಗುರು ಕಥಾನುವಾದ" ವೆಂಬ ಹೆಸರಿನಲ್ಲಿ ಶ್ರೀ ಗುರುರಾಜರ ಸಮಗ್ರ ಜೀವನವನ್ನು ಸರ್ವಜನಗ್ರಾಹ್ಯವಾಗುವಂತೆ ತಿಳಿಗನ್ನಡದಲ್ಲಿ ಪದ್ಯರೂಪದಲ್ಲಿ ರಚಿಸಿರುವರು. ಇವುಗಳಲ್ಲದೆ ಶ್ರೀ ರಾಯರನ್ನೇ ಕುರಿತಂತೆ 57 ಕೀರ್ತನೆಗಳನ್ನು ರಾಗ-ತಾಳಗಳಿಗೆ ಅಳವಡಿಸಿ ಬರೆದಿರುವರು. ಈ ಕೃತಿಗಳನ್ನು ಓದಿದ ಯಾರಿಗೇ ಆಗಲಿ, ಲೇಖಕರೇ ಹೇಳಿಕೊಂಡಿರುವಂತೆ "ಭಕ್ತಿಗೀತೆಯ ರಚಿಸಲುತ್ಸಾಹವನಿತ್ತೆನಗೆ ಉಕ್ತಿಯನಿತ್ತ ದಿವ್ಯ ಸ್ಫೂರ್ತಿಗಳಿತ್ತ ಉತ್ತಮರ ಸಂರಕ್ಷಣೆಯ ಸತತಗೈಯುತಹ ಶಕ್ತ ರಘುವರನ ಭಕ್ತೋತ್ತಮನಿಗೆ" ಸಮರ್ಪಿಸಿದ ಸ್ತೋತ್ರ ಕುಸುಮಗಳೇ ಸರಿ! ಈ ಕೀರ್ತನಗುಚ್ಛದಲ್ಲಿ ಕಂಡುಬರುವ ಕೀರ್ತನಕಾರರ ಅಂತರಂಗದ ವಿವಿಧಾನುಭವಗಳನ್ನೂ ಆ ಮೂಲಕ ಸ್ವಯಂವಿರಾಜಿಸುವ ಶ್ರೀ ರಾಘವೇಂದ್ರ ತೀರ್ಥರ ಭವ್ಯದರ್ಶನವನ್ನೂ ಇಲ್ಲಿ ಸಂಕ್ಷಿಪ್ತವಾಗಿ ಮಾಡಿಕೊಡಲಾಗಿದೆ.

ಈ ಕೃತಿಗಳನ್ನು ರಚಿಸಲು ಲೇಖಕರಿಗೆ ಹೇಗೆ ಪ್ರೇರಣೆಯಾಯಿತೆನ್ನುವುದನ್ನು ತಿಳಿಸುವಲ್ಲಿ "ನಿನ್ನ ಅಣತಿಯಂತೆ ನಾ ಗೈಯುತಿಹೆನೋ, ಎನ್ನ ಕೈ ನಿನ್ನ ಸುಪ್ರೇರಣೆಗೆ ಒಳಗಾಗಿ" ಎಂದು ವಿಜ್ಞಾಪಿಸಿಕೊಳ್ಳುವರು. ಶ್ರೀ ರಾಯರ

ವೃಂದಾವನದ ಸಾನ್ನಿಧ್ಯದಲ್ಲಿ ನಿಂತಿದ್ದ ಅವರ ತಮ್ಮ ಮನಸ್ಸು ತಾನಾಗಿಯೇ ಹೇಗೆ ಮಿಡಿಯುತ್ತಿತ್ತು ಎನ್ನುವುದನ್ನು ಹೀಗೆ ವಿನಂತಿಮಾಡಿಕೊಂಡಿರುವರು.

ಆವ ಜನುಮದ ಪುಣ್ಯ ಈವ ಒದಗಿತ್ತೋ ಕಾಣೆ
ಈ ವಸುಧೆಯಲ್ಲಿ ನಾ ಜನಿಸಿ ಬಂದುದಕೆ
ದೇವ ನಿನ್ನಂಘ್ರಿ ಪಂಕಜದರ್ಶನದಿಂದು
ಭಾವಿಸಲು ಮನವಣೆಯು ಲಭಿಸಿತೋ ಗುರುವೆ

ಈ ಕೃತಾರ್ಥಚಿತ್ತ ಮತ್ತೆ ಮತ್ತೆ ಮಿಡಿಯ ತೊಡಗಿ, ಇನ್ನು ಎರಡು ನುಡಿಗಳಲ್ಲಿ ಅವರ ಹೃದಯ ಹೀಗೆ ಹಿಗ್ಗುತ್ತದೆ.

ಆನಂದ ಮನದಿಂದ ಏನೊಂದು ತೋರದಲಿ
ದೀನಭಾವದಿ ಮತ್ತೆ ವಿಸ್ಮಯದಲಿ
ಜ್ಞಾನನಿಧಿ ನಿನ್ನನು ಕುತೂಹಲದಿ ನೋಡುತಿರೆ
ಸಾನುರಾಗದಿ ಸುಪ್ರಸನ್ನತೆಯ ನೀ ತೋರ್ದೆ
"ಭಕ್ತಿ ಗೀತೆಗಳ ರಚಿಸಿ ಸಮರ್ಪಿಸು" ಎಂಬ
ಉತ್ತಮವಾಣಿಯೊಂದೆನಗೆ ಕೇಳೆ
ಚಿತ್ತ ನಿರ್ಮಲತೆಯಲಿ ಭಯ ಭಕ್ತಿ ಭಾವದಲಿ
ಸ್ತೋತ್ರಗೈವೆನೋ ನಿನ್ನ ರಘುವರನ ಪದಶರಣ

ಹೀಗೆ ಸಂಕಲ್ಪಿಸಿಕೊಂಡು ತಮ್ಮ ಕೀರ್ತನ ಕೈಂಕರ್ಯವನ್ನು ಕೈಗೊಳ್ಳುವರು. ಶ್ರೀ ಗುರುರಾಜರ ಪ್ರೇರಣೆಯಾಗಲು ಯಾರ ವಾಣಿಗೆ ತಾನೆ ಅಡೆತಡೆ ಇದ್ದೀತು.

"ಎಷ್ಟು ರಮ್ಯವೋ ಶ್ರೀಮನ್ ಮಂತ್ರಾಲಯ ಇಷ್ಟು ದಿವಸಕೆ ನಾನು ಕಣ್ಣಾರೆ ಕಂಡೆ" ಎಂಬ ಪಲ್ಲವಿಯಲ್ಲಿ ಕೀರ್ತನಕಾರರ ಸಂತೃಪ್ತ ಮನೋಧರ್ಮವನ್ನು ಕಾಣಬಹುದು. ಅವರಿಗೆ ಮಂತ್ರಾಲಯದ ಮಹಿಮೆಯನ್ನು ಕೇವಲ ಕಿವಿಯಿಂದ ಕೇಳಿದ್ದವರಿಗೆ ಕಣ್ಣಾರೆ ಕಾಣುವುದು ಒಂದು ಸೌಭಾಗ್ಯವಲ್ಲದೆ ಮತ್ತೇನು? ಈಗಲಾದರೋ ನೆನೆದಕೂಡಲೆ ಮಂತ್ರಾಲಯಕ್ಕೆ ಹೋಗಿಬರಲು ನಾನಾ ಸೌಕರ್ಯಗಳಿವೆ. ಆಗಿನ ಪ್ರಯಾಸವನ್ನು ಇಂದು ಊಹಿಸಲೂ ಸಾಧ್ಯವಿಲ್ಲ. ಆದ್ದರಿಂದ, ಲೇಖಕರ ಇಷ್ಟಸಿದ್ಧಿಯಲ್ಲಿ ಈ ಅಪೂರ್ವ ಅನುಭವದ ಆನಂದ ಕೇಳಿಬರುತ್ತದೆ. ಇನ್ನು ಸ್ಥಳ ಮಾಹಾತ್ಮ್ಯೆಯನ್ನು ಕುರಿತು ಕೀರ್ತನಕಾರರು ನುಡಿದಿರುವ ನುಡಿಗಳು ಗಮನಾರ್ಹವಾಗಿವೆ.

ಕಷ್ಟಪಡುತಿಹ ದೀನರಿಗೆ ತಿಳಿಯದ ಜ್ಞಾನಿ
ಗೋಷ್ಠಿಗಿನ್ನಿತರ ಕ್ಲೇಶಗಳ್ಪಡುವರಿಗೆ
ಕಷ್ಟಗಳ ಪರಿಹರಿಸಿ ಇಷ್ಟಾರ್ಥಗಳ ಸಲಿಸಿ
ಶ್ರೇಷ್ಠ ಸುಪವಿತ್ರ ರಕ್ಷಿಸುವ ಗುರುವಿನ ನಿಲಯ
ಏಕೆ ವ್ಯರ್ಥಾಲಾಪ ಲೋಕಕ್ಕೆ ಗುರುವಿವನ
ನೇಕ ದೃಷ್ಟಾಂತಗಳು ಭುವಿಗೆ ವೇದ್ಯ
ಶ್ರೀಕಾಂತ ರಘುವರನ ಅಚ್ಚುಮೆಚ್ಚಿನ ಭಕುತ
ಲೋಕರಕ್ಷಾನಿರತ ರಾಘವೇಂದ್ರನ ಕ್ಷೇತ್ರ

ಈ ಎರಡು ನುಡಿಗಳಲ್ಲಿ ರಾಯರ ಅಪಾರವೂ ಅವ್ಯಾಜವೂ ಆದ ಕರುಣೆ, ಅನಂತ ಅನುಗ್ರಹಗಳ ಹಿರಿಮೆ. ಶ್ರೀ ರಾಮ ಸೇವಾ ನಿರತ ದೀಕ್ಷೆ ಮತ್ತು ಲೋಕ ಸೇವಾಕಾಂಕ್ಷೆಗಳು ಅಡಕವಾಗಿವೆ.

ಬೇರೊಂದು ಕೀರ್ತನೆಯಲ್ಲಿ, ರಾಯರ ಪ್ರಭಾವ ಒಬ್ಬೊಬ್ಬರ ಮೇಲೆ ಒಂದೊಂದು ತೆರನಾಗಿ ಆಗಿರುವುದನ್ನು ಚಿತ್ರಿಸಿರುವರು. "ವಿಧ ವಿಧ ಹೃದಯದ ರುಚಿಯ ಮನುಜರಿಗೆ ವಿಧವಿಧದನುಭವವು. ಇದರ ನಿಜಾರ್ಥದ ಗೂಢವನರಿಯಲು ಸದರವಲ್ಲ ಕೇಳ್ ಸಖಿ" ಎಂದು ಹೇಳಿ, ತ್ರಿಕರಣಪೂರ್ವಕವಾಗಿ ಸೇವೆ ಸಲ್ಲಿಸಿದವರಿಗೆ ಮಾತ್ರ ರಾಯರ ಅಭಯ ಕಟ್ಟಿಟ್ಟ ಬುತ್ತಿ ಎನ್ನುವುದನ್ನು ಹೀಗೆ ಸೂಚಿಸಿರುವರು.

ಮನವೊಪ್ಪದ ಕಠಮಾಡುವ ಮನುಜನ
ಭಕ್ತಿಗೆ ಮೆಚ್ಚನಿವ
ಮನ ವಿಶುದ್ಧಿಯಲಿ ನೆನೆವ ಭಕ್ತಜನ
ಕನುದಿನದಲಿ ಒಲಿವ ಕಾನ

ಇದೇ ಕೀರ್ತನೆಯ ಕಡೆಯನುಡಿಯಲ್ಲಿ ಉಕ್ತವಾಗಿರುವ ಭರವಸೆಯ ಮಾತುಗಳನ್ನೂ ಮರೆಯುವಂತಿಲ್ಲ.

ಏನೋ ಭ್ರಮೆಯೆಂದೆನ್ನುತ ಜರಿಯುವ
ತಿಳಿಯದ ಜನತತಿಗೆ
ಜ್ಞಾನ, ಭಕ್ತಿ, ವೈರಾಗ್ಯ ಕರುಣಿಸುವ
ರಘುಪತಿ ಭಕ್ತವರ ಧೀರ

ರಾಯರು ಮೂರ್ಖರನ್ನು ಪಾಲಿಸದಿದ್ದರೂ ಮುಗ್ಧರನ್ನು ಮನ್ನಿಸುವರೆಂಬ ಈ ಭಾವನೆ ಹೃದ್ಯವಾಗಿದೆ.

ಪ್ರತಿಯೊಬ್ಬ ಭಕ್ತನೂ ಪಶ್ಚಾತ್ತಾಪದ ಅಗ್ನಿಯಲ್ಲಿ ಕುದಿಕುದಿದು ತನ್ನ ಮನದ ಮಾಲಿನ್ಯವನ್ನೆಲ್ಲ ನಿವಾರಿಸಿಕೊಂಡು ತನ್ನ ಇಷ್ಟ ದೇವತೆಯನ್ನು ಮೊರೆಹೋಗುವುದು ಸಾಮಾನ್ಯವಾದ ಸಂಗತಿ. ಪ್ರಸ್ತುತ ಕೀರ್ತನಕಾರರೂ ಇದಕ್ಕೆ ಹೊರತಲ್ಲ. ಒಂದು ಹಾಡಿನಲ್ಲಿ "ಭವಭೀತಿಯ ಪರಿಹರಿಸೋ ಗುರುರಾಯ ರಾಘವೇಂದ್ರ" ಎಂದು ರಾಯರಲ್ಲಿ ಶರಣಾಗುವರು. ಅನಂತರ ತಮ್ಮ ಅಪರಾಧದ ಪಟ್ಟಿಯನ್ನು ರಾಯರ ಮುಂದೆ ಹೀಗೆ ತೆರೆದಿಡುವರು.

ಹಿಂದಿನಾರ್ಜಿತ ಕರ್ಮಫಲವದು
ಮುಂದುಗೆಡಿಸುತ ನಿನ್ನ ಸೇವೆಗೆ
ಕುಂಠಿತವ ತರುತಿಹುದು ಸಾಧನೆ
ಗೊಂದು ಹರಿಯನು ಮುಟ್ಟಲಿಲ್ಲವೊ

ಮಾನವನ ಮನೋದೌರ್ಬಲ್ಯಕ್ಕೆ ಕೊನೆಮೊದಲಿಲ್ಲ. ಪುರಂದರದಾಸರೇ ಮನವಿಮಾಡಿಕೊಂಡಿರುವಂತೆ "ಬನ್ನಹಕೆ ಬಾಯಿಲ್ಲ". ಏಕೆಂದರೆ ಅಪರಾಧಗಳ ಸಂಖ್ಯೆ ಒಂದೆರಡಲ್ಲ: ಅಂತೆ ಪ್ರಕೃತದಲ್ಲಿಯೂ ಈ ರಚನೆಯ ಕಡೆಯ ನುಡಿ ಆತ್ಮನಿಂದೆಯಿಂದ ಹೀಗೆ ಸಮಾಪ್ತವಾಗುತ್ತದೆ.

ಏನು ಪ್ರಜ್ಞಾಶಾಲಿಯೊ, ನಾ
ನೇನು ಭಕುತಿಯ ಪುಷ್ಕಳಿಯೊ. ॥

ನ್ನೇನ ಬೇಡಲೋ ನಿನ್ನ ಮುಂದೆ, ಮ
ಹಾನುಭಾವನೆ ರಘುವರ ಪ್ರಿಯ

ಹೃದಯದ ಹೊಯ್ದಾಟವೆಲ್ಲ ಕ್ರಮಕ್ರಮವಾಗಿ ಕಡಿಮೆಯಾಗಲು ಭಕ್ತನಾದವನಿಗೆ ತನ್ನ ಇಷ್ಟದೇವತೆಯಲ್ಲಿ ಇನ್ನು ಬೇಡುವುದಾದರೂ ಏನಿದೆಯೆಂದು ವಿಸ್ಮಯವಾಗುವುದು. ಈ ಅನಿರ್ವಚನೀಯವಾದ ಅನುಭವವನ್ನು ವ್ಯಕ್ತಪಡಿಸಲು ತೊಡಗುವ ಒಂದು ಸಣ್ಣ ಕೀರ್ತನೆ ಹೀಗಿದೆ.

ಬೇಡಲೇನನು ನಿನ್ನ ಮುಂದೆ ಗುರುರಾಯ
ಬೇಡಬೇಹುವನೊಂದ ಬೇಡವೆನುತಿರೆ ನೀನು ॥ ಪ ॥
ನೀಡಿರುವ ಸೌಭಾಗ್ಯ, ನೀಡದಿಹ ಸೌಭಾಗ್ಯ
ಅಡಿಕೊಂಬುವನಲ್ಲ ನೋಡದವನಲ್ಲ ನೀ ॥ ಅ.ಪ ॥
ಮಡದಿ ಮಕ್ಕಳ ಮತ್ತೆ ಒಡ ಹುಟ್ಟಿದರ ಎನ್ನ
ಬಿಡದೆ ಆಶ್ರಯಿಸಿದವರ ನೆಚ್ಚಿದವರ
ಎಡೆಬಿಡದೆ ರಕ್ಷಿಸುವ, ಮನಕೆ ಮೋದವನೀವ
ಕಡುಭಾರ ನಿನ್ನದಯ್ಯ ರಘುವರನ ಭಕುತ

ಹುಟ್ಟಿಸಿದ ಸ್ವಾಮಿ ಹೊಣೆಗಾರನಾದ ಮೇಲೆ ನಾವು ಬೇಡುವುದಾದರೂ ಏನಿದೆಯೆಂಬ ಈ ಭಾವನೆ ಹೊಸತೇನಲ್ಲ. ಕನಕದಾಸರು "ತಲ್ಲಣಿಸದಿರು ಕಂಡ್ಯ ತಾಳು ಮನವೆ, ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ" ಎಂದು ಸಾರಿ ಹೇಳಿರುವ ಅಭಯವಚನ ಸುಪ್ರಸಿದ್ಧವಾಗಿದೆ. ಇಲ್ಲಿ, ಭಕ್ತನನ್ನು ಮಾತ್ರವಲ್ಲದೆ, ಆತನನ್ನು ನೆಚ್ಚಿರುವ ಆತನ ಸಂಸಾರ ಮತ್ತು ಪರಿವಾರದವರನ್ನು ರಾಯರು ಸಂರಕ್ಷಿಸುವರೆಂದ ಬಳಿಕ, ಇನ್ನು ತಾನಾಗಿ ತೊಳಲಿ ಬಳಲುವುದೇಕೆ ಎಂಬ ಕೀರ್ತನಕಾರರ ನಿಲುವು ಸ್ತುತ್ಯವಾದದ್ದು.

ತುಂಗಾತೀರದಿ ರಾಗದಿ ನೆಲೆಸಿರುವ ಶ್ರೀ ರಾಘವೇಂದ್ರತೀರ್ಥರ ವೈಭವವು ಎಷ್ಟು ಅದ್ಭುತವೆಂದು ಹೇಳಿ ಸುಮ್ಮನಾಗುವವರೇ ಹೆಚ್ಚು! ಆದರೆ, ಆ ಅದ್ಭುತದ ಆಂತರ್ಯವನ್ನು ಭಾವುಕರಾದ ಕೀರ್ತನಕಾರರು ಮಾತ್ರ ಹೇಳಲು ಸಾಧ್ಯವೆನ್ನುವುದಕ್ಕೆ ಕೆಳಗಿನ ಈ ನುಡಿಗಳೇ ಸಾಕ್ಷಿ.

ಭಾವುಕ ಜನಗಳಿಗೆ – ರಸಿಕರಿಗೆ
ಭಾವಿಪ ಕವಿಗಳಿಗೆ
ತೀವಿ ಮನವ ಮೈಮರೆಸಿ ಗುರುಮಹಿಮೆ
ಸಾವಿರಾರು ಸದ್ಭಾವವ ತರುವುದು
ಯೋಗಿವರೇಣ್ಯನು ತ್ಯಾಗಿಗಳರಸನು
ಬಾಗಿ ನಮಿಪ ಜನಕಾಗಿ ಪುಣ್ಯ ತಪ
ಭಾಗವ ಕರುಣಿಸುವ – ಸುಜನರಿಗೆ
ಭೋಗವಿತ್ತು ಮೆರೆವ

ರಾಯರು ತಾವು ಗಳಿಸಿದ್ದ ಪುಣ್ಯವನ್ನೆ ತಮ್ಮ ಭಕ್ತರಿಗೆ ಹಂಚುವರೆಂಬ ಭಾವನೆ ಅತ್ಯಂತ ಹೃದಯಸ್ಪರ್ಶಿಯಾಗಿದೆ. ಹರಿದಾಸ ಸಾಹಿತ್ಯದ ಪ್ರವರ್ತಕರಾದ ಶ್ರೀ ಶ್ರೀಪಾದರಾಜರನ್ನು ಸುಖಪ್ರಾರಬ್ಧರೆಂದು ಕರೆಯುವುದುಂಟು.

ಅವರನ್ನು ದಾರಿತಪ್ಪಿಸಿ ಅಡವಿಗೆ ಕರೆದೊಯ್ದರೂ ಅವರ ಪಾಲಿನ ಮೃಷ್ಟಾನ್ನ ಭೋಜನಕ್ಕೆ ಅಡ್ಡಿಯಾಗಲಿಲ್ಲವೆಂದು ಅವರ ಜೀವನ ಚರಿತ್ರೆಯ ಮೂಲಕ ತಿಳಿದುಬರುತ್ತದೆ. ಹಾಗೆಯೇ ಅಪಾರ ಪುಣ್ಯರಾಶಿಗೆ ಪಾತ್ರರಾದ ರಾಯರು ತಮ್ಮ ಪುಣ್ಯದ ಒಂದು ಪಾಲನ್ನು ತಮ್ಮ ಭಕ್ತರಿಗೆ ನೀಡುತ್ತಿರುವರೆಂಬ ಕಲ್ಪನೆ ತುಂಬ ಉದಾತ್ತವಾದುದು.

ಶ್ರೀ ರಾಘವೇಂದ್ರರು ಈ ಮೊದಲು ಪ್ರಹ್ಲಾದ, ಬಾಹ್ಲೀಕ ಶ್ರೀ ವ್ಯಾಸರಾಯರಾಗಿ ಅವತರಿಸಿ, ಈಗ ಲೋಕ ಸೇವಾರ್ಥವಾಗಿ ಪುನಃ ಯತಿವರೇಣ್ಯರಾಗಿ ಜನ್ಮವೆತ್ತಿ ಬಂದಿರುವರೆಂದು ಜ್ಞಾನಿಗಳು ತಿಳಿಸಿರುತ್ತಾರೆ. ಆದ್ದರಿಂದ ಅವರು ಸಂಸ್ಥಾನದ ಆರಾಧ್ಯದೇವತೆಯಾದ ಮೂಲ ಶ್ರೀ ರಾಮ ಮಾತ್ರವಲ್ಲದೆ ನರಹರಿ, ಶ್ರೀ ಕೃಷ್ಣ ಮತ್ತು ಕೃಷ್ಣ ದ್ವೈಪಾಯನರ ಆರಾಧಕರೂ ಆಗಿದ್ದರೆಂಬ ಸ್ತುತಿಗೆ ಪಾತ್ರರಾಗಿರುವುದನ್ನು ಅಪರೋಕ್ಷಜ್ಞಾನಿಗಳಾದ ಶ್ರೀ ವಿಜಯದಾಸರೇ ಮೊದಲಾದವರು ಒಂದಲ್ಲ ಒಂದು ರೀತಿಯಲ್ಲಿ ನಿರೂಪಿಸಿರುವುದುಂಟು. ಆ ಹಿರಿಯರ ಮೇಲುಪಂಕ್ತಿಯನ್ನೇ ಅನುಸರಿಸಿ ಪ್ರಕೃತ ಕೀರ್ತನಕಾರರೂ ಈ ಸಂಗತಿಯನ್ನು ಒಂದೆಡೆ ಹೀಗೆ ನಿರ್ದೇಶಿಸಿರುವರು.

ರಾಮ, ನರಹರಿ ಕೃಷ್ಣ ಕೃಷ್ಣರ
ಸ್ವಾಮಿ ಸೇವಕಭಾವದಿಂದ ಮ
ಹಾಮಹಿಮ ರಘುವರನ ಭಜಿಸುತ
ಲೀಮಹೀತಲದೊಳಗೆ ಮೆರೆಯುವ

ಶ್ರೀಮನ್ನಾರಾಯಣನ ನಾಲ್ಕು ಅವತಾರಗಳನ್ನು ಪೂಜಿಸಿ ಪುನೀತರಾದ ಶ್ರೀ ರಾಘವೇಂದ್ರತೀರ್ಥರನ್ನು ಬೇರೊಂದು ಕೀರ್ತನೆಯಲ್ಲಿ "ನಾರಾಯಣನವತಾರ ಚತುಷ್ಟಯ ಮೂರುತಿಗಳನರ್ಚಿಪ ಯತಿಗೆ ನಿತ್ಯ" "ಮಂಗಳಂ ಜಯಮಂಗಳಂ, ಮಂಗಳಂ ಶುಭಮಂಗಳಂ" ಎಂದು ಮುಕ್ತಕಂಠದಿಂದ ಕೊಂಡಾಡಿರುವುದನ್ನು ಕಾಣಬಹುದು.

ಶ್ರೀ ಗುರುರಾಜರ ವೃಂದಾವನದ ಎದುರಿನಲ್ಲಿ ನಿಂತ ಯಾರಿಗೇ ಆಗಲಿ, ಅವರು ವೃಂದಾವನವನ್ನು ಪ್ರವೇಶಿಸಿದ ಬಗ್ಗೆ ಬಗೆಬಗೆಯ ಭಾವನೆಗಳು ಸ್ಫುರಿಸದೆ ಇರುವುದಿಲ್ಲ. ಗುರುಜಗನ್ನಾಥ ವಿಠಲರು "ಯಾಕೆ ಮೂಕನಾದಲೊ ಗುರುವೆ ನೀನ್ಯಾಕೆ ಮೂಕನಾದ್ಯೊ" ಎಂದು ಒಮ್ಮೆ ಪ್ರಶ್ನಿಸಿ ಭಾವಪರವಶರಾಗಿರಲು ಅವರಿಗೆ ರಾಯರು ವೃಂದಾವನದಿಂದ ಎದ್ದು ಬರುತ್ತಿರುವಂತೆ ಅನುಭವವಾಗುವುದು. ಆಗ ಅವರು ಪುಳಕಿತಗೊಂಡು "ಎದ್ದು ಬರುತಾರೆ ನೋಡೆ – ಗುರುಗಳು ತಾವೆದ್ದು ಬರುತಾರೆ ನೋಡೆ" ಎಂದು ಹಿಗ್ಗಿ ಹಿಗ್ಗಿ ಹಾಡಿರುವರು. ಶ್ರೀ ಕಮಲೇಶರು "ಯಾಕೆ ವೃಂದಾವನದಿ ನೆಲಸಿರುವೆ ಗುರುವೆ" ಎಂದು ದನಿಯೆತ್ತಿ ಹಾಡಿರುವುದೂ ಸುಪ್ರಸಿದ್ಧವಾಗಿದೆಯಷ್ಟೆ. ಪ್ರಕೃತ ಕೀರ್ತನಕಾರರೂ ಅದೇ ಧಾಟಿಯಲ್ಲಿ "ಏನಿದು ವಿಚಿತ್ರ ಹೇ ಭವ್ಯ ಚಾರಿತ್ರ ಮಾನನಿಧಿ ಶ್ರೀ ಸುಧೀಂದ್ರರ ದಿವ್ಯಪುತ್ರ" "ಏನು ನಿನ್ನಯ ಮಹಿಮೆಗಾನಸುವಿಶಾರದನೆ ಧ್ಯಾನ ಚಿತ್ತದಿ ವರಸಮಾಧಿಯೊಳು ಕುಳಿತಿಹುದು" ಎಂದು ವಿಸ್ಮಯ ಚಿತ್ತರಾಗಿ, ಅನಂತರ ಗುರುಗಳ ಮನೋಭೀಷ್ಟವೇನಿರಬಹುದೆಂದು ಬಹು ಸ್ವಾರಸ್ಯವಾಗಿ ಚಿಂತಿಸತೊಡಗುವರು. ಕಡೆಯ ನುಡಿಯಲ್ಲಿ,

ಏಕಾಂಗಿಯಾಗಿ ನೀನೇಕಾಗ್ರಚಿತ್ತದಲಿ
ಶ್ರೀಕಾಂತ ರಘುವರನ ಅರ್ಚಿಸುತಲಿ
ಮೂಕ ಬಧಿರಕ ರೋಷ ಹೃದ್ರೋಗ ಕುಷ್ಠಾದ್ಯ
ನೇಕ ಬವಣೆಯ ಸೇವೆ ಮಾತ್ರದಲಿ ಪರಿಹರಿಪುದು

ಎಂದು ತಾವೇ ಒಂದು ತೀರ್ಮಾನವನ್ನು ಕೈಕೊಳ್ಳುವರು. ಒಟ್ಟಿನಲ್ಲಿ ರಾಯರು ಲೋಕಹಿತಾರ್ಥವಾಗಿ ಹೇಗೆ ವೃಂದಾವನದಲ್ಲಿ ನೆಲೆಸಿರುವರೆನ್ನುವುದನ್ನು ತಿಳಿಸಿರುವರು.

ಶ್ರೀ ರಾಘವೇಂದ್ರತೀರ್ಥರ ಸೇವೆ ಎಷ್ಟು ಪುಣ್ಯಪ್ರದವೆನ್ನುವುದನ್ನು ಒಂದೇ ಒಂದು ನುಡಿಯುಳ್ಳ ಒಂದು ಕೀರ್ತನೆಯಲ್ಲಿ ಬಹಳ ಅರ್ಥಗರ್ಭಿತವಾಗಿ ಹೇಳಿರುವರು.

ದೇವ ಸ್ವಭಾವ ಶ್ರೀ ರಾಘವೇಂದ್ರರ ಸೇವೆ
ಭಾವಿಸಲು ಘೋರ ಸಂಸಾರ ಶರಧಿಗೆ ನಾವೆ ॥ ಪ ॥
ಆವಾವ ವಿಧಗಳಲಿ ಕಾವ ಅಮಿತ ಮಹಾನು
ಭಾವ ಭವ್ಯಶರೀರ ಸಕಲಲೋಕೋದ್ಧಾರ ॥ ಅ. ಪ ॥
ಸರ್ವತಂತ್ರ ಸ್ವತಂತ್ರ ಸರ್ವವಿದ್ಯಾಪೂರ್ಣ
ಸರ್ವಜ್ಞಶಾಸ್ತ್ರಸಿಧು ಪೂರ್ಣಚಂದ್ರ
ದುರ್ವಾದಿಮತಭಂಗ ತಾಪಸಕುಲೋತ್ತುಂಗ
ಸರ್ವೇಶ ರಘುವರನ ಚರಣ ಸರಸಿಜಭೃಂಗ ॥ ೧ ॥

ಈ ಕೀರ್ತನೆಯಲ್ಲಿ ಲೇಖಕರು ಬಳಸಿರುವ ವಿಶೇಷಣಗಳನ್ನು ಬಹಳ ಎಚ್ಚರಿಕೆಯಿಂದ ಅನ್ವಯಿಸಿಕೊಂಡು ಅರ್ಥ ಮಾಡಿಕೊಳ್ಳುವುದು ಅಗತ್ಯ. ದ್ವೈತಸಿದ್ಧಾಂತದ ಸ್ವಾಮಿ-ಭೃತ್ಯ ಭಾವನೆಗೆ ಬಾಧಕವಾಗದಂತೆ ಗ್ರಹಿಸಬೇಕು.

ಈ ಕೀರ್ತನ ಸಂಕಲನದಲ್ಲಿ ಶ್ರೀ ರಾಘವೇಂದ್ರತೀರ್ಥರನ್ನು ಕುರಿತಂತೆ ಲಾಲಿ ಪದಗಳು, ಪ್ರಾತಃ ಸ್ತೋತ್ರಗಳು ಮೊದಲಾದುವುಗಳೂ ಇವೆ. ಇನ್ನೊಂದು ಅತಿಶಯವೆಂದರೆ, ಐತಿಹಾಸಿಕ ಘಟನೆಯಾದ ಮೇಜರ್ ಮನ್ರೋವಿನ ಮನಃ ಪರಿವರ್ತನೆಯನ್ನೂ ಕುರಿತಂತೆ ಒಂದು ಕೀರ್ತನೆಯಿದೆ.

ಕೌತುಕಚರಿತೆ ಗುರುವಿನ ಮಹಿಮೆ
ಭೂತಳದೊಳು ವಿಖ್ಯಾತಿಯ ಪಡೆದುದು ॥ ಪ ॥
ಭೂತಳದೊಳು ವಿಖ್ಯಾತಿಯ ಪಡೆದುದು ॥ ಪ ॥
ನೀತಿವಂತರಿಗೆ ಜಾತಿಯೇನು ? ಸ
ಚ್ಚೇತರನು ನಿಶ್ಚಯದಿ ರಕ್ಷಿಸುವ ॥ ಅ. ಪ ॥
ವಂಚನೆಮತಿಯಲಿ ' ಮನ್ರೋ ' ಬರೆ ರೋ
ಮಾಂಚಕದಲಿ ! ಬೃಂದಾವನದಿಂದ
ಮಿಂಚು ಮೇಘದಿಂ ಹೊಳೆವ ತೆರದೊಳು
ವಂಚನೆಯಿಂ ಯತಿದರ್ಶನವಿತ್ತ ॥ ೧ ॥
ವಂದನೆಗೊಳ್ಳುತ ಕೆಲವು ನಿಮಿಷವಾ
ನಂದದಿ ಸಂಭಾಷಣೆಗೈದು
ಸಂದೇಹವ ಪರಿಹರಿಸಿ ಹಿಂದಿನಿಂ
ಬಂದ ದಾನವ ಸುಸ್ಥಿರಗೊಳಿಸಿದ ॥ ೨ ॥

ಶ್ರೀ ಗುರುರಾಜರ ಅನಂತ ಪವಾಡಗಳನ್ನು ಹೇಳಿ ಮುಗಿಸಲಾಗದಿದ್ದರೂ ಈ ವಿಸ್ಮಯಕರವಾದ ಚಾರಿತ್ರಿಕ ಪ್ರಸಂಗವೊಂದನ್ನು ಹೇಳಿದರೆ ಎಂಥ ನಾಸ್ತಿಕನೂ ಆಸ್ತಿಕನಾಗುವುದರಲ್ಲಿ ಇನ್ನು ಅನುಮಾನವುಂಟೆ ?

ಕಾವ್ಯಗೀತಲಹರಿಯನ್ನು ರಚಿಸಿದ ಬಳಿಕ ಶ್ರೀ ಎಂ. ರಾಘವೇಂದ್ರರಾಯರು ಅವುಗಳನ್ನು ರಾಯರಿಗೇ ಸಮರ್ಪಿಸುವ ಮಂಗಳ ಪದವೊಂದು ಮನೋಜ್ಞವಾಗಿದೆ.

ಮಂಗಳ ಮಂತ್ರಾಲಯ ಪುರನಿಲಯ
ಸಜ್ಜನಮುನಿಗೇಯ
ಮಂಗಳ ಶ್ಯಾಮವರ್ಣ ಶುಭಕಾಯ
ಕಾಯೋ ಗುರುರಾಯ || ಪ ||

ಮಂಗಳ ಬೃಂದಾವನ ನಿಜಮಂದಿರ
ಮಂಗಳ ವೈಷ್ಣವ ಕುಮುದಕೆ ಚಂದಿರ
ಮಂಗಳ ತಾಪಸಕುಲನೊಳಗಿಂದಿರ
ಮಂಗಳಚರಿತಸುನಾಮಧೇಯ ಶುಭ
ನಿನ್ನಾಜ್ಞೆಯ ಶಿರದೊಳಗೇ ನಾ ಪೊತ್ತು
ನಿರ್ವಹಿಸುವ ಹರುಷದಿ
ಸನ್ನುತಿಗೈದಿರುವೆನೊ ಈ ಹೊತ್ತು
ಈ ಗೀತೆಗಳೆಲ್ಲವು
ನಿನ್ನ ಸುಪ್ರೇರಣೆಯೆಂಬುದು ಗೊತ್ತು
ಇದು ನಿನಗೂ ಗೊತ್ತು || ೧ ||

ಇನ್ನೀನೀಕೃತಿ ದಿವ್ಯಕುಸುಮಗಳ
ನಿನ್ನ ಪದಾಂಬುಜಗಳಲಿ ಸಮರ್ಪಿಸಿ
ಧನ್ಯನಾದೆ ಶ್ರೀ ರಘುವರಭಜಕನೆ
ಇನ್ನುಳಿದೆಲ್ಲವು ನಿನ್ನದೊ ಸ್ವಾಮಿ

“ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆದವರಂತೆ ಕಾಣಿರೋ” ಎಂಬ ದಾಸರ ನುಡಿಯ ತತ್ವವೇ ಇಲ್ಲಿ ಅಡಗಿದೆ. ಶ್ರೀ ಎಂ. ರಾಘವೇಂದ್ರರಾಯರು ಈ ಕೀರ್ತನೆಗಳಲ್ಲಿ ಅಂಕಿತವನ್ನು ಬಳಸುವಾಗಲೂ ಈ ಅಹಂಕಾರ ನಿರಸನ ಮಾರ್ಗವನ್ನೇ ಅನುಸರಿಸಿರುವುದು ಅನುಪಮವಾಗಿದೆ; ಶ್ರೀರಾಮನ ಆರಾಧಕರಾದ ರಾಯರಿಗೆ ಅನ್ವಯಿಸುವಂತೆಯೇ ‘ಶ್ರೀ ರಘುವರ’ ಎಂಬ ಶಬ್ದವನ್ನು ಉದ್ದಕ್ಕೂ ಬಹಳ ಚಮತ್ಕಾರಪೂರ್ಣವಾಗಿ ಪ್ರಯೋಗಿಸಿರುವರು. ಕುಮಾರವ್ಯಾಸನು ಹೇಳಿರುವಂತೆ “ವೀರನಾರಾಯಣನೆ ಕವಿ ಲಿಪಿಕಾರ ಕುಮಾರವ್ಯಾಸ” ಎಂಬ ಕವಿವಾಣಿಯಲ್ಲಿ ಶ್ರದ್ಧಾ ಭಕ್ತಿಗಳನ್ನು ಇಟ್ಟಿರುವ ಗಮಕಿ ಎಂ. ರಾಘವೇಂದ್ರರಾಯರು ಈ ಗೀತೆಗಳೆಲ್ಲವೂ ಶ್ರೀ ಗುರುರಾಜರ ವಾಣಿಯೆಂದೂ, ತಾವು ಅದನ್ನು ಬರೆದಿಟ್ಟಿರುವ ಲಿಪಿಕಾರಮಾತ್ರರೆಂದೂ ಭಾವಿಸಿರುವುದು ಅವರ ಭಕ್ತ ಹೃದಯದ ಪರಿಪಕ್ವಾನುಭವಕ್ಕೆ ಅನುಗುಣವಾದುದೇ ಸರಿ !*

---

* ಶ್ರೀ ರಾಘವೇಂದ್ರಗುರು ಕೀರ್ತನಮಾಲಾ : ಲೇಖಕರು ಮತ್ತು ಪ್ರಕಾಶಕರು : ಗಮಕಿ ಎಂ. ರಾಘವೇಂದ್ರ ರಾಯರು, ಕಾವ್ಯಗಾಯನ ಕಲಾಮಂದಿರ, ತ್ಯಾಗರಾಜನಗರ, ಬೆಂಗಳೂರು–4 ; ತಿದ್ದಿ ವಿಸ್ತರಿಸಿದ ಎರಡನೆಯ ಮುದ್ರಣ, 1964.

ಶ್ರೀ ರಾಘವೇಂದ್ರಪ್ರಭುಗಳು

ಲೇ॥ ವಿದ್ವಾನ್ ಚಿಂಚೋಳಿ ಪ್ರಹ್ಲಾದಾಚಾರ್ಯ

ಶ್ರೀ ರಾಘವೇಂದ್ರಸ್ವಾಮಿಗಳಿಂದ ನದಿಗಳ ತಾರತಮ್ಯವು ಬ್ರಹ್ಮಾಂಡ ಪುರಾಣದಿಂದ ಸಂಗ್ರಹಿಸಲ್ಪಟ್ಟ ಕ್ರಮವನ್ನು ಇಲ್ಲಿ ಕಾಣಬಹುದಾಗಿದೆ.

ಶ್ಲೋಕ : ವಿಷ್ಣು ಪಾದಾಬ್ಜ ಸಂಭೂತಾಗಂಗಾ ಸರ್ವಾಧಿಕಾಮತಾ ।
ತತೋ ಗೋದಾವರೀ ನ್ಯೂನಾ ಕೃಷ್ಣವೇಣೀ ತತೋಧಮಾ ॥ ೧ ॥

ತಾತ್ಪರ್ಯ : ಶ್ರೀ ವಿಷ್ಣುಪಾದೋದ್ಭವಳಾದ ಗಂಗೆಯು ಎಲ್ಲಾ ನದಿಗಳಿಗೂ ಶ್ರೇಷ್ಠಳು. ಆಕೆಗಿಂತ ಗೋದಾವರಿ ಕಡಿಮೆ. ಗೋದಾವರಿಗಿಂತ ಕೃಷ್ಣವೇಣಿ ಕಡಿಮೆ.

ಶ್ಲೋಕ : ಸ್ವಾಮಿಚಂದ್ರೌ ಪುಷ್ಕರಿಣ್ಯೌ ಮಾನಸಂ ಚ ಸರೋವರಂ ।
ಕೃಷ್ಣವೇಣ್ಯಾಃ ಸಮಾಸ್ತೇಭ್ಯಃ ಕಾವೇರೀ ಚ ಸರಸ್ವತಿ ॥ ೨ ॥

ತಾತ್ಪರ್ಯ : ಈ ಕೃಷ್ಣವೇಣೀಗೆ ಸ್ವಾಮಿ ಪುಷ್ಕರಣಿ, ಚಂದ್ರ ಪುಷ್ಕರಣಿ ಹಾಗೂ ಮಾನಸ ಸರೋವರಗಳು ಸಮ. ಇವೆಲ್ಲಕ್ಕಿಂತ ಕಾವೇರಿ ಮತ್ತು ಸರಸ್ವತಿ ಕಮ್ಮಿ.

ಶ್ಲೋಕ : ಹೀನೇಽಸ್ಯೋಪಸಮೇತಾಭ್ಯಾಮೂನಾ ಚ ಸರಯೂ ತಥಾ ।
ತುಂಗಭದ್ರಾ ಸಮಾತಸ್ಯಾಃ ಕಾಳಿಂದ್ಯೂನಾ ತತೋಧಮಾ ॥ ೩ ॥

ತಾತ್ಪರ್ಯ : ಬೇರೆ ಬೇರೆ ಉಪನದಿಗಳಿಂದ ಕೂಡಿದ ಸರಯೂ ನದಿ ಇನ್ನೂ ಕಮ್ಮಿ. ತುಂಗಭದ್ರೆಯು ಅದರ ಸಮ. ಅದಕ್ಕಿಂತ ಕಾಳಿಂದಿ (ಯಮುನೆ)ಯು ಕಮ್ಮಿ.

ಶ್ಲೋಕ : ನರ್ಮದಾ ಸಿಂಧುಸರಿತಾ ತತ್ಸಮಾ ಭವನಾಶಿನೀ ।
ತತಃ ಕುಮುದ್ವತೀ ನೀಚಾ ತತೋ ನೀಚಾ ಮಲಾಪಹಾ ॥ ೪ ॥

ತಾತ್ಪರ್ಯ : ಯಮುನೆಗಿಂತ ನರ್ಮದಾ ಸಿಂಧು ನದಿಗಳು ಕಮ್ಮಿ ಆದರೆ ಭವನಾಶಿನಿಯು ಇದಕ್ಕೆ ಸಮ. ಭವನಾಶಿನಿಗಿಂತ ಕುಮುದ್ವತಿಯು ಕಮ್ಮಿ, ಅದಕಿಂತ ಮಲಾಪಹಾ ನದಿಯು ಕಮ್ಮಿ.

ಶ್ಲೋಕ : ತಾಮ್ರಪರ್ಣೀಭೀಮರಥೀ ಮಂಜುಲಾ ಚ ಪಿನಾಕಿನೀ
ಪೃಥಕ್ ಸಾಗರಗಾಮಿನ್ಯೋ ನದ್ಯೋ ಭೀಮರಥೀಸಮಾ ॥ ೫ ॥

ತಾತ್ಪರ್ಯ : ತಾಮ್ರಪರ್ಣಿ, ಭೀಮರಥೀ, ಮಂಜುಳಾ, ಪಿನಾಕಿನೀ ಮುಂತಾದ ಸಾಗರವನ್ನು ಸೇರುವ ನದಿಗಳು ಭೀಮರಥಿಗೆ ಸಮ.

ಶ್ಲೋಕ : ತತೋಽಸ್ಯಾಸಂತೋಽನೀಚಾಸ್ತಟಾಕಾಶ್ಚ ತತೋಧಮಾಃ ।
ತತೋಽವಾಪ್ಯಾಧಮಾಸ್ತಾಭ್ಯಃ ಕೂಪಾಃ ಸರ್ವಾಧಮಾಮತಾಃ ॥ ೬ ॥

ತಾತ್ಪರ್ಯ : ಭೀಮರಥೀಗೆ ಉಳಿದ ನದಿಗಳು ಕಮ್ಮಿ. ಇಳಿಯುವ ಭಾವಿಗಳು ಇದಕಿಂತ ಕಮ್ಮಿ. ಇತರ ಭಾವಿಗಳು ಇದಕಿಂತ ಕಮ್ಮಿಯಾಗಿರುತ್ತವೆ.

ಶ್ಲೋಕ : ಸ್ತೋತ್ರಮಾರ್ಘ್ಯ ಪ್ರದಾತವ್ಯ ಮವರಾಸುನ ಚಾನ್ಯಥಾ ।

ತಾತ್ಪರ್ಯ : ಈ ಮೇಲೆ ಹೇಳಿದ ನದಿಗಳಲ್ಲಿ ಹಾಗೂ ಜಲದಲ್ಲಿ ಸ್ನಾನ ಮಾಡುವ ಸಮಯದಲ್ಲಿ ಅವುಗಳಿಗಿಂತ ಶ್ರೇಷ್ಠವಾದ ನದಿಗಳಿಗೆ ಅರ್ಘ್ಯವನ್ನು ಕೊಟ್ಟು ನಂತರ ಉಳಿದವುಗಳಿಗೆ ಕೊಡಬೇಕು. ವ್ಯತಿಕ್ರಮ ಮಾಡಬಾರದು.

ಶ್ಲೋಕ : ರಾಘವೇಂದ್ರೇಣ ಯತಿನಾ ಬ್ರಹ್ಮಾಂಡಾಖ್ಯ ಪುರಾಣಗಃ ।
ಇತ್ಯುದ್ಧೃತಃ ಸಾರಭಾಗೋನದೀನಾಂಚೋಚ್ಚ ಸೂಚಕಃ ।

ತಾತ್ಪರ್ಯ : ಈ ಪ್ರಕಾರವಾಗಿ ಶ್ರೀ ರಾಘವೇಂದ್ರಸ್ವಾಮಿಗಳಿಂದ ನದಿಗಳ ತಾರತಮ್ಯವು ಬ್ರಹ್ಮಾಂಡ ಪುರಾಣದಿಂದ ಸಂಗ್ರಹಿಸಲ್ಪಟ್ಟಿರುತ್ತವೆ

ಅರ್ಪಣೆ : ಮಹಾ ಪ್ರಚಂಡ, ಪ್ರಕಾಂಡ, ಪಂಡಿತೋತ್ತಮರಾದ, ಹಿಂದೆ ವ್ಯಾಸತ್ರಯಕರ್ತರಾಗಿ, ಈಗ ಪರಿಮಳಾದಿ ಉದ್ಧಾಮ ಗ್ರಂಥಕರ್ತರಾಗಿ, ಮಹಾ ಮಹಾ ಪಂಡಿತರ ಬುದ್ಧಿಗೂ ನಿಗದಂತಹ ಶ್ರೀ ರಾಘವೇಂದ್ರಸ್ವಾಮಿಗಳವರು ಅಲ್ಪರಾದ ಸಾಮಾನ್ಯರಿಗೂ ತಿಗುವಂತಹ ಅನೇಕಾನೇಕ ಗ್ರಂಥಗಳನ್ನು ಶ್ರೀರಾಮ ಚಾರಿತ್ರಮಂಜರಿ, ಶ್ರೀಕೃಷ್ಣ ಚಾರಿತ್ರಮಂಜರಿ, ಪ್ರಾತಃಸಂಕಲ್ಪಗದ್ಯಾದಿ ಗ್ರಂಥಗಳನ್ನು ರಚಿಸಿರುತ್ತಾರೆ. ಇವು ಗಾತ್ರದಲ್ಲಿ ಚಿಕ್ಕದಾದರೂ ಅರ್ಥಗಾಂಭೀರ್ಯದಲ್ಲಿ ಅತ್ಯಂತ ಹಿರಿದು. ಶ್ರೀ ರಾಯರ ಗ್ರಂಥಗಳು ಮಹಿಮೆಯಲ್ಲೂ ನೋಡಲು ಸಣ್ಣದಾಗಿ ಕಂಡು ಬಂದರೂ ಅವು ಅತ್ಯಂತ ಮಹಿಮೋಪೇತವಾದುದೆಂಬುದಕ್ಕೆ ಯಾರೂ ಏನೇನೂ ಸಂದೇಹ ಪಡಬೇಕಿಲ್ಲ. ಇದಕ್ಕೆ ಈ ಪ್ರಕೃತ ನದಿಗಳ ತಾರತಮ್ಯ ಸ್ತೋತ್ರವೇ ಸಾಕ್ಷಿಯಾಗಿದೆ. ನಾನು ಶ್ರೀ ರಾಯರ ಶ್ಲೋಕಕ್ಕೆ ಪದಶಃ ಅರ್ಥ ಬರೆದೆನೇ ಹೊರತು ಇದರಲ್ಲಿ ಅಡಕವಾದ ತತ್ವಗಳ ಕಡೆ ಗಮನ ಹರಿಸಿದರೆ ನೂರಾರು ಪುಟವಾಗುವುದು.

ಸಚ್ಚರಿತ್ರರಾದ ಶ್ರೀ ರಾಯರ ಮಹಿಮಾ ಸಾಗರದಲ್ಲಿ ಅವರ ಭಕ್ತರಾದ ನಾವು ಭಕ್ತಿಯಿಂದ ಮೀಯೋಣ.

ಶ್ರೀ ರಾಘವೇಂದ್ರರ ಕಾರುಣ್ಯ

ಪೀಠಿಕಾ : ನನ್ನ ತಾತಂದಿರಾದ ವಿದ್ವಾನ್ ಶ್ರೀ ಚಿಂಚೋಳಿಮಹಿಪಾಸಾಚಾರ್ಯರ ಕಾಲದಿಂದಲೂ ನಮ್ಮ ಸಂಸಾರ ಶ್ರೀ ರಾಯರ ಅನುಗ್ರಹದಿಂದಲೇ ಬಾಳುತ್ತಲಿದೆ. ನನ್ನ 190 ಮಂತ್ರಾಲಯ ಯಾತ್ರೆ ಸಂದರ್ಭದಲ್ಲೂ ನಾನು

ಅನೇಕಾನೇಕ ಶ್ರೀ ರಾಯರ ಮಹಿಮಾತಿಶಯಗಳನ್ನು ಪ್ರತ್ಯಕ್ಷ ಕಂಡಿರುತ್ತೇನೆ. ಇದು ಖಂಡಿತ ಅತಿಶಯೋಕ್ತಿ ಅಲ್ಲ. ಇಂದಿನ ನಾಸ್ತಿಕ ಹಾಗೂ ವಿಜ್ಞಾನ ಯುಗದಲ್ಲೂ ಶ್ರೀ ರಾಯರ ಮಠಗಳಿಗೆ ಬರುವ ನವಯುವಕ, ಯುವತಿಯರು ಎಲ್ಲಾ ಜಾತಿಯವರ ಕೇಂದ್ರವಾಗಿರುವುದು ಇದಕ್ಕೆ ಒಂದು ನಿದರ್ಶನ. ಇಂದು ರಾಯರ ಹೆಸರಿನಲ್ಲಿ ನಡೆಯುತ್ತಿರುವ ಅನ್ನದಾನಾದಿಗಳು ಉತ್ಸವಾದಿಗಳು ತಿರುಪತಿ ತಿಮ್ಮಪ್ಪನನ್ನು ಬಿಟ್ಟರೆ ಮತ್ಯಾರಿಗಿವೆ ?

ಆದ್ದರಿಂದ ಆಸ್ತಿಕ ಜನಮನರಂಜನಾ ನಿಮಿತ್ತ ನನ್ನ ಅನುಭವದಲ್ಲಿ ಕೇವಲ ಒಂದೆರಡನ್ನು ಇಲ್ಲಿ ಸಂಕ್ಷೇಪವಾಗಿ ಬರೆದಿದ್ದೇನೆ. ನಾನು ಕಂಡು ಕೇಳಿದ ಶ್ರೀ ರಾಯರ ಮಹಿಮೆಯನ್ನು ಚಿತ್ರಿಸಲು ಕೊನೆಪಕ್ಷ ಒಂದು ಸಹಸ್ರ ಪುಟವಾದರೂ ಬೇಕಾಗಬಹುದು. ಯಾರು ಯಾರಿಗೆ ಏನೇನು ಇಷ್ಟಾರ್ಥಗಳು ಬೇಕೋ (ಸೂಕ್ತವಾದದ್ದು) ಅವುಗಳನ್ನು ಕಾಮಧೇನು ಕಲ್ಪವೃಕ್ಷದಂತೆ ಕೊಡುವ ದಯಾಮಯರಾದ, ಕೃಪಾಳುಗಳಾದ, ಜ್ಞಾನಿ ಶ್ರೇಷ್ಠರಾದ, ಭಕ್ತವತ್ಸಲರಾದ, ಪ್ರಾತಃ ಸ್ಮರಣೀಯರಾದ, ತಾಯಿ, ತಂದೆ, ಬಂಧು, ಬಳಗಕ್ಕಿಂತ ಅಧಿಕರಾದ ಶ್ರೀ ರಾಯರನ್ನು ಅನವರತ ಸ್ಮರಿಸಿ **ಉದ್ಧೃತರಾಗೋಣ.**

ನಾ ಕಂಡ ಕೆಲವು ರಾಯರ ಮಹಿಮೆಗಳು

ನನ್ನ ತಾತಂದಿರಿಗೆ ಅನುಗ್ರಹಿಸಿದ್ದು

ಚೀಕೋಳಿ ಮಹಿದಾಸಾಚಾರ್ಯರು ನನ್ನ ಪಿತಾಮಹರು. ಆವರು ಶ್ರೀ ರಾಯರ ಪರಮಭಕ್ತರು. ತಮ್ಮ ಸಕಲ ಆಸ್ತಿಪಾಸ್ತಿಗಳನ್ನು ಮಾರಿ ಶ್ರೀ ಮಂತ್ರಾಲಯ ಕ್ಷೇತ್ರದಲ್ಲಿ ಸುಮಾರು 32 ವರ್ಷಗಳ ಕಾಲ ಅನ್ನದಾನ ಮಾಡಿ ಪುಣ್ಯಗಳಿಸಿದವರು. ಇವರಿಗೆ ಶ್ರೀ ರಾಯರು ಸ್ವಪ್ನದಲ್ಲಿ ಪದೇ ಪದೇ ಕಾಣಿಸಿಕೊಂಡು ಮಾರ್ಗದರ್ಶನ ಮಾಡುತ್ತಲಿದ್ದರು. ಶ್ರೀ ರಾಯರೇ ಕೊಟ್ಟ ಬೃಂದಾವನ ಇಂದಿಗೂ ವಂಶಪಾರಂಪರ್ಯವಾಗಿ ಪೂಜೆಗೊಳಲ್ಪಡುತ್ತಾ ಪುಣ್ಯವಶಾತ್ ಲೇಖಕನ ಕರಗತವಾಗಿ ಅನುಗ್ರಹಿಸುತ್ತಲಿದೆ.

ಶ್ರೀ ಮಹಿದಾಸಾಚಾರ್ಯರು ಅನ್ನದಾನಕ್ಕಾಗಿ ಆದವಾನಿಯ ಒಂದು ಅಂಗಡಿಯಿಂದ ಬೇಕಾದ ದಿನಸಿ ಪದಾರ್ಥಗಳನ್ನು ಸಾಲ ತಂದು ಆ ಸಾಲವನ್ನು ಬಹುದಿನಗಳ ನಂತರ ತೀರಿಸುತ್ತಿದ್ದ ವಾಡಿಕೆಯಿತ್ತು. ಒಮ್ಮೆ ಅವರ ಸಾಲದ ಮೊತ್ತ 400 ರೂ. ಗಳಿಗೆ ಏರಿತ್ತು. ಹೇಳಿಕೆ ಮಾತು ಕೇಳಿದ ಅಂಗಡಿ ಮಾಲೀಕ ಆಚಾರ್ಯರಿಗೆ ಹಣ ಕೊಡಲು ಎರಡು ದಿನಗಳ ಅವಧಿ ಇತ್ತು ನಿಷ್ಠೂರ ಮಾಡಿದ. ನಿಸ್ಸಹಾಯಕರಾದ ಆಚಾರ್ಯರು ಏನೂ ತೋರದವರಾಗಿ "ಅಯ್ಯಾ ಇಷ್ಟೊಂದು ಹಣ ಪಾವತಿ ಮಾಡಲು ಕೇವಲ ಎರಡು ದಿನಗಳ ಅವಧಿ ಕೊಟ್ಟು ನಿಷ್ಠೂರ ಪಡಿಸುವ ಪ್ರಸಂಗ ನಿನಗೇಕೆ ಬಂತು ? ಎಂದಾದರೂ ನಾನು ನಿನಗೆ ಮೋಸ ಮಾಡಿದ್ದೀನಿಯೆ ? ಶ್ರೀ ರಾಯರ ಸೇವೆಗೆ ನೀನು ಸಹಾಯ ಮಾಡಿ ಪುಣ್ಯ ಗಳಿಸುತ್ತಿದ್ದಿ" ಇತ್ಯಾದಿ ಇತ್ಯಾದಿ ಸಮಾಧಾನ ವಾಕ್ಯಗಳನ್ನು ಎಷ್ಟು ಹೇಳಿದರೂ ದುಷ್ಟರನೇಕರ ಮಾತಿನಿಂದ ಪ್ರಚೋದಿತನಾಗಿದ್ದ ಆವರ್ತಕ ತನ್ನ ನಿಲುವಿನಿಂದ ಬದಲಾಗಲಿಲ್ಲ; ಶ್ರೀಮಠವನ್ನು ಯಾಚಿಸಿದಾಗ್ಯೂ ಫಲಕಾರಿಯಾಗದಿರಲು ವ್ಯಾಕುಲಚಿತ್ತರಾಗಿದ್ದಾಗ, ಅಂದು ರಾತ್ರಿ ಕರುಣಾಸಮುದ್ರರಾದ ಶ್ರೀ ಗುರುರಾಜರು ಆಚಾರ್ಯರ ಸ್ವಪ್ನದಲ್ಲಿ ಕಾಣಿಸಿಕೊಂಡು ಹಸನ್ಮುಖರಾಗಿ "ಏಕಪ್ಪ, ಚಿಂತಿಸುತ್ತಿರುವೆ ? ನಿನ್ನ ಚಿಂತೆಯಲ್ಲಿ ನನ್ನ ಚಿಂತೆ, ನಿನಗಾಗಿ ನೀನು ಸಾಲ ಮಾಡಿಲ್ಲವಷ್ಟೆ ನಾಳೆ ಬೆಳಗ್ಗೆ ರಾಯಚೂರಿಗೆ ಹೋಗು" ಎಂದು ತಿಳಿಸಿ ಮರೆಯಾಗಲು ಆಚಾರ್ಯರು ಆನಂದದಿಂದ ಉಷಃಕಾಲಕ್ಕೆದ್ದು ತುಂಗಭದ್ರಾ ಸ್ನಾನ ಆಹ್ನೀಕಾದಿಗಳನ್ನು ತೀರಿಸಿಕೊಂಡು ಕಾಲುನಡಿಗೆಯಲ್ಲಿ ಅಣ-

ಮಂತ್ರಾಲಯಕ್ಕೆ ಬಂದು ರಾಯಚೂರ್ ಸೇರಿದರು ಟ್ರೈನಿನಲ್ಲಿ. ಅಲ್ಲಿ ಎಲ್ಲಿಗೆ ಹೋಗುವುದೆಂಬುದನ್ನು ತಿಳಿಯದೇ ತತ್ತರಿಸುತ್ತಿದ್ದಾಗ ದೂರದಿಂದ ಒಬ್ಬಾತ ಕುದುರೆಗಾಡಿಯಲ್ಲಿ ಬಂದು ಆಚಾರ್ಯರಿಗೆ ನಮಸ್ಕರಿಸಿ ತಡವಾದುದಕ್ಕೆ ಕ್ಷಮೆ ಬೇಡಿದ " ಆತ ಯಾರೆಂದು ಆಚಾರ್ಯರಿಗೆ ಗೊತ್ತಾಗಲಿಲ್ಲ ಅವನ ಬಗ್ಗೆ ಅವರು ವಿಚಾರಿಸಲೂ ಇಲ್ಲ. ಅದೇ ಗಾಡಿಯಲ್ಲಿ ಕುಳಿತು ಊರ ಒಳಗಿನ ಒಂದು ದೇವಾಲಯಕ್ಕೆ ಬಂದು ಅಲ್ಲಿ ಸ್ನಾನಾದಿಗಳನ್ನು ಕೂಡಿ ಆತ ತಂದಿತ್ತ ಪದಾರ್ಥಗಳಿಂದ ಅಡಿಗೆ ಮಾಡಿಕೊಂಡು, ದೇವರಿಗೆ ನೈವೇದ್ಯ ವೈಶ್ವದೇವ, ಬಲಿಹರಣಾನಂತರ ಗುರುಗಳಿಗೆ ಹಸ್ತೋದಕ ಇತ್ತು ತಾವು ಭೋಜನ ಮಾಡಿ ಮಿಕ್ಕಿದ್ದನ್ನು ಅಲ್ಲೇ ಇಟ್ಟರು. ಇಷ್ಟು ಹೊತ್ತಿಗೆ ಮಧ್ಯಾಹ್ನ 3 ಘಂಟೆ ಆಗಿತ್ತು. ಸ್ವಲ್ಪ ವಿಶ್ರಮಿಸಿಕೊಂಡು ಆಚಾರ್ಯರು ಮಂತ್ರಾಲಯಕ್ಕೆ ವಾಪಸ್ಸಾಗಲು ಸಿದ್ಧರಾಗುತ್ತಿರುವುದನ್ನು ಕಂಡ ಆ ವ್ಯಕ್ತಿ ಪತ್ನಿ ಒಡನೆ ಒಂದು ಚಿಕ್ಕ ಮಗು ಒಂದನ್ನು ಆಚಾರ್ಯರ ಸಮುಖದಲ್ಲಿ ಮಲಗಿಸಿ " ಸ್ವಾಮಿ ಶ್ರೀ ರಾಯರ ಪರಮಾನುಗ್ರಹ ದಿಂದ ಆದ ಈ ಮಗುವಿಗಾಗಿ ನಾನು 400 ರೂ ಗಳ ಕಾಣಿಕೆ ಅರ್ಪಿಸಲು ಬೇಡಿಕೊಂಡಿದ್ದೆ. ಅವನ್ನು ತಮಗೆ ಸಲ್ಲಿಸಲು ನಿನ್ನೆ ದಿನ ಸ್ವಪ್ನದಲ್ಲಿ ಶ್ರೀ ರಾಯರು ತಿಳಿಸಿದರು ಅದು ಸತ್ಯವಾಗಿ ಪರಿಣಮಿಸಿತು ತಾವು ಬಂದಿದ್ದು ನನ್ನ ಭಾಗ್ಯೋದಯ " ಎಂದು ಭಕ್ತಿಯಿಂದ ಕಾಣಿಕೆಯನ್ನು ಒಂದೇ ರೂಪಾಯಿ ನಾಣ್ಯ ರೀತ್ಯ ಕಲ್ಲಿ ಚೀಲದಲ್ಲಿ ಅರ್ಪಿಸಿದ. ಚಕಿತರಾದ ಆಚಾರ್ಯರು ರಾಯರ ಕರುಣೆಗಾಗಿ ಧಾರಾಕಾರವಾಗಿ ಕಣ್ಣೀರು ಸುರಿಸುತ್ತಾ ಆ ಹಣದ ಚೀಲವನ್ನ ತಲೆಮೇಲೆ ಹೊತ್ತು ಮಂತ್ರಾಲಯಕ್ಕೆ ಹಿಂತಿರುಗಿ ಆ ಚೀಲವನ್ನು ಶ್ರೀ ರಾಯರ ಸಮುಖದಲ್ಲಿಟ್ಟು ವರ್ತಕನಿಗೆ ಹೇಳಿ ಕಳಿಸಿದರು. " ಈ ಹಣ ಶ್ರೀ ರಾಯರದು. ನೀನು ಕೊಟ್ಟ ಪದಾರ್ಥ ರಾಯರಿಗೆ ನಿನ್ನ ಲೆಕ್ಕ ಅವರಿಗೇ ಒಪ್ಪಿಸಿ ನಿನ್ನ 402 ರೂ. ತೆಗೆದುಕೊ " ಎಂದು ಹೇಳಿ ದೂರ ಸರಿದರು. ಘಾಬರಿಗೊಂಡ ವರ್ತಕ ಆಚಾರ್ಯರ ನಿಷ್ಠತೆಗೆ ಬೆರಗಾಗಿ ಪೂರ್ತಿ ಹಣ ಪಡೆಯುವ ಧೈರ್ಯವಿಲ್ಲದೇ ಕೇವಲ 200 ರೂ. ಮಾತ್ರ ಪಡೆದು ತನ್ನ ಹಣವೆಲ್ಲಾ ಸಂದಿರುವುದಾಗಿ ರಸೀದಿ ಇತ್ತು ತನ್ನನ್ನು ಕ್ಷಮಿಸುವಂತೆ ಅಂದಿನ ಶ್ರೀಮಠದ ಶ್ರೀಪಾದಂಗಳವರಲ್ಲೇ ಪಾದದ ಮೇಲೆ ಬಿದ್ದು ಬೇಡಿದ. ಇಂತಹ ಅನೇಕಾನೇಕ ಮಹತ್ಕಾರ್ಯಗಳನ್ನು ಕೇವಲ ಶ್ರೀ ರಾಯರ ದಯೆಯಿಂದ ಶ್ರೀ ಚಂಡೂರಿ ಮಹಿದಾಸಾಚಾರ್ಯರು ಮಾಡಿದ ವಿಚಾರಗಳನ್ನು ಚಿತ್ರಿಸಿ ಒಂದು ಗ್ರಂಥವನ್ನು ನಾನು ರಚಿಸಿದೆ. ಅದರ ಬಿಡುಗಡೆ ಮಹನೀಯರಾದ ಪಂಡಿತ ಶ್ರೇಷ್ಠರಾದ ಶ್ರೀ ರಾಜಾ ಗುರುರಾಜಾಚಾರ್ಯರಿಂದಲೇ ನಡೆಯಿತು. ಕಣ್ಮರೆಯಾದ ಶ್ರೀ ಶ್ರೀ ಸುಜಯೀಂದ್ರರಿಗೆ ಆಚಾರ್ಯರ ಮಹಿಮೆ ತಿಳಿದಿತ್ತು. ಆದ್ದರಿಂದ ಅವರ ಮೊಮ್ಮಗನಾದ ಕಾರಣ ಶ್ರೀಗಳು ನನಗೆ ಸನ್ಮಾನಿಸುತ್ತಿದ್ದರು. ಇದು ನನ್ನ ಭಾಗ್ಯ. ಆ ಪಾತಿಕನಾದ ಕಾರಣ ಈವರೆಗೆ ರಾಯರು ನನಗೆ 190 ಮಂತ್ರಾಲಯ ಯಾತ್ರೆ ಮಾಡಿಸಿ ಅನುಗ್ರಹಿಸಿರುವರು." ನನ್ನ ತಾತಂದಿರ ಮಹಿಮೆ ತಿಳಿದಿದ್ದ ಶ್ರೀ ಶ್ರೀ ಸುಜಯೀಂದ್ರ ತೀರ್ಥರು ಇನ್ನೂ ಕೆಲವು ಕಾಲವಿದ್ದಿದ್ದರೆ ಚೆನ್ನಾಗಿರುತ್ತಿತ್ತು. ಇದವೆ ಶ್ರೀ ರಾಯರ ಇಚ್ಛೆ.

ಶ್ರೀ ರಾಯರ ಕರುಣೆ

ಬಡವರ ಉದ್ಧಾರ

ಒಮ್ಮೆ ನಾನು ಅಣ್ಣ ಮಂತ್ರಾಲಯಕ್ಕೆ ಬಂದು ಅಲ್ಲಿದ್ದ ಶ್ರೀ ಶ್ಯಾಮಸುದಾಸರ ಛತ್ರದಲ್ಲಿ ಇಳಿದೆ. ಅಲ್ಲಿಗೆ ಒಬ್ಬ ಬಡ ಬ್ರಾಹ್ಮಣ ತನ್ನ ಮೂರು ಮಕ್ಕಳೊಡನೆ ನಂತರ ಬಂದ. ಅವನ ಮೈಯಿಂದ ಸ್ನಾನ ಮಾಡಿದಂತೆ ಬೆವರು ಸುರಿಯುತ್ತಿತ್ತು. ಸಾಲದುದಕ್ಕೆ ಕೃಶಳಾದ ಹೆಂಡತಿ ಬೇರೆ. ಆ ಮಕ್ಕಳಿಗೆ ಚಡ್ಡಿ ಇದ್ದವರಿಗೆ ಅಂಗಿ ಇಲ್ಲ. ಅಂಗಿ ಹಾಕಿಕೊಂಡವರಿಗೆ ಚಡ್ಡಿ ಇಲ್ಲ ಹೀಗೆ ಏಕ ವಸ್ತ್ರ ಪ್ರಯೋಗ ಬೇರೆ. ಇಷ್ಟಾದರೂ ಆತ ಸಮಾಧಾನ ಚಿತ್ತನಾಗಿ " ಅಂತೂ ಹತ್ತು ವರ್ಷ ನಂತರ ಶ್ರಮಿಸಿದ್ದಕ್ಕೆ ಈಗ ಶ್ರೀ ರಾಯರ ದರ್ಶನ ನನಗೆ ಪ್ರಾಪ್ತಿಯಾಯ್ತು. ಕೊನೆ ಪಕ್ಷ

7 ದಿನಗಳಾದರೂ ಸೇವೆ ಮಾಡಿ ಹೋಗುವೆ" ಎಂದ. ಭೋಜನಾನಂತರ ನಾನು ಮಂತ್ರಾಲಯಕ್ಕೆ ಹೊರಟೆ. ಆ ಪೂರ್ತಿ ದಿನ ಆ ಬ್ರಾಹ್ಮಣನನ್ನು ನಾನು ಮಂತ್ರಾಲಯದಲ್ಲಿ ನೋಡಲೇ ಇಲ್ಲ. ಆದರೆ ಮಾರನೆ ದಿನ ಬೆಳಿಗ್ಗೆ ಆ ಬ್ರಾಹ್ಮಣ ರಾಯರ ಮಠದ ಮುಂದೆ ಕುಳಿತು ಅಳುತ್ತಲಿದ್ದ. "ಏಕಪ್ಪ, ಅಳುತ್ತಲಿದ್ದಿ ? ಏನು ತೊಂದರೆ ಆಯಿತು ನಿನಗೆ ?" ಎಂದು ನಾನು ಪ್ರಶ್ನಿಸಲಾಗಿ ಆತ ಹೇಳಿದ ನಾನು ನಿನ್ನೆ ಸಂಜೆ ಹೆಂಡತಿ ಮಕ್ಕಳ ಜೊತೆಗೆ ಕಾಲುನಡಿಗೆಯಲ್ಲಿ ಅಣು ಮಂತ್ರಾಲಯದಿಂದ ಹೊರಟ ದಾರಿಯಲ್ಲಿ ಕತ್ತಲೆ ಕವಿಯಿತು. ದೇಹಕ್ಕೆ ಸಂತತ ನಡೆಯುವಿಕೆಯಿಂದ ಆಯಾಸವಾಗಿದ್ದ ಕಾರಣ ಹಾದಿಯ ಬದಿಯ ಮರದಡಿ ಒಡರಲ್ಲಿ ಸ್ವಲ್ಪ ಮಲಗಿದೆ. ನಿದ್ರೆ ಹತ್ತಿತು. ಆದರ ಅಲ್ಲೇ ಸ್ವಪ್ನದಲ್ಲಿ ಶ್ರೀ ರಾಯರು ಕಾಣಿಸಿಕೊಂಡು "ನೀನು ವೃಥಾ ಸೇವೆ ಮಾಡಿ ಬಳಲಬೇಡ, ನೀನು ಬಂದಿರುವ ಕಾರ್ಯ ನನಗೆ ಗೊತ್ತು. ನಾಳೆ ನನ್ನ ದರ್ಶನ ಮಾಡಿದ ಕೂಡಲೇ ನಿನ್ನ ಊರಿಗೆ ಹಿಂತಿರುಗು ನಿನ್ನ ಇಬ್ಬರು ಹೆಣ್ಣು ಮಕ್ಕಳಿಗೂ ಮದುವೆ ಗೊತ್ತಾಗತ್ತೆ ಆ ಮದುವೆ ಖರ್ಚಿಗೆ ವ್ಯವಸ್ಥೆ ಮಾಡಿದ್ದೇನೆ" ಎಂದು ತಿಳಿಸಿದರು. ಇಂತಹ ದಯಾ ಸಮುದ್ರರನ್ನು ಇನ್ನೆಲ್ಲೂ ಕಾಣೆ. ಅವರ ಕರುಣೆಗೆ ಅಳಲೇ ? ಈ ಪವಿತ್ರ ಕ್ಷೇತ್ರಕ್ಕೆ ಬಂದು ಒಂದೆರಡು ದಿನಗಳು ಇರುವ ಭಾಗ್ಯ ಕೂಡ ನನಗಿಲ್ಲವಲ್ಲಾ ಎಂದು ಅಳಲೆ ? ನನಗೆ ಏನೂ ತೋರದೇ ಉಕ್ಕಿ ಬರುವ ಆನಂದಾಶ್ರು, ದುಃಖಾಶ್ರು, ಸಂತೋಷ ಒಂದು ಕಡೆ. ದುಃಖ ಒಂದು ಕಡೆ. ಕೃತಜ್ಞತೆ ಇನ್ನೊಂದು ಕಡೆ. ಎಲ್ಲಾ ಸೇರಿ ಏನೊಂದೂ ತಿಳಿಯದಾಗಿದೆ ಎಂದು ಹೇಳಿದ. ಅಂದೇ ಸಂಜೆ ಆತ ಊರಿಗೆ ವಾಪಸ್ಸಾದ. ಮುಂದೆ ನೂರು ವರ್ಷಗಳ ನಂತರ ಮತ್ತೆ ಆತನನ್ನು ಮಂತ್ರಾಲಯದಲ್ಲಿ ಕಂಡಿದ್ದಾಗ ತನ್ನ ಸ್ವಪ್ನಕ್ಕನುಗುಣವಾಗಿ ಇಬ್ಬರು ಹೆಣ್ಣು ಮಕ್ಕಳಿಗೂ ಒಂದು ಕಾಸೂ ಖರ್ಚಿಲ್ಲದ ಒಳ್ಳೆಕಡೆ ವಿವಾಹ ಮಾಡಿದೆನೆಂದು ತಿಳಿಸಿದ. ಇಂತಹ ಗುರುಗಳಿಗೆ ಏನೆಂದು ಕರೆಯಬೇಕೋ ತಿಳಿಯದಾಗಿದೆ.

ಶ್ರೀ ರಾಯರ ಕರುಣೆ

ಮಿಲಿಟರಿ ಅಧಿಕಾರಿಗೆ ಅನುಗ್ರಹ

ಒಮ್ಮೆ ಬಿಜಾಪುರದಲ್ಲಿ ಒಬ್ಬ ಗೃಹಸ್ಥರ ಮನೆಯಲ್ಲಿ ಒಂದು ಗುರುವಾರ ರಾತ್ರಿ ಭಜನೆ ಮಾಡುತ್ತಲಿದ್ದಾಗ ಹಠಾತ್ತಾಗಿ ಆ ಮನೆಯ ಎದುರುಗಡೆ ನಿಲ್ಲಿಸಿದ್ದ ಮಿಲಿಟರಿ ಜೀಪಿನಿಂದ ಒಬ್ಬ ಖಾಕಿ ಉಡುಪು ಧರಿಸಿದ ಅಧಿಕಾರಿ ಗಂಭೀರವಾಗಿ ಇಳಿದು ಭಜನಾಮನೆಯತ್ತ ಸಾಗಿ ಪಾದರಕ್ಷೆಗಳನ್ನು ತೆಗೆದು ತಲೆಯ ಟೋಪಿ ತೆಗೆದು ಮೌನವಾಗಿ ಒಳಗೆ ಬಂದು ಮೂಲೆಯೊಂದರಲ್ಲಿ ಕಣ್ಣು ಮುಚ್ಚಿಕೊಂಡು ಕುಳಿತ, ಕೈಯಿಂದ ಚಪ್ಪಾಳೆ ಹಾಕುವ ಆತನ ಕಣ್ಣಲ್ಲಿ ಸ್ವಾಭಾವಿಕವಾಗಿ ಜಲ ಸುರಿಯುತ್ತಿತ್ತು. ಭಜನ ಮುಗಿದ ಕೂಡಲೆ ನಮಸ್ಕರಿಸಿ ಹೊರಟೇಬಿಟ್ಟ ಆತ. ಆಗ ನಾನು ಆ ಮನೆಯ ಯಜಮಾನನಿಗೆ ಆತನನ್ನು ಕರೆತರಲು ತಿಳಿಸಿದೆ. ಆತ ಬಂದ ಕೂಡಲೇ ಕನ್ನಡದಲ್ಲಿ ಮಾತನಾಡಿಸಿದ "ನನಗೆ ಕನ್ನಡ ಬರಲ್ಲ – ಏನೋ ಶ್ರೀ ರಾಘವೇಂದ್ರ ಎಂದು ನೀವು ಭಜನೆ ಮಾಡಿಸುತ್ತಿದ್ದುದರಿಂದ ನಾನಾಗಿ ಮನೆಯೊಳಗೆ ನುಗ್ಗಿ ಬಂದೆ. ಆ ರಾಯರ ಮಹಿಮೆ ಅಪಾರ" ಎಂದು ಇಂಗ್ಲೀಷಿನಲ್ಲಿ ಹೇಳುತ್ತಾ ಅಳತೊಡಗಿದ. ಚಕಿತರಾದ ನಾವೆಲ್ಲಾ ಅವನನ್ನು ಆದರಿಸಿ ವಿವರ ವಿಚಾರಿಸಲಾಗಿ ಆತ ಹೇಳಿದ್ದೇನೆಂದರೆ. "ತನಗೊಬ್ಬ ಬ್ರಾಹ್ಮಣ ಸ್ನೇಹಿತನಿದ್ದನಂತೆ. ಒಮ್ಮೆ ಹಠಾತ್ತಾಗಿ ಈತನಿಗೆ ಅಸ್ಸಾಂ ಗಡೀಗೆ ವರ್ಗಾವಣೆ ಆದಾಗ ಆ ಬ್ರಾಹ್ಮಣ ಸ್ನೇಹಿತನಿಗೆ ಹೋಗಿ ಬರುವುದಾಗಿ ತಿಳಿಸಿ ಅವನೊಡನೆ ಸಂಭಾಷಿಸಲು ಕೂಡ ಅವಕಾಶವಿಲ್ಲ ಎನಲು ಆತ ತನ್ನ ಜೋಬಿನಲ್ಲಿದ್ದ ಚಿಕ್ಕ ಶ್ರೀ ರಾಘವೇಂದ್ರ ಸ್ವಾಮಿಗಳ ಪಟವನ್ನು ಈತನ ಜೋಬಿಗೆ ವರ್ಗಾಯಿಸಿ, ನಿನಗೆ ಆಪತ್ತು ಬಂದಾಗ ಇವರನ್ನು ಪ್ರಾರ್ಥಿಸಿಕೊ" ಎಂದು ಹೇಳಿ ಹೊರಟನಂತೆ. ಆದರೆ ಈ ಮಿಲಿಟರಿಯವನಿಗೆ ಶ್ರೀ ರಾಯರಲ್ಲಿ ಭಕ್ತಿ ಇಲ್ಲದಿದ್ದರೂ ಸ್ನೇಹಿತನಲ್ಲಿದ್ದ ಅಪಾರ ವಿಶ್ವಾಸಕ್ಕಾಗಿ ಅದನ್ನು ಪುರಸ್ಕರಿಸಿದ.

ಆ ಮಿಲಿಟರಿ ಅಧಿಕಾರಿ ಅಸ್ಸಾಂ ಗಡಿ ಸೇರಿ ಇರಲು ಸ್ಥಳಾವಕಾಶವಿಲ್ಲದೇ ಮೈದಾನದಲ್ಲಿ ಗುಡಾರ ಹಾಕಿಕೊಂಡು ಶಿಬಿಗಾಗಿ ತಾನು ಹೊರಗಡೆ ಒಂದು ದಾರದ ಮಂಚದ ಮೇಲೆ ಪವಳಿಸಿದ. ಆದರೆ ಮಧ್ಯರಾತ್ರಿ ಹೊರಳಲು ಯತ್ನಿಸಿದಾಗ ಅವನಿಗೆ ಆಗದಿರಲು ಹಾಗೇ ಟಾರ್ಚ್ ಹಾಕಿ ನೋಡಲಾಗಿ ಭಾರಿಯಾದ ಒಂದು ಹಾವು ಇವನ ಕಾಕಿ ಶರಾಯಿ ತೋಳಿನೊಳಗೆ ನುಗ್ಗಿತು. ಅದರ ಬಾಲ ಮಂಚದ ಕೆಳಗೆ ತೂಗಾಡುತ್ತಿತ್ತು ಎಂದ ಆತ, ತಾನಿನ್ನು ಬದುಕಲಾರೆ ಎಂದು ನಿರ್ಧರಿಸುವ ವೇಳೆಗೆ ಸ್ನೇಹಿತನ ಜ್ಞಾಪಕ ಬಂದು ಹಾಗೇ ಅಲುಗಾಡದೇ ಜೋಬಿಗೆ ಕೈ ಹಾಕಿ ಶ್ರೀ ರಾಯರ ಪಟವನ್ನು ಕೈಗೆ ತೆಗೆಕೊಂಡು ಕಣ್ಣಿಗೆ ಒತ್ತಿಕೊಂಡು 'ಮಹಾಸ್ವಾಮಿ, ನಿಮ್ಮ ಮಹಿಮೆ ನನಗೆ ತಿಳಿಯದುದಯು ಮಾಡಿ ಈಗ ಬಂದಿರುವ ಈ ಭಾರೀ ಆಪತ್ತನ್ನು ಪರಿಹರಿಸಿ ಕಾಪಾಡಿ' ಎಂದು ಬೇಡಿದ ಕೂಡಲೇ ಆಹಾ! ಏನು ವಿಚಿತ್ರ ಆ ಹಾವು ಹಿಂದೆ ಹಿಂದೆ ಸರಿದು ನಿಧಾನವಾಗಿ ಸಮೀಪದ ಬೇಲಿ ಸೇರಿತು. ಆ ಕೂಡಲೆ ಆತ ಎಲ್ಲರನ್ನೂ ಎಬ್ಬಿಸಿದಾಗಲೂ ಆ ಹಾವು ಅಲ್ಲೇ ಇತ್ತು, ಆದರೆ ಗುರು ಆಜ್ಞಾಪರಿಪಾಲಿಸಿದ ಆ ಹಾವು ಹೊಡೆಯದಂತೆ ಎಚ್ಚರಿಸಿ, ಅಂದಿನಿಂದ ಸದಾ ಶ್ರೀ ರಾಯರ ಸ್ಮರಣೆ ಮಾಡುತ್ತಾ ಎಲ್ಲಿ ಅವರ ಭಜನೆ ನಡೆಯುತ್ತದೆಯೋ ಅಲ್ಲಿಗೆ ತಾನಾಗಿ ಹೋಗುವ ಪದ್ಧತಿ ಇಟ್ಟುಕೊಂಡಿರುವುದಾಗಿಯೂ ತನ್ನ ಸಂಬಳದ 1/4 ಭಾಗ ಶ್ರೀ ರಾಯರಿಗೆ ವಿನಿಯೋಗಿಸುತ್ತಿರುವುದಾಗಿಯೂ ತಿಳಿಸಿದ.

ನೋಡಿದಿರಾ ಶ್ರೀ ರಾಯರ ಮಹಿಮೆ ಎಷ್ಟೋ ನಾನರಿಯೆ

ಕಂದಮ್ಮನಿಗೂ ಅನುಗ್ರಹಿಸಿದರು

ಶ್ರೀ ರಾಯರ ಕರುಣೆಗೆ ಮಿತಿ ಹೇಳಲಾಗದು. ಅವರು ಖಂಡಿತ ಕಲಿಯುಗದ ಕಾಮಧೇನು ಕಲ್ಪ ವೃಕ್ಷರು. ಚಿಕ್ಕ ಮಕ್ಕಳಿಂದ ದೊಡ್ಡವರವರೆಗೂ ಅನುಗ್ರಹಿಸುವ ದಯಾ ಮೂರ್ತಿಗಳು, ಒಮ್ಮೆ ಒಂದು ಬೆಳಿಗ್ಗೆ ನಾನು ಮಂತ್ರಾಲಯದಲ್ಲಿ ಶ್ರೀ ರಾಯರಿಗೆ ಸೇವೆ ಮಾಡುತ್ತಲಿದ್ದಾಗ ಶ್ರೀ ರಾಯರ ಮೂಲ ವೃಂದಾವನದ ಎದುರಲ್ಲಿ ಅಂದರೆ ಶ್ರೀ ಹನುಮಂತ ದೇವರಿಗೂ ಶ್ರೀ ರಾಯರ ಮೂಲ ವೃಂದಾವನಕ್ಕೂ ಮಧ್ಯೆ ಇರುವ ಕಂಬದ ಬುಡದಲ್ಲಿ ಒಂದು 4-5 ವರ್ಷದ ಹೆಣ್ಣು ಮಗು ಬಂದು ನಿಂತುಕೊಂಡು ಘಟ್ಟಿಯಾಗಿ "ನನಗೆ ಗೊಂಬೆ ಬೇಕು" ಎಂದು ಹೇಳುತ್ತಾ ಅಳುತ್ತಿತ್ತು. ವಿಚಾರಿಸಿದಾಗ ಬಡವನಾದ ಮಕ್ಕಳೊಂದಿಗನಾದ ಬಿಜಾಪುರ ಜಿಲ್ಲೆಗೆ ಸೇರಿದ ಒಬ್ಬ ಪ್ರೈಮರಿ ಸ್ಕೂಲ್ ಮೇಷ್ಟ್ರು ಒಬ್ಬರ ಮಗಳು ಆ ಹುಡುಗಿಯಾಗಿದ್ದಳು. ಹುಬ್ಬಳ್ಳಿ ಛತ್ರಕ್ಕೆ ಬಂದಿದ್ದ ಶ್ರೀಮಂತನೊಬ್ಬನ ಹೆಣ್ಣು ಮಗು ಕಣ್ಣು ಮುಚ್ಚುವ ಹಾಗೂ ಎದ್ದಾಗ ಅಳುವಂಥ ವಿಚಿತ್ರಗೊಂಬೆ ಒಂದನ್ನು ಎತ್ತುಕೊಂಡಿತ್ತು. ಅದನ್ನು ಈ ಉಪಾಧ್ಯಾಯರ ಮಗು ಕಿತ್ತುಕೊಳ್ಳಲು ಹೋದಾಗ ತಾಯಿ ಚೆನ್ನಾಗಿ ಹೊಡೆದು 'ನಾವು ಬಡವರು ಅಂಥಹ ಗೊಂಬೆ ಕೊಳ್ಳುವ ಯೋಗ್ಯತೆ ಇಲ್ಲ' ಎಂದು ಜಭರಿಸಿ ಅಳುತ್ತಿದ್ದ ಮಗುವನ್ನು ವೃಂದಾವನದ ಹತ್ತಿರ ಎತ್ತಿಕೊಂಡು ಬಂದು 'ನಿನಗೆ ಅಂಥಹ ಗೊಂಬೆ ಬೇಕಾದರೆ ಶ್ರೀ ರಾಯರನ್ನು ಕೇಳು' ಎಂದು ವ್ಯಂಗವಾಗಿ ಗದರಿಸಿ, ಎತ್ತಿ ಕುಕ್ಕಿದಳು. ಆ ಮಗುವಾದರೋ ತಾಯಿಯ ಮಾತನ್ನು ನಂಬಿ ವೃಂದಾವನದ ಕಡೆನೋಡುತ್ತಾ "ಗುರುರಾಜ ಗೊಂಬಿ ಬೇಕು – ಕಣ್ ಕಣ್ ಬಿಡೋ ಗೊಂಬಿಬೇಕು....ಅಳೋಗೊಂಬಿಬೇಕು" ಎನ್ನುತ್ತಾ ಅಳುತ್ತಿತ್ತು. ಆ ಹೊತ್ತಿಗೆ ಹೈದರಾಬಾದಿನಿಂದ ಬಂದ ಶ್ರೀಮಂತ ದಂಪತಿಗಳು ದಾರಿಯಲ್ಲಿ ಒಂದು ಅಂಗಡಿಗೆ ಹೋದಾಗ ಅದರ ಮಾಲೀಕ ಒಂದು ವಿಚಿತ್ರಗೊಂಬೆಯನ್ನು ಅವರಿಗಿತ್ತ. ಇದಕ್ಕೆ ಕಡಿಮೆ ಬೆಲೆ ಹಾಕುತ್ತೇನೆ ಇಟ್ಟುಕೊಳ್ಳಿ ಮಕ್ಕಳ ಆಟಕ್ಕೆ ಬೇಕಾಗುತ್ತೆ ಎಂದ. ಮದುವೆಯಾಗಿ 18 ವರ್ಷಗಳಾದರೂ ಸಂತಾನವಿಲ್ಲದ ಆ ದಂಪತಿಗಳು ಸಂತಾನ ನಿಮಿತ್ತ ಯಾಚಿಸಲು ಮಂತ್ರಾಲಯಕ್ಕೆ ಹೊರಟಿದ್ದರು. ಏನೋ ಈ ಗೊಂಬೆ ತೆಗೆದುಕೊಂಡ ಘಳಿಗೆ ಇಂದಲಾದರೂ ಅದನ್ನಿಟ್ಟುಕೊಂಡ್ರೆ

ಆಡುವ ಮಗುವಾಗ ಬಹುದೆಂಬ ಆಶಾಕಿರಣದ ಭವಿಷ್ಯವನ್ನು ಚಿಂತಿಸಿ ಆ ಗೊಂಬೆಯನ್ನು ಕೊಂಡುಕೊಂಡು ತಮ್ಮ ಮೋಟಾರಿನಲ್ಲಿಟ್ಟಿದ್ದರು. ಆ ದಂಪತಿಗಳು ಬಂದು ರಾಯರ ಎದುರು ನಿಂತಾಗ ಅವರ ಕಾಲಿನ ಸಮೀಪದಲ್ಲಿ ಏಕಾಂಗಿಯಾಗಿ ಅಳುತ್ತಿದ್ದ ಈ ಮಗುವನ್ನು ನೋಡಿ ಕರುಣೆಯಿಂದ ಕಾರಿಗೆ ಹೋಗಿ ತಮ್ಮಲ್ಲಿದ್ದ ಆ ಗೊಂಬೆಯನ್ನು ಕೊಟ್ಟರು. ಆ ಗೊಂಬೆ ಈ ಮಗು ಯಾಚಿಸಿದ್ದ ಗೊಂಬೆಯೇ ಆಗಿತ್ತು. ಕೂಡಲೇ ಆನಂದದಿಂದ ಕಿರುಚುತ್ತಾ, ನಗುತ್ತಾ ಗೊಂಬೆಯೊಡನೆ ಓಡುತ್ತಾ, "ಅಮ್ಮಾ ಶ್ರೀ ರಾಯರು ನನಗೆ ಬೇಕಾದ ಗೊಂಬೆ ಕೊಟ್ಟೇ ಕೊಟ್ರು ನೋಡಿದ್ಯಾ – ನೀನು ಕೆಟ್ಟೋಳು ನನ್ಗೆ ಕೊಡದೆ – ರಾಯರು ಬಹಳ ಒಳ್ಳೆಯವರು ನನಗೆ ಗೊಂಬೆ ಕೊಟ್ರು – ನಾನು ಮನೆಗೆ ಬರಲ್ಲ – ರಾಯರ ಹತ್ತಿರವೇ ಇದ್ದುಬಿಡುತ್ತೇನೆ" ಅಂದಿತು. ಆ ತಾಯಿ – ತಂದೆಗಳು ಘಟ್ಟಿಯಾಗಿ ಅಳುತ್ತಾ ಶ್ರೀ ರಾಯರ ಕಾರುಣ್ಯವನ್ನು ಕೊಂಡಾಡಿದರು. ಈ ದೃಶ್ಯ ನೋಡುವ ಮಹಾಭಾಗ್ಯ ಅಂದು ನನಗಿತ್ತು." ಎಲ್ಲರೂ ಹೈದರಾಬಾದ್ ದಂಪತಿಗಳನ್ನು ಕೊಂಡಾಡಿದರು. ಮುಂದೆ ಮೂರು ವರ್ಷಗಳ ನಂತರ ನಾನು ಆರಾಧನೆಗೆ ಮಂತ್ರಾಲಯಕ್ಕೆ ಹೋಗಿದ್ದಾಗ ಆ ದಂಪತಿಗಳು ಒಂದೂವರೆ ವರ್ಷದ ಗಂಡು ಮಗುವನ್ನು ಕರೆತಂದು ಭಾರೀ ಉತ್ಸವ ಮಾಡಿಸಿದರು.

ನೋಡಿದಿರಾ ನಮ್ಮ ಶ್ರೀ ರಾಯರ ವಿಚಿತ್ರ ಮಹಿಮಾ !

ಸತ್ಕಾರ್ಯ ಧುರಂಧರ ಪರಮಪೂಜ್ಯ ಶ್ರೀ ಶ್ರೀ ಸುಜಯೀಂದ್ರತೀರ್ಥರು

ಲೇ|| ಕಟ್ಟೆವಾದಿರಾಜ ಆಚಾರ್ಯ
ಶಿರೋಮಣಿ, ವಿದ್ವಾನ್ ಶ್ರೀ ರಾಘವೇಂದ್ರಸ್ವಾಮಿ ಮಠ, ಉಡುಪಿ.

ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಸಂಸ್ಥಾನ ಮಂತ್ರಾಲಯ ಶ್ರೀ ರಾಘವೇಂದ್ರಸ್ವಾಮಿ ಮಠಾಧೀಶರಾಗಿ, ಗುರುಸಾರ್ವಭೌಮರ ವಿದ್ಯಾಸಿಂಹಾಸನದಲ್ಲಿ 23 ವರ್ಷಗಳ ಕಾಲ ವಿರಾಜಮಾನರಾಗಿದ್ದು ಆಧ್ಯಾತ್ಮಿಕ, ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ರಂಗಗಳಲ್ಲಿ ಗಣನೀಯವಾದ ಕಾರ್ಯಗೈದು ಕೀರ್ತಿಶೇಷರಾದ ಪೂಜ್ಯ ಶ್ರೀ ಸುಜಯೀಂದ್ರತೀರ್ಥರ ನೆನಪು ಭಕ್ತವೃಂದದ ಹೃದಯದಲ್ಲಿ ಯಾವಾಗಲೂ ಹಸಿರಾಗಿಯೇ ಉಳಿಯುವುದು.

ನ್ಯಾಯವೇದಾಂತಾದಿ ಶಾಸ್ತ್ರಗಳಲ್ಲಿ ಶ್ರೇಷ್ಠ ವಿದ್ವಾಂಸರಾಗಿದ್ದ ಈ ಮಹನೀಯರು ಪೂರ್ವಾಶ್ರಮದಲ್ಲಿಯೇ ಮಂತ್ರಾಲಯ ಕ್ಷೇತ್ರದಲ್ಲಿ ಆಡಳಿತಗಾರರಾಗಿದ್ದು ತಮ್ಮ ಅಪೂರ್ವ ಕಾರ್ಯ ದಕ್ಷತೆಯಿಂದ ಮಂತ್ರಾಲಯದಲ್ಲಿ ಸುವ್ಯವಸ್ಥಿತ ರೀತಿಯಿಂದ ಕಾರ್ಯಕಲಾಪ ನಡೆಯುವಂತೆ ಹಾಗೂ ಕ್ಷೇತ್ರದ ಪ್ರಗತಿಯಾಗುವಂತೆ ಅಹರ್ನಿಶಿ ಪ್ರಯತ್ನಿಸಿದ್ದರು.

ಇವರ ಶಾಸ್ತ್ರಪಾಂಡಿತ್ಯವನ್ನು, ಧಾರ್ಮಿಕ ಲೌಕಿಕ ಕಾರ್ಯ ಸಾಮರ್ಥ್ಯವನ್ನು ಅಸಾಧಾರಣವಾದ ಶ್ರೀಹರಿ ಗುರುಭಕ್ತಿಯನ್ನು ಕಂಡು ಮೆಚ್ಚಿದ ಪೂಜ್ಯ ಶ್ರೀ ಶ್ರೀ ಸುಯಮೀಂದ್ರತೀರ್ಥರು ಇವರು ಸಂಸ್ಥಾನದ ಗೌರವವನ್ನು ಚೆನ್ನಾಗಿ ಬೆಳಗಿಸಬಲ್ಲರೆಂದು ದೃಢವಿಶ್ವಾಸ ಹೊಂದಿ ಇವರಿಗೆ ಶ್ರೀ ಸುಜಯೀಂದ್ರತೀರ್ಥ ಎಂಬ ಯೋಗ್ಯ ಅಭಿಧಾನವನ್ನು ನೀಡಿ ತಮ್ಮ ಸಂಸ್ಥಾನದ ಉತ್ತರಾಧಿಕಾರಿಯನ್ನಾಗಿ ಮಾಡಿದರು.

ಸನ್ಯಾಸ ಸ್ವೀಕಾರವಾದ ನಂತರ ಶ್ರೀಹರಿವಾಯುಗಳ ಹಾಗೂ ಗುರುರಾಜರ ಪರಮಾನುಗ್ರಹದಿಂದ, ತಮ್ಮ ಪೂರ್ವಕಾರ್ಯ ಚಾತುರ್ಯದಿಂದ, ಧಾರ್ಮಿಕ, ಲೌಕಿಕ, ಆಧ್ಯಾತ್ಮಿಕ, ಸಾಂಸ್ಕೃತಿಕ ರಂಗಗಳಲ್ಲಿ ಜಯಶೀಲರಾಗಿ ತಮ್ಮ ಗುರುಗಳಿತ್ತ 'ಸುಜಯೀಂದ್ರ' ಎಂಬ ಶುಭನಾಮಧೇಯವನ್ನು ಸಾರ್ಥಕಪಡಿಸಿಕೊಂಡು ಮೆರೆದ ಪುಣ್ಯಾತ್ಮರು ಇವರು.

ಇವರು ಪೀಠಾಧಿಪತಿಗಳಾಗಿದ್ದ ಕಾಲವನ್ನು ಸುವರ್ಣ ಯುಗವೆಂದು ಹೇಳಬಹುದು. ಆಗ ಸಂಸ್ಥಾನವು ಆರ್ಥಿಕವಾಗಿ ವಿಶೇಷ ಪ್ರಗತಿಯನ್ನು ಹೊಂದಿತು. ಇದಕ್ಕೆ ಶ್ರೀಗಳವರ ಕಾರ್ಯ ವಿಚಕ್ಷಣತೆಯೇ ಕಾರಣ.

ಶ್ರೀಪಾದಂಗಳವರು ಹೈದ್ರಾಬಾದ್, ಬೆಂಗಳೂರು ಮೊದಲಾದ ಮಹಾನಗರಗಳಲ್ಲಿ ಹಾಗೂ ರಾಯಚೂರು, ಬಾಗಲಕೋಟೆ ಮೊದಲಾದ ಸಣ್ಣ ನಗರಗಳಲ್ಲಿ ಲಕ್ಷಾಂತರ ರುಪಾಯ ವೆಚ್ಚದಿಂದ ಭವ್ಯವಾದ ಮಠಗಳನ್ನು ಕಟ್ಟಿಸಿ ಅಲ್ಲಿ ಶ್ರೀ ರಾಘವೇಂದ್ರ ಗುರುಸಾರ್ವಭೌಮರ ವೃಂದಾವನವನ್ನು ಪ್ರತಿಷ್ಠಾಪಿಸಿ ಸಾವಿರಾರು ಭಕ್ತರು ತಮ್ಮ ತಮ್ಮ ಊರಲ್ಲೇ ಗುರುರಾಜರ ಸೇವೆ ಮಾಡಿ ಅನುಗ್ರಹಕ್ಕೆ ಪಾತ್ರರಾಗಲು ಅವಕಾಶ ಮಾಡಿಕೊಟ್ಟರು.

ಶ್ರೀ ರಾಘವೇಂದ್ರ ಗುರುಸಾರ್ವಭೌಮರ ಮೂಲಸ್ಥಾನವಾದ ಮಂತ್ರಾಲಯ ಆಧುನಿಕ ಸೌಕರ್ಯಗಳನ್ನೊಳಗೊಂಡು ಅಭಿವೃದ್ಧಿಯ ತುತ್ತತುದಿಗೇರಲು ಅಹೋರಾತ್ರಿ ಪ್ರಯತ್ನಿಸಿ ಸಫಲರಾದ ಧನ್ಯಾತ್ಮರು ಶ್ರೀಪಾದರು.

ಶ್ರೀಪಾದರಲ್ಲಿ, ಶ್ರೀಹರಿ ಗುರುಗಳ ಹಾಗೂ ಶ್ರೀ ಗುರುರಾಘವೇಂದ್ರರ ವಿಶೇಷವಾದ ಕೃಪಾಕಟಾಕ್ಷವಿದ್ದುದರಿಂದಲೇ ಶ್ರೀಗಳವರು ಸಕಲ ಕಾರ್ಯಗಳಲ್ಲೂ ಇತರರು ಅಚ್ಚರಿಪಡುವ ರೀತಿಯಲ್ಲಿ ಯಶಸ್ವಿಯಾಗುತ್ತಿದ್ದರು.

ಮಂತ್ರಾಲಯಕ್ಕೆ ಪ್ರತಿನಿತ್ಯ ಬರುವ ಸಾವಿರಾರು ಭಕ್ತರ ಸೌಕರ್ಯಕ್ಕಾಗಿ ವಸತಿಗೃಹಗಳ ವ್ಯವಸ್ಥೆ, ಭಕ್ತರಿಗೆ ಸಕಾಲದಲ್ಲಿ ಅನ್ನದಾನದ ಏರ್ಪಾಡು, ಸೇವಾಕಾರ್ಯಗಳಲ್ಲಿ ಭಾಗವಹಿಸಲು ವ್ಯವಸ್ಥೆ, ಮೊದಲಾದ ವಿಷಯಗಳಲ್ಲಿ ಶ್ರೀಗಳವರಿಗೆ ವಿಶೇಷವಾದ ಕಳಕಳಿ. ಪ್ರತಿಯೊಂದು ವಿಷಯದಲ್ಲೂ ಶ್ರೀಗಳವರು ವಿಶೇಷವಾಗಿ ಮೇಲ್ವಿಚಾರಣೆ ನಡೆಸುತ್ತಿದ್ದರು.

ಮಂತ್ರಾಲಯ ಕ್ಷೇತ್ರಕ್ಕೆ ಬರುವ ಭಕ್ತಾದಿಗಳ ವಸತಿಗಾಗಿ, ವಿವಾಹಾದಿ ಶುಭಕಾರ್ಯಗಳಿಗಾಗಿ, ವ್ಯಾಪಾರ ವಹಿವಾಟುಗಳ ಅನುಕೂಲತೆಗಾಗಿ ಭವ್ಯವಾದ ಅನೇಕ ಕಟ್ಟಡಗಳನ್ನು ನಿರ್ಮಾಣ ಮಾಡಿಸಿ ಅಪ್ಪಣಾಚಾರ್ಯರು ಶ್ರೀ ರಾಘವೇಂದ್ರ ಮಂಗಲಾಷ್ಟಕದಲ್ಲಿ 'ದ್ವಿಜಪ್ರಾಂಗವಾಲಯಲಸನ್ಮಂತ್ರಾಲಯಾಖ್ಯೇಪ್ಸುರೇ' ಎಂದು ಬಣ್ಣಿಸಿದ ಮಾತನ್ನು ಯಥಾರ್ಥಗೊಳಿಸಿ, ಹಳ್ಳಿಯಂತಿದ್ದ ಮಂತ್ರಾಲಯವನ್ನು ನಿಜವಾಗಿ ಪುರವನ್ನಾಗಿ ಮಾಡಿ ಭಕ್ತವೃಂದದ ಮನ್ನಣೆ ಪಡೆದು ಶ್ರೀಗಳವರು ಗುರುರಾಜರ ವಿಶೇಷಾನುಗ್ರಹಕ್ಕೆ ಪಾತ್ರರಾದರು. ಶ್ರೀಗಳವರು ಅವಶ್ಯಕ ಸಂದರ್ಭಗಳಲ್ಲಿ ದಿಗ್ವಿಜಯ ಸಂಚಾರ ಮಾಡುತ್ತಿದ್ದರೂ, ಹೆಚ್ಚಿನ ಕಾಲವನ್ನು ಮಂತ್ರಾಲಯದಲ್ಲೇ ಕಳೆದು ದಾನಿಗಳಾದ ಭಕ್ತರಿಗೆ ಪ್ರಚೋದನೆ ನೀಡುತ್ತಾ ಮಂತ್ರಾಲಯ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಯಲ್ಲಿ ತಮ್ಮ ಗಮನವನ್ನು ಕೇಂದ್ರೀಕರಿಸಿದ್ದರು.

ಇಷ್ಟೆಲ್ಲಾ ಸಂಸ್ಥಾನದ ಆರ್ಥಿಕಾಭಿವೃದ್ಧಿ ಹಾಗೂ ಕ್ಷೇತ್ರಾಭಿವೃದ್ಧಿಯ ಕಡೆಗೆ ಶ್ರೀಗಳವರು ತೋರಿಸಿದ ಆಸಕ್ತಿಯಾದರೆ, ಸಂಸ್ಕೃತ ವಿದ್ಯಾಪ್ರಚಾರ, ತತ್ತ್ವಜ್ಞಾನಪ್ರಸಾರರಂಗಗಳಲ್ಲಿ ಶ್ರೀಗಳವರು ಗೈದ ಕಾರ್ಯ ಅತ್ಯಂತ ಅಭಿನಂದನೀಯವಾದದ್ದು.

ಶ್ರೀಗಳವರು ಹಿಂದೂ ಧಾರ್ಮಿಕದತ್ತಿ ವಿಭಾಗದ ಅಧಿಕಾರಿಗಳಿಗೆ ಮನಗಾಣಿಸಿ, ಒಪ್ಪಿಸಿ, ಶ್ರೀ ರಾಘವೇಂದ್ರ ಗುರುಸಾರ್ವಭೌಮರಿಗೆ ಭಕ್ತರು ಸಲ್ಲಿಸುವ ಸೇವೆ ಕಾಣಿಕೆಗಳಲ್ಲಿ ಒಂದು ಅಂಶವನ್ನು 'ವಿದ್ಯಾನಿಧಿ'ಯನ್ನಾಗಿ ಶೇಖರಿಸಿ ಅದನ್ನು ಪ್ರತ್ಯೇಕವಾಗಿ ಠೇವಣಿಯಿರಿಸಿ ಅದರ ಬಡ್ಡಿಯಿಂದ ಪ್ರತಿವರ್ಷ ಎರಡು ಬಾರಿ ವಿದ್ವತ್ಸಭೆ ನಡೆಯುವಂತೆ ಹಾಗೂ ಮಂತ್ರಾಲಯದಲ್ಲಿ ಶ್ರೀ ಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠವನ್ನು ಸ್ಥಾಪಿಸಿ ಸುವ್ಯವಸ್ಥಿತವಾಗಿ ನಡೆಯುವಂತೆ ಬಳ್ಳಾರಿ, ಮೈಸೂರು, ಉಡುಪಿ, ರಿತ್ತಿ ಮೊದಲಾದ ಶಾಖಾ ಮಠಗಳಲ್ಲೂ ಸಂಸ್ಕೃತ ವಿದ್ಯಾಪೀಠದ ಶಾಖೆಗಳು ನಡೆಯುವಂತೆ ವ್ಯವಸ್ಥೆ ಮಾಡಿದರು. ವಿದ್ಯಾನಿಧಿಯ ಮೊತ್ತ ಇಂದು ಒಂದು ಕೋಟಿ ರುಪಾಯಿಗಳಷ್ಟಾಗಿದೆಯೆಂಬುದು ಗಮನಾರ್ಹ.

ಶ್ರೀಮಠದ ಸಮೀರ ಸಮಯ ಸಂವರ್ಧಿನೀ ಸಭೆಯ ಒಂದು ಅಧಿವೇಶನ ಪ್ರತಿವರ್ಷ ಮಂತ್ರಾಲಯದಲ್ಲಿ ಶ್ರೀ ರಾಘವೇಂದ್ರ ಗುರುಗಳ ಆರಾಧನಾ ಕಾಲದಲ್ಲಿ, ಇನ್ನೊಂದು ಅಧಿವೇಶನ ಬೇರೆ ಕ್ಷೇತ್ರದಲ್ಲಿ ಅಥವಾ ಮಂತ್ರಾಲಯದಲ್ಲಿ ಬೇರೆ ಸಮಯದಲ್ಲಿ ಶ್ರೀಪಾದರ ಕಾಲದಲ್ಲಿ ವೈಭವದಿಂದ ನಡೆಯುತ್ತಿತ್ತು. ಇಂದಿಗೂ ನಡೆಯುತ್ತಿದೆ.

ಈ ವಿದ್ವತ್ಸಭೆಗಳಲ್ಲಿ ಶ್ರೀಮಠಸ್ಥ ಪಂಡಿತರೂ ಭಾಗವಹಿಸಿ ನ್ಯಾಯ, ವೇದಾಂತ, ವ್ಯಾಕರಣ, ಮೀಮಾಂಸಾ

ಶಾಸ್ತ್ರಗಳಲ್ಲಿ ವಾಕ್ಯಾರ್ಥ ವಿಚಾರ ನಡೆಸುತ್ತಿದ್ದಾಗ, ಶ್ರೀಗಳವರು ತಮ್ಮ ಆರೋಗ್ಯ ಅಷ್ಟು ಉತ್ತಮವಿಲ್ಲದಿದ್ದರೂ ಆದ್ಯಂತವಾಗಿ ಭಾಗವಹಿಸಿ ವಿದ್ವಾಂಸರಿಗೆ ಉತ್ತೇಜನ ನೀಡುತ್ತಿದ್ದ ದೃಶ್ಯ ಅವಿಸ್ಮರಣೀಯವಾದದ್ದು.

ಶ್ರೀ ಸುಜಯೀಂದ್ರತೀರ್ಥ ಶ್ರೀಪಾದರ ಪೂರ್ವಾಶ್ರಮ ಪುತ್ರರಾದ ಪಂಡಿತರತ್ನಂ ರಾಜಾಗಿರಿಯಾಚಾರ್ಯರು ಸಭಾ ಕಾರ್ಯದರ್ಶಿಗಳಾಗಿ ವಾಕ್ಯಾರ್ಥ ಗೋಷ್ಠಿಗಳನ್ನು ವ್ಯವಸ್ಥಿತ ರೀತಿಯಲ್ಲಿ ನಡೆಸಿ, ಇಂದಿಗೂ ನಡೆಸುತ್ತಾ, ಪಂಡಿತರ ಪ್ರೇಮಾದರಗಳಿಗೆ ಪಾತ್ರರಾಗಿದ್ದಾರೆ.

ಶ್ರೀಗಳವರು ಮಂತ್ರಾಲಯದಲ್ಲಿ ಸ್ಥಾಪಿಸಿದ ಶ್ರೀ ಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠದಲ್ಲಿ ಬೇರೆ ಬೇರೆ ಕಡೆಯ ನೂರಾರು ವಿದ್ಯಾರ್ಥಿಗಳು ಸಂಸ್ಕೃತ ಶಿಕ್ಷಣ ಪಡೆಯುತ್ತಿದ್ದಾರೆ. ಉಚಿತ ಅಶನ ವಸತಿ ಸೌಕರ್ಯಗಳನ್ನು ಒದಗಿಸಿ ವಿದ್ಯಾರ್ಥಿಗಳ ಪೋಷಣೆ ನಡೆಯುತ್ತಿದೆ.

ಹಾಗೆಯೇ ಶಾಖಾ ಮಠಗಳಲ್ಲೂ ವಿದ್ಯಾಪೀಠದ ಶಾಖೆಗಳನ್ನು ಸ್ಥಾಪಿಸಿ ಸಂಸ್ಕೃತ ಶಿಕ್ಷಣದ ಏರ್ಪಾಡು ಮಾಡಿದ್ದರಿಂದ ಶಾಲೆ ಕಾಲೇಜುಗಳಲ್ಲಿ ಓದುವ ಮಕ್ಕಳು ಬೆಳಿಗ್ಗೆ ಅಥವಾ ಸಂಜೆ ತಮ್ಮ ಬಿಡುವಿನ ವೇಳೆಯಲ್ಲಿ ಸಂಸ್ಕೃತ ಶಿಕ್ಷಣ ಪಡೆಯುವ ಅವಕಾಶ ದೊರೆತಿದೆ.

ಸ್ವತಃ ಪಂಡಿತೋತ್ತಮರಾದ ಪೂಜ್ಯ ಶ್ರೀ ಸುಜಯೀಂದ್ರತೀರ್ಥರಿಗೆ ಪಂಡಿತವೃಂದದಲ್ಲಿ ಪ್ರೀತಿ, ಭಕ್ತಿಯುತ ಎಷ್ಟಿತ್ತು ಎಂಬುದನ್ನು ಸಭೆಗಳಲ್ಲಿ ಭಾಗವಹಿಸುತ್ತಿದ್ದ ಪಂಡಿತರೆಲ್ಲರೂ ಬಲ್ಲರು

1980 ಜನವರಿಯಲ್ಲಿ ಸೋದೆ ವಾದಿರಾಜ ಮಠದ ಶ್ರೀ ಶ್ರೀ ವಿಶ್ವೋತ್ತಮತೀರ್ಥ ಶ್ರೀಪಾದರ ಪರ್ಯಾಯ ಕಾಲದಲ್ಲಿ ಉಡುಪಿಯಲ್ಲಿ ನಡೆದ ಶ್ರೀ ವಾದಿರಾಜ ಪಂಚಶತಾಬ್ದಿಯ ಸಮಾರಂಭಕ್ಕೆ ಅಧ್ಯಕ್ಷರಾಗಿ ಆಗಮಿಸಿದ ಶ್ರೀ ಶ್ರೀ ಸುಜಯೀಂದ್ರತೀರ್ಥರು ಉಡುಪಿಯ ಶ್ರೀಕೃಷ್ಣ ಪರಮಾತ್ಮನಿಗೆ ತಮ್ಮ ಸಂಸ್ಥಾನದ ವತಿಯಿಂದ ಬ್ರಹ್ಮೋತ್ಸವಾದಿ ವಿಶಿಷ್ಟ ಸೇವೆ ಸಲ್ಲಿಸಿದ್ದಲ್ಲದೆ, ವಿಶೇಷ ವೈಭವದಿಂದ ವಿದ್ವತ್ಸಭೆಯನ್ನು ನಡೆಸಿ ಅನೇಕ ವಿದ್ವಾಂಸರಿಗೆ ಯೋಗ್ಯ ಸಂಭಾವನೆಯನ್ನಿತ್ತು ಗೌರವಿಸಿದರು. ಆ ಸಂದರ್ಭದಲ್ಲಿ ಉಡುಪಿಯ ಶ್ರೀ ರಾಘವೇಂದ್ರ ಮಠದಲ್ಲೂ ಶ್ರೀ ಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠದ ಶಾಖೆಯನ್ನು ಸ್ಥಾಪಿಸಿ ಸಂಸ್ಕೃತ ಶಿಕ್ಷಣಕ್ಕೆ ಉತ್ತೇಜನ ನೀಡಿದರು

ಈ ರೀತಿ ಸರ್ವ ವಿಧದಲ್ಲೂ ಸಂಸ್ಥಾನದ ಕೀರ್ತಿ ಪ್ರತಿಷ್ಠೆಗಳನ್ನು ಹೆಚ್ಚಿಸಿ ಪಂಡಿತ ಮಂಡಳಿಯ ಪೋಷಕರಾಗಿದ್ದ, ಶ್ರೀ ಮೂಲರಾಮದೇವರ, ಶ್ರೀಮನ್ಮಧ್ವಾಚಾರ್ಯರ ಶ್ರೀ ರಾಘವೇಂದ್ರ ಗುರುಗಳ ಅನುಪಮ ಸೇವೆಗೈದು ಹರಿಪದ ಸೇರಿದ ಶ್ರೀ ಶ್ರೀ ಸುಜಯೀಂದ್ರತೀರ್ಥರು ಮಾಧ್ವಯತಿ ವೃಂದದಲ್ಲಿ ಆದರ್ಶಪ್ರಾಯರಾಗಿ ಬೆಳಗಿದ ಮಹಾನುಭಾವರು.

ದ್ವೈತಸಾಮ್ರಾಜ್ಯಾಧಿಪತಿಗಳಾದ

ಶ್ರೀಮತ್ಸುಜಯೀಂದ್ರತೀರ್ಥ

ಶ್ರೀಪಾದಂಗಳವರು

ಲೇಖಕರು :

ಶ್ರೀಪಾದಕಿಂಕರ ಶ್ರೀ ರಾಜಾ ಎಸ್. ಗುರುರಾಜಾಚಾರ್ಯ

ನಂಜನಗೂಡು

ಪರಮಪಾವನವಾದ ಶ್ರೀಪದ್ಮನಾಭರ ಪವಿತ್ರ ಪೀಠದಲ್ಲಿ ವಿರಾಜಿಸುತ್ತಿದ್ದ ಪರಮಪೂಜ್ಯರಾದ ಶ್ರೀಮತ್ಸುಜಯೀಂದ್ರತೀರ್ಥ ಶ್ರೀಪಾದಂಗಳವರ ಬಗ್ಗೆ ಸೂಕ್ಷ್ಮ ಪರಿಚಯ ಮಾಡಿಕೊಡಲು ನಾನು ಪ್ರಯತ್ನಿಸುವುದು 'ಸೂರ್ಯನನ್ನು ಬೊಟ್ಟಿಟ್ಟು ತೋರಿಸಿದಂತೆ' ಹಾಸ್ಯಾಸ್ಪದವಾದರೂ ಕರ್ತವ್ಯಪ್ರಜ್ಞೆಯಿಂದ ಉದ್ಯುಕ್ತನಾಗಿದ್ದೇನೆ.

ಕರ್ನಾಟಕ ಸಾಮ್ರಾಜ್ಯಾಧೀಶನಾದ ಕೃಷ್ಣದೇವರಾಯನಿಗೆ ವಿದ್ಯಾಗುರುಗಳಾಗಿದ್ದ ಪಂಡಿತಪ್ರಕಾಂಡರಾದ ಶ್ರೀ ವೀಣಾ ಕೃಷ್ಣಭಟ್ಟರು [illegible] "ಬೀಗಮುದ್ರೆ" ಮನೆತನದಲ್ಲಿ ಜನಿಸಿದ ಪುಣ್ಯ ಪುರುಷರು. ಜಗದ್ವಿಖ್ಯಾತರಾದ ಶ್ರೀ ಶ್ರೀಪಾದರಾಜರು, ಶ್ರೀ ಸುರೇಂದ್ರತೀರ್ಥರು, ಶ್ರೀ ಬ್ರಹ್ಮಣ್ಯತೀರ್ಥರು, ಶ್ರೀ ವ್ಯಾಸರಾಜ ಗುರುಸಾರ್ವಭೌಮರು ಮತ್ತು ಶ್ರೀ ವೀಣಾ ಕೃಷ್ಣಭಟ್ಟರುಗಳು ಈ ಮಹಾವಂಶದಲ್ಲಿ ಒಂದ ಮಹಾನು ಭಾವರು. ಇವರುಗಳು [illegible] ಅಳಿಯಬರುವುದು. ಶ್ರೀಕೃಷ್ಣಭಟ್ಟರ ಪುತ್ರರು [illegible] ಶ್ರೀ [illegible] ಭಟ್ಟರಿಗೆ ಶ್ರೀನಿವಾಸನ ಅನುಗ್ರಹದಿಂದ, [illegible] ಭಾಗ್ಯಶಾಲಿಗಳು ನಮ್ಮ [illegible] ಶ್ರೀ ಸುಜಯೀಂದ್ರತೀರ್ಥ ಶ್ರೀಪಾದಂಗಳವರು ! ([illegible] ಶ್ರೀ [illegible])

[illegible] ಶ್ರೀ [illegible] ನಾರಾಯಣಾಚಾರ್ಯರ [illegible] ಶ್ರೀ [illegible] ([illegible]). [illegible] ಜಗದ್ವಿಖ್ಯಾತರಾದ ಶ್ರೀ [illegible] ([illegible]) [illegible] ಶ್ರೀ [illegible] ಚಾರ್ಯರು. [illegible] ([illegible] ಶ್ರೀ [illegible] ವಿಜಯೀಂದ್ರ [illegible]) [illegible] ಶ್ರೀ [illegible] ಶ್ರೀ [illegible] ಚಾರ್ಯರು [illegible] "ರಾಜಾ" ಎಂಬ ಬಿರುದನ್ನೂ ಗ್ರಾಮ ಭೂಮಿಗಳನ್ನೂ [illegible] ಮನೆತನಕ್ಕೆ "ರಾಜಾ" ಎಂಬ ಬಿರುದು ಪ್ರಾಪ್ತವಾಯಿತು. [illegible] ಶ್ರೀ [illegible] ಚಾರ್ಯರು (ಶ್ರೀ ಸುಗುಣೇಂದ್ರತೀರ್ಥರು.) ರಾಜಾ.

ಶ್ರೀ ರಾಜಗೋಪಾಲಾಚಾರ್ಯರಿಗೆ ಮೂವರು ಸತ್ಪುತ್ರರು 1. ವೆಂಕಟರಾಘವೇಂದ್ರಾಚಾರ್ಯರು. 2. ಶ್ರೀ ಗುರುರಾಜಾಚಾರ್ಯರು (ಶ್ರೀ ಸುಪ್ರಜ್ಞೇಂದ್ರತೀರ್ಥರು) 3. ರಾಜಾ ಶ್ರೀನಿವಾಸಾಚಾರ್ಯರು. ಹಿರಿಯರಾದ ಶ್ರೀ ವೆಂಕಟರಾಘವೇಂದ್ರಾಚಾರ್ಯರಿಗೂ ಮೂವರು ಸತ್ಪುತ್ರರಾದರು. 1. ಶ್ರೀ ವೇಣುಗೋಪಾಲಾಚಾರ್ಯರು (ಇವರೇ ಶ್ರೀ ಸುಕೃತೀಂದ್ರತೀರ್ಥರು) 2. ಶ್ರೀ ಕೃಷ್ಣಾಚಾರ್ಯರು (ಇವರೇ ಜಗದ್ವಿಖ್ಯಾತರಾದ ಶ್ರೀ ಸುಶೀಲೇಂದ್ರತೀರ್ಥರು.) 3. ಶ್ರೀ ಸುಜ್ಞಾನೇಂದ್ರಾಚಾರ್ಯರು. ಶ್ರೀ ವೇಣುಗೋಪಾಲಾಚಾರ್ಯರ (ಪೂರ್ವಾಶ್ರಮದ ಶ್ರೀ ಸುಕೃತೀಂದ್ರತೀರ್ಥರು) ಸತ್ಪುತ್ರರೇ (ರಾಜಾ ಶ್ರೀನಿವಾಸಮೂರ್ತ್ಯಾಚಾರ್ಯರು) ಶ್ರೀ ಗುರುರಾಜರ ಪರಮಾನುಗ್ರಹಕ್ಕೆ ಪಾತ್ರರಾಗಿ 33 ವರ್ಷಗಳ ಕಾಲ ಶ್ರೀಮದಾಚಾರ್ಯರ ವಿದ್ಯಾಸಿಂಹಾಸನದಲ್ಲಿ ಮಂಡಿಸಿ ವಿಖ್ಯಾತರಾದ ಕೀರ್ತಿಶೇಷ ಶ್ರೀಮತ್ಸುಯಮೀಂದ್ರತೀರ್ಥ ಶ್ರೀಪಾದಂಗಳವರು. ಶ್ರೀಯುತರ ಚಿಕ್ಕಪ್ಪಂದಿರಾದ ಶ್ರೀ ಸುಜ್ಞಾನೇಂದ್ರಾಚಾರ್ಯರಿಗೆ 1. ಶ್ರೀ ರಾಜಗೋಪಾಲಾಚಾರ್ಯರು 2. ರಾಜಾ ಶ್ರೀ ವೆಂಕಟರಾಘವೇಂದ್ರಾಚಾರ್ಯರೆಂಬ ಇಬ್ಬರು ಸತ್ಪುತ್ರರು ಜನಿಸಿದರು. ಶ್ರೀ ವೆಂಕಟರಾಘವೇಂದ್ರಾಚಾರ್ಯರೇ ನಮ್ಮ ಪರಮಪೂಜ್ಯ ಶ್ರೀಮತ್ಸುಜಯೀಂದ್ರತೀರ್ಥ ಶ್ರೀಪಾದಂಗಳವರು ! ಈ ಮಹಾನುಭಾವರು ಕೀಲಕ ಸಂವತ್ಸರದ ಪುಷ್ಯ ಶುಕ್ಲ ಸಪ್ತಮಿ ಭಾನುವಾರ ತಾ|| 29-12-1908ರಲ್ಲಿ ಜನಿಸಿದರು

ಶ್ರೀ ವೆಂಕಟರಾಘವೇಂದ್ರಾಚಾರ್ಯರು ಬಾಲ್ಯದಿಂದಲೂ ಕುಶಾಗ್ರಮತಿಗಳು ಪ್ರತಿಭಾವಂತರು. ಕಾವ್ಯ ನಾಟಕಾಲಂಕಾರ, ವ್ಯಾಕರಣಾದಿಗಳನ್ನು ಶ್ರೀ ಹುಲಿ ಹನುಮಂತಾಚಾರ್ಯರಲ್ಲಿ ವ್ಯಾಸಂಗ ಮಾಡಿದರು. ಶ್ರೀ ಸುಶೀಲೇಂದ್ರತೀರ್ಥರು ತಮ್ಮ ಪೂರ್ವಾಶ್ರಮ ತಮ್ಮಂದಿರ ಮಕ್ಕಳಾದ ಇವರನ್ನು ಶ್ರೇಷ್ಠ ಪಂಡಿತರನ್ನಾಗಿ ಮಾಡಲು ನಿಶ್ಚಯಿಸಿ ಆ ಕಾಲದಲ್ಲಿ ಭಾರತದಲ್ಲೇ ವಿಖ್ಯಾತ ತರ್ಕಶಾಸ್ತ್ರ ಕೋವಿದರಾಗಿದ್ದ ಎಲತ್ತೂರು ಶ್ರೀ ಕೃಷ್ಣಾಚಾರ್ಯರನ್ನು ಶ್ರೀಮಠದಲ್ಲಿ ಇಟ್ಟುಕೊಂಡು ಇವರ ವ್ಯಾಸಂಗಕ್ಕೆ ಅನುಕೂಲ ಮಾಡಿಕೊಟ್ಟರು. ಎಂಟು ವರ್ಷ ಕಾಲ ಅವಿಚ್ಛಿನ್ನವಾಗಿ ಸಮಗ್ರ ತರ್ಕಶಾಸ್ತ್ರವನ್ನೂ, ವಿಶೇಷ ಕ್ರೋಡಪತ್ರಗಳನ್ನೂ ಅಧ್ಯಯನ ಮಾಡಿ ಇವರು ಉತ್ತಮ ಪಂಡಿತರಾದರು. ಶ್ರೀ ಸುಶೀಲೇಂದ್ರತೀರ್ಥರು – ಶ್ರೀ ಸುವ್ರತೀಂದ್ರತೀರ್ಥರು – ಶ್ರೀ ಸುಯಮೀಂದ್ರತೀರ್ಥರುಗಳಲ್ಲಿ ವೇದಾಂತ ಶಾಸ್ತ್ರವನ್ನು ಶ್ರೀಮದಾಚಾರ್ಯ ಪರಂಪರಾಪ್ರಾಪ್ತ ಪಾಠಕ್ರಮವನ್ನನುಸರಿಸಿ ವ್ಯಾಸಂಗ ಮಾಡಿ ಶ್ರೀ ಆಚಾರ್ಯರು ಮಹಾಪಂಡಿತರಾದರು.

ಪ್ರಾಪ್ತವಯಸ್ಕರಾದ ಶ್ರೀ ವೆಂಕಟರಾಘವೇಂದ್ರಾಚಾರ್ಯರಿಗೆ ವಿವಾಹವಾಗಿ ಬಹುವರ್ಷ ಗೃಹಸ್ಥಧರ್ಮವನ್ನು ಪರಿಪಾಲಿಸಿ ಶ್ರೀಹರಿಗುರುಗಳ ಅನುಗ್ರಹದಿಂದ ನಾಲ್ವರು ಪುತ್ರರು, ಈರ್ವರು ಪುತ್ರಿಯರನ್ನು ಪಡೆದರು. ಶ್ರೀ ಆಚಾರ್ಯರು ಕೆಲವರ್ಷ ಗೃಹಸ್ಥಧರ್ಮವನ್ನು ಪರಿಪಾಲಿಸಿ ಜೀವನದ ಸಾರ್ಥಕ್ಯವೇನೆಂದು ಮನಗಂಡು ಪಾರಮಾರ್ಥಿಕ ಸಾಧನೆಯಲ್ಲಿ ಮಗ್ನರಾದರು. ಜ್ಞಾನ ಪಿಪಾಸೆ ಅಭಿವರ್ಧಿಸಿತು. ವೈರಾಗ್ಯ – ಶಾಂತ್ಯಾದಿ ಗುಣಗಳು ಆಚಾರ್ಯರಲ್ಲಿ ಮನೆ ಮಾಡಿದವು. ಶ್ರೀ ಆಚಾರ್ಯರು ಶ್ರೀ ಸಂಚಾರದಲ್ಲೇ ಬಹುಕಾಲವಿದ್ದು ಶ್ರೀ ಮಠದ ಎಲ್ಲ ಚಟುವಟಿಕೆಗಳಲ್ಲೂ ಭಾಗವಹಿಸಿ, ಅನೇಕ ಸಭೆಗಳಲ್ಲಿ ವಾಕ್ಯಾರ್ಥ ವಿಚಾರ ಗೋಷ್ಠಿಗಳಲ್ಲಿ ಪಾಲ್ಗೊಂಡು ಕುಲಗುರುಗಳೂ, ಪೂರ್ವಾಶ್ರಮದ ಅಗ್ರಜರೂ ಆದ ಶ್ರೀ ಸುಯಮೀಂದ್ರತೀರ್ಥರಿಗೆ ಸಕಲ ವಿಧದಲ್ಲಿ ಬೆಂಬಲಿಗರಾಗಿದ್ದು ಶ್ರೀಗಳವರ ಪರಮಪ್ರೀತಿ, ವಿಶೇಷಾನುಗ್ರಹಗಳಿಗೂ, ಪಂಡಿತ ಮಂಡಲಿಯ, ಶಿಷ್ಯ ಮಂಡಲಿಯ ಗೌರವಾದರಗಳಿಗೂ ಪಾತ್ರರಾದರು.

ಶ್ರೀ ವೆಂಕಟರಾಘವೇಂದ್ರಾಚಾರ್ಯರು ಎಲತ್ತೂರ ಕೃಷ್ಣಾಚಾರ್ಯರಲ್ಲಿ ಉಡುಪಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಕೀರ್ತಿಶೇಷ ಶ್ರೀ ಪುತ್ತಿಗೆ ಸುರಾಧೀಶ್ವರರು ಇವರ ಸಹಾಧ್ಯಾಯಿಗಳಾಗಿದ್ದರು. ಮುಂದೆ ಆಚಾರ್ಯರು ವಿಖ್ಯಾತ ಪಂಡಿತರಾದ ದಿ|| ಪಂಡಿತರತ್ನ ಶ್ರೀ ದೊಡ್ಡಬಳ್ಳಾಪುರಂ ವಾಸುದೇವಾಚಾರ್ಯರಲ್ಲೂ, ಮತ್ತು ನ್ಯಾಯಶಾಸ್ತ್ರ ವಿಶಾರದರಾದ ದಿ|| ಘಂಟಾಪುರದ ಶ್ರೀ ಕೃಷ್ಣಮೂರ್ತ್ಯಾಚಾರ್ಯರಲ್ಲೂ ತರ್ಕಶಾಸ್ತ್ರದ ಉದ್ಗ್ರಂಥಗಳನ್ನು ವ್ಯಾಸಂಗ ಮಾಡುತ್ತಿರುವಾಗ ಮಂತ್ರಾಲಯದ ಪ್ರಖ್ಯಾತ ಪಂಡಿತರಾದ ವಿದ್ವಾನ್ ದಿ|| ಆಚಾರ್ಯ ವೆಂಕೋಬಾಚಾರ್ಯರು ಮತ್ತು

ಇಂದಿನ ಶ್ರೀ ಉತ್ತರಾದಿ ಮಠಾಧೀಶರಾದ ಶ್ರೀ ಸತ್ಯಪ್ರಮೋದತೀರ್ಥರು (ಗುತ್ತಲ ಗುರುರಾಜಾಚಾರ್ಯರು)ಗಳು ಇವ ಸಹಾಧ್ಯಾಯಿಗಳಾಗಿದ್ದರು.

ಶ್ರೀ ವೆಂಕಟರಾಘವೇಂದ್ರಾಚಾರ್ಯರು ಶ್ರೀ ಮಹಾ ಸಂಸ್ಥಾನದ ಸಕಲ ವೈದಿಕ – ಲೌಕಿಕ ವ್ಯವಹಾರಗಳಲ್ಲಿ ಪರಮಪೂಜ್ಯ ಶ್ರೀ ಸುಯಮೀಂದ್ರತೀರ್ಥರ ಕೈಯಲ್ಲಿ ಚೆನ್ನಾಗಿ ತಯಾರಾಗಿ ಸರ್ವರ ಪ್ರೇಮಾದರಗಳಿಗೆ ಪಾತ್ರರಾದರು. ಇವರ ಜ್ಞಾನ ಭಕ್ತಿ ವೈರಾಗ್ಯಾದಿಗಳನ್ನೂ, ಅಸಾಧಾರಣ ಪ್ರತಿಭೆಯನ್ನೂ ಶ್ರೀ ಗುರುರಾಜರಲ್ಲಿರುವ ಅಸದೃಶ ಭಕ್ತಿ ಮತ್ತು ಸಿದ್ಧಾಂತ ಪ್ರಸಾರಾಕಾಂಕ್ಷೆಗಳನ್ನು ಗಮನಿಸುತ್ತಿದ್ದ ಶ್ರೀ ಸುಯಮೀಂದ್ರತೀರ್ಥರು ಅವರ ಎಲ್ಲಾ ಸತ್ಕಾರ್ಯಗಳಿಗೆ ಪ್ರೋತ್ಸಾಹವಿತ್ತು ಅವರು ಆ ಒಂದು ಸನ್ಮಾರ್ಗದಲ್ಲಿ ಮುಂದುವರೆದು ಬರಲು ವಿಶೇಷ ಅನುಗ್ರಹ ಮಾಡುತ್ತಿದ್ದರು. ಶ್ರೀ ಸುಯಮೀಂದ್ರತೀರ್ಥರು ತಮ್ಮ ಗುರುಗಳ ಆಜ್ಞೆಯಂತೆ ಶ್ರೀ ಮಹಾ ಸಂಸ್ಥಾನದ, ಶ್ರೀ ಮಂತ್ರಾಲಯ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳನ್ನು ಯಶಸ್ವಿಯಾಗಿ ನೆರವೇರಿಸಿ, ಶ್ರೀ ಗುರುರಾಜರ ಆರಾಧನೆಯ ಕಾಲದಲ್ಲಿ ಸಪ್ತರಾತ್ರೋತ್ಸವ, ವಿದ್ವತ್ಸಭೆ, ಸಾಂಸ್ಕೃತಿಕ ಚಟುವಟಿಕೆಗಳು, ನಿತ್ಯ ನೈಮಿತ್ತಿಕ ಪೂಜಾವ್ಯವಸ್ಥೆ, ಸಂಸ್ಕೃತ ಕಾಲೇಜು ಸ್ಥಾಪನ, ಅನೇಕ ಮಂಟಪಗಳು, ಕಟ್ಟಡಗಳ ನಿರ್ಮಾಣಾದಿ ಮಹಾಕಾರ್ಯವನ್ನು ಮಾಡಿ ಭಾರತಾದ್ಯಂತ ಗುರು ಭಕ್ತರು ಶ್ರೀ ಮಂತ್ರಾಲಯಕ್ಕೆ ಬಂದು ಶ್ರೀ ಗುರು ಸೇವೆಯಿಂದ ಪುನೀತರಾಗಲು ಸಕಲ ವ್ಯವಸ್ಥೆಗಳನ್ನು ಮಾಡಿ, ಪೂನಾ, ಕುಂಭಕೋಣ, ಶ್ರೀರಂಗ ಮುಂತಾದ ಕಡೆ ಶ್ರೀ ಮಠದ ವಿಶೇಷಾಭಿವೃದ್ಧಿ ಮಾಡಿ ಶ್ರೀ ಮಹಾ ಸಂಸ್ಥಾನದ ಸರ್ವಾಂಗೀಣ ಅಭಿವೃದ್ಧಿಯನ್ನು ಮಾಡಿ ಶ್ರೀ ಮಠದ ಮೂಲ ಸ್ಥಳವಾದ ನಂಜನಗೂಡಿಗೆ ದಯಮಾಡಿಸುವಾಗ ತಮ್ಮ ಪ್ರತಿನಿಧಿಗಳೆಂದು ಶ್ರೀ ವೆಂಕಟ ರಾಘವೇಂದ್ರಾಚಾರ್ಯರಿಗೆ ಮಂತ್ರಾಲಯ ಕ್ಷೇತ್ರದ ಅಧಿಕಾರವನ್ನು ದಯಪಾಲಿಸಿದರು. ಶ್ರೀ ಆಚಾರ್ಯರು ಗುರುಗಳ ಆಜ್ಞೆಯಂತೆ ಅವರು ತೋರಿಕೊಟ್ಟ ಮಾರ್ಗದಲ್ಲಿ ಮುಂದುವರೆದು ಕೆಲವರ್ಷ ಅಲ್ಲಿ ಬಹು ಪ್ರಶಂಸನೀಯ ವ್ಯವಸ್ಥೆಗಳನ್ನು ಮಾಡಿ ಶ್ರೀ ಮಠದ ಕೀರ್ತಿಯು ಬೆಳಗುವಂತೆ ಮಾಡಿ ಶ್ರೀ ಸುಯಮೀಂದ್ರತೀರ್ಥರ ಅನುಗ್ರಹಕ್ಕೂ ತದ್ವಾರಾ ಶ್ರೀ ಗುರುರಾಜರ ಪರಮಾನುಗ್ರಹಕ್ಕೂ ಪಾತ್ರರಾದರು. ಶ್ರೀ ಗುರುಸೇವಾ ಫಲವೋ ಎಂಬಂತೆ ಶ್ರೀ ಸುಯಮೀಂದ್ರ ತೀರ್ಥರಿಗೆ ನಂಜನಗೂಡಿನಲ್ಲಿ ದೇಹಾಲಸ್ಯವಾದ್ದರಿಂದ ಆಚಾರ್ಯರನ್ನು ಕರೆಯಿಸಿಕೊಂಡು ಶ್ರೀ ಮೂಲರಾಮದೇವರ ತಥಾ ಶ್ರೀಮದಾಚಾರ್ಯರು – ಶ್ರೀ ಟೀಕಾಕೃತ್ಪಾದರು ಶ್ರೀ ವಿಜಯೀಂದ್ರರು, ಮತ್ತು ಶ್ರೀ ಗುರುಸಾರ್ವಭೌಮರ ಪ್ರೇರಣಾನುಸಾರವಾಗಿ ಶ್ರೀ ವೆಂಕಟರಾಘವೇಂದ್ರಾಚಾರ್ಯರಿಗೆ ಶೋಭನ ಕೃತು ಸಂ॥ ನಿಜ ಆಶ್ವಿನ ಕೃಷ್ಣ ತೃತೀಯಾ ಸೋಮವಾರ ತಾ॥ 4-11-1963 ರಂದು ಸಹಸ್ರಾರು ಜನ ಧಾರ್ಮಿಕರು, ವಿದ್ವಜ್ಜನರು, ಮಠೀಯ ಆಪ್ತಜನರು, ಸರಕಾರಿ ಅಧಿಕಾರಿಗಳ ಸಮಕ್ಷ ಪರಮಹಂಸಾಶ್ರಮ ಸ್ವೀಕಾರಕ್ಕೆ ಫಲ ಮಂತ್ರಾಕ್ಷತೆಯನ್ನು ಅನುಗ್ರಹಿಸಿ, ನಿಜಆಶ್ವಿನ ಕೃಷ್ಣ ಚತುರ್ಥೀ ಮಂಗಳವಾರ ತಾ॥ 5-11-63 ರಂದು ಮಂತ್ರ ಮುದ್ರಾಧಾರಣ – ಗುರೂಪದೇಶಾದಿಗಳನ್ನು ಮಾಡಿ ಶ್ರೀ ಮದಾಚಾರ್ಯರ ವೇದಾಂತ ಸಾಮ್ರಾಜ್ಯ ದಿಗ್ವಿಜಯ ವಿದ್ಯಾಸಿಂಹಾಸನದಲ್ಲಿ ಮಂಡಿಸಿ " ಶ್ರೀಮತ್ಸುಜಯೀಂದ್ರ ತೀರ್ಥ ಶ್ರೀಪಾದಂಗಳವರು " ಎಂಬ ನಾಮಕರಣ ಪೂರ್ವಕವಾಗಿ ಸ್ವಹಸ್ತದಿಂದ ಪಟ್ಟಾಭಿಷೇಕೋತ್ಸವವನ್ನು ಪರಮ ಪ್ರಸನ್ನ ಮನಸ್ಕರಾಗಿ ನೆರವೇರಿಸಿ ಮಹಾಸಂಸ್ಥಾನದ ಉತ್ತರಾಧಿಕಾರಿಗಳೆಂದು ಪರಮಾನುಗ್ರಹಮಾಡಿ ತತ್ತ್ವಜ್ಞಾನ ಪ್ರಪಂಚಕ್ಕೆ ಒಂದು ಅಪೂರ್ವ ಕಾಣಿಕೆಯನ್ನು ದಯಪಾಲಿಸಿದರು.

ಸಹಸ್ರಾರು ಜನರೆದುರು ನೆರವೇರಿದ ಆ ಪರಮ ಮಂಗಳಕರ ' ಸಾಮ್ರಾಜ್ಯ ಪಟ್ಟಾಭಿಷೇಕ ಮಹೋತ್ಸವ ' ಇಂದಿಗೂ ಜನರ ಚಿತ್ತಭಿತ್ತಿಯಲ್ಲಿ ಅಚ್ಚಳಿಯದೆ ಕಂಗೊಳಿಸುತ್ತಿದೆ !

ಸುಪ್ರಸನ್ನ ಹೃದಯದಿಂದ ಮಹಾಸಂಸ್ಥಾನದ ಶ್ರೇಯಸ್ಸು, ಅಭಿವೃದ್ಧಿಗಳನ್ನೇ ಮುಖ್ಯಧ್ಯೇಯವಾಗಿಟ್ಟು ಕೊಂಡು ಪರಮಪ್ರೀತಿಯಿಂದ, ಹೃತ್ಪೂರ್ವಕವಾಗಿ " ಜಗತ್ತಿಗೇ ಆದರ್ಶ " ವಾದ ರೀತಿಯಲ್ಲಿ ಶ್ರೀ ಸುಯಮೀಂದ್ರ

ತೀರ್ಥರು ವೇದಾಂತ ಸಾಮ್ರಾಜ್ಯ ವಿದ್ಯಾಪೀಠದಲ್ಲಿ ನೂತನ ಜಗದ್ಗುರುಗಳನ್ನು ಮಂಡಿಸಿ ನಾಮಕರಣ ಪ್ರದಾನ ಸಾಮ್ರಾಜ್ಯ ಪಟ್ಟಾಭಿಷೇಕ ಮಾಡುತ್ತಿದ್ದಾಗ ನೆರೆದ ಸಹಸ್ರಾರು ಜನರು ಅದರಲ್ಲಿಯೂ ಪಂಡಿತರು ಕವಿಗಳ ಮನದಲ್ಲಿ ಶತಶತಮಾನಗಳ ಹಿಂದೆ ಶ್ರೀ ಸುಧೀಂದ್ರತೀರ್ಥರು ಶ್ರೀ ಗುರುಸಾರ್ವಭೌಮರವರಿಗೆ ಸಾಮ್ರಾಜ್ಯ ಪಟ್ಟಾಭಿಷೇಕ ಮಾಡಿದ ಮಹಾ ಮಂಗಳಕರ ದೃಶ್ಯ ಒಡಮೂಡಿ ಮೈಪುಳಕಗೊಳಿಸಿ ಆನಂದಾಶ್ರುಹರಿಯಿಸಿದ್ದನ್ನು ಅದಾವುದಾನೆ ಮರೆಯಲು ಸಾಧ್ಯ? ಹಿಂದಿನ ಆ ಭವ್ಯ ದೃಶ್ಯ ಇಂದಿಗೂ ಸರ್ವರ ಕಣ್ಣಿಗೆ ಕಟ್ಟಿದಂತಿದೆ!

ಇಂದು ಶ್ರೀ ಸುಯಮೀಂದ್ರತೀರ್ಥರು ಪ್ರಿಯ ಶಿಷ್ಯರಾದ ಶ್ರೀ ಸುಜಯೀಂದ್ರರ ಶಿರಸ್ಸಿನಲ್ಲಿ ತಮ್ಮ ಅಮೃತ ಹಸ್ತವನ್ನಿರಿಸಿ ಪರಮಪ್ರೀತಿಯಿಂದ "ಪ್ರಿಯ ವರಕುಮಾರಕರೇ! ಶ್ರೀಮದಾಚಾರ್ಯರ ಮಹಾಸಂಸ್ಥಾನವನ್ನು ಮುಂದುವರಿಸಿಕೊಂಡು ಹೋಗುವ ಹೊಣೆಯನ್ನು ನಾವು ನಿಮಗೆ ವಹಿಸುತ್ತಿದ್ದೇವೆ. ಹಂಸನಾಮಕ ಪರಮಾತ್ಮನ ಸತ್ಪರಂಪರೆಯಲ್ಲಿ ಬಂದ ಶ್ರೀ ಮದಾನಂದತೀರ್ಥ ಭಗವತ್ಪಾದಾಚಾರ್ಯರ ದ್ವೈತ ಸಾಮ್ರಾಜ್ಯ ವಿದ್ಯಾ ಸಿಂಹಾಸನದಲ್ಲಿ ನಿಮ್ಮನ್ನು ಮಂಡಿಸಿದ್ದೇವೆ. ಜಗತ್ತಿನ ಕಲ್ಯಾಣ, ಸಜ್ಜನರ ಉದ್ಧಾರ, ವೈದಿಕ ಸದ್ವೈಷ್ಣವ ಸಿದ್ಧಾಂತ ಪ್ರಸಾರ, ಸದ್ಧರ್ಮ, ಸದಾಚಾರ, ಸತ್ಸಂಪ್ರದಾಯ, ವಿದ್ವಜ್ಜನ, ಸ್ವಾಶ್ರಿತಜನ, ಶಿಷ್ಯಸಂದೋಹ, ಭಕ್ತಮಂಡಲಿ, ಇವರ ಸರ್ವಾಂಗೀಣ ಉನ್ನತಿ, ಸಂರಕ್ಷಣೆ, ಪಾಠಪ್ರವಚನ, ವಿದ್ವಜ್ಜನ ಪೋಷಣೆ — ಲೋಕಹಿತಸಾಧನೆ ಇವುಗಳೇ ಈ ಮಹಾ ಪೀಠದ, ನಮ್ಮ ಈ ದಿವ್ಯ ಭವ್ಯ ಸತ್ಪರಂಪರೆಯ ಸಾತ್ವಿಕ ಗುರಿಯಾಗಿವೆ. ಶ್ರೀ ಮೂಲರಾಮಚಂದ್ರ ಈ ಮಹಾ ಪೀಠದ ಆರಾಧ್ಯದೇವತೆ. ಅವನ ಪೂಜಾರಾಧನೆಯನ್ನು ಅವಿಚ್ಛಿನ್ನವಾಗಿ ನೆರವೇರಿಸಿಕೊಂಡು ಬರುತ್ತಾ, ಶ್ರೀ ಮದಾಚಾರ್ಯರ ಸಿದ್ಧಾಂತವನ್ನು ಅಭಿವೃದ್ಧಿಸುತ್ತಾ, ಸತ್ಯ – ನ್ಯಾಯಮಾರ್ಗಗಳಿಂದ, ಸಾತ್ವಿಕ ಮಾರ್ಗದಲ್ಲಿ ಜನತೆಯನ್ನು ಮುನ್ನಡೆಯಿಸುತ್ತಾ ಅವರು ಧರ್ಮರತರಾಗಿ, ಸದಾಚಾರ ಶೀಲರಾಗಿ ಶ್ರೀಹರಿವಾಯು – ಗುರು ಭಕ್ತರಾಗಿ, ಆತ್ಮೋದ್ಧಾರ ಮಾಡಿಕೊಂಡು ಉದ್ಧೃತರಾಗುವಂತೆ ಮಾಡುವ ಜವಾಬ್ದಾರಿ ನಿಮಗೆ ಸೇರಿದೆ. ಇದೇ ಈ ಮಹಾಪೀಠದ, ಪರಂಪರೆಯ ಮುಖ್ಯ ಗುರಿಯಾಗಿದೆ. ನೀವು ಈ ಮಹಾ ಕಾರ್ಯವನ್ನು ಅತ್ಯಂತ ಯಶಸ್ವಿಯಾಗಿ ನೆರವೇರಿಸಿಕೊಂಡು ಬಂದು ಬಹುಕಾಲ ಶ್ರೀ ಮೂಲರಾಮರ ಪೂಜಾರಾಧನೆ ಮಾಡಿಕೊಂಡು ಮಹಾಪೀಠದ ಕೀರ್ತಿಧ್ವಜವನ್ನು ಕನಕಪರ್ವತದ ಉತ್ತುಂಗ ಶೃಂಗದೆತ್ತರಕ್ಕೆ ಹಾರಿಸುವಿರೆಂಬ ದೃಢನಂಬಿಕೆ ನಮಗಿದೆ. ಶ್ರೀ ಮೂಲರಾಮ – ಶ್ರೀಮದಾಚಾರ್ಯರು, ಶ್ರೀ ಟೀಕಾಕೃತ್ಪಾದರು – ಶ್ರೀ ಗುರುರಾಜರು ನಿಮ್ಮಲ್ಲಿ ಅನುಗ್ರಹಮಾಡಿ ಈ ಮಹತ್ಕಾರ್ಯವನ್ನು ನಿಮ್ಮಿಂದ ಮಾಡಿಸುತ್ತಾರೆ. ನಿಮಗೆ ಸರ್ವದಾ ನಮ್ಮ ಆಶೀರ್ವಾದದ ಕವಚವಿದೆ. ಶ್ರೀ ಮಂತ್ರಾಲಯದ ಅಭಿವೃದ್ಧಿ ಕಾರ್ಯ ನಿಮ್ಮ ಕಾಲದಲ್ಲಿ ಪರಿಪೂರ್ಣವಾಗಿ ಜಗತ್ತಿನ ಜನತೆಯ ಕಲ್ಯಾಣವಾಗುತ್ತದೆ. ಶ್ರೀ ಮೂಲ ರಘುಪತಿಯು – ಶ್ರೀ ಮದಾಚಾರ್ಯರು ಶ್ರೀ ಗುರುರಾಜರು ಬಹುಕಾಲ ನಿಮ್ಮಿಂದ ಸೇವೆ ಸ್ವೀಕರಿಸಿ ನಿಮಗೆ ಅನನ್ಯ ಸಾಧಾರಣ ಕೀರ್ತಿಪ್ರತಿಷ್ಠೆಗಳನ್ನು ಕರುಣಿಸಲೆಂದು ನಾವು ಹೃತ್ಪೂರ್ವಕ ಪ್ರಾರ್ಥಿಸಿ ಆಶೀರ್ವದಿಸುತ್ತೇವೆ. ನಿಮಗೆ ಸಕಲ ಸನ್ಮಂಗಳವಾಗಲಿ. ನಿಮ್ಮ ಮೂಲಕ ಜಗತ್ತಿನ ಜನತೆಗೆ ಮಂಗಳವಾಗಲಿ" ಎಂದು ಆಶೀರ್ವದಿಸಿದರು.

ಸುಪ್ರಸನ್ನರಾಗಿ ಗುರುಗಳು ಆಶೀರ್ವದಿಸಿದರೆ ಅದಾವುದುತಾನೆ ಅಸಾಧ್ಯವಾದೀತು! ಶ್ರೀ ಸುಯಮೀಂದ್ರ ತೀರ್ಥರ ಆಶೀರ್ವಾದ ಫಲಿಸಿ ಅದರ ಅಮೃತದ ರುಚಿಯನ್ನು ಇಂದು ಲಕ್ಷಾಂತರ ಜನರು ಸವಿಯುತ್ತಿರುವುದು ಪ್ರತ್ಯಕ್ಷ ಸಿದ್ಧವಾಗಿದೆ. ಮಹಾ ತಪಸ್ವಿಗಳೂ ಶ್ರೀ ಗುರುರಾಜರ ಪರಮಾನುಗ್ರಹಕ್ಕೆ ಮುಖ್ಯ ಪಾತ್ರರೂ, 'ಶ್ರೀ ರಾಯರ ಕರುಣೆಯ ಕಂದ' ಎಂದು ಜಗತ್ತಿನ ಖ್ಯಾತಿಗಳಿಸಿ ಇಂದು ಆ ಗುರುರಾಜರ ಸನ್ನಿಧಿಯಲ್ಲಿಯೇ ಸುಂದರ ಬೃಂದಾವನದಲ್ಲಿ ವಿರಾಜಿತರಾಗಿರುವ ಶ್ರೀ ಸುಯಮೀಂದ್ರತೀರ್ಥರು ತಮ್ಮ ಆಶೀರ್ವಾದವು ಫಲಿಸಿ ಸಕಲರ ಕಲ್ಯಾಣವಾಗುತ್ತಿರುವುದನ್ನು ಕಂಡು ಪರಮಾನಂದಭರಿತರಾಗಿ ದಿನದಿನವೂ ತಮ್ಮ ಪ್ರಿಯ ಶಿಷ್ಯರನ್ನು ಆಶೀರ್ವದಿಸುತ್ತಿರುವರೆಂದರೆ ಅಚ್ಚರಿಯೇನಿಲ್ಲ! ಆ ಮಹನೀಯರ ಅನುಗ್ರಹ, ಆಶೀರ್ವಾದಗಳ ಫಲನ್ನಿಂದಂ ನಾವು ಕಣ್ಣಾರೆ ಕಾಣುತ್ತಿದ್ದೇವೆ.

ಪೂಜ್ಯ ಶ್ರೀ ಸುಯಮೀಂದ್ರತೀರ್ಥರು ತಮಗೆ ವಹಿಸಿದ್ದ ಕರ್ತವ್ಯವನ್ನು ಪೂಜ್ಯ ಶ್ರೀ ಸುಜಯೀಂದ್ರತೀರ್ಥರು ಅತ್ಯಂತ ಯಶಸ್ವಿಯಾಗಿ ಪೂರ್ಣಮಾಡಿ ಸರ್ವರ ಭಕ್ತಿ ಶ್ರದ್ಧೆ ಗೌರವಾದರಗಳಿಗೆ ಪಾತ್ರರಾಗಿ ಜಗತ್ತಿನಲ್ಲಿ ಆದರ್ಶ

ಯತಿವರ್ಯರೆಂದು ಕೀರ್ತಿಗಳಿಸಿದ್ದಾರೆ. "ಸುರಪುರಾಲಯದಂತೆ ಮಂತ್ರಾಲಯ", ಮುಂತಾಗಿ ದಾಸರಾಯರು ಹಾಡಿರುವುದನ್ನು ನಮ್ಮ ಶ್ರೀಪಾದಂಗಳವರು ಸತ್ಯವನ್ನಾಗಿಮಾಡಿ ತೋರಿದ್ದಾರೆ! ಮಂತ್ರಾಲಯದಿಂದ ಸರ್ವಾಂಗ ಸುಂದರವಾಗಿ, ಮಹಾಕ್ಷೇತ್ರವಾಗಿ, ಭಾರತದ ಮುಖ್ಯ ಯಾತ್ರಾ ಸ್ಥಳಗಳಲ್ಲೊಂದಾಗಿ ವಿರಾಜಿಸುತ್ತಿದೆ. ನೂರಾರು ಕಟ್ಟಡಗಳಾಗಿ ಯಾತ್ರಾರ್ಥಿಗಳಿಗೆ ಸಕಲ ಸೌಲಭ್ಯಗಳೇರ್ಪಟ್ಟು ಪ್ರತಿವರ್ಷ ಲಕ್ಷಾಂತರ ಜನರು ಮಂತ್ರಾಲಯಕ್ಕೆ ಧಾವಿಸಿ, ಗುರುರಾಜರನ್ನು ಸೇವಿಸಿ ಅವರ ಅನುಗ್ರಹಕ್ಕೆ ಪಾತ್ರರಾಗುತ್ತಿದ್ದಾರೆ. ಶ್ರೀ ಗುರುರಾಜರ ಆರಾಧನೆ ಅಭೂತ ಪೂರ್ವವಾಗಿ ಜರುಗುತ್ತಿದೆ. ಪ್ರತಿದಿನವೂ ಮಹೋತ್ಸವಗಳಾಗುತ್ತಿವೆ. ಶ್ರೀರಾಯರ ಮಹಿಮೆ ದಿನೇ ದಿನೇ ವಿವಿಧ ರೀತಿಯಲ್ಲಿ ಪ್ರಕಟವಾಗುತ್ತಿದೆ. ದುಃಖ, ದಾರಿದ್ರ್ಯ, ಸಿರಾಶೆ, ರೋಗ, ಅಶಾಂತಿಗಳಿಂದ ಕಂಗೆಟ್ಟು ಬಂದ ಜನರು ತಮ್ಮ ಎಲ್ಲ ದುಃಖಾದಿಗಳನ್ನು ಪರಿಹರಿಸಿಕೊಂಡು ಗುರ್ವನುಗ್ರಹದಿಂದ ಮನೋರಥ ಸಿದ್ಧಿಯನ್ನು ಪಡೆಯುತ್ತಿದ್ದಾರೆ. ಆದ್ದರಿಂದ ಮಂತ್ರಾಲಯ ಶಾಂತಿಧಾಮವಾಗಿದೆ, ಕಲ್ಯಾಣಧಾಮವಾಗಿದೆ, ದ್ವೈತ ವೇದಾಂತ, ತರ್ಕ, ವ್ಯಾಕರಣ, ಸಾಹಿತ್ಯಾದಿ ಶಾಸ್ತ್ರಗಳ ಪಾಠಪ್ರವಚನಗಳು ಮಂತ್ರಾಲಯದಲ್ಲಿ ಅವ್ಯಾಹತವಾಗಿ ನೆರವೇರುತ್ತಿವೆ. ವರ್ಷಕ್ಕೆ ಎರಡು ಬಾರಿ ವಿದ್ವತ್ಸಭೆಗಳು ಜರುಗಿ ಸಕಲಶಾಸ್ತ್ರ ಪಾರಂಗತವಾದ ಸಹಸ್ರಾರು ತ್ರಿಮತಸ್ಥ ಪಂಡಿತರು, ವಿದ್ಯಾರ್ಥಿಗಳು ಸಭೆಯಲ್ಲಿ ಭಾಗವಹಿಸಿ, ವಿವಿಧ ಶಾಸ್ತ್ರಗಳಲ್ಲಿ ವಾಕ್ಯಾರ್ಥ, ವಿಷಯವಿಮರ್ಶೆಗಳು ನೆರವೇರಿ ಉದಾರಸಂಭಾವನೆ, ಪಂಡಿತ ಶ್ರೇಷ್ಠರಿಗೆ ವಿದ್ಯಾಪ್ರಶಸ್ತಿ ಪ್ರದಾನಾದಿಗಳು ಜರಗುತ್ತಿವೆ. ಭಾರತದ ನಾನಾ ಭಾಗಗಳಲ್ಲಿ ವಿದ್ಯಾಪೀಠ ಸ್ಥಾಪನೆಯಾಗಿ ವೈದಿಕ ವಾಙ್ಮಯದ ಪ್ರಸಾರ ಕಾರ್ಯ ಜರುಗುತ್ತಿವೆ. ಜನಸಾಮಾನ್ಯರಿಗಾಗಿ, ಅವರ ತಾತ್ವಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಅಭ್ಯುದಯಕ್ಕಾಗಿ "ಶ್ರೀ ಗುರುಸಾರ್ವಭೌಮ" ಎಂಬ ಮಾಸ ಪತ್ರಿಕೆ ಹೊರಡುತ್ತಿದೆ. ಅನೇಕ ಪ್ರಾಚೀನ ಗ್ರಂಥಗಳ ಸಂಶೋಧನ ಸಂಪಾದನ ಕಾರ್ಯಗಳಾಗುತ್ತಿದ್ದು, ಈಗಾಗಲೇ ಅನೇಕ ಗ್ರಂಥಗಳು ಪ್ರಕಟವಾಗಿವೆ. ಜನ ಸಾಮಾನ್ಯರಿಗಾಗಿ ಕನ್ನಡಾದಿ ಭಾಷೆಗಳಲ್ಲಿ ವೇದಾಂತಾದಿ ಗ್ರಂಥಗಳ ಅನುವಾದವಾಗಿ ಅವೂ ಪ್ರಕಟವಾಗುತ್ತಿವೆ. ಭಾರತದ ಅನೇಕ ಭಾಗಗಳಲ್ಲಿ ಶ್ರೀ ಮಠಕ್ಕೆ ನೂತನ ಆಸ್ತಿಪಾಸ್ತಿಗಳೇರ್ಪಟ್ಟು ವರಮಾನ ಬಹುಮುಖವಾಗಿ ಅಭಿವೃದ್ಧಿಸಿದೆ. ಶ್ರೀ ಗುರುರಾಜರ ಅನೇಕ ಮೃತ್ತಿಕಾ ಬೃಂದಾವನಗಳ ಪ್ರತಿಷ್ಠಾಪನೆಯಾಗಿ ಅದರಿಂದ ಅಲ್ಲಲ್ಲಿನ ಸಹಸ್ರಾರು ಜನರು ಶ್ರೀ ಗುರುರಾಜರ ಸೇವೆ ಮಾಡಿ ಉದ್ಧೃತರಾಗುತ್ತಿದ್ದಾರೆ. ಹೀಗೆ ಶ್ರೀ ಮಠದ ಸರ್ವಾಂಗೀಣ ಅಭಿವೃದ್ಧಿ, ತತ್ತ್ವ-ಧರ್ಮ ಪ್ರಸಾರ, ಸದ್ವಿದ್ಯಾ ಪಾಠಪ್ರವಚನ - ಗ್ರಂಥಪ್ರಸಾರ, ಶಿಷ್ಯ ಭಕ್ತಜನೋದ್ಧಾರ, ಶ್ರೀ ಮಂತ್ರಾಲಯ ಶ್ರೀಪಾದಂಗಳವರ ಮಹಿಮಾ ಪ್ರಸಾರಾದಿ ಮಹತ್ಕಾರ್ಯಗಳು ನೆರವೇರುತ್ತಿವೆ. ಇವೆಲ್ಲ ಶ್ರೀ ಸುಯಮೀಂದ್ರತೀರ್ಥರ ಕನಸು! ಅದಿಂದು ನನಸಾಗಿರುವುದಕ್ಕೆ ಆ ಮಹನೀಯರ ಆಶೀರ್ವಾದ, ಪರಮಾನುಗ್ರಹಗಳು ಫಲಿಸಿರುವುದೇ ಮುಖ್ಯಕಾರಣವೆಂದು ಧಾರಾಳವಾಗಿ ಹೇಳಬಹುದು. ಆ ಸದ್ಗುರುಗಳು ಅಂತಃಕರಣಪೂರ್ವಕ ಆಶ್ರಮವಿತ್ತು, ಪ್ರಸನ್ನ ಚಿತ್ತದಿಂದ, ವೇದಾಂತ ಸಾಮ್ರಾಜ್ಯದಲ್ಲಿ ಪಟ್ಟಾಭಿಷೇಕಮಾಡಿ, ತಮ್ಮ 33 ವರ್ಷಗಳ ತಪಸ್ಸಿನ ಫಲವನ್ನೆಲ್ಲಾ ಧಾರೆಯೆರೆದು ಪ್ರಿಯ ಶಿಷ್ಯರನ್ನು ಅನುಗ್ರಹಿಸಿ ಆಶೀರ್ವದಿಸಿ "ಶ್ರೀ ಸುಜಯೀಂದ್ರತೀರ್ಥ" ರನ್ನು ನಮಗೆ ಕರುಣಿಸಿ ನಮ್ಮೆಲ್ಲರನ್ನೂ, ಮಾಧ್ವಲೋಕಕ್ಕೆ ಮಾತ್ರ ಸಮಾಜಕ್ಕೆ ಅಲ್ಲ ಏಕೆ; ಸಮಸ್ತ ಜಗತ್ತಿಗೇ ಮಹೋಪಕಾರ ಮಾಡಿದ್ದಾರೆ. ಅಂಥ ಸದ್ಗುರುಗಳಿಗೆ ಜಗತ್ತಿನ ಜನತೆ ಚಿರಋಣಿಯಾಗಿದೆ.

ಅಂಥ ಮಹಾಮಹಿಮರ ಕರಪುತ್ರರಾಗಿ ನಮ್ಮನ್ನು ಕಾಪಾಡಿಕೊಂಡು ಬರುತ್ತಿದ್ದ ಪರಮ ಪೂಜ್ಯರಾದ ಶ್ರೀ ಮತ್ಸುಜಯೀಂದ್ರತೀರ್ಥ ಶ್ರೀಪಾದಂಗಳವರು ಶ್ರೀ ವೇದಾಂತ ಸಾಮ್ರಾಜ್ಯ ದಿಗ್ವಿಜಯ ವಿದ್ಯಾ ಸಿಂಹಾಸನದಲ್ಲಿ ರಾರಾಜಿಸಿ ಶ್ರೀ ಮೂಲರಘುಪತಿ ವೇದವ್ಯಾಸ ದೇವರ ಪೂಜಾರಾಧನೆ, ಪಾಠ-ಪ್ರವಚನಗಳ ದ್ವಾರಾ ದ್ವೈತ ಸಿದ್ಧಾಂತ ಪ್ರಸಾರ, ವಿದ್ವಜ್ಜನ, ಆಶ್ರಿತಜನ, ಶಿಷ್ಯ-ಭಕ್ತ ಮಂಡಲಿಯ ಸಂರಕ್ಷಣೆ, ಲೋಕಕಲ್ಯಾಣ ಮಾಡುತ್ತಾ ಶ್ರೀ ಗುರು ಸಾರ್ವಭೌಮರ ಮಹಿಮಾ ಪ್ರಸಾರ ಮಹಾಕಾರ್ಯ ಜಗನ್ಮಂಗಳ ಕಾರ್ಯಾಸಕ್ತರಾಗಿ ಪರಮಪದವನ್ನೈದಿದರು. ಪೂಜ್ಯ ಶ್ರೀಪಾದಂಗಳವರ ಚರಣಕಮಲಗಳಿಗೆ ಶಿಷ್ಯಾನುಶಿಷ್ಯನ ಅನಂತ ಶಿರಸಾಷ್ಟಾಂಗ ಪ್ರಣತಿ ಪರಂಪರೆಯನ್ನರ್ಪಿಸಿ - ಈ ಲೇಖನ ರೂಪ ಭಕ್ತಿಕುಸುಮಾಂಜಲಿಯನ್ನು ಸಮರ್ಪಿಸಿ ಕೃತಾರ್ಥನಾಗುತ್ತೇನೆ.

ಶ್ರೀ ಸುಜಯೀಂದ್ರತೀರ್ಥ ಗುರುವರ್ಯರು

[ಒಂದು ಮಧುರ ಸ್ಮೃತಿ]

ಲೇಖಕರು :

ವಿದ್ಯಾರತ್ನಂ ದಿ|| ಆಚಾರ್ಯ ವೆಂಕೋಬಾಚಾರ್ಯರು
ಮಂತ್ರಾಲಯ

[ದ್ವೈತ ಸಿದ್ಧಾಂತದಲ್ಲಿ, ಅತ್ಯಂತ ಪ್ರತಿಭಾಸ್ವಿತ ಷಟ್‌ಶಾಸ್ತ್ರ ಪಾರಂಗತರೆಂದು ವಿಖ್ಯಾತರಾಗಿದ್ದ ವಿದ್ಯಾರತ್ನಂ ದಿ|| ಆಚಾರ್ಯ ವೆಂಕೋಬಾಚಾರ್ಯರು ಪರಮಪೂಜ್ಯ ಶ್ರೀ ಸುಜಯೀಂದ್ರತೀರ್ಥರ ಸಹಾಧ್ಯಾಯಿಗಳಾಗಿದ್ದು ಶ್ರೀಯವರ ಜ್ಞಾನ, ಭಕ್ತಿ, ವೈರಾಗ್ಯ, ಸಂಪತ್ತನ್ನು ಚೆನ್ನಾಗಿ ಬಲ್ಲವರಾಗಿದ್ದರು. ಶ್ರೀ ಸುಜಯೀಂದ್ರತೀರ್ಥರಿಗೆ ವೇದಾಂತ ಸಾಮ್ರಾಜ್ಯದಲ್ಲಿ ಪಟ್ಟಾಭಿಷೇಕೋತ್ಸವವಾದಾಗ ಅವರು ಭಕ್ತಿ ಶ್ರದ್ಧೆಗಳಿಂದ ಬರೆದ ಲೇಖನವನ್ನು ಆ ಸಮಾರಂಭದ ಮಧುರಸ್ಮೃತಿಗಾಗಿ ಇಲ್ಲಿ ಪ್ರಕಟಿಸಲು ಹರ್ಷಿಸುತ್ತೇನೆ.]

ಪರಮಪವಿತ್ರವಾದ ಗೌತಮಸಗೋತ್ರದಲ್ಲಿ, ವಿದ್ಯೆಗೆ ಮಾತೃಸ್ಥಾನವೆನಿಸಿದ ಸಾತ್ವಿಕ ಸಂತತಿಯಲ್ಲಿ ಜನಿಸಿದ ಶ್ರೀ ಸುಜಯೀಂದ್ರತೀರ್ಥರ ಪೂರ್ವಾಶ್ರಮದ ಹೆಸರು ಶ್ರೀ ವೆಂಕಟರಾಘವೇಂದ್ರಾಚಾರ್ಯರೆಂದು. ಇವರು ಜಗದ್ಗುರುಗಳೆಂದು ಸರ್ವರಿಂದ ಮಾನ್ಯರಾದ ಶ್ರೀ ಮಂತ್ರಾಲಯ ಪ್ರಭುಗಳವರ ಪೂರ್ವಾಶ್ರಮ ಪವಿತ್ರ ಸಂತತಿಯಲ್ಲಿ ಜನಿಸಿದ ಪಂಡಿತೋತ್ತಮರಾದ ಶ್ರೀ ಸುಜ್ಞಾನೇಂದ್ರಾಚಾರ್ಯರ ದ್ವಿತೀಯ ಪುತ್ರರು. ಬಾಲ್ಯದಲ್ಲಿಯೇ ಇವರು ತಮ್ಮ ಮಾತಾಮಹರಾದ, ನ್ಯಾಯವೇದಾಂತಾದಿ ಶಾಸ್ತ್ರಗಳಲ್ಲಿ ಪ್ರಕಾಂಡ ಪಂಡಿತರೆಂದು ಕೀರ್ತಿ ಗಳಿಸಿದ ಹುಲಿ, ಶ್ರೀ ಹನುಮಂತಾಚಾರ್ಯರಲ್ಲಿ (ಕೀ. ಶೇ. ಶ್ರೀ ಸುವ್ರತೀಂದ್ರತೀರ್ಥರ ಪೂರ್ವಾಶ್ರಮ ಜನಕರು.) ಸಾಹಿತ್ಯಾದಿ ಶಾಸ್ತ್ರವನ್ನು ಅಭ್ಯಾಸ ಮಾಡಿ ಶ್ರೀಸುಶೀಲೇಂದ್ರತೀರ್ಥರ ಕಾಲದಲ್ಲಿ ಶ್ರೀಮಠದಲ್ಲಿ ಇದ್ದು, ಸಕಲ ಶಾಸ್ತ್ರಗಳಲ್ಲಿ ಅದ್ವಿತೀಯ ಪಂಡಿತರೂ, ನಾವನ್ನಲ್ಲದೆ ಇನ್ನು ಯಾರ ಶಿಷ್ಯ ಪರಂಪರೆಯೂ ಇಂದು ನ್ಯಾಯ–ವೇದಾಂತಾದಿ ಶಾಸ್ತ್ರಗಳಲ್ಲಿ ಪ್ರವೀಣವಾಗಿ ಪಾಠ ಪ್ರವಚನಾಸಕ್ತವಾಗಿಯೇ ಅಂಥ ವಿಖ್ಯಾತರಾದ ಶ್ರೀ ಬಿದರಹಳ್ಳಿ ಕೃಷ್ಣಾಚಾರ್ಯರಲ್ಲಿ ನ್ಯಾಯಶಾಸ್ತ್ರದಲ್ಲಿ ಇವರು 'ಸಾಮಾನ್ಯ ನಿರುಕ್ತಿ ಸತ್ಪ್ರತಿಪಕ್ಷ' ಮುಂತಾದ ಗ್ರಂಥಗಳನ್ನು ಚೆನ್ನಾಗಿ ಅಭ್ಯಾಸ ಮಾಡಿ ವಿದ್ವಜ್ಜನರ ಗೌರವಾದರಗಳಿಗೆ ಪಾತ್ರರಾಗಿರುವರು. 192[illegible]ರಲ್ಲಿ ಇದೇ ಮತದಲ್ಲಿ [illegible] ವೇದಾಂತ ವ್ಯಾಕರಣ ಶಾಸ್ತ್ರಗಳಲ್ಲಿ ಪ್ರಸಿದ್ಧ ಪಂಡಿತರಾದ ಶ್ರೀ ಘಾಟಾಪ್ರಭಂ ಕೃಷ್ಣಮೂರ್ತ್ಯಾಚಾರ್ಯರಲ್ಲಿ ನಿನ್ನ ಜೊತೆಯಲ್ಲಿ ವ್ಯಾಸಂಗ ಮಾಡಿದರು. ಇಂಥ ಮಹಾನುಭಾವರ ಸಹಾಧ್ಯಾಯಿಯಾಗುವ ಭಾಗ್ಯ ನನ್ನ ಪೂರ್ವಜನ್ಮ ಸುಕೃತದಿಂದು ಭಾವಿಸುತ್ತೇನೆ. ಶ್ರೀಯವರ ಒಡನಾಡಿಯಾಗಿದ್ದು ಪಡೆದ ಅವರ ವಿದ್ವತ್ತು, ಸ್ವಭಾವಗುಣಗಳನ್ನು ಚೆನ್ನಾಗಿ ಇಲ್ಲಿ ನಾನು ಇವರ ಬಗ್ಗೆ ಬರೆಯಲು ನನಗೆ ಬಹಳ ಹರ್ಷವೆನಿಸುವುದು. ನಾನು ಇವರೊಡನೆ ವ್ಯಾಸಂಗ ಮಾಡುತ್ತಿದ್ದ ಆ ಕಾಲದಲ್ಲಿ ನಡೆದ ಒಂದು ಸಂದರ್ಭವನ್ನು ಇಲ್ಲಿ ನಿರೂಪಿಸುವುದು ಅಪ್ರಕೃತವಾಗಲಾರದು.

ಒಮ್ಮೆ ಎಲತ್ತೂರು ಆಚಾರ್ಯರ ಶಿಷ್ಯೋತ್ತಮರಾದ ಶ್ರೀ ದೇವಾಚಾರ್ಯರು ಧಾರಾಪುರಂ ಕೃಷ್ಣಮೂರ್ತ್ಯಾಚಾರ್ಯರಲ್ಲಿಗೆ ಬಂದಿದ್ದರು. ಆಗ ಕಾಲದಲ್ಲಿ ಪರಾಮರ್ಶ ಲಕ್ಷಣ ನಡೆದಾದ "ಸಾಧ್ಯತಾವಚ್ಛೇದಕಾವಚ್ಛಿನ್ನ ಪ್ರಕಾರತಾ ನಿರೂಪಿತವ್ಯಾಪ್ತಿನಿಷ್ಠ ಪ್ರಕಾರತಾನಿರೂಪಿತ ಹೇತುತಾವಚ್ಛೇದಕಾವಚ್ಛಿನ್ನ ಮುಖ್ಯ ವಿಶೇಷ್ಯತಾ ನಿರೂಪಕ ಜ್ಞಾನತ್ವಂ" ಎಂದು ಶ್ರೀಗಳವರು (ಪೂರ್ವಾಶ್ರಮದಲ್ಲಿ) ಲಕ್ಷಣ ನಿರೂಪಣ ಮಾಡಿದರು. ಆಗ ದೇವಾಚಾರ್ಯರು "ಮುಖ್ಯ ಪ್ರಕಾರತಾ ನಿರೂಪಿತ ವಿಶೇಷ್ಯತಾಶಾಲಿ ಜ್ಞಾನತ್ವಂ" ಎಂದು ಹೇಳಬೇಕು ಎಂದಾಗ ಇವರು "ವಿಶೇಷ್ಯತಾ"ದಲ್ಲಿ "ಮುಖ್ಯತ್ವ" ಏಕೆ ಹಾಕಬೇಕು ? ಎಂದು ಪ್ರಶ್ನೆ ಮಾಡಲಾಗಿ "ವಿಶೇಷ್ಯತಾ"ದಲ್ಲಿ "ಮುಖ್ಯತ್ವ ನಿವೇಶನ ಮಂತರಾ—"ಪ್ರಕಾರತಾ" ದಲ್ಲಿ "ಮುಖ್ಯತ್ವ" ಹಾಕುವುದು ಶಕ್ಯವಿಲ್ಲವೆಂದು ಎರಡು ಘಂಟೆಯ ಕಾಲ ಆ ಶ್ರೀ ದೇವಾಚಾರ್ಯರ ಸಂಗಡ ವಾದ ಮಾಡಿ ಅವರನ್ನು ಮೆಚ್ಚಿಸಿದರು. ಈ ರೀತಿ ಆರು ವರ್ಷಕಾಲ ಸಮಗ್ರ ನ್ಯಾಯಶಾಸ್ತ್ರವನ್ನು ವ್ಯಾಸಂಗ ಮಾಡಿ ಅನಂತರ ಮೈಸೂರಿನಲ್ಲಿ 'ರಸಗಂಗಾಧರ, ಸಾಹಿತ್ಯ ದರ್ಪಣ, ಕಾವ್ಯಪ್ರಕಾಶಿಕಾ' ಮುಂತಾದ ಅಲಂಕಾರಶಾಸ್ತ್ರ ಗ್ರಂಥಗಳನ್ನು ಅಭ್ಯಾಸ ಮಾಡಿ ತರುವಾಯ ಮೈಸೂರು ಮಹಾರಾಜಾ ಸಂಸ್ಕೃತ ಕಾಲೇಜಿನ ದ್ವೈತ ವೇದಾಂತ ಪ್ರಧಾನಾಧ್ಯಾಪಕರೂ, ನ್ಯಾಯವೇದಾಂತಾದಿ ಶಾಸ್ತ್ರಗಳಲ್ಲಿ ಅದ್ವಿತೀಯ ಪ್ರತಿಭಾವಂತ ಪಂಡಿತರೂ ಆಗಿದ್ದ ಪಂಡಿತರತ್ನಂ, ವಿದ್ವನ್ಮಣಿ, ಶ್ರೀ. ದೊಡ್ಡಬಳ್ಳಾಪುರಂ ವಾಸುದೇವಾಚಾರ್ಯರಲ್ಲಿ ಅವಶಿಷ್ಟ ನ್ಯಾಯಶಾಸ್ತ್ರ ಗ್ರಂಥಗಳನ್ನೂ, ಕ್ರೋಢ ಪತ್ರಗಳನ್ನೂ ವ್ಯಾಸಂಗ ಮಾಡಿದರು. ಮತ್ತು ಶ್ರೀಗಳವರು ತಮ್ಮ ಪೂರ್ವಾಶ್ರಮ ಸೋದರ ಮಾವಂದಿರಾದ, ವಿದ್ವತ್ತಿಲಕರಾದ (ದುರ್ಗದ ಕೃಷ್ಣಾಚಾರ್ಯರು) ಪರಮಪೂಜ್ಯ ಶ್ರೀ ಸುವ್ರತೀಂದ್ರತೀರ್ಥ ಶ್ರೀಪಾದಂಗಳವರಲ್ಲಿ, ಮುಂದೆ ಪರಮಪೂಜ್ಯ ಶ್ರೀ ಸುಯಮೀಂದ್ರತೀರ್ಥ ಶ್ರೀಪಾದಂಗಳವರಲ್ಲಿ ಪ್ರಮಾಣಪದ್ಧತ್ಯಾದಿ ಪ್ರಕರಣಗಳನ್ನೂ, ಸಮಗ್ರ ವೇದಾಂತ ಶಾಸ್ತ್ರವನ್ನೂ ಶಾಂತಿಪಾಠ ಪುರಸ್ಸರವಾಗಿ ಅಭ್ಯಾಸ ಮಾಡಿದರು.

ಶ್ರೀ ವೆಂಕಟರಾಘವೇಂದ್ರಾಚಾರ್ಯರ ವಾದಶೈಲಿಯು ಅಸದೃಶವಾದುದು. ಎಂಥ ಪಂಡಿತರೇ ಬರಲಿ ಸಾವಧಾನದಿಂದ ವಿಷಯ ವಿಚಾರ ಮಾಡಿ ಅವರನ್ನು ನಿರುತ್ತರರನ್ನಾಗಿ ಮಾಡುವ ಕೌಶಲ್ಯವು ಇವರಲ್ಲಿ ಅಸಾಧಾರಣವಾಗಿರುವುದು.

ಪರಮಪೂಜ್ಯ ಶ್ರೀ ಸುಯಮೀಂದ್ರತೀರ್ಥ ಶ್ರೀಪಾದಂಗಳವರು ಮಂತ್ರಾಲಯದ ಸರ್ವತೋಮುಖ ಅಭಿವೃದ್ಧಿ ಮಾಡಿ, ಅಲ್ಲಿ ಶ್ರೀ ಗುರುರಾಜರ ಬೃಂದಾವನ ಕಾರ್ಯಾಲಯವನ್ನು ಸ್ಥಾಪಿಸಿ, ಅನೇಕ ಉತ್ಸವ ಸೇವಾದಿಗಳನ್ನೂ, ನೈಮಿತ್ತಿಕ ಮಹೋತ್ಸವಗಳನ್ನೂ ಏರ್ಪಡಿಸಿ, ಅನೇಕ ಶಿಲಾಮಂಟಪ, ಕಟ್ಟಡಗಳನ್ನೂ ಕಟ್ಟಿಸಿ ಶ್ರೀ ಗುರುರಾಜರ ಸೇವಾ ಸೂತ್ರಗಳು ಸಕ್ರಮವಾಗಿ ನೆರವೇರುವಂತೆ ವಿಶೇಷ ವ್ಯವಸ್ಥೆಗಳನ್ನು ಮಾಡಿ, ಶ್ರೀ ಗುರುರಾಜರ ದಿವ್ಯಸನ್ನಿಧಿಯಲ್ಲಿ ನಡೆಯುವ ಶಾಸ್ತ್ರಾಧ್ಯಯನವು ಬಹು ಫಲಕಾರಿಯೆಂದರಿತು ಅಲ್ಲಿ ಶ್ರೀ ಗುರುಸಾರ್ವಭೌಮ ಸಂಸ್ಕೃತ ಕಾಲೇಜನ್ನು ಸ್ಥಾಪಿಸಿ ನಾಲ್ಕಾರು ಜನ ಶ್ರೇಷ್ಠ ಪಂಡಿತರನ್ನು ವ್ಯವಸ್ಥೆ ಮಾಡಿ, ನ್ಯಾಯ, ವೇದಾಂತ, ವ್ಯಾಕರಣ, ಮೀಮಾಂಸಾ, ಧರ್ಮಶಾಸ್ತ್ರ, ಕಾವ್ಯನಾಟಕಾಲಂಕಾರಾದಿ ಸಾಹಿತ್ಯ ಶಾಸ್ತ್ರಗಳ ಪಾಠಪ್ರವಚನವು ಯಶಸ್ವಿಯಾಗಿ ನೆರವೇರುವಂತೆ ಮಾಡಿ ಅಲ್ಲಿ ವ್ಯಾಸಂಗ ಮಾಡಿ ನೂರಾರು ಜನರು ಪಂಡಿತರಾಗುವಂತೆಯೂ, 20–30 ಜನರು ವಿವಿಧ ಶಾಸ್ತ್ರಗಳಲ್ಲಿ ಮೈಸೂರು, ಮದರಾಸು, ಆಂಧ್ರ ವಿಶ್ವವಿದ್ಯಾನಿಲಯಗಳ ವಿದ್ವತ್ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಶ್ರೇಷ್ಠ ಪಂಡಿತರೆನಿಸಿ ಕೀರ್ತಿಗಳಿಸುವಂತೆಯೂ ಮಾಡಿ, ಶ್ರೀ ಗುರುರಾಜರ ಆರಾಧನೋತ್ಸವವನ್ನು "ಸಪ್ತರಾತ್ರೋತ್ಸವ"ವೆಂಬ ಹೆಸರಿನಿಂದ ಬಹು ವಿಜೃಂಭಣೆಯಿಂದ ನೆರವೇರಿಸುತ್ತಾ ಅದೇ ಕಾಲದಲ್ಲಿ ಮೂರುದಿನ ಕಾಲ ಶ್ರೀ ಸಮೀರಸಮಯ ಸಂವರ್ಧಿನೀ ವಿದ್ವತ್ಸಭೆಯನ್ನು ವಿಶೇಷಾಕಾರವಾಗಿ ನೆರವೇರಿಸುತ್ತಾ ಷಟ್ ಶಾಸ್ತ್ರಗಳಲ್ಲಿ ವಾಕ್ಯಾರ್ಥ, ವಿಚಾರಗೋಷ್ಠಿಗಳನ್ನು ಜರುಗಿಸಿ ನೂರಾರು ವಿದ್ವಜ್ಜನರು, ವಿದ್ಯಾರ್ಥಿಗಳಿಗೆ ವಿಶೇಷ ಸಂಭಾವನೆ ನೀಡಿ, ವಿದ್ವತ್ಪ್ರಶಸ್ತಿ, ಸುವರ್ಣ ಕಂಠಾಭರಣ, ಪದಕ

ಕಾಲು, ಕೋಟಿಗಳ ಸಂಭಾವನೆ ಮುಂತಾದ ರೀತಿಯಿಂದ ಶ್ರೇಷ್ಠ ಪಂಡಿತರನ್ನು ಸನ್ಮಾನಿಸಿ, ಶ್ರೀ ಗುರುಸಾರ್ವಭೌಮರ ಮಹಾಪೀಠದ ಗೌರವ ಕೀರ್ತಿಗಳು ಎಲ್ಲೆಡೆ ಬೆಳಗುವಂತೆ ಮಾಡಿ, ಶ್ರೀಮಠದ ಮೂಲಸ್ಥಳವಾದ ಕುಂಭಕೋಣಕ್ಕೆ ದಿಗ್ವಿಜಯ ಮಾಡಿಸಿದ ಮೇಲೆ, ಮಂತ್ರಾಲಯದಲ್ಲಿ ತಮ್ಮ ಅಭಿಪ್ರಾಯಕ್ಕೆ ತಕ್ಕಂತೆ ಶ್ರೀ ಗುರುರಾಜರ ಸೇವೆಯನ್ನು ಸರಿಯಾಗಿ ಮಾಡುವ ಯೋಗ್ಯ ಅಧಿಕಾರಿಗಳನ್ನು ನಿಯಮಿಸುವ ಸಂದರ್ಭ ಬಂದಾಗ ಆ ಮಹಾಕಾರ್ಯ ನಿರ್ವಹಣೆಗೆ ಶ್ರೀ ವೆಂಕಟರಾಘವೇಂದ್ರಾಚಾರ್ಯರೇ ಅತ್ಯಂತ ದಕ್ಷರೆಂದು ತೀರ್ಮಾನಿಸಿ ಇವರನ್ನೇ ಮಂತ್ರಾಲಯದ ಅಧಿಕಾರಿಗಳನ್ನಾಗಿ ಏರ್ಪಡಿಸಿದರು ಇವರು ಬಹುವರ್ಷ ಕಾಲ ಶ್ರೀ ಶ್ರೀಗಳವರ ಅಭಿಪ್ರಾಯದಂತೆ ಮಂತ್ರಾಲಯದಲ್ಲಿ ಅನೇಕ ಕಟ್ಟಡ ನಿರ್ಮಾಣಾದಿಗಳನ್ನು ಮಾಡಿ ಸರ್ವತೋಮುಖ ಅಭಿವೃದ್ಧಿ ಮಾಡಿ, ಬರುವ ಶಿಷ್ಯ-ಭಕ್ತ ಜನರಿಗೆ ಸರ್ವ ಅನುಕೂಲಗಳನ್ನು ಏರ್ಪಡಿಸಿ ಕೊಟ್ಟು, ಸರ್ವರಿಂದ ಸತ್ಕೃತರಾಗಿ ಶ್ರೀಯವರ ಪರಮಾನುಗ್ರಹಕ್ಕೆ ಪಾತ್ರರಾಗಿ ಅಧಿಕಾರವನ್ನು ಯಶಸ್ವಿಯಾಗಿ ನಿರ್ವಹಿಸಿದರು.

ಶ್ರೀ ಗುರುರಾಜರು ತಮ್ಮ ಸೇವೆಯನ್ನು ಅಮೋಘವಾಗಿ ಮಾಡಿದ ಇವರಿಗೆ ಯಾವರೀತಿ ಅನುಗ್ರಹ ಮಾಡಬೇಕೆಂದು ಯೋಚಿಸಿ ಕೊನೆಗೆ ಇವರ ಸೇವೆಗೆ ಸರಿಯಾದ ಅನುಗ್ರಹವೆಂದರೆ ಇವರನ್ನು ತಮ್ಮ ವೇದಾಂತ ಸಾಮ್ರಾಜ್ಯ ಪೀಠಕ್ಕೆ ಅಧಿಕಾರಿಗಳನ್ನಾಗಿ ಮಾಡಬೇಕೆಂದು ನಿರ್ಣಯಿಸಿದರೋ ಏನೋ ಎಂಬಂತೆ ಶ್ರೀ ಸುಯಮೀಂದ್ರತೀರ್ಥರಿಗೆ ದೇಹಾಲಸ್ಯವಾಗಲು ಅವರಿಗೆ ಪ್ರೇರಣೆ ಮಾಡಿ ಇವರಿಗೆ ಸಂಸ್ಥಾನಾಧಿಪತ್ಯವನ್ನು ಕೊಡಿಸಿ ಪರಮಾನುಗ್ರಹ ಮಾಡಿದ್ದಾರೆಂದು ಹೇಳಿದರೆ ಅತಿಶಯವಾಗಲಾರದು.

ಶ್ರೀ ಸುಯಮೀಂದ್ರತೀರ್ಥರಿಗೆ ದೇಹಾಲಸ್ಯವಾಗಲು ಶ್ರೀಮದಾಚಾರ್ಯರ ಪರಂಪರೆಯಿಂದ ವಿಚ್ಛಿತ್ತಿಯಿಲ್ಲದೆ ನಡೆದು ಬರುತ್ತಿರುವ ಶ್ರೀ ಮೂಲರಾಮದೇವರ ಪೂಜಾರಾಧನೆ - ಪಾಠಪ್ರವಚನ - ಸಿದ್ಧಾಂತಸ್ಥಾಪನ - ಶಿಷ್ಯೋದ್ಧಾರಾದಿ ಕಾರ್ಯಗಳು ಸುಗಮವಾಗಿ ನೆರವೇರುವಂತೆ ಮಾಡಲು ನಿಶ್ಚಯಿಸಿ ಶ್ರೀಗಳವರು ಶ್ರೀ ಗುರುರಾಜರ ಪೂರ್ವಾಶ್ರಮ ವಂಶಜರೂ, ತಮ್ಮ ಪೂರ್ವಾಶ್ರಮ ಚಿಕ್ಕಪ್ಪಂದಿರ ಸತ್ಪುತ್ರರೂ ತಮ್ಮ ಪರಮಾಭಿಮಾನಕ್ಕೆ, ಅನುಗ್ರಹಕ್ಕೆ ಪಾತ್ರರೂ ಮಹಾಪಂಡಿತರೂ, ಮಹಾಸಂಸ್ಥಾನದ ಲೌಕಿಕ-ವೈದಿಕಕಾರ್ಯಧುರಂಧರರೂ ಮಹಾಸಂಸ್ಥಾನದ ಸತ್ಪರಂಪರೆಯಂತೆ, ಪದ್ಧತಿಯಂತೆ ಮಹಾಪೀಠಕ್ಕೆ ಬರಲು ಏಕೈಕ ಸಮರ್ಥರೂ ಆದ ಶ್ರೀ ವೆಂಕಟರಾಘವೇಂದ್ರಾಚಾರ್ಯರನ್ನು ಏಕಾಂತದಲ್ಲಿ " ನೀವು ಆಶ್ರಮವನ್ನು ಸ್ವೀಕರಿಸಬೇಕು " ಎಂದು ಆಜ್ಞಾಪಿಸಲಾಗಿ ಆಚಾರ್ಯರು ಶ್ರೀ ಗುರುರಾಜರು ಶ್ರೀ ಸುಧೀಂದ್ರತೀರ್ಥರಲ್ಲಿ ಅರಿಕೆ ಮಾಡಿಕೊಂಡಂತೆ

" ಕ್ವಾಹಂನ್ಯಾಸಃ ಕುತ್ರ ವಾ ವೇದವಿದ್ಯಾಸಾಮ್ರಾಜ್ಯಂತೇ ಕ್ವಾಪಿ ವಿದ್ಯಾಹಮಾರ್ಯ ? |
ಪಾರಂಸಿಂಧೋಃ ಭಾರಮೂಢ್ವಾವಿವೇಕೀಗಂತುಂ ಯತ್ನಂ ಕೋಜನಃ ಸಂತನೋತಿ ? ॥ "

" ಗುರುವರ್ಯರೇ ! ನಾನೆಲ್ಲಿ ಸನ್ಯಾಸವೆಂದರೇನು ! ವೇದವಿದ್ಯಾ ಸಾಮ್ರಾಜ್ಯವೆಲ್ಲಿ, ನಿಮ್ಮ ವಿದ್ಯೆಯೆಲ್ಲಿ ? ಸಾಮಾನ್ಯನಾದ ನಾನೆಲ್ಲಿ ? ವೇದಾಂತ ಸಾಮ್ರಾಜ್ಯದಂಥ ಮಹಾಭಾರವನ್ನು ಹೊತ್ತು ಯಾವನಾದರೂ ವಿವೇಕಿಯಾದವನು ಸಮುದ್ರ ದಾಟಲು ಯತ್ನಿಸಿಯಾನೆ ? ಆದ್ದರಿಂದ ನನಗೆ ಆ ಯೋಗ್ಯತೆ ಎಲ್ಲಿಯದು ? ದಯವಿಟ್ಟು ಕ್ಷಮಿಸಬೇಕು " ಎಂದು ವಿನಯದಿಂದ ಪ್ರಾರ್ಥಿಸಲು ಶ್ರೀ ಸುಯಮೀಂದ್ರತೀರ್ಥರಾದರೂ ಶ್ರೀ ಸುಧೀಂದ್ರರು ಉಪದೇಶಿಸಿದಂತೆ "

ಇತ್ಯುಕ್ತಸ್ತಂಪ್ರಾಹ ನಾವೋಹಿ ಬಹ್ವಃ ಶಾಂತಿರ್ದಾಂತೀ ಧೀರತೋದಾರತಾ ಚ |
ಸೇತುಸ್ತಾಸಾಂ ಮತ್ಪ್ರಸಾದೋ ಗರೀಯಾನ್ ವಿದ್ಯಂತೇ ಕಿಂ ದುರ್ಘಟಂ ಸಿಂಧುಯಾನೇ ॥ "

ಶಾಂತಿ ದಾಂತಿಧೀರತಾ ಉದಾರತಾ ಮುಂತಾದ ಅನೇಕ ನಾವೆಗಳಿರಲು ಮೇಲಾಗಿ ನಮ್ಮ ಶ್ರೀಮದಾಚಾರ್ಯರ ಕೃಪಾದರ್ಶನವಾದ ಕೃಪಾಪಾತ್ರರಾಗಿರಲು ನಿಮಗೆ ಈ ಸಿಂಧುಯಾನವು ದುರ್ಘಟವಾಗಲಾರದು. ನೀವು ಈ ಪೀಠಕ್ಕೆ ಬರಲು ಬೇಕಾದ ಎಲ್ಲ ಅರ್ಹತೆಗಳುಳ್ಳವರಾಗಿದ್ದೀರೆಂದೇ ಶ್ರೀ ಮೂಲರಾಮ, ಶ್ರೀ ಗುರುರಾಜರು ನಮಗೆ ಪ್ರೇರಿಸಿದ್ದಾರೆ. ಅಂತೆಯೇ ನಿಮಗೆ ಹೇಳುತ್ತಿದ್ದೇವೆ ! ಪರಮಹಂಸಾಶ್ರಮವನ್ನು ಸ್ವೀಕರಿಸಿ ಶ್ರೀಮದಾಚಾರ್ಯರ ಸಿದ್ಧಾಂತಸ್ಥಾಪನಾದಿ ಮಹಾಕಾರ್ಯಗಳಿಂದ ನೀವು ಕೀರ್ತಿವಂತರಾಗಬೇಕೆಂಬುದೇ ನಮ್ಮ ಆಶೆ. ನೀವು ಬೇರೆ ಮಾತು ಹೇಳದೆ ಆಶ್ರಮ ಸ್ವೀಕರಿಸಲು ಸಿದ್ಧರಾಗಿರಿ " ಎಂದು ಅಪ್ಪಣೆ ಮಾಡಿದರು. ಆಗ ಆಚಾರ್ಯರು " ಗುರ್ವಾಜ್ಞೆ " ಎಂದು ಸಕಲ ಪ್ರಾಪಂಚಿಕ ಸೌಖ್ಯಗಳನ್ನು ತುಚ್ಛೀಕರಿಸಿ ತುರೀಯಾಶ್ರಮವನ್ನು ಸ್ವೀಕರಿಸಿದರು. ಇದಲ್ಲವೇ ವಿರಕ್ತಿ !! ಏಕೆಂದರೆ ನವತಾರುಣ್ಯ ವಯಸ್ಸು, ವಿನಯ ಸೌಶೀಲ್ಯ ಪಾತಿವ್ರತ್ಯಾದಿ ಗುಣ ಮಂಡಿತಳಾದ ಧರ್ಮಪತ್ನಿ, ಪುತ್ರರು–ಪುತ್ರಿಯರು, ಮೇಲಾಗಿ ವಿಪುಲ ಸಿರಿಸಂಪತ್ತು–ಅಧಿಕಾರಿಗಳಿದ್ದು ಯಾವ ವಿಧ ತೊಂದರೆಯೂ ಇಲ್ಲದೆ, ಸುಖವಾಗಿರಲು ಅನುಕೂಲಗಳಿದ್ದರೂ ಅವೆಲ್ಲವನ್ನು ಕಡೆಗಣಿಸಿರುವುದೇ ವೈರಾಗ್ಯ ! ಇದನ್ನು ನೋಡಿದರೆ " ಶ್ರೀಮನ್ಮಾತಾಪಿತೃಮುಖಜನೇ " ಎಂದು ಶ್ರೀ ಟೀಕಾರಾಯರನ್ನು ಹೊಗಳಿದ ಮಾತು ಸ್ಮರಣೆಗೆ ಬರುತ್ತದೆ. ಇದು ಆಶ್ಚರ್ಯವೇನಲ್ಲ. ಶ್ರೀಮಟ್ಟೀಕಾಕೃತ್ಪಾದರ ಪವಿತ್ರ ಪೀಠಕ್ಕೆ ಬರುವವರಿಗೆ ಅಂಥಾ ವೈರಾಗ್ಯ ಸ್ವಾಭಾವಿಕವಲ್ಲವೇ ?

ಶ್ರೀ ಸುಯಮೀಂದ್ರತೀರ್ಥ ಶ್ರೀಪಾದಂಗಳವರು ಶೋಭನಕೃತು ಸಂವತ್ಸರದ ನಿಜ ಆಶ್ವಿನ ಕೃಷ್ಣ ತೃತೀಯಾ ದಿವಸ ವಿದ್ವತ್ಸಭೆಯಲ್ಲಿ ಶ್ರೀ ವೆಂಕಟರಾಘವೇಂದ್ರಾಚಾರ್ಯರಿಗೆ ತುರೀಯಾಶ್ರಮ ಸ್ವೀಕಾರಕ್ಕೆ ಅಪ್ಪಣೆಯಿತ್ತು ಫಲ ಮಂತ್ರಾಕ್ಷತೆ ಅನುಗ್ರಹಿಸಿ ಆಶ್ವಿನ ಕೃಷ್ಣ ಚತುರ್ಥೀ ಮಂಗಳವಾರ (5-11-1963) ಪರಂಪರಾಗತ ಕ್ರಮದಂತೆ ಆಶ್ರಮ ಸ್ವೀಕರಿಸಿ ಬಂದ ನೂತನ ಗುರುಗಳಿಗೆ ಮಂತ್ರ ಮುದ್ರಾಧಾರಣ, ಗುರೂಪದೇಶಾದಿಗಳನ್ನು ಮಾಡಿ " ಶ್ರೀ ಸುಜಯೀಂದ್ರತೀರ್ಥ ಶ್ರೀಪಾದಂಗಳವರು " ಎಂಬ ನಾಮಕರಣ ಪೂರ್ವಕವಾಗಿ ಪ್ರಿಯಶಿಷ್ಯರಾದ ಇವರನ್ನು ಶ್ರೀಮದಾಚಾರ್ಯರ ವೇದಾಂತ ದಿಗ್ವಿಜಯ ವಿದ್ಯಾಸಿಂಹಾಸನದಲ್ಲಿ ಪಟ್ಟಾಭಿಷೇಕವನ್ನು ಸ್ವಹಸ್ತದಿಂದ ಅತ್ಯಂತ ಪ್ರೇಮ ವಾತ್ಸಲ್ಯ ಪೂರ್ವಕವಾಗಿ ನೆರವೇರಿಸಿ ಆಶೀರ್ವದಿಸಿದರು. ಆ ಸಮಯದಲ್ಲಿ ಗುರು ಶಿಷ್ಯರು ಮಾಡಿದ ಅನುಗ್ರಹ ಭಾಷಣಗಳು ಸ್ವರ್ಣಾಕ್ಷರಗಳಿಂದ ಬರೆದಿಡುವಂತಹುದು. ಸ್ವಸಂತೋಷದಿಂದ ಮನಃಪೂರ್ವಕವಾಗಿ ನಗುನಗುತ್ತಾ ಆಶ್ರಮ ಕೊಟ್ಟು ಪಟ್ಟಾಭಿಷೇಕ ಮಾಡೋಣ ತಮ್ಮ ಗುರುಗಳಲ್ಲಿ ಶಿಷ್ಯರಾದವರು ಅಪಾರ ಭಕ್ತಿ ತೋರಿ ಸೇವೆ ಮಾಡೋಣ ಇಂತಹ ಅಪೂರ್ವ ದೃಶ್ಯವನ್ನು ನೋಡಿದ ಅಂದು ಸೇರಿದ ಸಹಸ್ರಾರು ಜನರೇ ನಿಜವಾಗಿ ಧನ್ಯರು.

ಪಟ್ಟಾಭಿಷಿಕ್ತರಾದ ಶ್ರೀಗಳವರ ದರ್ಶನಕ್ಕೆ ಅನೇಕ ಪಂಡಿತರುಗಳು ಬಂದ ಸಂದರ್ಭವನ್ನು ಸಾರ್ಥಕಗೊಳಿಸಲೋ ಏನೋ ಅಂದು ಮಧ್ಯಾಹ್ನ ಭೋಜನ ಸಮಯದಲ್ಲಿ ಶ್ರೀಗಳವರು ಅನೇಕ ಪಂಡಿತರನ್ನುದ್ದೇಶಿಸಿ ವಿನೋದವಾಗಿ ' ಪರಿಮಳ 'ದಲ್ಲಿನ ಒಂದು ಘಟ್ಟದಲ್ಲಿಯೂ, ನಂತರ " ಶೃಂಗೇಕರ್ಣೇ ಗೃಹೀತ್ವಾ" ಎಂಬ ತತ್ತ್ವನಿರ್ಣಯ ಟೀಕೆಗೆ ವ್ಯಾಖ್ಯಾನ ಮಾಡುವಾಗ ಶ್ರೀ ಪರಿಮಳಾಚಾರ್ಯರು — " ದ್ವಿತೀಯಾ ದ್ವಿವಚನಾಂತಂ ಪದದ್ವಯಂ " ಎಂದು ವಿವರಣ ಮಾಡಿದ್ದಾರೆ. ಕರ್ಣ ಶಬ್ದವು ಪುಲ್ಲಿಂಗಕ, ಅಂದಮೇಲೆ ಹೇಗೆ ಯುಕ್ತವಾಗುವುದು ? ಎಂಬುದಾಗಿ ವಿಚಾರ ಮಾಡಿ ಪಂಡಿತರನ್ನು ಮೆಚ್ಚಿಸಿದರು. ಮರುದಿನ ಸಭೆಯಲ್ಲಿ ಭಾಗವತ ದಶಮದಲ್ಲಿ ಶ್ರೀಕೃಷ್ಣನು " ನನ್ನ ಜನ್ಮ ಕರ್ಮಾದಿಗಳು ಅನೇಕವಿರುವುದು. ಅವುಗಳನ್ನು ನನ್ನಿಂದಲೂ ತಿಳಿಯಲು ಅಶಕ್ಯ"ವೆಂದು

" ಜನ್ಮ ಕರ್ಮಾಭಿಧಾನಾನಿಸಂತಿಮೇಽಂಗ ಸಹಸ್ರಶಃ ।
ನ ಶಕ್ಯಂತೇಽನು ಸಂಧಾತುಂ ಅನಂತತ್ವಾನ್ಮಯಾಪಿ ಹಿ "

ಎಂದು ಹೇಳಿದ್ದಾನೆ. ಆದ್ದರಿಂದ ಪರಮಾತ್ಮನ ಗುಣಗಳು ಅನಂತವೆಂದರೆ ಇಷ್ಟೆಂದು ತಿಳಿಯಲು ಶಕ್ಯವಿಲ್ಲವೆಂದು ಅರ್ಥವಾಗುವುದು. ಹಾಗೆ ಅಂಗೀಕಾರ ಮಾಡಿದರೆ ಸರ್ವಜ್ಞತ್ವ ಬರುವುದಿಲ್ಲವಾದ್ದರಿಂದ ಸರ್ವಜ್ಞತ್ವಶ್ರುತಿ ಭಾಗವತ ವಾಕ್ಯಗಳಿಗೂ ವಿರೋಧ ಬರುವುದು" ಎಂದು ವಿಚಾರ ಮಾಡಿ ಶ್ರೀಗಳವರು ಸಭಿಕರನ್ನೂ ಪಂಡಿತರನ್ನೂ ಆಶ್ಚರ್ಯ ಮೂಕರನ್ನಾಗಿಸಿದರು. ತಮ್ಮ ದರ್ಶನಕ್ಕೆ ಬರುವ ಪಂಡಿತರನ್ನು ಆಯಾ ಶಾಸ್ತ್ರಗಳಲ್ಲಿ ವಿಚಾರ ಮಾಡಿ ಯೋಗ್ಯ ಸಂಭಾವನೆಯಿತ್ತು ಅವರನ್ನು ಸಂತೋಷಪಡಿಸುವುದು ಶ್ರೀಗಳವರ ಸ್ವಭಾವವಾಗಿದೆ.

ಸುಮಾರು 35 ವರ್ಷಗಳಿಂದ ಶ್ರೀಗಳವರ ಪೂರ್ವಾಶ್ರಮದಿಂದಲೂ ಅವರೊಡನಿದ್ದು ಅವರ ಪ್ರೀತಿಪಾತ್ರನಾದ ನನಗೆ ಅವರ ಕರ್ಮಾನುಷ್ಠಾನಬದ್ಧತೆ, ನ್ಯಾಯ ವೇದಾಂತಾದಿ ಶಾಸ್ತ್ರಪಾಂಡಿತ್ಯ, ವಿದ್ಯಾಪಕ್ಷಪಾತಿತ್ವಾದಿಗಳು ಗೊತ್ತಿರುವುದರಿಂದ ಇಂಥ ಗುಣಮಂಡಿತರಾದವರನ್ನು ವೇದಾಂತ ಸಾಮ್ರಾಜ್ಯದಲ್ಲಿ ಮಂಡಿಸಿ ಶ್ರೀಮಧ್ವಾಚಾರ್ಯರ ಪೀಠಾಧಿಪತ್ಯವನ್ನು ವಹಿಸಿ ಕೊಟ್ಟು ನಮ್ಮೆಲ್ಲರಲ್ಲೂ ಪರಮಾನುಗ್ರಹ ಮಾಡಿದ ಪೂಜ್ಯ ಶ್ರೀ ಸುಯಮೀಂದ್ರತೀರ್ಥರಿಗೆ ಶಿಷ್ಯರು ಭಕ್ತರು ಪಂಡಿತ ಮಂಡಲಿ, ಬ್ರಾಹ್ಮಣ ಸಮಾಜ, ಚಿರಋಣಿಯಾಗಿದೆ.

ಪರಮಪೂಜ್ಯ ಶ್ರೀ ಸುಜಯೀಂದ್ರತೀರ್ಥರು ಚಿರಕಾಲ ವಿದ್ಯಾಪೀಠದಲ್ಲಿ ವಿರಾಜಿಸಿ ಶ್ರೀ ಮೂಲರಾಮ ಪೂಜಾರಾಧನೆ, ಪಾಠಪ್ರವಚನ, ಸಿದ್ಧಾಂತ ಸ್ಥಾಪನೆ, ವಿದ್ವಜ್ಜನಾಶ್ರಿತಜನರ ರಕ್ಷಣೆ, ಶಿಷ್ಯಭಕ್ತಜನೋದ್ಧಾರ, ಲೋಕಕಲ್ಯಾಣಾಸಕ್ತರಾಗಿ ಶ್ರೀ ಗುರುರಾಜರ ಪರಮಾನುಗ್ರಹಕ್ಕೆ ಪಾತ್ರರಾಗಿ ಕೀರ್ತಿಶಾಲಿಗಳಾಗಿ ವಿರಾಜಿಸಲಿ ಎಂದು ಪ್ರಾರ್ಥಿಸಿ ವಿರಮಿಸುತ್ತೇನೆ.

ಶ್ರೀಮನ್ಮೂಲರಘೂದ್ವಹಾಂಘ್ರಿಮಧುಪಃ ಶ್ರೀ ರಾಘವೇಂದ್ರಪ್ರಭೋಃ ।
ಸೇವಾಸಕ್ತಮನಾಃ ಕುವಾದಿಕರಿರಾಟ್ ಪಂಚಾನನಃ ಸನ್ನುತಃ ॥
ಧೀರ ಶ್ರೀ ಸುಯಮೀಂದ್ರ ಸಂಯಮಿಮಣೇಸ್ವರ್ಥೇಸುವತ್ಸಃ ಪ್ರಭುಃ ।
ಜೀಯಾತ್ ಸುಜಯೀಂದ್ರಪೀಠಶಿಖರಃ ವೇದಾಂತರಾಜ್ಯೇ ಚಿರಮ್ ॥ ಇತಿಶಂ ॥

ಶ್ರೀ ಶ್ರೀ ಸುಜಯೀಂದ್ರ ಶ್ರೀಪಾದಂಗಳವರು

ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಮಂತ್ರಾಲಯ.

ಲೇ|| ಶ್ರೀ ವಿಜ್ಞಾನನಿಧಿತೀರ್ಥ ಶ್ರೀಪಾದಂಗಳವರು

ಶ್ರೀಪಾದರಾಜ ಮಠ

ಲೋಕಪ್ರಖ್ಯಾತ ಶ್ರೀ ಸುಜಯೀಂದ್ರರು ಶ್ರೀ ರಾಘವೇಂದ್ರಪದಾಸಕ್ತಂ ।
ಶ್ರೀ ಧೀರೇಂದ್ರ ಕೃಪಾಸಿಂಧುಃ ।
ಸುಯಮೀಂದ್ರ ಕರಾಬ್ಜೋತ್ಥ ಸುಜಯೀಂದ್ರ ಗುರುಂಭಜೇ ॥
ವಿದ್ಯಾ ಸಮೃದ್ಧಿ ಸಾಗರ ।
ಗೌತಮಗೋತ್ರೋದ್ಭವ ಮೌಕ್ತಿಕ ವಿದ್ಯಾರ್ಥಿಸಮೂಹ ಮಂದಾರಂ ಸುಜಯೀಂದ್ರ ಗುರುಂಭಜೇ ॥

ಜಗದ್ಗುರುಗಳೂ, ಕಲ್ಪವೃಕ್ಷ ಕಾಮಧೇನೂ ಇತ್ಯಾದಿ ಹಾಗೂ ಸರ್ವಾಭೀಷ್ಟ ಫಲಪ್ರದರೂ ಆದ ಶ್ರೀ ಶ್ರೀ ರಾಘವೇಂದ್ರ ಗುರುಸಾರ್ವಭೌಮರ ಪೂರ್ಣಾನುಗ್ರಹಕ್ಕೆ ಪಾತ್ರರಾದ ಶ್ರೀ ವೆಂಕಟರಾಘವೇಂದ್ರಾಚಾರ್ಯರೂ ತಮ್ಮ ಬಾಲ್ಯದಿಂದಲೂ ಮಧ್ವಶಾಸ್ತ್ರದಲ್ಲಿ ಪಾಂಡಿತ್ಯ ಪಡೆದು ಅನೇಕ ವಿದ್ವತ್‌ಸಭೆಗಳಲ್ಲಿ ತಮ್ಮ ಪಾಂಡಿತ್ಯದಿಂದ ಪ್ರಸಿದ್ಧಿ ಪಡೆದದ್ದು ಮಾತ್ರವಲ್ಲದೆ ಲೌಕಿಕ ವ್ಯವಹಾರಗಳಲ್ಲಿ ತಮ್ಮ ದಕ್ಷತೆಯನ್ನು ವ್ಯಕ್ತ ಪಡಿಸಿದ್ದರ ಫಲವಾಗಿ ಶ್ರೀ ಶ್ರೀ ರಾಘವೇಂದ್ರಸ್ವಾಮಿಗಳ ಮಠದ ಪೀಠವು ಶೋಭನನಾಮ ಸಂವತ್ಸರದಲ್ಲಿ ಲಭ್ಯವಾಯಿತು.

ಶ್ರೀ ಶ್ರೀ ಸುಯಮೀಂದ್ರತೀರ್ಥ ಶ್ರೀಪಾದಂಗಳವರು ತಮ್ಮ ಪೂರ್ವಾಶ್ರಮದ ಸಹೋದರರಾದ ಶ್ರೀ ವೆಂಕಟ ರಾಘವೇಂದ್ರಾಚಾರ್ಯರಿಗೆ ಶ್ರೀ ಶೋಭನನಾಮ ಸಂವತ್ಸರದಲ್ಲಿ ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಿಸಿ ಆಶ್ರಮ ದೀಕ್ಷೆಯನ್ನಿತ್ತು ಶ್ರೀ ಶ್ರೀ ರಾಘವೇಂದ್ರ ಗುರುಸಾರ್ವಭೌಮರ ವೇದಾಂತ ಸಾಮ್ರಾಜ್ಯ ಪೀಠದಲ್ಲಿ ಪಟ್ಟಾಭಿಷೇಕ ಮಾಡಿ ಶ್ರೀ ಶ್ರೀ ಸುಜಯೀಂದ್ರರೆಂದು ನಾಮಕರಣ ಮಾಡಿದರು. ತದಾರಭ್ಯ ಶ್ರೀ ಶ್ರೀ ಸುಜಯೀಂದ್ರ ಶ್ರೀಪಾದಂಗಳವರು ತಮ್ಮ ಗುರುಗಳೊಂದಿಗೆ ಸ್ನಾನ, ಜಪತಪಾದಿಗಳನ್ನು ಮಾಡಿಕೊಂಡು ಸುಮಾರು ಎರಡು ವರುಷಗಳ ನಂತರ ತಮ್ಮ ಗುರುಗಳನ್ನು ಕೂಡಿಕೊಂಡು ಶ್ರೀ ಶ್ರೀಪಾದರಾಜ ಗುರುಸಾರ್ವಭೌಮರ ದರ್ಶನಾರ್ಥಿಗಳಾಗಿ ಮುಳಬಾಗಿಲಿಗೆ ಬಂದು ಶ್ರೀ ಶ್ರೀಪಾದರಾಜರ ದರ್ಶನ ಮಾಡಿ ಗುರುಗಳ ಅನುಗ್ರಹ ಪಡೆಯುವ ಆಕಾಂಕ್ಷೆಯಿಂದ ಶ್ರೀ ಶ್ರೀಪಾದರಾಜರಿಂದ ರಚಿಸಲ್ಪಟ್ಟ ವಾಗ್ವಜ್ರ ಗ್ರಂಥವನ್ನು ಪಾರಾಯಣ ಮಾಡಲು ರಾಜರ ಸನ್ನಿಧಿಯಲ್ಲಿ ಪಾರಾಯಣ ಮಾಡಲು ಉದ್ಯುಕ್ತ ರಾಗಿ ಗ್ರಂಥಾವಲೋಕನಕ್ಕೆ ತಮ್ಮ ಉಪನೇತ್ರವನ್ನು ಮರೆತು ಬಂದಿದ್ದರಿಂದ ಗ್ರಂಥಾವಲೋಕನ ಅಸಾಧ್ಯವಾಯಿತು. ಆ ಕಾಲದಲ್ಲಿ ಉಪನೇತ್ರವನ್ನು ತಂದುಕೊಡಲು ಶಿಷ್ಯರು ಯಾರು ಇರಲಿಲ್ಲವಾಗಿ ಬಹಳ ವ್ಯಾಕುಲಪಟ್ಟವರಾಗಿ ತಮ್ಮ ಸಂಕಟವನ್ನು ಶ್ರೀ ಶ್ರೀಪಾದರಾಜ ಗುರುಗಳಲ್ಲಿ ಒಪ್ಪಿಸಲಾಗಿ ಶ್ರೀ ಶ್ರೀಪಾದರಾಜರ ಸಂಪೂರ್ಣಾನುಗ್ರಹಕ್ಕೆ ಪಾತ್ರರಾದ ದ್ಯೋತಕವಾಗಿ, ಉಪನೇತ್ರವಿಲ್ಲದೆ ವಾಗ್ವಜ್ರಗ್ರಂಥ (ಹಸ್ತಲಿಪಿ ಗ್ರಂಥ) ಸಂಪೂರ್ಣ ಪಾರಾಯಣ ಮಾಡುವಂತಾದರು.

ಈ ಸಮಾಚಾರವನ್ನು ಅತ್ಯಂತ ಸಂತೋಷಭರಿತರಾಗಿ ಅಂದು ಮುಳಬಾಗಿಲು ಶ್ರೀ ಶ್ರೀ ಪಾದರಾಜ ಮಠದ ಪೀಠಾಧಿಪತಿಗಳಾದ ಶ್ರೀ ಶ್ರೀ ಸತ್ಯನಿಧಿ ತೀರ್ಥರಲ್ಲಿ ವ್ಯಕ್ತಪಡಿಸಿ ತಮಗೆ ಆಶ್ರಮವಾಗಿ ಸುಮಾರು ಎರಡು ವರುಷಗಳಾದರೂ ಶ್ರೀ ಮೂಲ ರಾಮದೇವರ ಪೂಜೆ ಲಭ್ಯವಾಗಲಿಲ್ಲವೆಂದು ತಿಳಿಸುತ್ತಿರುವಲ್ಲಿ, ಹೈದರಾಬಾದಿನಿಂದ ಶ್ರೀ ಶ್ರೀ ರಾಘವೇಂದ್ರ ಸ್ವಾಮಿಗಳ ಮಠಕ್ಕೆ (ಮುಳಬಾಗಿಲು ಮೊಕ್ಕಾಂ) ಒಂದು ತಂತಿ ಬಂತು. ತಂತಿಯ ಮುಖ್ಯ ವಿಷಯ ಶ್ರೀಮಠದ ಮುಖ್ಯ ವ್ಯವಹಾರದ ಬಗ್ಗೆ ಶ್ರೀಗಳವರು ಅಗತ್ಯ ಹೈದರಾಬಾದಿಗೆ ಬರಬೇಕೆಂದು. ಈ ವಿಷಯ ತಿಳಿದ ಶ್ರೀ ಶ್ರೀ ಸುಯಮೀಂದ್ರ ಶ್ರೀಪಾದಂಗಳವರು ತಮ್ಮ ಶಿಷ್ಯರೂ ಹಾಗೂ ಶ್ರೀ ಪೀಠದಲ್ಲಿ ಪಟ್ಟಾಭಿಷಿಕ್ತರೂ ಆದ ಶ್ರೀ ಶ್ರೀ ಸುಜಯೀಂದ್ರ ಶ್ರೀಪಾದಂಗಳವರಿಗೆ ಸಂಸ್ಥಾನದ ಮೂಲ ರಾಮಚಂದ್ರದೇವರು ಇತ್ಯಾದಿ ಎಲ್ಲಾ ಪ್ರತಿಮೆಗಳನ್ನು ಹಾಗೂ ಸಮಸ್ತ ಆಡಳಿತವನ್ನು ಒಪ್ಪಿಸಿ ಹೈದರಾಬಾದಿಗೆ ಕಳುಹಿಸಿಕೊಟ್ಟರು. ತದಾರಭ್ಯ ಮಂತ್ರಾಲಯ ಮಠದ ಸರ್ವತೋಮುಖ ಅಭಿವೃದ್ಧಿಗೆ ಕಾರಣರಾಗಿ ಶ್ರೀ ಶ್ರೀ ಗುರುರಾಜರ ಸಂಪೂರ್ಣ ಅನುಗ್ರಹಕ್ಕೆ ಪಾತ್ರರಾಗಿ ಶ್ರೀ ಶ್ರೀ ರಾಘವೇಂದ್ರ ಗುರ್ವಂತರ್ಯಾಮಿ ಶ್ರೀ ಭಾರತೀರಮಣ ಮುಖ್ಯ ಪ್ರಾಣಾಂತರ್ಗತ ಶ್ರೀ ರಾಮಚಂದ್ರದೇವರ ಪಾದಾರವಿಂದವನ್ನು ಸೇರಿರುತ್ತಾರೆ.

ಇಂದಿನ ಮಂತ್ರಾಲಯ ಶ್ರೀ ಶ್ರೀ ಸುಜಯೀಂದ್ರರು ಸರ್ವದಾ ಜೀವಂತರಾಗಿರುತ್ತಾರೆಂದು ಪುನಃ ಹೇಳಬೇಕಾಗಿಲ್ಲ.

ಶ್ರೀ ಗುರುಸ್ಮರಣೆ

ಲೇಖಕರು :

ಧನ್ವಂತರಿ ಮಾಧವಮೂರ್ತಿ, ಅಧ್ಯಕ್ಷರು.
ಜ್ಞಾನಜ್ಯೋತಿ ಕಲಾ ಮಂದಿರ ಮತ್ತು
ಜ್ಞಾನಸುಧಾ ಸಂಪಾದಕ ಮಂಡಲಿ.

ದುರ್ಲಭವಾಗಿ ಲಭಿಸಿದ ಈ ಮಾನವ ಜನ್ಮದಲ್ಲಿ ಅತ್ಯಾವಶ್ಯಕವಾಗಿ ಮಾಡಿಕೊಳ್ಳಬೇಕಾದ ಕಡ್ಡಾಯ ಕರ್ತವ್ಯವೆಂದರೆ ಜ್ಞಾನಸಾಧನೆ. ಇದನ್ನೇ ಗೀತಾಚಾರ್ಯನಾದ ಶ್ರೀಕೃಷ್ಣ ಪರಮಾತ್ಮ "ನ ಹಿ ಜ್ಞಾನೇನ ಸದೃಶಂ" ಎಂದು ಬೋಧಿಸಿದ. ವೇದ ಸಮ್ಮತವಾದ ನೈಜ ಜ್ಞಾನ ಪ್ರಾಪ್ತಿಗೆ ಸೂಕ್ತ ಗುರು ಒಬ್ಬರ ಪಾತ್ರ ಅತ್ಯಾವಶ್ಯಕವಾದುದು. ಶ್ರೀ ಪುರಂದರ ದಾಸರು ತಮದೊಂದು ಕೃತಿಯಲ್ಲಿ "ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ" ಎಂದಿದ್ದಾರೆ. "ಮುಕುಂದ ಭಕ್ತಿ, ಗುರುಭಕ್ತಿ ಜಾಯ್ತೆ" ಎಂಬುದು ಶ್ರೀ ಸುಮಧ್ವವಿಜಯ ವಚನ. ಅಂತಹ ಗುರು ಯಾರೆಂಬುದನ್ನು ಆಲೋಚಿಸಿದಾಗ ನಮಗೆ ಬಳಿತ್ಥಾಸೂಕ್ತ ಪ್ರತಿಪಾದ್ಯರಾದ ಸಾಕ್ಷಾತ್ ವಾಯುದೇವರಿಂದ ನಿಶ್ಚಿತ ಜ್ಞಾನ ಪ್ರಾಪ್ತವಾಗುತ್ತದೆ.

ಈ ವಾಯುದೇವರು ಜಗತ್ತಿನ ಕಲ್ಯಾಣಾರ್ಥವಾಗಿ ಭಗವತ್ಕಾರ್ಯಸಾಧಕರಾಗಿ ಮೂರಾವರ್ತಿ ಅವತರಿಸಿದ್ದಾರೆ. ಆ ರೂಪಗಳೇ ಹನುಮದ್ ಅವತಾರ, ಭೀಮಸೇನದೇವರ ಅವತಾರ, ಮಧ್ವಾವತಾರ.

ಮೊದಲ ಎರಡು ಅವತಾರಗಳಲ್ಲಿ ಶ್ರೀ ವಾಯುದೇವರು ಜ್ಞಾನದಿಂದ ಕೂಡಿದ ವಿಶೇಷ ಬಲ ಕಾರ್ಯವನ್ನು ಮೂರನೆ ಅವತಾರದಲ್ಲಿ ವಿಶೇಷ ಬುದ್ಧಿ ಬಲವನ್ನು ಹೊಂದಿದ್ದರೂ ಅಪಾರವಾದ ಜ್ಞಾನ ಕಾರ್ಯವನ್ನು ಮಾಡಿ ಜಗದ್ಗುರುಗಳೆನಿಸಿದರು. ಇವರು ಪರಶುಕ್ಲತ್ರಯದಲ್ಲಿ ಬರುವವರು. ಇವರಿಗೆ ಯಾವ ಕಾಲದಲ್ಲೂ ಅಜ್ಞಾನಾದಿ ದೋಷವಿಲ್ಲ. ಇವರು ಸಕಲ ತತ್ವಾಭಿಮಾನಿಗಳಿಗೂ ಪ್ರೇರಕರು. ಮೇಲಾಗಿ ಪರಮಾತ್ಮನಿಗೆ ಅತ್ಯಂತ ಪ್ರಿಯತಮರು. ಇವರ ವಂಶ ಪೀಳಿಗೆಯ ಮಹತ್ವವನ್ನು ಅರಿತವರಿಗೆ ವಿಶೇಷ ಜ್ಞಾನಪ್ರಾಪ್ತಿಯಾಗುವುದು.

ಹೀಗೆ ಮಹಾನುಭಾವರಾದವರ ವಿಶೇಷ ಮಹತ್ವಗಳನ್ನು ತಿಳಿಸಿ ಎಲ್ಲರೂ ಉದ್ಧಾರವಾಗಲೆಂಬ ವಿಶಾಲ ಮನೋಭಾವದಿಂದ ಈ ವಿಶೇಷ ಸ್ಮರಣ ಗ್ರಂಥದ ಪ್ರಕಟಣೆ ಮಾಡುತ್ತಿರುವುದು.

ಮುನಿತ್ರಯರುಗಳು ಯಾರೆಂದರೆ

ಶ್ರೀಮಧ್ವಃ ಕಲ್ಪವೃಕ್ಷಶ್ಚ ಜಯಾಚಾರ್ಯಾಸ್ತು ಧೇನುಃ ।
ಚಿಂತಾಮಣಿಸ್ತು ವ್ಯಾಸಾರ್ಯಃ ಮುನಿತ್ರಯಮುದಾಹೃತಂ ॥

ಹೀಗೆಂದು ಶ್ರೀಮುಷ್ಣಂ ಮಹಿಮೆಯಲ್ಲಿ ಉಲ್ಲೇಖಿತವಾಗಿದೆ. ಜಗತ್ತಿನಲ್ಲಿ ಸಕಲರ ಇಷ್ಟಪ್ರದಾವಸ್ತುಗಳೆಂದರೆ ಕಾಮಧೇನು, ಕಲ್ಪವೃಕ್ಷ, ಚಿಂತಾಮಣಿ. ಈ ಮೂರಕ್ಕೆ ಮೂವರನ್ನು ಸೂಕ್ತವಾಗಿ ಆರಿಸಿಬಿಟ್ಟಿದ್ದಾರೆ. ಅವರುಗಳೇ

ಭಾಷ್ಯಕರ್ತರಾದ ಶ್ರೀಮಾನ್ ಮಧ್ವಾಚಾರ್ಯರು, ಟೀಕಾಚಾರ್ಯರೆನಿಸಿದ ಶ್ರೀ ಜಯತೀರ್ಥರು ಹಾಗೂ ಚಂದ್ರಿಕಾದಿ ರಚಿಸಿದ ಶ್ರೀ ವ್ಯಾಸರಾಯರು ಇತ್ಯಾದಿ ಮಹನೀಯರುಗಳು.

ಶ್ರೀಮಾನ್ ಮಧ್ವಾಚಾರ್ಯರು ವೇದ ಸಮ್ಮತವಾದ ದಿವ್ಯ ಸಿದ್ಧಾಂತ ಬೋಧಕವಾದ 37 ಗ್ರಂಥಗಳನ್ನು ರಚಿಸಿರುತ್ತಾರೆ. ಈ ಗ್ರಂಥಗಳಿಗೆ " ಸರ್ವ ಮೂಲ " ಎಂದು ಹೆಸರು. ಈ ಸರ್ವ ಮೂಲ ಗ್ರಂಥಗಳು ಯಾವುದೆಂಬು ದನ್ನು ಶ್ರೀ ವ್ಯಾಸರಾಯರು " ಗ್ರಂಥ ರತ್ನಮಾಲಿಕಾ " ಎಂಬ ತಮ್ಮದೊಂದು ಕೃತಿಯಲ್ಲಿ ತಿಳಿಸಿರುತ್ತಾರೆ. ಎತ್ತಾಗಿ ಆಚಾರ್ಯರ ಈ ದಿವ್ಯ ಗ್ರಂಥಗಳನ್ನು ಹೊತ್ತ ಸಾಕ್ಷಾತ್ ದೇವೇಂದ್ರನೇ ಮುಂದೆ ಶ್ರೀ ಜಯತೀರ್ಥರಾಗಿ ಅವತರಿಸಿ ಟೀಕಾಚಾರ್ಯರೆನಿಸಿ 18 ಟೀಕಾ ಗ್ರಂಥಗಳನ್ನು 3 ಸ್ವತಂತ್ರ ಗ್ರಂಥಗಳನ್ನು ರಚಿಸಿ ವಿರಾಜಿಸಿದರು. ಶ್ರೀ ವ್ಯಾಸರಾಯ ರಾದರೋ ಜಗದ್ ವಿಖ್ಯಾತರಾಗಿ ವ್ಯಾಸತ್ರಯ ಕರ್ತೃವೆನಿಸಿದ್ದು ಅಲ್ಲದೆ ನೂರಾರು ಪದ ಪದ್ಯ ಸುಳಾದಿಗಳನ್ನು ಕೇವಲ ಕನ್ನಡ ಭಾಷೆಯಲ್ಲಿಯೂ ರಚಿಸಿ ಎಲ್ಲರನ್ನು ಉದಾರ ಹೃದಯದಿಂದ ಸಲುಹಿದರು.

ಶ್ರೀಮಾನ್ ಮಧ್ವಾಚಾರ್ಯರ ಸಿದ್ಧಾಂತದ ಅವಲಂಬಿ ಮಠಗಳು 23 ಇದೆ ಎನ್ನಬಹುದು. ಇವರದು ಅತ್ಯಂತ ಸಾತ್ವಿಕ ಭಕ್ತಿ ಪಂಥ. ಅದೇ ವೇದ ಸಮ್ಮತವಾದದ್ದು ಎಂದು ಸಾಕ್ಷಾತ್ ಭೃಗುಅಂಶ ಸಂಭೂತರಾದ ಶ್ರೀ ವಿಜಯದಾಸರು ತಮ್ಮದೊಂದು ಕೃತಿಯಲ್ಲಿ " ಮಧ್ವ ಮತವೇ ಮತವು ಸಕಲ ಶೃತಿ ಸಮ್ಮತವು " ಎಂದಿದ್ದಾರೆ.

ಶ್ರೀ ಮಧ್ವಾಚಾರ್ಯರು ಉಡುಪಿಯ ಶ್ರೀ ಅನಂತೇಶ್ವರ ದೇವಾಲಯದಿಂದ ಮೊದಲ್ಲ ಬದರಿಗೆ ಪ್ರಯಾಣ ಬೆಳೆಸಿದ ದಿನವೇ " ಮಧ್ವನವಮಿ " ಅದೊಂದು ವಿಚಿತ್ರ ಘಟನೆ. ಆಚಾರ್ಯರು ಎಲ್ಲರಂತೆ ಒಂದೆಡೆಯಿಂದ ಇನ್ನೊಂದು ಕಡೆ ಪ್ರಯಾಣ ಬೆಳೆಸಲಿಲ್ಲ. ಉಡುಪಿಯ ಶ್ರೀ ಅನಂತೇಶ್ವರ ದೇವಾಲಯದಲ್ಲಿ ಶಿಷ್ಯರಿಗೆ ಐತರೇಯ ಉಪನಿಷತ್ ಪಾಠ ಹೇಳುತ್ತಾ ಇದ್ದಾಗ ಇದ್ದಕ್ಕಿದ್ದಂತೆ ದೇವಲೋಕದಿಂದ ಪುಷ್ಪ ವೃಷ್ಟಿಯಾಗಿ ಆಚಾರ್ಯರನ್ನು ಮುಚ್ಚಿತು.

ನೋಡಲಾಗಿ ಅಲ್ಲಿ ಅವರು ಇರಲಿಲ್ಲ. ಅವರ ಮಹಿಮೆ ಶ್ರೀಮದ್ ಸುಮಧ್ವವಿಜಯ ಗ್ರಂಥದ 16 ನೇ ಸರ್ಗದಲ್ಲಿ ವಿವರಿಸಿದೆ.

ಶ್ರೀ ಮಧ್ವರ ನಂತರ ಇಷ್ಟೊಂದೂ ಮಠಗಳಲ್ಲಿ ಅಪಾರವಾದ ಮಹಿಮೋಪೇತರುಗಳಾದ, ಶಾಪಾನುಗ್ರಹ ದಕ್ಷರಾದ ಪ್ರಾತಃಸ್ಮರಣೀಯರಾದ, ಅಮಿತಶಕ್ತರಾದ, ವಿದ್ವಾಂಸರುಗಳಾದ ಜ್ಞಾನ ಭಕ್ತಿ ವೈರಾಗ್ಯಾದಿಗಳಿಂದ ಕೂಡಿದವರಾದ, ಅಪಾರವಾದ ಗ್ರಂಥ ರಚನೆ ಮಾಡಿದ್ದೂ ಅಲ್ಲದೆ ಪಾಠ ಪ್ರವಚನವನ್ನು ಇಂದಿಗೂ ಮಾಡಿಸುತ್ತಿರುವ ಜ್ಞಾನ ಶ್ರೀಮಂತರುಗಳಿದ್ದಾರೆ. ಒಂದೊಂದು ಮಠದ ಒಬ್ಬೊಬ್ಬ ಮಹನೀಯರುಗಳ ಬಗ್ಗೆಯೂ ನೂರಾರು ಪುಟಗಳು ಬರೆಯಬಹುದಾಗಿದೆ. ಹೀಗಿರುವಾಗ ಅಂತಹ ಮಹಾನುಭಾವರುಗಳು ಜನಿಸಿ ಮಹತ್ಕಾರ್ಯಾದಿ ಮಾಡಿ ವೃಂದಾವನ ವನ್ನು ಪ್ರವೇಶಮಾಡಿದರು. ಈ ಮಹನೀಯರುಗಳನ್ನು ಈ ಸ್ಮರಿಸುವ ಕಾರ್ಯ ಹಲವಾರು ಗ್ರಂಥಗಳು ಪ್ರಕಟಗೊಂಡಿವೆ.

ಶ್ರೀ ರಾಘವೇಂದ್ರ ಸ್ವಾಮಿಗಳವರ ಹೆಸರು ಕೇಳದವರಾರು. ದೇವರಲ್ಲಿ ತಿರುಪತಿ ತಿಮ್ಮಪ್ಪ ಗುರುಗಳಲ್ಲಿ ನಮ್ಮ ಮಂತ್ರಾಲಯ ರಾಘಪ್ಪ ಎಂದೂ ಪ್ರಸಿದ್ಧಿಯಾಗಿದೆ.

ಶ್ರೀ ರಾಘವೇಂದ್ರ ಸ್ವಾಮಿಗಳವರ ಮಹಿಮೆಯ ಹಿನ್ನೆಲೆಯನ್ನು ಅವಲೋಕಿಸೋಣ. ಜಗತ್ತಿನ ಜ್ಞಾನದಾತ ರಾದ, ಪೋಷಕನಾದ, ಸೃಷ್ಟಿ, ಸ್ಥಿತಿ. ಲಯಗಳಿಗೆ ಕಾರಣ ಭೂತನಾದ ಅಣಗ, ಅನ ಪೇಕ್ಷ ಆಕಾಮಿ, ನಿದ್ರಾ ಹೀನನಾದ ಸರ್ವಶ್ರೇಷ್ಠನಾದ ಅನಂತ ಕಲ್ಯಾಣ ಗುಣ ಪರಿಪೂರ್ಣನಾದ, ಸರ್ವದೋಷದೂರನಾದ, ಸರ್ವೋತ್ತಮನಾದ

ಸರ್ವದೋಷ ದೂರನಾದ, ಸರ್ವೋತ್ತಮನಾದ ಪ್ರಾಣಿಗೆ ಪ್ರಾಣನಾದ ಶ್ರೀ ನಾರಾಯಣನ ಮಹಾಮಹಿಮೆಯನ್ನು ಜಗತ್ತಿಗೆ ಸರಿಯಾದ ಕ್ರಮದಲ್ಲಿ ತೋರಿದ ಭಕ್ತಾಗ್ರೇಸರೂ ಎಂದರೆ ನಮ್ಮ ಶ್ರೀ ರಾಘವೇಂದ್ರ ಸ್ವಾಮಿಗಳು. ನಿಜ, ಸಕಲ ಜ್ಞಾನಿಗಳೂ ಒಪ್ಪಿರುವ ಪ್ರಮಾಣತ್ರಯದಲ್ಲಿ ಭಗವಂತನಾದ ನಾರಾಯಣ ಪ್ರತ್ಯಕ್ಷದಿಂದ ಆಗಲಿ ಅನುಮಾನದಿಂದ ಆಗಲಿ ಗೋಚರಿಸದೆ ಕೇವಲ ಆಗಮ ವೇದ್ಯನಾಗಿದ್ದಾನೆ. ಆದರೆ ನವೀನ ಆಸ್ತಿಕರಲ್ಲಿ ಒಂದು ಅನುಮಾನ ಉಳಿಯಲು ಅವಕಾಶ ದೊರೆತಂತೆ ಇದೆ. ಅದೇನೆಂದರೆ ಪರಮಾತ್ಮನಾದ ರಾಮ, ಕೃಷ್ಣ ಇತ್ಯಾದಿ ರೂಪಗಳ ವೈಶಿಷ್ಟ್ಯತೆ ಏನು ? ಅವರು ನಮ್ಮಂತೆಯೇ ಈ ಲೋಕದಲ್ಲಿ ಜನಿಸಿ ತಂದೆ, ತಾಯಿ ಬಂಧು–ಬಳಗದವರನ್ನು ಹೊಂದಿದ್ದರು ಹೀಗೆಲ್ಲಾ ಇದ್ದು ವಿಶೇಷ ಮಹಿಮೆಯನ್ನು ಮಾತ್ರ ತೋರಿರುವುದರಿಂದ ಅವರನ್ನು ಮಾತ್ರ ತೋರಿರುವುದರಿಂದ ಅವರನ್ನು ಪರಮಾತ್ಮ ಎನ್ನಬಹುದೇ ಎಂಬ ಶಂಕೆ ಉದ್ಭವಿಸುವುದು ಸಹಜ. ಇಂತಹ ಶಂಕೆಯನ್ನು ಪರಿಹರಿಸಿ ನಿರ್ದಿಷ್ಟವಾದ ಪರಮಾತ್ಮನ ಸ್ವರೂಪ ಜ್ಞಾನವನ್ನು ಕೊಟ್ಟು ಉದ್ಧವಿಸಿ ಮೋಕ್ಷಾದಿ ಪುರುಷಾರ್ಥವನ್ನು ಕರುಣಿಸಿದ ಶ್ರೀ ರಾಘವೇಂದ್ರ ಸ್ವಾಮಿಗಳವರ ಉಪಕಾರವನ್ನು ಇಂದಿನ ಇಡೀ ಜಗತ್ತು ಮರೆಯುವಂತಿಲ್ಲ. ಏಕೆಂದರೆ ಈ ಮಹಾನುಭಾವರು ಕೃತಯುಗದಲ್ಲಿ ಪ್ರಹ್ಲಾದರಾಗಿ ಅವತರಿಸಿದರು. ಇವರಿಗಿದ್ದ ವಾತಾವರಣ ಇವರು ಸಾಧಿಸಿದ ಕಾರ್ಯ ಆಲೋಚನೆಗೆ ನಿಲುಕದಾಗಿವೆ. ಇವರು ತಾಯಿಯ ಗರ್ಭದಲ್ಲೇ ಇದ್ದಾಗ ಸಾಕ್ಷಾತ್ ನಾರದರಿಂದ ಭಾಗವತ ಧರ್ಮಗಳನ್ನು ಅರಿತು ರಕ್ತಗತ ಮಾಡಿಕೊಂಡ ಮಹಾನುಭಾವರು.

ಧರ್ಮಕ್ಕಾಗಿ ತಾಯಿ ತಂದೆ, ಗುರು ಇವರೆಲ್ಲರ ಮಾತನ್ನು ನಿರಾಕರಿಸಿ ಕೇವಲ ಧರ್ಮ ಒಂದರಲ್ಲೇ ಮನಸಿಟ್ಟು ಪರಮಾತ್ಮನ ಮಹಿಮೆಯನ್ನು ಸರ್ವತ್ರ ಚಿಂತಿಸಿ ಕೊನೆಯಲ್ಲಿ ಜಡ ರೂಪನಾದ ಸಭಾ ಸ್ತಂಭದಿಂದಲೇ ಸಾಕ್ಷಾತ್ ಲಕ್ಷ್ಮೀಪತಿಯನ್ನು ಶ್ರೀ ನರಸಿಂಹ ರೂಪದಿಂದ ಕರೆತರಿಸಿದ ಭಕ್ತಾಗ್ರೇಸರರು ಇವರು ಅಸೂರಿಕ ಸಂಪತ್ತಿನ ತ್ಯಾಗ ಮಾಡಿ ದೈವಿಕ ಸಂಪತ್ತನ್ನು ಗಳಿಸಿಕೊಂಡ ಮಹಾ ಕರ್ಮಠರು ಜೀವನ ಯೋಗ್ಯತೆ ಎಲ್ಲಿದ್ದರೂ ಒಂದೇ ರತ್ನವನ್ನು ಕೊಚ್ಚೆಯಲ್ಲಿ ಹಾಕಿದರೂ ಅದರ ಬೆಲೆ ಕಡಿಮೆಯಾಗುವುದಿಲ್ಲ. ಅಂತಯೇ ಶ್ರೀ ಪ್ರಹ್ಲಾದ ರಾಜರನ್ನು ದೈತ್ಯ ಯೋನಿಯಲ್ಲಿ ಹುಟ್ಟಿಸಿದಾಗ್ಯೂ ಅವರ ಮಹಿಮೆಗೆ ಏನೇನು ಚ್ಯುತಿ ಬರಲಿಲ್ಲ.

ಈ ಪ್ರಹ್ಲಾದ ರಾಜರೇ ತ್ರೇತಾಯುಗದಲ್ಲಿ ಕಪಿ ಕುಲದಲ್ಲಿ ಜನಿಸಿ ಶ್ರೀ ರಾಮ ದೇವರ ಹಾಗೂ ಶ್ರೀ ಹನುಮನ ಸೇವೆಯನ್ನು ಮಾಡಿ ಪುನೀತರಾಗಿದ್ದಾರೆ. ಈ ಸಂದರ್ಭದಲ್ಲಿ ಒಂದು ಅಂಶವನ್ನು ಹೇಳಲು ಇಚ್ಛಿಸುತ್ತೇನೆ. ಅದೇನೆಂದರೆ ತ್ರೇತಾಯುಗದಲ್ಲಿ ಇವರ ಅವತಾರ ಇಂತಹದೆಂಬ ನಿರ್ದಿಷ್ಟವಾದ ಯಾವ ಜ್ಞಾನಿಗಳ ವಚನದಿಂದಲೂ ಸ್ಪಷ್ಟವಾಗಿ ನಮಗೆ ದೊರಕುತ್ತಿಲ್ಲ. ಅಂತೆಯೇ ಹರಿದಾಸರ ಕೃತಿಗಳಲ್ಲೂ ಈ ಅಂಶ ಸ್ಪಷ್ಟವಾಗಿಲ್ಲ ಆದರೆ ಜ್ಞಾನಿಗಳಿಂದ ಕೃಪಾಪಾತ್ರರಾದವರೂ ಹಾಗೂ ನವೀನ ಹರಿದಾಸ ಪಂಥದ ಕೃತಿಗಳಲ್ಲಿ ಶ್ರೀ ಪ್ರಹ್ಲಾದರು ವಿಭೀಷಣರು ಎಂಬ ವಾಕ್ಯ ಉಲ್ಲೇಖಿತವಾಗಿವೆ. ಇದು ಎಷ್ಟರ ಮಟ್ಟಿಗೆ ಸರಿ ಎಂಬುದನ್ನು ವಾಚಕರೇ ನಿರ್ಣಯಿಸಿಕೊಳ್ಳಬೇಕು. ಇವರು ವಿಭೀಷಣರು ಎಂದು ಒಪ್ಪಿದರೂ ಇವರ ಮಹಿಮೆಗೆ ಏನೂ ಚ್ಯುತಿ ಬರುವುದಿಲ್ಲ.

ದ್ವಾಪರ ಯುಗದಲ್ಲಿ ಈ ಮಹಾನುಭಾವರು ಬಾಹ್ಲೀಕರಾಗಿ ಅವತರಿಸಿ ಅಪಾರ ಜ್ಞಾನ ಹಾಗೂ ಬಲಿ ಕಾರ್ಯವನ್ನು ಮಾಡಿ ವಾಯುದೇವರೇ ಆದ ಶ್ರೀ ಭೀಮಸೇನ ದೇವರಾದ ದೇಹವನ್ನು ಬಿಡುವಾಗ ಅವರ ಅನುಗ್ರಹ ಸಂಪಾದಿಸಿಕೊಳ್ಳಲು ಜ್ಞಾನ ಕಾರ್ಯ ಮಾಡುವ ಒಂದು ಅವಕಾಶವನ್ನು ಪಡೆದರು. ಆದ್ದರಿಂದಲೇ ಮುಂದೆ ಕಲಿಯುಗದಲ್ಲಿ ಆ ವಾಯುದೇವರು ಶ್ರೀ ಮಧ್ವರಾಗಿ ಅವತರಿಸಿದಾಗ ಅವರಿಂದ ರಚಿತವಾದ ಸರ್ವಮೂಲ ಗ್ರಂಥಗಳಿಗೆ ದಿವ್ಯವಾದ ಟಿಪ್ಪಣಿ ಗ್ರಂಥಗಳನ್ನು ಬರೆದು ಶಾಶ್ವತವಾದ ಪುಣ್ಯ ಕಾರ್ಯವನ್ನು ಎಸಗಿದ್ದಾರೆ.

ಈ ಮಹಾನುಭಾವರು ಕಲಿಯುಗದಲ್ಲಿ ಕೇವಲ ಜ್ಞಾನ ಕಾರ್ಯಕ್ಕೆ ವಿಲಾಸಲಾದ ಜನ್ಮವನ್ನು ಸ್ವೀಕರಿಸಿ ಬಾಲ್ಯಾವಸ್ಥೆಯಲ್ಲಿಯೇ ಉಪನೀತರಾಗಿ ತುರ್ಯಾಶ್ರಮವನ್ನು ಸ್ವೀಕರಿಸಿ ಜಗತ್ ವಿಖ್ಯಾತ ಶ್ರೀ ವ್ಯಾಸರಾಜರೆನಿಸಿದರು.

ಇವರು ವ್ಯಾಸರಾಜರಾಗಿ ಅವತರಿಸಿದಾಗ ಮಾಡದ ಸತ್ಕಾರ್ಯಗಳೇ ಇಲ್ಲ ಎನ್ನಬಹುದು. ಇವರು ಮಾಡಿದ ಮಹತ್ಕಾರ್ಯಗಳನ್ನು ಮತ್ಯಾರೂ ಮಾಡಿಲ್ಲ ಎನ್ನಬಹುದು. ಇವರ ಚಂದ್ರಿಕಾ, ನ್ಯಾಯಾಮೃತ, ತರ್ಕತಾಂಡವ, ಈ ವ್ಯಾಸತ್ರಯಗ್ರಂಥಕ್ಕೆ ಸರಿಹೋಗುವ ಗ್ರಂಥ ಮತ್ತೊಂದಿಲ್ಲ. ಇವರ ಕನ್ನಡ ಭಾಷೆಯ ಪದ ಪದ್ಯ ಸುಳಾದಿ ಉಗಾಭೋಗಾದಿಗಳು ಕೇವಲ ಪ್ರಮೇಯ ಪೆಟ್ಟಿಗೆಗಳಂತಿವೆ. ಅವುಗಳು ನೋಡಲು ಸುಲಭವಾಗಿದ್ದರೂ, ಜ್ಞಾನಿಗಳಿಗೆ ನಿಲುಕದಾಗಿವೆ. ಸಕಲ ಮತಗಳ ಸೌಹಾರ್ದತೆ, ಸಕಲ ಸಧಭಕ್ತರ, ಸೌಹಾರ್ದತೆ, ಸಕಲ ಮಠೀಯರ ಸೌಹಾರ್ದತೆ ಇತ್ಯಾದಿಗಳನ್ನು ಒಂದುಗೂಡಿಸಿದ ಮಹಾನುಭವರಾಗಿ ಶ್ರೇಷ್ಠರಾಗಿದ್ದಾರೆ ಶ್ರೀ ವ್ಯಾಸರಾಜರು. ಶ್ರೀ ವ್ಯಾಸರಾಜರು ಜೀವೋತ್ತಮರ ತತ್ವಗಳೇ ಅತ್ಯಂತ ಶ್ರೇಷ್ಠ ಎಂದೂ ಸ್ಪಷ್ಟೋಕ್ತಿಗಳಿಂದ ತಿಳಿಸಿದರೂ, ಇತರರೊಡನೆ ವೈಮನಸ್ಯವನ್ನು ಕಟ್ಟಿಕೊಳ್ಳುತ್ತಿರಲಿಲ್ಲ. ಇದೇ ಇವರ ಬುದ್ಧಿವಂತಿಕೆಯ ಮಹತ್ವ. ಇದನ್ನು ನಾವು ಎಲ್ಲಿ ಕಾಣಬಹುದೆಂದರೇ ಒಮ್ಮೆ ಸರಹದ್ದಿನ ವಿವಾದಕ್ಕಾಗಿ ಶ್ರೀರಂಗ ಹಾಗೂ ಜಂಭುಕೇಶ್ವರ ಕ್ಷೇತ್ರದಲ್ಲಿ ವಿವಾದ ಎದ್ದಾಗ ಶ್ರೀ ವ್ಯಾಸರಾಜರು ಅದನ್ನು ಪರಿಹರಿಸಬೇಕೆಂಧು ಈರ್ವರೂ ಒಪ್ಪಿದರು. ಇಂದಿರುವ ಆ ಸರಹದ್ದು ಶ್ರೀ ವ್ಯಾಸರಾಜರು ಹಾಕಿದ್ದು, ಜಗತ್ ಸ್ವಾಮಿಯಾದ ಶ್ರೀ ತಿರುಪತಿ ವೆಂಕಟೇಶ್ವರನನ್ನು ಶ್ರೀ ವ್ಯಾಸರಾಜರು 12 ವರ್ಷಗಳ ಕಾಲ ಅಖಂಡವಾಗಿ ತಂತ್ರಸಾರ ರೀತ್ಯ ಪೂಜಿಸಿದ ಮಹಾಜ್ಞಾನ ಶ್ರೇಷ್ಠರು. ಎಲ್ಲಕ್ಕಿಂತ ಮಿಗಿಲಾಗಿ ಸನ್ಯಾಸಿಗಳಿಗೆ ಅತ್ಯಂತ ದೂರವಾದ ರಾಜಕೀಯವನ್ನೇ ಪ್ರವೇಶಿಸಿ ಅಂದಿನ ಕರ್ನಾಟಕ ಸಿಂಹಾಸನಾಧೀಶ್ವರರಾದ ಶ್ರೀ ಕೃಷ್ಣದೇವರಾಯನಿಗೆ ಮಾನ್ಯ ಸಚಿವರಾಗಿ ರಾಜಕಾರ್ಯದಲ್ಲಿ ಪ್ರೇರಕಶಕ್ತಿಯಾಗಿದ್ದುದು ಅಲ್ಲದೆ ಆ ರಾಜನಿಗೆ ಬಂದಿದ್ದ ಕುಹು ಯೋಗವನ್ನು ನಿವಾರಿಸಿ ತಾವೇ ಕುಹುಕಾಲ ಆ ಕರ್ನಾಟಕ ಸಿಂಹಾಸನಾಧೀಶ್ವರರಾಗಿ ವಿರಾಜಿಸಿದ ಸನ್ಯಾಸಿ ಚಕ್ರವರ್ತಿಗಳೇ ಶ್ರೀ ವ್ಯಾಸರಾಜರು. ಅವರ ಮಹಿಮೆಯನ್ನು ವಿವರವಾಗಿ, ಸ್ಥೂಲವಾಗಿ ತಿಳಿಸಬೇಕಾದರೆ ನೂರಾರು ಪುಟಗಳೇ ಬೇಕಾಗುವುದು ಇಷ್ಟಕ್ಕೆ ತೃಪ್ತರಾಗದ ಶ್ರೀ ವ್ಯಾಸರಾಜರು ತಮ್ಮ ಜ್ಞಾನ ಕಾರ್ಯವನ್ನು ಮುಂದುವರಿಸಿ ವಿಶೇಷ ಹರಿವಾಯುಗಳ ಕಾರುಣ್ಯಕ್ಕೆ ಪಾತ್ರರಾಗಲು ಶ್ರೀ ರಾಘವೇಂದ್ರ ಸ್ವಾಮಿಗಳಾಗಿ ಮತ್ತೆ ಭರತಖಂಡದಲ್ಲಿ ಮೈದೋರಿದರು.

ಶ್ರೀ ರಾಘವೇಂದ್ರ ಸ್ವಾಮಿಗಳವರ ಮಹಾ ಮಹಿಮೆಯು ಅವರ ಪೂರ್ವಾಶ್ರಮ ಸಂಬಂಧಿಗಳಾದ ಶ್ರೀ ನಾರಾಯಣಚಾರ್‌ರವರಿಂದ ಬರೆಯಲ್ಪಟ್ಟ ಶ್ರೀ ರಾಘವೇಂದ್ರ ವಿಜಯ ಎಂಬ ಗ್ರಂಥದಿಂದಲೂ ಅಪರೋಕ್ಷಜ್ಞಾನಿಗಳಾದ ಶ್ರೀ ವಿಜಯದಾಸರು, ಶ್ರೀ ಗೋಪಾಲದಾಸರು, ಶ್ರೀ ಜಗನ್ನಾಥದಾಸರು ಹಾಗೂ ಅನೇಕಾನೇಕ ಪಂಡಿತೋತ್ತಮರುಗಳು ಮತ್ತು ಆ ಪೀಳಿಗೆಯಲ್ಲಿ ಬಂದ ಯತಿ ಶ್ರೇಷ್ಠರುಗಳ ವಚನಾಧಾರದಿಂದ ತಿಳಿಯಬಹುದಾಗಿದೆ.

ಶ್ರೀ ರಾಘವೇಂದ್ರ ಸ್ವಾಮಿಗಳವರು ಮಾಡಿದ ಮಹತ್ಕಾರ್ಯಗಳು, ಪರೋಪಕಾರ್ಯಗಳು ಹಾಗೂ ಅನುಗ್ರಹಾದಿಗಳ ಅರಿವು ಇಂದಿಗೂ ಜಾತಿ ಮತ ಭೇದವಿಲ್ಲದ ಸಕಲ ಸಾತ್ವಿಕರಿಗೂ ಆಗುತ್ತಿರುವುದು ಸರ್ವವೇದ್ಯವಾಗಿದೆ.

ಈಗಿನ ಮಂತ್ರಾಲಯ ಶ್ರೀ ರಾಘವೇಂದ್ರ ಸ್ವಾಮಿಗಳವರ ಮೂಲ ಬೃಂದಾವನವಿರುವ ಶ್ರೀ ಮಂತ್ರಾಲಯ ಕ್ಷೇತ್ರ ಸಾಮಾನ್ಯವಾದುದಲ್ಲ. ಹಿಂದೆ ಶ್ರೀ ಪ್ರಹ್ಲಾದರಾಜರು ಈ ಕ್ಷೇತ್ರದಲ್ಲಿ ಯಾಗವನ್ನು ಮಾಡಿದ್ದರಿಂದು ಶ್ರೀ ವಿಜಯದಾಸರು ತಮ್ಮದೊಂದು ಕೃತಿಯಲ್ಲಿ ಹೇಳಿದ್ದಾರೆ. "ಸುರಪ ನಾಲಯದಂತೆ ಮಂತ್ರಾಲಯ" ಎಂದು ಇವರ ಅನುಜರೇ ಆದ ಸಹ್ಲಾದಂಶ ಸಂಭೂತರಾದ ಶ್ರೀ ಜಗನ್ನಾಥದಾಸರು ಹೇಳಿರುವ ವಾಕ್ಯ ಅಕ್ಷರಶಃ ನಿಜ ಈ ಕ್ಷೇತ್ರವನ್ನು ಶ್ರೀ ರಾಘವೇಂದ್ರರು ತಮ್ಮ ಶಿಷ್ಯನಾದ ದಿವಾನ್ ವೆಂಕಣ್ಣನವರಿಂದ ತಾವಾಗಿ ಪಡೆದರು. ಮಂತ್ರಾಲಯ ಅಂದಿಗೆ ಒಂದು ಚಿಕ್ಕ ಹಳ್ಳಿ. ಗ್ರಾಮ ದೇವತೆಯಾದ ಶ್ರೀ ಮಂಚಾಲಮ್ಮ ಒಂದೆಡೆ. ತುಂಗಾಭದ್ರಾ ಪಾತ್ರದಲ್ಲಿ ವಿರಾಜಿಸುತ್ತಿದ್ದಳು.

ಮಂತ್ರಾಲಯವು ದೇವಾಲಯ ಚಿಕ್ಕದಾದರೂ ಕೀರ್ತಿ ದೊಡ್ಡದಾಗಿತ್ತು. ಈಗ ನಮ್ಮ ಗುರುರಾಜರ ಕುಲದೇವತೆ, ಕ್ಷೇತ್ರವನ್ನು ಪಡೆದಮೇಲೆ ಶ್ರೀ ರಾಘವೇಂದ್ರ ಸ್ವಾಮಿಗಳು ಎರಡು ನೂರು ವರ್ಷಗಳು ಇಲ್ಲೇ ಇದ್ದು ಅಖಂಡವಾಗಿ ಪ್ರತಿನಿತ್ಯ ಪಾಠಪ್ರವಚನ ದೇವತಾರ್ಚನೆ ಇತ್ಯಾದಿಗಳಿಂದ ಕ್ಷೇತ್ರವನ್ನೂ ಇನ್ನು ಪುಣ್ಯದಿಂದ ಫಲವತ್ತು ಮಾಡಿ ಬಿಟ್ಟಿದ್ದರು. ಅಂದಿನ ಮಂತ್ರಾಲಯ, ಹಿಂದಿನ ಕಾಲದ ನೆನಪನ್ನು ತರುವ ಹಳೇ ಗೋಡೆಗಳು, ಕಲ್ಲು ಕಂಟಗಳು ಮಧ್ಯೆ ಮಧ್ಯೆ ತೂಗಾಡುವ ಗಂಟೆಗಳು ಪ್ರಕೃತಿ ಸೌಂದರ್ಯಗಳಿಂದ ಕೂಡಿದ್ದ ಈ ಮಂತ್ರಾಲಯಕ್ಕೆ ಹೋಗುವ ಯಾತ್ರಿಕರ ಸಂಖ್ಯೆ ಅತ್ಯಂತ ಅಲ್ಪವಾಗಿತ್ತು ಅಂದು. ಕತ್ತಲೆಯಾದ ಮೇಲೆ ಸಂಚಾರ ಆ ಕ್ಷೇತ್ರದಲ್ಲಿ ಅತ್ಯಂತ ವಿರಳವಾಗಿತ್ತು. ಮೇಲಾಗಿ ಮಂತ್ರಾಲಯಕ್ಕೆ ಹೋಗಿ ಬರುವ ಯಾತ್ರಿಕರು ಅಣು ಮಂತ್ರಾಲಯ (ಮಂತ್ರಾಲಯ ರೋಡು ಅಥವಾ ತುಂಗಭದ್ರ ನಿಲ್ದಾಣ) ರೈಲಿನಲ್ಲಿ ಇಳಿದು ಸುಮಾರು 10 ಮೈಲಿಗಳು ಕಾಲು ನಡಿಗೆಯಲ್ಲಿಯೇ ಪ್ರಯಾಣ ಮಾಡಬೇಕಾಗಿತ್ತು. ಈ ತೆರನಾದ ಸೌಕರ್ಯಗಳು ಶ್ರೀ ಸುಯಮೀಂದ್ರ ತೀರ್ಥರ ಕಾಲದವರೆಗೂ ಉಳಿದಿತ್ತು.

ಯಾತ್ರಿಕರ ಸಂಖ್ಯೆ ಬೆಳೆಯುತ್ತಾ ಬಂದು ಯಾತ್ರಿಕರ ಸೌಕರ್ಯಗಳ ಏರ್ಪಾಟಿಗೆ ಶ್ರೀ ಶ್ರೀ ಸುಯಮೀಂದ್ರ ತೀರ್ಥರು ಕಾರಣಕರ್ತರಾಗಿ ಇವರ ಕಾಲದಲ್ಲಿ ಮೆರಗು ಈ ಕ್ಷೇತ್ರಕ್ಕೆ ಬರಲು ವಾತಾವರಣವನ್ನು ಅತ್ಯಂತ ಕಷ್ಟ ಪ್ರದವಾಗಿ ಯಶಸ್ವಿಯಾಗಿ ನಡೆಸಿದರು. ಡೈನಾಮೊ ಯಂತ್ರದಿಂದ ಶ್ರೀ ಮಠದ ಸುತ್ತಲೂ ದೀಪಗಳು ಪ್ರಕಾಶಿಸು ವಂತೆ ಶ್ರೀ ಸುಯಮೀಂದ್ರತೀರ್ಥರು ಮಾಡಿದರು. ಇವರ ಕಾಲದಲ್ಲಿ ಪಂಡಿತರು ವಿಶೇಷವಾಗಿ ಹರಿದಾಸಕೂಟ ಈ ಕ್ಷೇತ್ರಕ್ಕೆ ಬಂದು ಸೇವೆ ಮಾಡುವ ಸದಾವಕಾಶವನ್ನು ಕಲ್ಪಿಸಿಕೊಟ್ಟರು. ಶ್ರೀ ಸುಯಮೀಂದ್ರತೀರ್ಥರ ನಂತರ ಪೀಠಕ್ಕೆ ಬಂದ ಶ್ರೀ ಸುಜಯೀಂದ್ರತೀರ್ಥರು ಇಂತಹ ಅಜ್ಞಾತ ವಾತಾವರಣದಲ್ಲಿ ಮೋಡದಲ್ಲಿ ಸಿಲುಕಿದ್ದ ಚಂದ್ರನಂತೆ ಇದ್ದ ಶ್ರೀ ಮಂತ್ರಾಲಯ ಕ್ಷೇತ್ರವನ್ನು ಜಗತ್ತಿಗೆ ಎತ್ತಿ ತೋರಿಸಿದ ಹಾಗೂ ಮಂತ್ರಾಲಯ ಕ್ಷೇತ್ರದ ಸರ್ವತೋಮುಖವಾದ ಅಭ್ಯುದಯಕ್ಕೆ ಮುಖ್ಯ ಕಾರಣಭೂತರಾಗಿ ಆಧುನಿಕ ಮಂತ್ರಾಲಯ ನಿರ್ಮಾಣಕರೆಂಬ ಹೆಸರನ್ನು ಪಡೆದ ಶ್ರೀ ಸುಜಯೀಂದ್ರತೀರ್ಥರ ಮಹಿಮೆ ಅಪಾರ.

